ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಕಾದಂಬರಿಗಳಲ್ಲಿ ದಲಿತ ಮಹಿಳೆಯ ಶೋಧದ ನೆಲೆಗಳು
(ಪ್ರಾತಿನಿಧಿಕ ಕಾದಂಬರಿಗಳನ್ನು ಅನುಲಕ್ಷಿಸಿ)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಮಹಾಪ್ರಬಂಧ

ಸಂಶೋಧಕರು
ಸುಜಾತ ಎನ್.
(ನೋಂದಣಿ ಸಂಖ್ಯೆ KVMBKS-[illegible])

ಮಾರ್ಗದರ್ಶಕರು
ಡಾ. ವಡ್ಡೆ ಹೇಮಲತಾ
ಸಹಾಯಕ ಪ್ರಾಧ್ಯಾಪಕರು,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯತಾ ಸಂಸ್ಥೆ
ಕಾವ್ಯಮಂಡಲ,
ಬೆಂಗಳೂರು
2017

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಕಾದಂಬರಿಗಳಲ್ಲಿ ದಲಿತ ಮಹಿಳೆಯ ಶೋಧದ ನೆಲೆಗಳು
(ಪ್ರಾತಿನಿಧಿಕ ಕಾದಂಬರಿಗಳನ್ನು ಅನುಲಕ್ಷಿಸಿ)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ
ಮಹಾಪ್ರಬಂಧ

ಸಂಶೋಧಕರು
ಸುಜಾತ ಎನ್.
(ನೋಂದಣಿ ಸಂಖ್ಯೆ: **KVMBKS-00164**)

ಮಾರ್ಗದರ್ಶಕರು
ಡಾ. ವಡ್ಡೆ ಹೇಮಲತಾ
ಸಹಾಯಕ ಪ್ರಾಧ್ಯಾಪಕರು,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯತಾ ಸಂಸ್ಥೆ
ಕಾವ್ಯಮಂಡಲ,
ಬೆಂಗಳೂರು

2017

ಮಾರ್ಗದರ್ಶಕರ ಪ್ರಮಾಣಪತ್ರ

ಸುಜಾತ ಎನ್. ಇವರು ನನ್ನ ಮಾರ್ಗದರ್ಶನದಲ್ಲಿ **ಕನ್ನಡ ಕಾದಂಬರಿಗಳಲ್ಲಿ ದಲಿತ ಮಹಿಳೆಯ ಶೋಧದ ನೆಲೆಗಳು (ಪ್ರಾತಿನಿಧಿಕ ಕಾದಂಬರಿಗಳನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯಡಿ ಸಂಶೋಧನಾ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಸಾಹಿತ್ಯ ಅಧ್ಯಯನ ವಿಭಾಗಕ್ಕೆ** ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಶೋಧನಾ ಮಹಾಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಡಾ. ವಡ್ಡೆ ಹೇಮಲತಾ
ಸಹಾಯಕ ಪ್ರಾಧ್ಯಾಪಕರು
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸ್ಥಳ : ಬೆಂಗಳೂರು
ದಿನಾಂಕ : 12/10/2017

ಸಂಯೋಜನಾಧಿಕಾರಿ
ಕಾವ್ಯ ಮಂಡಲ
ಬೆಂಗಳೂರು

ಘೋಷಣಾ ಪತ್ರ

ಕನ್ನಡ ಕಾದಂಬರಿಗಳಲ್ಲಿ ದಲಿತ ಮಹಿಳೆಯ ಶೋಧದ ನೆಲೆಗಳು (ಪ್ರಾತಿನಿಧಿಕ ಕಾದಂಬರಿಗಳನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಶೋಧನಾ ಮಹಾಪ್ರಬಂಧವನ್ನು **ಡಾ. ವಡ್ಡೆ ಹೇಮಲತಾ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟವಾಗಿಲ್ಲ ಎಂದು ದೃಢೀಕರಿಸುತ್ತೇನೆ.

ಸಂಶೋಧಕರು

ಸುಜಾತ. ಎನ್.

ಸ್ಥಳ : ಬೆಂಗಳೂರು
ದಿನಾಂಕ : 12/10/2017

ಸುಜಾತ ಎನ್.
ಕಾವ್ಯಮಂಡಲ
ಬೆಂಗಳೂರು

ಕನ್ನಡ ಕಾದಂಬರಿಗಳಲ್ಲಿ ದಲಿತ ಮಹಿಳೆಯ ಶೋಧದ ನೆಲೆಗಳು
(ಪ್ರಾತಿನಿಧಿಕ ಕಾದಂಬರಿಗಳನ್ನು ಅನುಲಕ್ಷಿಸಿ)

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಮಹತ್ವ, ವಿಧಾನ ಮತ್ತು ವ್ಯಾಪ್ತಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಮಹತ್ವ, ವಿಧಾನ ಮತ್ತು ವ್ಯಾಪ್ತಿ

ಪ್ರಸ್ತಾವನೆ :

ಕಾದಂಬರಿ ಪ್ರಕಾರವು ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯಿಂದ ಬಂದಿದೆ. ಇದಕ್ಕೆ ಇನ್ನೂರು ವರ್ಷಗಳ ಇತಿಹಾಸವಿದೆ. ಕಾದಂಬರಿಯು ಇತ್ತೀಚಿನ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಇದು ಜನಪ್ರಿಯ ಸಾಹಿತ್ಯ ಪ್ರಕಾರಗಳಲ್ಲಿ ಗುರುತಿಸಿಕೊಂಡಿದೆ. ಧಾವಂತದಲ್ಲಿ ಬದುಕುತ್ತಿರುವ ಮನುಷ್ಯನ ಬದುಕಿನ ವಿವರಗಳನ್ನು ಕಾದಂಬರಿ ಪ್ರತಿಬಿಂಬಿಸುತ್ತದೆ. ಕಾದಂಬರಿಯು ಗದ್ಯ ಪ್ರಕಾರವಾಗಿರುವುದರಿಂದ ಓದುಗರನ್ನು ಆಕರ್ಷಿಸುತ್ತದೆ. ಕಾವ್ಯವೆಂಬ ಸಾಹಿತ್ಯ ಪ್ರಕಾರ ಪ್ರಾಚೀನವಾದುದು. ಓದಲು ಜಟಿಲವಾದುದಾಗಿದೆ. ಆದರೆ ಕಾದಂಬರಿ ಪ್ರಕಾರ ಹೆಚ್ಚು ಓದುಗರನ್ನು ಹೊಂದಿರುವುದಕ್ಕೆ ಕಾರಣವೆಂದರೆ ಇದು ಬದುಕಿನ ಪ್ರತಿಬಿಂಬವಾಗಿದೆ. ಹಲವು ಪಾತ್ರಗಳು ಮತ್ತು ಸನ್ನಿವೇಶಗಳನ್ನು ಒಳಗೊಂಡಿದ್ದರೂ ಓದಿಸಿಕೊಂಡು ಹೋಗುವ ಆಕರ್ಷಕ ಗುಣ ಹೊಂದಿದ್ದು, ಮಧ್ಯಮ ವರ್ಗದವರೇ ಹೆಚ್ಚಾಗಿ ಓದುತ್ತಿರುವುದರಿಂದ ಇದು 'ಮಧ್ಯಮವರ್ಗದ ಮಹಾಕಾವ್ಯ' ಎಂದೂ ಕರೆಸಿಕೊಂಡಿದೆ. ಕನ್ನಡದಲ್ಲಿ ಕಾದಂಬರಿಗಳನ್ನು ಕುರಿತಂತೆ ಸಾಕಷ್ಟು ಸಂಶೋಧನೆಗಳು ನಡೆದಿವೆ.

ಕಾದಂಬರಿಯ ಆರಂಭವನ್ನು ಪಾಶ್ಚಿಮಾತ್ಯ ಸಾಹಿತ್ಯದಿಂದ ಗುರುತಿಸಬಹುದಾದರೂ ಕನ್ನಡದಲ್ಲಿ ತುಂಬಾ ಹಿಂದೆಯೇ ಇದರ ಲಕ್ಷಣಗಳನ್ನು ಗಮನಿಸಬಹುದು. ಉದಾಹರಣೆಯಾಗಿ ಬಾಣನ ಕಾದಂಬರಿ ನಮ್ಮ ಮುಂದಿದೆ. ಆಧುನಿಕ ಸಂದರ್ಭದಲ್ಲಿ ಕಾದಂಬರಿ ಪ್ರಕಾರವು ಪ್ರಜ್ಞಾಪೂರ್ವಕವಾಗಿ ಬೆಳೆದು ಬಂದಿದ್ದರೂ ಅಪ್ರಜ್ಞಾಪೂರ್ವಕವಾಗಿ ಇದರ ಲಕ್ಷಣಗಳು ಪ್ರಾಚೀನ ಸಾಹಿತ್ಯದಲ್ಲೇ ಕಂಡುಬಂದಿವೆ. "ಕೆಂಪು ನಾರಾಯಣನ 'ಮುದ್ರಾಮಂಜೂಷ'ದಲ್ಲಿಯ ಕಥನ ರೀತಿ ಕಾದಂಬರಿಗೆ ಹೆಚ್ಚು ಸಮೀಪವಾಗಿದೆ ಎನ್ನಬಹುದು. ಕಾದಂಬರಿಯನ್ನು ಬರೆಯದಿದ್ದರೂ, ಅದರ ಬರವಣಿಗೆಗೆ ಕನ್ನಡ ಗದ್ಯವನ್ನು ಹದಗೊಳಿಸಿದ ಶ್ರೇಯಸ್ಸು ಕೆಂಪು ನಾರಾಯಣನಿಗೇ ಸಲ್ಲುತ್ತದೆ. ಮುದ್ದಣನು 'ಗೋದಾವರಿ' ಕಾದಂಬರಿಯನ್ನು ಅರ್ಧ ಮುಗಿಸಿದ್ದ ಎಂಬ ವಿಚಾರವು 'ಕಾದಂಬರಿ' ಎಂಬ ಪದ ಪ್ರಯೋಗವನ್ನು ಸೂಚಿಸುತ್ತದೆ. ಬಿ. ವೆಂಕಟಾಚಾರ್ ಹಾಗೂ ಗಳಗನಾಥರು ಕಾದಂಬರಿಯನ್ನು ಸುಗಮವಾದ ಮಾರ್ಗದಲ್ಲಿ ಮುನ್ನೆಡೆಸಿದವರು. ಬಿ.ವೆಂಕಟಾಚಾರ್ ಹಾಗೂ ಗಳಗನಾಥರ ಐತಿಹಾಸಿಕ ಕಾದಂಬರಿಗಳು ಜನರ ಮೆಚ್ಚುಗೆಗೆ ವಿಶೇಷವಾಗಿ ಪಾತ್ರವಾಗಿವೆ. ಸಾಮಾಜಿಕ ಕಾದಂಬರಿಗಳಲ್ಲಿ ಬೋಳಾರ

ಬಾಬೂರಾಯರ 'ವಾಗ್ದೇವಿ', ಎಂ.ಎಸ್.ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ ಹಾಗೂ ಕೆರೂರು ವಾಸುದೇವಾಚಾರ್ಯರ 'ಇಂದಿರೆ' ಮುಖ್ಯವಾಗಿವೆ". (ಕೀರ್ತಿನಾಥ ಕುರ್ತಕೋಟಿ, 'ಯುಗಧರ್ಮ ಮತ್ತು ಸಾಹಿತ್ಯ ದರ್ಶನ':೧೭೩-೧೭೪) ಆಧುನಿಕ ಸಂದರ್ಭದಲ್ಲಿ ಕಾದಂಬರಿಗಳ ಫಸಲು ಅ.ನ.ಕೃ., ತ.ರಾ.ಸು., ನಿರಂಜನ, ಕಾರಂತ, ಕುವೆಂಪು, ಆನಂದಕಂದ, ದೇವುಡು, ಶ್ರೀರಂಗ, ಕಟ್ಟೀಮನಿ, ವ್ಯಾಸರಾಯ ಬಲ್ಲಾಳ, ಗೊರೂರು, ಬಿ.ವೆಂಕಟಾಚಾರ್, ಗಳಗನಾಥ, ಮಾಸ್ತಿ, ಕೆ.ವಿ.ಅಯ್ಯರ್, ರಾವಬಹದ್ದೂರರ ಮೂಲಕ ಹುಲುಸಾಗಿ ಬೆಳೆದು ಬಂದಿದೆ.

ಇತ್ತೀಚೆಗೆ ಓದುಬರಹ ಕಲಿತ ಮಹಿಳೆಯರಿಗೆ ಕಾದಂಬರಿ ಪ್ರಕಾರ ಓದಿ ಅರ್ಥಮಾಡಿಕೊಳ್ಳಲು ಸುಲಭವಾಯಿತು. ಆದ್ದರಿಂದ ಇವರು ತಮ್ಮ ಬಿಡುವಿನ ವೇಳೆಯನ್ನು ಕಾದಂಬರಿಗಳ ಓದಿಗಾಗಿ ಮೀಸಲಿಟ್ಟರು. ಆರಂಭದಲ್ಲಿ ಬಂದಂತಹ ಕಾದಂಬರಿಗಳು ಜನಪ್ರಿಯ ಶೈಲಿಯಲ್ಲೆ ಇದ್ದವು. ನಂತರ ಬರಬರುತ್ತಾ 'ಸ್ತ್ರೀ ಶಿಕ್ಷಣ', 'ವಿಧವಾ ವಿವಾಹ' ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಸ್ತ್ರೀಯರು ಬರೆಯತೊಡಗಿದರು. ಈ ನಿಟ್ಟಿನಲ್ಲಿ ಗುರುತಿಸಿಕೊಂಡವರು ನಂಜನಗೂಡು ತಿರುಮಲಾಂಬಾ, ಆರ್. ಕಲ್ಯಾಣಮ್ಮ; ಧಾರವಾಡದ ಶಾಂತಾಬಾಯಿ ನೀಲಗಾರ, ವಾಣಿ, ಎಂ.ಕೆ. ಇಂದಿರಾ, ಅನುಪಮಾ, ಹೆಚ್.ವಿ. ಸಾವಿತ್ರಮ್ಮ, ತ್ರಿವೇಣಿ, ಸಾ.ರಾ. ಅಬೂಬಕರ್, ಬಿ.ಟಿ.ಲಲಿತಾ ನಾಯಕ್, ಗೀತಾ ನಾಗಭೂಷಣ, ವೈದೇಹಿ ಮುಂತಾದವರು. ಆರಂಭದಲ್ಲಿ ಕಾದಂಬರಿಗಳ ಅನುವಾದ ಪ್ರಕ್ರಿಯೆಯೇ ಹೆಚ್ಚಾಗಿ ನಡೆದರೂ ಆ ನಂತರ ಸ್ವತಂತ್ರ ಕಾದಂಬರಿಗಳು ಬರಲಾರಂಭಿಸಿದವು.

ಕಾದಂಬರಿಕಾರರು ತಮ್ಮ ಸ್ವತಂತ್ರ ಕಾದಂಬರಿಗಳಲ್ಲಿ "ಅಂದಿನ ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಅನ್ಯದೇಶದ ಸಾಂಸ್ಕೃತಿಕ ಆಕ್ರಮಣಶೀಲ ರೀತಿಯನ್ನು ಕುರಿತು ಬರೆದರು. ಸ್ತ್ರೀ ಶಿಕ್ಷಣಕ್ಕೆ ಮಹತ್ವ ನೀಡುವ, ಬಾಲ್ಯವಿವಾಹ, ವರದಕ್ಷಿಣೆ, ಸತಿಸಹಗಮನ ಪದ್ಧತಿಯಂತಹ ಅನಿಷ್ಟ ಪದ್ಧತಿಗಳ ಕುರಿತು ಆಲೋಚಿಸಿದರು. ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಬೋಳಾರ ಬಾಬುರಾಯರ 'ವಾಗ್ದೇವಿ' ಕೆರೂರು ವಾಸುದೇವಾಚಾರ್ಯರ 'ಇಂದಿರೆ' – ಈ ಮೊದಲಾದ ಕಾದಂಬರಿಕಾರರ ಕಾದಂಬರಿಗಳು ವಾಸ್ತವವಾದಿ ಮಾರ್ಗದಲ್ಲಿ ರಚನೆಗೊಂಡ ಸಾಮಾಜಿಕ ಕಾದಂಬರಿಗಳು. ೬೦ರ ದಶಕದ ಲೇಖಕಿಯರ ಕಾದಂಬರಿಗಳು ವಸ್ತುವಿನ ವೈವಿಧ್ಯತೆಯಿಂದ ಗಮನ ಸೆಳೆಯುತ್ತವೆ. ಕೌಟುಂಬಿಕ, ಸಾಮಾಜಿಕ ಬದುಕಿನ ಚಿತ್ರಣದೊಂದಿಗೆ ಐತಿಹಾಸಿಕ, ಪೌರಾಣಿಕ, ವೈಜ್ಞಾನಿಕ ವಸ್ತುವನ್ನು ಆಧರಿಸಿ ಬರೆಯುವುದರ ಮೂಲಕ ಆಧುನಿಕ ಕಾಲದ ಹೆಣ್ಣಿನ ಒಳಜಗತ್ತನ್ನು ಅನಾವರಣಗೊಳಿಸುವ ಪ್ರಯತ್ನಗಳು ಈ

ದಶಕದ ಲೇಖಕಿಯರ ಕಾದಂಬರಿಗಳ ವೈಶಿಷ್ಟ್ಯತೆಯಾಗಿದೆ". (ವಿಜಯಶ್ರೀ ಸಬರದ:'ಸಾಹಿತ್ಯ ಸಂವಹನ':೩೦,೩೧) ಶತ-ಶತಮಾನಗಳಿಂದ ಅಕ್ಷರದಿಂದ ವಂಚಿತರಾಗಿದ್ದ ದಲಿತರು ಶಿಕ್ಷಣವನ್ನು ಕಲಿತು ಬರೆಯಲು ಆರಂಭಿಸಿದ್ದೇ ತಡವಾಗಿ. ಮೊದಲ ತಲೆಮಾರಿನ ಅಕ್ಷರ ಕಲಿತ ದಲಿತರು ೧೯೭೦ರ ನಂತರ ಬರೆಯಲು ಆರಂಭಿಸಿದರು. ದೇವನೂರ ಮಹಾದೇವ, ಡಾ.ಸಿದ್ಧಲಿಂಗಯ್ಯನವರ ಬರಹಗಳಿಂದ ದಲಿತ ಸಾಹಿತ್ಯದ ಉಗಮವಾಯಿತು. ಹಿಂದಿನಿಂದ ತಾವು ಉಂಡ-ಕಂಡ ನೋವು ಅಪಮಾನಗಳಿಗೆ ತಾವೇ ಬರಹ ರೂಪವನ್ನು ಕೊಡಲಾರಂಭಿಸಿದರು. ಕಾವ್ಯ, ಕಥೆ, ಕಾದಂಬರಿ, ನಾಟಕ ಮುಂತಾದ ಪ್ರಕಾರಗಳಲ್ಲಿ ತಮಗಾದ ಅನ್ಯಾಯಗಳನ್ನು ಬರೆಯತೊಡಗಿದರು.

"ದಲಿತ ಬದುಕಿನ ಆಂತರಿಕ ವ್ಯವಸ್ಥೆ' ಕುಟುಂಬರಚನೆ, ಆಚರಣೆ, ನಂಬಿಕೆಗಳು ಇವುಗಳೊಂದಿಗೆ ಹೊಸ ಸಮಾಜದ ಒತ್ತಡಗಳು, ಶಿಕ್ಷಣ, ಉದ್ಯೋಗಗಳಲ್ಲಿ ಮೀಸಲಾತಿ, ರಾಜಕೀಯ ಯೋಜನೆಗಳು, ಅರ್ಥಿಕ ಸೌಲಭ್ಯಗಳು ಇವುಗಳ ಪರಿಣಾಮ, ಹೀಗೆ ವಿವಿಧ ಘಟನೆಗಳನ್ನು ಕನ್ನಡ ದಲಿತ ಕಾದಂಬರಿಗಳು ಹಿಡಿದಿಟ್ಟಿವೆ. ಜನಪದ ತಂತ್ರ ಬಳಸುವುದರ ಮೂಲಕ, ಜನಭಾಷೆ ಬಳಸುವುದರ ಮೂಲಕ ದಲಿತ ಜನಾಂಗದಲ್ಲಿ ಚಿಗುರುತ್ತಿರುವ, ಬೆಳೆಯುತ್ತಿರುವ ದಲಿತ ಪ್ರಜ್ಞೆಯ ಸ್ವರೂಪವನ್ನು ನೀಡುವುದರ ಮೂಲಕ, ಚಳವಳಿಯ ಸಿದ್ಧಾಂತ, ಸಂಘಟನೆಯ ವಿವರಗಳನ್ನು ಕೊಡುವುದರ ಮೂಲಕ, ಚಳವಳಿಯ ಸಾಮಾಜೀಕರಣಗೊಳಿಸುವ ದಲಿತ ಕಾದಂಬರಿಗಳು ಭರವಸೆಯ ಬೆಳಕನ್ನು ಹೊತ್ತು ಓದುಗರನ್ನು ಸೆಳೆಯುತ್ತಿರುವುದು ಗಮನಿಸುವಂಥದ್ದು". (ಪೋಲಂಕಿ ರಾಮಮೂರ್ತಿ (ಲೇ) 'ಕನ್ನಡ ಮರಾಠಿ ದಲಿತ ಸಾಹಿತ್ಯ':೯೬) ದಲಿತ ಮಹಿಳೆ ಮತ್ತು ದಲಿತ ಪುರುಷ ಎದುರಿಸುತ್ತಿರುವ ಸಮಸ್ಯೆಗಳು ಭಿನ್ನವಾಗಿವೆ. ಇಬ್ಬರೂ ದಲಿತರೇ ಆದರೂ, ದಲಿತ ಮಹಿಳೆ 'ಹೆಣ್ಣು' ಎಂಬ ಕಾರಣಕ್ಕೆ ದಲಿತ ಪುರುಷನಿಗಿಂತಲೂ ಹೆಚ್ಚು ಶೋಷಣೆಗೆ ಒಳಗಾಗುತ್ತಾ ಬಂದಿದ್ದಾಳೆ. ಶತ-ಶತಮಾನಗಳಿಂದ ಸಮಾಜದ ಮೇಲ್ವರ್ಗದವರ ಲೈಂಗಿಕ, ಮಾನಸಿಕ ಶೋಷಣೆಗೆ ಗುರಿಯಾಗುತ್ತಿರುವವಳು ದಲಿತ ಮಹಿಳೆ. ಹಾಗೆಂದ ಮಾತ್ರಕ್ಕೆ ಸಾಮಾನ್ಯ ವರ್ಗದ ಮಹಿಳೆಗೆ ಕಷ್ಟಗಳೇ ಇಲ್ಲದೆ ಸುಖವಾಗಿದ್ದಾಳೆ ಎಂದು ಅರ್ಥವಲ್ಲ. ಸಾಮಾನ್ಯ ಮಹಿಳೆಯೂ ಕೂಡಾ ತನ್ನ ಕುಟುಂಬದ ಒಳಗೆ ಶೋಷಣೆಗೆ ಒಳಗಾಗುತ್ತಿದ್ದಾಳೆ. ಆದರೆ ಹೊರಗಿನ ಶೋಷಣೆಯಿಂದ ಈಕೆಯು 'ಮೇಲ್ವರ್ಗದವಳು' ಎಂಬ ಕಾರಣದಿಂದ ವಿನಾಯಿತಿ ಹೊಂದಿದ್ದಾಳೆ. ಆದರೂ ಸಮಗ್ರ ನಾರಿನೆಲೆಯಿಂದ ದಲಿತ ಮಹಿಳೆಯನ್ನು ಪ್ರತ್ಯೇಕಗೊಳಿಸಿ ಮಾಡುವ ಅಧ್ಯಯನ ಅಪೂರ್ಣವೆನಿಸುತ್ತದೆ. ಏಕೆಂದರೆ ಮಹಿಳೆ ನಡೆದು ಬಂದ

ಹಾದಿಯೇನೂ ಸುಖಕರವಾಗಿರಲಿಲ್ಲ. ಮಾನವನ ಉಗಮದ ಆರಂಭ ಕಾಲದಿಂದ ಪ್ರಸ್ತುತದವರೆಗಿನ ಆಕೆಯ ಪಯಣ ಇದಕ್ಕೆ ಉತ್ತರವನ್ನು ಒದಗಿಸಬಲ್ಲದು. ಇದರಿಂದ ಸಮಾಜದ ಮೇಲ್ವರ್ಗದ ಮಹಿಳೆಯರಿಗಿಂತ ದಲಿತ ಮಹಿಳೆ ಎದುರಿಸುತ್ತಿರುವ ಸಮಸ್ಯೆಗಳು ಹೇಗೆ ಭಿನ್ನ ಎಂಬುದು ಅರಿವಿಗೆ ಬರುತ್ತದೆ. ಏಕೆಂದರೆ ಇಂದು ಸುಶಿಕ್ಷಿತ, ಉದ್ಯೋಗಸ್ಥ ಮಹಿಳೆ ಕೂಡ ಪೂರ್ಣ ಪ್ರಮಾಣದ ನೆಮ್ಮದಿಯಿಂದ ಬದುಕುತ್ತಿದ್ದಾಳೆ ಎಂದು ಹೇಳಲು ಸಾಧ್ಯವಿಲ್ಲ. ಇವತ್ತಿನ ಸಂದರ್ಭದಲ್ಲಿ ವಿದ್ಯಾವಂತ ದಲಿತ ಮಹಿಳೆಯೂ ಸಹ ದುಡಿಯುವ ಜಾಗಗಳಲ್ಲಿ ಮಾನಸಿಕ ಹಿಂಸೆಗೆ ಗುರಿಯಾಗುತ್ತಿದ್ದಾಳೆ. ಇದು ಶೋಷಣೆಯ ಹೊಸದೊಂದು ರೂಪವಾಗಿದೆ. ಆದ್ದರಿಂದ ಅಖಂಡ ಮಹಿಳಾ ಜಗತ್ತಿನ ಅಖಂಡ ಹೆಜ್ಜೆ ಗುರುತುಗಳನ್ನು ಪ್ರಸ್ತಾಪಿಸುತ್ತಾ ಅದರೊಂದಿಗೆ ದಲಿತ ಮಹಿಳೆ ಹೇಗೆ ಭಿನ್ನ ಎಂದು ನೋಡುವ ಪ್ರಯತ್ನದ ಅಗತ್ಯವಿದೆ.

- ಆದಿಮ ಸಂದರ್ಭ
- ವೇದಗಳ ಸಂದರ್ಭ
- ಪುರಾಣಗಳ ಸಂದರ್ಭ
- ವಚನಗಳ ಸಂದರ್ಭ
- ಮಧ್ಯಕಾಲೀನ ಸಂದರ್ಭ
- ಆಧುನಿಕ ಸಂದರ್ಭ

ಹೀಗೆ ಸಮಗ್ರ ನಾರಿನೆಲೆಯನ್ನು ಮುಖ್ಯ ಘಟ್ಟಗಳೊಂದಿಗೆ ಚರ್ಚಿಸಲಾಗುತ್ತಿದೆ.

ಆದಿಮ ಸಂದರ್ಭ :

ಆದಿಮ ಸಂದರ್ಭದ ಆರಂಭದ ದಿನಗಳಲ್ಲಿ ಗಂಡು-ಹೆಣ್ಣೆಂಬ ತಾರತಮ್ಯವಿಲ್ಲದೆ ಒಟ್ಟಾಗಿಯೇ ಬೇಟೆಯಾಡಿ ಆಹಾರ ಸಂಗ್ರಹಿಸುತ್ತಿದ್ದುದು ಕಂಡು ಬರುತ್ತದೆ. ಅದರಲ್ಲೂ ಬೇಟೆಯಾಡುವುದರಲ್ಲಿ ಮಹಿಳೆಯರದೇ ಮೇಲುಗೈ. ಪೊಟರೆಗಳ, ಮರಗಳ, ಬಂಡೆಗಳ ಹಿಂದೆ ಅವಿತಿದ್ದು ಚೂಪಾದ ಆಯುಧಗಳಿಂದ ಪ್ರಾಣಿಗಳ ಸೂಕ್ಷ್ಮ ಭಾಗಗಳಿಗೆ ಹೊಡೆದು ಕೊಲ್ಲುತ್ತಿದ್ದವಳು ಹೆಣ್ಣೇ ಆಗಿದ್ದಳು. ಹೆಣ್ಣಿಗೆ ನೈಸರ್ಗಿಕ ಕೊಡುಗೆಯಾದ ತಾಯ್ತನದ ಸಂದರ್ಭದಲ್ಲಿ ಅವಳು ಮಗುವಿನ, ಲಾಲನೆ-ಪಾಲನೆಯಲ್ಲಿ ತೊಡಗಬೇಕಾಯಿತು. ಅಲ್ಲದೇ ದೈಹಿಕ ಅಶಕ್ತತೆಯ ಕಾರಣದಿಂದಾಗಿ ಗಂಡಿನೊಂದಿಗೆ ಹೊರಗೆ ಹೋಗಿ ಬೇಟೆಯಾಡಲು ಸಾಧ್ಯವಾಗದೆ ಗುಹೆಯಲ್ಲಿ ಬಂಧಿಯಾಗಬೇಕಾಯಿತು. ಒಂಟಿಯಾಗಿ ಬೇಟೆಯಾಡಿ ಆಹಾರ

ಸಂಗ್ರಹಿಸಿ ತಂದುಕೊಡುತ್ತಿದ್ದ ಗಂಡಿನಲ್ಲಿ ಮೇಲರಿಮೆ ಬೆಳೆಯತೊಡಗಿತು. ಪರಿಣಾಮವಾಗಿ ಗಂಡು ನಾನು ಹೊರಗೆ ಹೋಗಿ ಪ್ರಾಣಿಗಳೊಂದಿಗೆ ಸೆಣಸಾಡಿ ಆಹಾರ ತಂದು ಕೊಡುತ್ತಿದ್ದೇನೆ, ನೀನು ಗುಹೆಯಲ್ಲಿ ಕೂತು ಕಷ್ಟಪಡದೆ ತಿನ್ನುವೆ ಎಂಬುದರೊಂದಿಗೆ ಆರಂಭದಲ್ಲಿ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಿದ್ದದ್ದು ಪಿತೃಪ್ರಧಾನತೆ ಕಡೆಗೆ ಹೊರಳಲು ಕಾರಣವಾಯಿತು. ಅಲ್ಲದೇ ಅಲ್ಲಿಂದಲೇ ಹೆಣ್ಣಿನ ಮೇಲಿನ ಶೋಷಣೆಯ ಬೀಜ ಮೊಳೆಯಲಾರಂಭಿಸಿತು.

ಆದಿಮ ಸಮಾಜದ ಹೆಣ್ಣಿನ ಪಾಲನೆ ಮತ್ತು ಪೋಷಣೆಯೆಂಬ ಜವಾಬ್ದಾರಿಯೇ ಅವಳನ್ನು ಪುರುಷವರ್ಗದವರ ದೃಷ್ಟಿಯಲ್ಲಿ ಅಶಕ್ತಳು ಎಂಬಂತೆ ಬಿಂಬಿತವಾಯ್ತು. ಈ ರೀತಿ ಪುರುಷವರ್ಗ ತನ್ನ ಪ್ರಾಬಲ್ಯವನ್ನು ಮೆರೆಯಲು ಆರಂಭಿಸಿತ್ತು. ಹೀಗೆ ಆರಂಭದಲ್ಲಿದ್ದ ಹೆಣ್ಣಿನ ಸಮಾನತೆ, ಅವಳ ಸ್ಥಾನ, ಮಾತೃಪ್ರಧಾನತೆ ವೇಗವಾಗಿ ಕುಸಿಯತೊಡಗಿದವು. ಈ ಅಂಶಗಳಿಂದ ಆದಿಮ ಸಂದರ್ಭದಲ್ಲಿಯೂ ಕೂಡ ಹೆಣ್ಣು ಉನ್ನತ ಸ್ಥಾನದಲ್ಲಿ ಗೌರವಿಸಲ್ಪಡುತ್ತಿದ್ದಳೆಂದು ಹೇಳಲಾಗದು. ಹೀಗಾಗಿ ಹೆಣ್ಣಿನ ಮೇಲಿನ ಶೋಷಣೆಯೆಂಬುದು ತೀವ್ರತರವಾಗಿ ಅಲ್ಲದಿದ್ದರೂ ತನ್ನ ಅಸ್ತಿತ್ವವನ್ನು ಅಲ್ಲಿಂದಲೇ ಆರಂಭಿಸಿತು. ಇವುಗಳ ಪರಿಣಾಮವಾಗಿ ಆದಿಮ ಸಂದರ್ಭದಲ್ಲಿ ಮಾನವ ಸಂಬಂಧಗಳು ಕ್ರಮೇಣ ಪಲ್ಲಟಗೊಂಡು ಸ್ತ್ರೀ–ಪುರುಷ ಸ್ಥಾನ–ಮಾನಗಳಲ್ಲೂ ವ್ಯತ್ಯಾಸಗಳು ಕಾಣಿಸಿಕೊಂಡವು.

ವೇದಗಳ ಸಂದರ್ಭ :

ಹೆಣ್ಣನ್ನು ಕಾಲದಿಂದ ಕಾಲಕ್ಕೆ ಹಲವಾರು ದೃಷ್ಟಿಕೋನಗಳಿಂದ ಪುರುಷ ಸಮಾಜ ಕಂಡಿರುವುದನ್ನು ಕಾಣಬಹುದು. ವೇದಗಳ ಕಾಲದ ಆರಂಭದಲ್ಲಿ ಸ್ತ್ರೀ–ಪುರುಷರಿಬ್ಬರು ಸಮಾನವಾಗಿದ್ದರು. ಈ ಸಂದರ್ಭದಲ್ಲಿ ಮಹಿಳೆಗೆ ವಿದ್ಯಾರ್ಜನೆಯ ಹಕ್ಕು ಇರುತ್ತದೆ. ಹೆಣ್ಣು ಮಗುವಿನ ಜನನಕ್ಕೂ ಅವಕಾಶವಿರುತ್ತದೆ. "ಋಗ್ವೇದದ ಋಕ್ಕುಗಳನ್ನು ರಚಿಸಿದ ಕ್ರಾಂತದರ್ಶಿಗಳಲ್ಲಿ ೨೦ ಮಂದಿ ಮಹಿಳೆಯರೂ ಸೇರಿದ್ದಾರೆಂಬುದನ್ನು ಗಮನಿಸಬಹುದು. ಇವರಲ್ಲಿ ಬ್ರಹ್ಮವಿದ್ಯೆ ತಿಳಿದವರು, ಸೃಜನಶೀಲ ಲೇಖಕಿಯರು, ತತ್ವಜ್ಞಾನಿಗಳು, ಬೋಧಕರು ಇದ್ದಾರೆಂಬುದನ್ನು ತಿಳಿಯಬಹುದು. ಋಗ್ವೇದದ ಕಾಲಕ್ಕೆ ಕುಟುಂಬ ಜೀವನದಲ್ಲಿ ಮತ್ತು ಸಾಮಾಜಿಕ ಜೀವನದಲ್ಲಿ ಮಹಿಳೆ ಸಕ್ರಿಯವಾಗಿ ಭಾಗವಹಿಸುತ್ತಿದ್ದಳು. ವೇದಕಾಲದ ಅನೇಕ ಧಾರ್ಮಿಕ ಆಚರಣೆಗಳಲ್ಲೂ ಹೆಣ್ಣು ಪಾತ್ರ ವಹಿಸುತ್ತಿದ್ದಳೆಂಬುದು ಮುಖ್ಯ. ಯಜ್ಞಯಾಗಾದಿಗಳಲ್ಲೂ ಕೆಲವು ಕಾರ್ಯಗಳನ್ನು ಆಕೆ ನಿರ್ವಹಿಸುತ್ತಿದ್ದಳು. ಯುದ್ಧದಲ್ಲಿಯೂ ಆಕೆ ಭಾಗವಹಿಸುತ್ತಿದ್ದಳೆಂಬುದು ಕೆಲವು ಉಲ್ಲೇಖಗಳಿಂದ ತಿಳಿದುಬರುತ್ತದೆ." (ಅಕ್ಕಮಹಾದೇವಿ 'ದಲಿತಮಹಿಳೆ':೧೯) ಆದರೆ ಅಥರ್ವವೇದದ ಕಾಲಕ್ಕೆ ಮಹಿಳೆಯರ ಸ್ಥಾನಮಾನಗಳು

ಕುಸಿಯಲಾರಂಭಿಸುತ್ತವೆ. ಈ ಸಂದರ್ಭದಲ್ಲಿ ಹೆಣ್ಣನ್ನು ವಶಪಡಿಸಿಕೊಳ್ಳಲು ಮಾಟ-ಮಂತ್ರಗಳನ್ನು ಮಾಡುವುದು ಕಂಡುಬರುತ್ತದೆ. ಅಲ್ಲದೇ ಬಹುಪತ್ನಿತ್ವ ಪದ್ಧತಿ ಅಂದಿಗೇ ಆರಂಭವಾಗುತ್ತದೆ. ಮಹಾಭಾರತದಲ್ಲಿ ಹೆಣ್ಣನ್ನು ಪಣಕ್ಕಿಟ್ಟಿದ್ದು ಕಂಡುಬಂದರೂ ಅದಕ್ಕಿಂತ ಹಿಂದೆಯೇ ವೇದಗಳ ಸಂದರ್ಭದಲ್ಲೇ ಗಂಡಸರು ಜೂಜಿನ ಮೋಜಿಗಾಗಿ ಹೆಂಡತಿಯರನ್ನು ಪಣಕ್ಕಿಡುತ್ತಿದ್ದುದು ಕಂಡು ಬರುತ್ತದೆ. ಹೀಗೆ ಪಣಕ್ಕೆ ಒಡ್ಡಿಸಿಕೊಂಡ ಹೆಣ್ಣು ಗೆದ್ದ ಪುರುಷನಿಗೆ ವೇಶ್ಯೆಯಾಗಿ ಬಾಳುತ್ತಿದ್ದ ನಿದರ್ಶನಗಳು ವೇದಗಳ ಸಂದರ್ಭದಲ್ಲಿ ಕಂಡು ಬರುತ್ತವೆ. ಹೀಗೆ ಹೆಣ್ಣಿನ ಸ್ಥಾನಮಾನಗಳು ವೇದಗಳ ಕೊನೆ-ಕೊನೆಗೆ ಅಧೋಗತಿಗೆ ಇಳಿಯಲಾರಂಭಿಸುತ್ತವೆ. ಇವತ್ತಿನ ಸಂದರ್ಭದಲ್ಲಿ ನಾವು ದಿನನಿತ್ಯ ಕೇಳುತ್ತಿರುವ 'ವಿವಾಹ ವಿಚ್ಛೇದನ' ಪದ್ಧತಿ ವೇದಗಳ ಕಾಲದಲ್ಲೇ ಚಾಲ್ತಿಯಲ್ಲಿದ್ದುದು ಕಂಡುಬರುತ್ತದೆ. ಸಣ್ಣ ಪುಟ್ಟ ವಿಷಯಗಳಿಗೂ ವಿಚ್ಛೇದನ ಕೊಡುತ್ತಿದ್ದುದು ಋಗ್ವೇದ ಕಾಲದಲ್ಲಿ ಅಸ್ತಿತ್ವದಲ್ಲಿತ್ತು'. ಒಟ್ಟಾರೆ ವೇದಗಳ ಕಾಲದಲ್ಲೂ ಸ್ತ್ರೀಯರ ಸ್ಥಾನಮಾನ ಸಂಪೂರ್ಣ ಸುಧಾರಿಸಲಿಲ್ಲ, ಸಾಕಷ್ಟು ಏರಿಳಿತಗಳನ್ನು ಕಂಡಿತ್ತು.

ಪುರಾಣಗಳ ಸಂದರ್ಭ :

'ಭಾರತೀಯರ ಮನೆ-ಮನಗಳಲ್ಲಿ ಸ್ಥಾನವನ್ನು ಪಡೆದುಕೊಂಡು ಚಿರಸ್ಥಾಯಿಯಾಗಿರುವ ರಾಮಾಯಣ, ಮಹಾಭಾರತಗಳು ಹೆಣ್ಣನ್ನು ನಡೆಸಿಕೊಂಡ ರೀತಿ ಗಮನಾರ್ಹವಾದುದು'. ಋಣಾತ್ಮಕವಾಗಿ ನಡೆಸಿಕೊಂಡ ರೀತಿಯನ್ನೇ ಪರಂಪರಾಗತ ಮನಸ್ಸುಗಳು ಧನಾತ್ಮಕವಾಗಿ ಕಾಣುವುದುಂಟು. ಈ ಎರಡೂ ಮಹಾಕಾವ್ಯಗಳಲ್ಲಿ 'ಹೆಣ್ಣು' ಪ್ರಧಾನ ವಸ್ತುವಾಗಿದ್ದಾಳೆ ಹಾಗೆಯೇ ಶೋಷಣೆಗೂ ಒಳಗಾಗಿದ್ದಾಳೆ. ಸೀತೆಯನ್ನೇ ಕೇಂದ್ರವಾಗಿಸಿಕೊಂಡು ಬರೆದ ಪೋಲಂಕಿ ರಾಮಮೂರ್ತಿಯವರ 'ಸೀತಾಯಣ' ಈ ನಿಟ್ಟಿನಲ್ಲಿ ಮಹತ್ತರವಾದುದು. 'ನ್ಯಾಯವಾದಿ' ಶ್ರೀರಾಮ ಒಬ್ಬ ಅಗಸನ ಮಾತಿಗೆ ಅಳುಕಿ ಸೀತೆಯನ್ನು ಕಾಡಿಗೆ ಅಟ್ಟುವುದು, ವನವಾಸದ ನಂತರ ಅಗ್ನಿಪ್ರವೇಶ ಮಾಡಿಸುವುದು ಸ್ತ್ರೀ-ಶೋಷಣೆಯೆಂಬುದು ಎಂದಿನದೋ ಎಂಬುದಕ್ಕೆ ಉದಾಹರಣೆಯಾಗಿದೆ.

ಇನ್ನು ಮಹಾಭಾರತದಲ್ಲಿ ದ್ರೌಪದಿಗೆ ಐದು ಜನ ಗಂಡಂದಿರಿದ್ದರೂ ಅವರ ಎದುರೇ ರಾಜಸಭೆಯಲ್ಲಿ ವಸ್ತ್ರಾಪಹರಣ ಮಾಡಿದ್ದು ಸ್ತ್ರೀ ಮೇಲಿನ ಶೋಷಣೆಯೆಂಬುದು ಎಂಥವರಿಗೂ ತಪ್ಪಿದ್ದಲ್ಲ ಎಂಬುದಕ್ಕೆ ನಿದರ್ಶನದಂತಿದೆ. ದ್ರೌಪದಿ ಐದು ಜನ ಗಂಡಂದಿರ ರಾಣಿಯಾದರೂ ದೈಹಿಕ, ಮಾನಸಿಕ ಶೋಷಣೆ ತಪ್ಪಲಿಲ್ಲ. ಸುದೇಷ್ಣೆಯ ತಮ್ಮನಾದ ಕೀಚಕ ದ್ರೌಪದಿಗೆ ಆಸೆಪಟ್ಟು ಹಗಲಿನಲ್ಲೇ ಅವಳನ್ನು ಬೆನ್ನಟ್ಟಿ ಕಾಲಿನಿಂದ ಒದೆಯುತ್ತಾನೆ. ಇಂತಹ ಸಂದರ್ಭದಲ್ಲಿ ಐದು ಜನ ಗಂಡಂದಿರಲ್ಲಿ ಯಾರೊಬ್ಬರೂ ಅವಳ ಮಾನರಕ್ಷಣೆಗೆ ಮುಂದಾಗುವುದಿಲ್ಲ. ಕೊನೆಗೆ

ಭೀಮನನ್ನು ಕೆರಳಿಸಿ ಅವನಿಂದ ಸಹಾಯ ಪಡೆದು ಸಂಕಷ್ಟದಿಂದ ಪಾರಾಗುವುದು ಹೆಣ್ಣಿನ ಮೇಲಿನ ಶೋಷಣೆಯು ನಿರಂತರವಾದುದು ಹಾಗೂ ಹೆಣ್ಣಿಗೆ ರಕ್ಷಣೆ ಎಂಬುದು ಎಂದಿಗೂ ಸುಲಭದ್ದಲ್ಲ ಎಂಬುದನ್ನು ತಿಳಿಸುತ್ತದೆ. ರಾಮಾಯಣ ಮಹಾಭಾರತದ ಎಲ್ಲಾ ಸ್ತ್ರೀ ಪಾತ್ರಗಳು ಒಂದಲ್ಲ ಒಂದು ರೀತಿಯಲ್ಲಿ ಹೆಂಗಸರನ್ನು ಶೋಷಣೆ ಮಾಡಿರುವುದು ಕಂಡು ಬರುತ್ತದೆ. ರಾಮಾಯಣದ ತಾರೆ, ತಾಟಕಿ, ಅಹಲ್ಯೆ, ಶೂರ್ಪನಖಿ ಹಾಗೂ ಮಹಾಭಾರತದ ಕುಂತಿ, ಮಾದ್ರಿ, ಮತ್ಸ್ಯಗಂಧಿ, ಅಂಬೆ, ಅಂಬಿಕೆ, ಅಂಬಾಲಿಕೆ, ಶಕುಂತಲೆ, ರೇಣುಕೆ, ಮೇನಕೆ, ಅರುಂಧತಿ, ಚಂದ್ರಮತಿ ಮೊದಲಾದವರೆಲ್ಲರೂ ನಿರಂತರ ಶೋಷಣೆಯಲ್ಲಿ ಬೆಂದವರೇ ಆಗಿದ್ದಾರೆ. ಒಟ್ಟಾರೆ 'ಮಹಿಳೆ' ಯಾವುದೇ ಕಾಲ, ಸಂದರ್ಭದಲ್ಲೂ ಪೂರ್ಣ ಪ್ರಮಾಣದಲ್ಲಿ ನೆಮ್ಮದಿಯಾಗಿರಲಿಲ್ಲ ಎನ್ನುವುದಕ್ಕೆ ಇವೆಲ್ಲಾ ನಿದರ್ಶನಗಳಾಗಿವೆ.

ಕನ್ನಡದ ಮೊದಲ ಗದ್ಯಕೃತಿಯೆನಿಸಿರುವ ವಡ್ಡಾರಾಧನೆಯಲ್ಲಿ ಹೆಣ್ಣಿನ ಶೋಷಣೆ ಮುಗಿಲು ಮುಟ್ಟಿರುವುದು ಕಂಡು ಬರುತ್ತದೆ. ಇದು ಅಂದಿನ ಸಮಾಜಕ್ಕೆ ಹಿಡಿದ ಕನ್ನಡಿಯಾಗಿದೆ. "ವ್ಯಾಪಾರಿಯ ಮಗನೊಬ್ಬ ಒಂದೇ ಹಸೆಯ ಮೇಲೆ ಮೂವತ್ತೆರಡು ಕೂಸುಗಳನ್ನು ವರಿಸುವಷ್ಟು ಅಥವಾ ನೂರು ಮಂದಿ ಪತ್ನಿಯರಿಂದ ಐನೂರು ಮಕ್ಕಳನ್ನು ಪಡೆಯುವಷ್ಟು ಅಥವಾ ಎಂಟು ಜನ ಹೆಂಡಿರಿದ್ದೂ ಇನ್ನೊಬ್ಬ ಹೆಣ್ಣನ್ನು ಇಟ್ಟುಕೊಳ್ಳುವಷ್ಟು, ಗಂಡಿನ ಈ ಬಗೆಯ ಕಾಮ ಪ್ರವೃತ್ತಿಯಲ್ಲಿ ಅವನ ಪತ್ನಿಯರಿಗೆ ಸೂಳೆಪಾಳಿಯೂ ಸಿಗದ ಸ್ಥಿತಿ ಇದೆ". (ಗಾಯತ್ರಿ ನಾವಡ 'ಮಹಿಳಾ ಸಂಕಥನ':೦೨) ಸಾಹಿತ್ಯ ಕೃತಿಗಳು ಅಂದಿನ ಸಮಾಜದಲ್ಲಿ ನಡೆಯುತ್ತಿರುವ ವಾಸ್ತವ ಘಟನೆಗಳಿಂದ ಪ್ರೇರಣೆ ಪಡೆಯುತ್ತವೆ. ಇಂತಹ ಸಾಮಾಜಿಕ ಅನಿಷ್ಟಗಳನ್ನೇ ಕಲಾತ್ಮಕ ರೂಪದಿಂದ ಬಳಸಿಕೊಳ್ಳಲಾಗುತ್ತದೆ. ಆದ್ದರಿಂದಲೇ ವಡ್ಡಾರಾಧನೆ ಕಥೆಯು ಆ ಸಂದರ್ಭದಲ್ಲಿ ಸಮಾಜದಲ್ಲಿ ಚಾಲ್ತಿಯಲ್ಲಿದ್ದ 'ಬಹುಪತ್ನಿತ್ವ' ಪದ್ಧತಿಯನ್ನು ಬಿಂಬಿಸುತ್ತಿದೆ. ಅಲ್ಲದೇ ಅಂದಿನ ಸಮಾಜದಲ್ಲಿದ್ದ 'ಬಾಲ್ಯವಿವಾಹ' ಪದ್ಧತಿಯನ್ನು ನಮ್ಮ ಮುಂದಿಡುತ್ತಿದೆ. 'ಎಂಟು ಜನ ಹೆಂಡಿರಿದ್ದೂ ಇನ್ನೊಬ್ಬ ಹೆಣ್ಣನ್ನು ಇಟ್ಟುಕೊಳ್ಳುವುದು ಸೂಳೇಗಾರಿಕೆ' ಕೂಡ ಅಂದಿನ ಸಮಾಜದಲ್ಲಿ ಸಾಮಾನ್ಯವಾಗಿತ್ತು ಎನ್ನುವುದನ್ನು ತಿಳಿಸುತ್ತದೆ. ಆದರೆ ತಲೆ-ತಲಾಂತರದಿಂದ ಇಂಥ ಅಮಾನುಷ ಪದ್ಧತಿಗೆ ಕಾರಣವಾಗಿರುವವರು, ಅದನ್ನು ಮುಂದುವರೆಸಿಕೊಂಡು ಬರುತ್ತಿರುವವರೂ ಗಂಡಸರೇ ಎಂಬುದು ಮುಖ್ಯವಾಗುತ್ತದೆ. ಪ್ರಸ್ತುತದಲ್ಲೂ ಸಮಾಜದ ಸ್ವಾಸ್ಥ್ಯ ಕಾಪಾಡಲು ವೇಶ್ಯಾಗೃಹಗಳ ಅಗತ್ಯವಿದೆ ಎಂದು ವಾದಿಸುವ ಬುದ್ಧಿಜೀವಿ 'ಮಹಾಶಯರು' ನಮ್ಮ ಸಮಾಜದಲ್ಲಿದ್ದಾರೆ. ಅದೊಂದು ಕಸುಬಾಗಿ ರಾಜ-ಮಹಾರಾಜರುಗಳ ಕಾಲದಿಂದಲೂ ನಡೆದುಕೊಂಡು ಬಂದಿದೆ ಆದ ಕಾರಣ ಎಷ್ಟೋ ಜನ

ಅಸಹಾಯಕ ಬಡ ಹೆಣ್ಣುಮಕ್ಕಳ ಬದುಕಿಗೆ ಇದು ಆಧಾರವಾಗಿದೆ ಎಂದು ಸಮರ್ಥಿಸಿಕೊಳ್ಳುವವರು ಪ್ರಸ್ತುತದಲ್ಲಿದ್ದಾರೆ. ಅಜ್ಞಾನಿಗಳು ಆರಂಭಿಸಿದ ಹೀನ ಪದ್ಧತಿಗಳನ್ನು ಇಂದಿಗೂ ಮುಂದುವರೆಸಿಕೊಂಡು ಹೋಗುತ್ತಿರುವ ಗುತ್ತಿಗೆದಾರರು ನಮ್ಮ ಸಮಾಜದಲ್ಲಿ ಏನನ್ನು? ಅಥವಾ ಎಂತಹ ಕೊಡುಗೆಯನ್ನು ಕೊಡಲು ಸಾಧ್ಯವಿದೆ ಎಂಬ ಪ್ರಶ್ನೆಗಳನ್ನು ಅವರವರೇ ಅವರ ಮನಸ್ಸುಗಳಿಗೆ ಕೇಳಿಕೊಳ್ಳಬೇಕಾದ ಅಗತ್ಯವಿದೆ.

"ಕಾರ್ತಿಕ ಋಷಿಯ ಕತೆಯಲ್ಲಿ ಅರಸ ಅಗ್ನಿರಾಜ 'ಎನ್ನಾಳ್ವ ಮಂಡಳಂಗಳ್ ಪುಟ್ಟಿದ ಲೇಸಪ್ಪ ವಸ್ತುವಾರ್ಗಕ್ಕು' ಎಂಬ ಲೌಕಿಕ ಪ್ರಶ್ನೆಯಲ್ಲಿ ತನ್ನ ಮಗಳನ್ನೇ ಮೋಹಿಸಿ ಮದುವೆಯಾಗುವಲ್ಲಿ ಹೆಣ್ಣಿನ ಅದೃಶ್ಯತೆಯ ದುರಂತ ದಾಖಲಾಗಿದೆ. ಗಂಡಿನ ಲೈಂಗಿಕ ಕ್ರೌರ್ಯ ಇಷ್ಟರಮಟ್ಟಿನದಾದರೆ ಹೆಣ್ಣನ್ನು ನಿರ್ಬಂಧಿಸುವ ಹಿಂಸೆ ಅಮಾನವೀಯವಾದುದ್ದು. ಹಸುಗೂಸಿಗೆ ಹಾಲೂಡಲೂ ಅವಕಾಶವಾಗದಂತೆ ಹೆಂಡಿರ ಮೊಲೆಗಳನ್ನು ಕಟ್ಟಿಸಿ ದುಡಿಸಿಕೊಳ್ಳುವುದು; ಮನೆಯ ಆಳಿಗೆ ಹೊಟ್ಟೆ ತುಂಬ ಹಬ್ಬದೂಟ ಇಕ್ಕಿದ್ದಕ್ಕಾಗಿ ಕಾಷ್ಠಕೂಟ ಹೆಂಡತಿಯನ್ನು ಸಾಯೆ ಬಡಿದು ಮನೆಯಿಂದ ಆಚೆ ತಳ್ಳುವುದು, ಹೊಲಕ್ಕೆ ಊಟ ತರಲು ತಡವಾದುದಕ್ಕೆ ಹೆಂಡತಿಯನ್ನು ಗಂಡ ಸೊಪ್ಪು ನಾರಾಗಿ ಹೊಡೆಯುವುದು; ಕೂರಿಗೆಯಿಂದ ಹಕ್ಕಿಗಳನ್ನು ಬಿಟ್ಟಿದ್ದಕ್ಕಾಗಿ ಮಡದಿಯನ್ನು ಮನೆಯಿಂದ ಹೊರಗಟ್ಟುವುದು; ಅಣ್ಣನೊಡನೆ ಮಾತಾಡುತ್ತಿದ್ದ ತಂಗಿಯನ್ನು ಗಂಡ ಕ್ರೌಂಚರಾಜ ಅರಸಿಯ ತಲೆಗೂದಲು ಹಿಡಿದು ದರದರ ಎಳೆದುಕೊಂಡು ಬಂದ". (ಗಾಯತ್ರಿ ನಾವಡ 'ಮಹಿಳಾ ಸಂಕಥನ':೧೧) ಎಂಬ ವಿಚಾರಗಳು ಹಿಂದೆ ಹೆಣ್ಣು ಅರಸಿಯಾದರೂ ಆಳಾದರೂ ಗಂಡಿನ ಕೈ ಕೆಳಗೆ ದೈಹಿಕ, ಮಾನಸಿಕ ಹಿಂಸೆಗೆ ಬಲಿಯಾಗುವುದು ತಪ್ಪಿರಲಿಲ್ಲ. ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ತಂದೆಯಾದವನು ಮಗಳ ಮೇಲೆ ನಡೆಸುತ್ತಿರುವ ಅತ್ಯಾಚಾರಗಳು ಇಂದಿನವು ಮಾತ್ರವಲ್ಲ ಎಂದಿನವೂ ಎಂಬುದಕ್ಕೆ ಸಾಕ್ಷಿಯಾಗಿದೆ. ಕ್ಷುಲ್ಲಕ ಕಾರಣಗಳಿಗಾಗಿ ಹೆಣ್ಣನ್ನು ಕಠಿಣವಾದ, ಅಮಾನುಷ ಶಿಕ್ಷೆಗೆ ಗುರಿಪಡಿಸುವುದು ಇಂದಿಗೂ ಸಮಾಜದಲ್ಲಿ ಜೀವಂತವಾಗಿವೆ. ಒಟ್ಟಾರೆ ಈ ಎಲ್ಲಾ ಅಂಶಗಳಿಂದ ವೇದ್ಯವಾಗುವುದೇನೆಂದರೆ ಹೆಣ್ಣು 'ಹೆಣ್ಣಾದ ಕಾರಣಕ್ಕೆ ಎಂದೂ ಸುಖವಾಗಿರಲಿಲ್ಲ ಎಂಬುದು ತಿಳಿದು ಬರುತ್ತದೆ. ಹೆಣ್ಣನ್ನು ಪ್ರಾಣಿಗಿಂತ ಕಡೆಯಾಗಿ ಪರಿಗಣಿಸಿರುವುದಕ್ಕೆ ಮೇಲಿನ ಉದಾಹರಣೆಗಳು ಸಾಕ್ಷಿಯಾಗಿವೆ. ಇಲ್ಲಿ ಅವಳ ಅಸ್ಥಿತ್ವವೇ ಕಂಡುಬರುವುದಿಲ್ಲ. ಇನ್ನು ಅವಳ ಸ್ಥಾನ–ಮಾನದ ಮಾತು ದೂರವೇ ಉಳಿಯುತ್ತದೆ.

ವಚನಗಳ ಸಂದರ್ಭ :

ಇನ್ನು ಹನ್ನೆರಡನೆಯ ಶತಮಾನದ ವಚನಗಳ ಸಂದರ್ಭದಲ್ಲಿ ಬಸವಣ್ಣನವರು ಜಾತಿಯನ್ನು ಹೋಗಲಾಡಿಸಲು ಸಮಾಜದ ಎಲ್ಲ ವರ್ಗದವರಿಗೂ ಲಿಂಗದೀಕ್ಷೆಯನ್ನು ಕೊಟ್ಟರೂ, ಅಂತರ ಜಾತಿ ವಿವಾಹವನ್ನು ಮಾಡಿಸಿದರೂ ಕೂಡ ಅದೇ "ಹನ್ನೆರಡನೇ ಶತಮಾನದಲ್ಲಿ ಬಂದ ನೂರೊಂದು ವಿರಕ್ತರಲ್ಲಾಗಲಿ, ಏಳುನೂರೊಂದು ವಿರಕ್ತರಲ್ಲಾಗಲಿ, ಪಂಚಪೀಠಾಧೀಶ್ವರರಲ್ಲಾಗಲಿ ಒಬ್ಬ ಮಹಿಳೆಯೂ ಇಲ್ಲ. ಇನ್ನು ದಲಿತ ಮಹಿಳೆಯರ ಪ್ರಸ್ತಾಪವಂತೂ ಸಾಧ್ಯವೇ ಇಲ್ಲ. ಹನ್ನೆರಡನೆಯ ಶತಮಾನದಲ್ಲಿ ಯಾವ ವಚನ ಚಳವಳಿ ಸಮಾನತೆಗಾಗಿ ಹೋರಾಟ ಮಾಡಿತ್ತೋ, ಅದೇ ಚಳವಳಿಯ ಶರಣರ ಹೆಸರನ್ನು ಹೇಳಿ ಬದುಕಿದ ಮುಂದಿನವರು ಯಾರೂ ದಲಿತ ಮಹಿಳೆಯ ಬಗೆಗೆ ಕಾಳಜಿ ವಹಿಸಲಿಲ್ಲ. ಶೂನ್ಯ ಸಂಪಾದನೆಗಳಲ್ಲಂತೂ ದಲಿತ ವಚನಕಾರ್ತಿಯರ ಪ್ರವೇಶವೇ ಇಲ್ಲ. ಷಟ್‌ಸ್ಥಳ ಮಾರ್ಗದಲ್ಲಿ ಬದುಕಿದ ವರದಾನಿ ಗುಡ್ಡವ್ವೆ, ಕಾಯಕ ನಿಷ್ಠೆಗೆ ಹೆಸರಾದ ಸತ್ಯಕ್ಕ, ಪತಿಯ ತಪ್ಪನ್ನೇ ತಿದ್ದಿ ತೋರಿಸಿದ ಆಯ್ದಕ್ಕಿ ಲಕ್ಕಮ್ಮ ಇಂತಹ ಅನೇಕ ಕೆಳವರ್ಗದ ಶರಣೆಯರು ವಚನ ಚಳವಳಿಯ ಕೇಂದ್ರವಾಗಿದ್ದರು. ಆದರೆ ಮುಂದೆ ಬಂದ ಮಠಗಳೂ ವೀರಶೈವ ಕವಿಗಳೂ–ಪುರಾಣಕಾರರು–ವಿರಕ್ತರು–ಗುರುಪರಂಪರೆಯವರು ಯಾರೂ ಈ ದಲಿತ ಮಹಿಳೆಯರ ಪರಂಪರೆಯನ್ನು ಗುರುತಿಸಲಿಲ್ಲ. ತಮ್ಮ ಸಮಕಾಲೀನ ಸಂದರ್ಭದ ಬದುಕಿನಲ್ಲಿ ಇವರಿಗೆ ಪ್ರಾಮುಖ್ಯತೆ ನೀಡಲಿಲ್ಲ." (ಡಾ. ಬಸವರಾಜ ಸಬರದ (ಲೇ) 'ದಲಿತರು ಮತ್ತು ಚರಿತ್ರೆ:೧೭೬–೧೭೭) ಹೀಗೆ ಸಮಾನತೆಯ ಕನಸಿನೊಂದಿಗೆ ಆರಂಭವಾದ ವಚನ ಚಳವಳಿ ಅಲ್ಲಿಗೇ ಕಮರಿ ಹೋಯಿತು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲೂ ಅನೇಕ ದಲಿತ ಮಹಿಳೆಯರು ತಮ್ಮ ಪ್ರಾಣವನ್ನೇ ಅರ್ಪಿಸಿದ್ದಾರೆ. ಆದರೆ ಇಂಥವು ಎಲ್ಲೂ ದಾಖಲಾಗಿಲ್ಲದ್ದು ದುರಂತವಾಗಿದೆ. ಹಿಂದಿನ ರಾಜರ ಆಡಳಿತ ವ್ಯವಸ್ಥೆಯಲ್ಲಿ ದಲಿತರಿಗೆ ಸ್ಥಾನವಿರಲಿಲ್ಲ. ಅಂಥದ್ದರಲ್ಲಿ ದಲಿತ ಮಹಿಳೆಯರ ಸ್ಥಿತಿಯಂತೂ ಕಲ್ಪನೆಗೆ ನಿಲುಕದ್ದು. ಒಟ್ಟಾರೆ ದಲಿತ ಮಹಿಳೆ ಎಲ್ಲಿಯೂ ಪ್ರಸ್ತಾಪಗೊಂಡಿಲ್ಲ. ಕ್ವಚಿತ್ತಾಗಿ ಪ್ರಸ್ತಾಪಗೊಂಡರೆ ಕಾಮಕ್ಕೆ ಬಲಿಯಾದಂತೆ ಕಂಡುಬರುತ್ತಾರೆ. ಅವಳ ಸ್ಥಾನಮಾನಗಳು ಉನ್ನತೀಕರಿಸಿರುವಂಥ, ಆದರ್ಶ ಮಹಿಳಾ ಪಾತ್ರ ಚಿತ್ರಣ ಇಲ್ಲವೆಂದೇ ಹೇಳಬಹುದು.

ವಚನಗಳ ಸಂದರ್ಭದಲ್ಲಿ ಮಹಿಳೆಯ ಸ್ಥಾನಮಾನ ಸುಧಾರಿಸಿದಂತೆ ಕಂಡುಬರುತ್ತದೆ. ಅಲ್ಲಮ ಪ್ರಭುಗಳು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಸಮಾಜದ ಯಾವುದೇ ವರ್ಗದ ಸ್ತ್ರೀಯಾದರೂ ತನ್ನ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡಲಾಗಿತ್ತು. ಈ

ಕಾರಣದಿಂದ ಕೆಲವು 'ಕೆಳಜಾತಿ'ಗೆ ಸೇರಿದ ವಚನಕಾರ್ತಿಯರೂ ವಚನಗಳನ್ನು ಬರೆಯತೊಡಗಿದ್ದು ಗಮನಾರ್ಹವಾದದ್ದು. ಅಂಥವರಲ್ಲಿ ಕಾಳವ್ವೆ ಒಬ್ಬಳು. ಈ ಸಂದರ್ಭದಲ್ಲಿ ಜಾತಿಯನ್ನು ಹೋಗಲಾಡಿಸಲು ಬಸವಣ್ಣನವರು 'ಅಂತರ್‌ಜಾತಿ' ವಿವಾಹವನ್ನು ಮಾಡಿಸಿದ್ದು ಇಂದಿನ ಸಮಾಜಕ್ಕೂ ಆದರ್ಶನೀಯವಾದುದು. ಆದರೆ ಈ ವಿಚಾರದಿಂದ ಕೆರಳಿದ ಬಿಜ್ಜಳ ಮಹಾರಾಜ ಹರಳಯ್ಯ, ಮಧುವರಸರ ಕಣ್ಣು ತೆಗೆಸಿದ್ದು ರಾಜನಾದವನಲ್ಲೂ ಕಂಡುಬರುವ ಜಾತಿಯ ಕರಾಳ ಮುಖವನ್ನು ತೋರಿಸುತ್ತದೆ.

ವಚನಗಳ ಸಂದರ್ಭದಲ್ಲಿ ಜಾತಿವ್ಯವಸ್ಥೆ ಕಂಡು ಬಂದರೂ ಹೆಣ್ಣಿನ ಮೇಲೆ ನಡೆಯುವ ಶೋಷಣೆ ಕಂಡುಬರುವುದಿಲ್ಲ. ಒಟ್ಟಾರೆಯಾಗಿ ವಚನಗಳ ಸಂದರ್ಭದಲ್ಲಿ ಸ್ತ್ರೀ ಶಿಕ್ಷಣಕ್ಕೆ ಆದ್ಯತೆಯಿತ್ತು. ಸ್ತ್ರೀ ಸಮಾನತೆಯಿತ್ತು. ಆದರೆ ಜಾತಿ ಶೋಷಣೆ ಕಂಡುಬಂದರೂ ಆ ಕಾರಣಕ್ಕಾಗಿ ದಲಿತ ಮಹಿಳೆಯನ್ನು ದೈಹಿಕವಾಗಿಯಾಗಲೀ ಮಾನಸಿಕವಾಗಿಯಾಗಲೀ ಶೋಷಣೆಗೊಳಪಡಿಸಿದ ಪ್ರಸಂಗಗಳು ಕಂಡು ಬರುವುದಿಲ್ಲ.

ಮಧ್ಯಕಾಲೀನ ಸಂದರ್ಭ :

ಮಧ್ಯಕಾಲೀನ ಸಂದರ್ಭದಲ್ಲಿ ಕುಮಾರವ್ಯಾಸ ಮತ್ತು ರಾಘವಾಂಕರ ಸ್ತ್ರೀಪಾತ್ರಗಳು ಗಮನಾರ್ಹವಾದವು. ರಾಘವಾಂಕನ ಹರಿಶ್ಚಂದ್ರ ಕಾವ್ಯದ ಚಂದ್ರಮತಿಯು ತನ್ನ ಗಂಡ ಬೀದಿಯಲ್ಲಿ ಮಾರಿದರೂ ಚಕಾರವೆತ್ತುವುದಿಲ್ಲ. 'ಪತಿಯೇ ಪರದೈವ' ಎಂದು ಕಾಡು–ಮೇಡುಗಳಲ್ಲಿ ಗಂಡನೊಂದಿಗೆ ಅಲೆಯುತ್ತಾಳೆ. 'ಬ್ರಾಹ್ಮಣ'ನ ಮನೆಯಲ್ಲಿ ಆಳಾಗಿ ದುಡಿಯುತ್ತಾಳೆ. ಹರಿಶ್ಚಂದ್ರನಾದರೂ ತನ್ನ ಸತ್ಯವೆಂಬ ಸ್ವಾರ್ಥಕ್ಕಾಗಿ ಹೆಂಡತಿ ಮಗನಿಗೆ ಕಷ್ಟ–ಕೋಟಲೆಗಳನ್ನು ಕೊಡಲು ಹೇಸದವನಾಗಿ ಕಂಡು ಬರುತ್ತಾನೆ. ಕುಮಾರವ್ಯಾಸನ ದ್ರೌಪದಿಯು ಗಂಡಂದಿರ ಅಸಹಾಯಕತೆಯನ್ನು ಕೆರಳಿಸಿಯಾದರೂ ತನ್ನನ್ನು ಕಾಪಾಡಿಕೊಳ್ಳುತ್ತಾಳೆ. ದ್ರೌಪದಿ ಕೀಚಕನಿಂದಾದ ತೊಂದರೆಯಿಂದ ರಕ್ಷಿಸಿಕೊಳ್ಳಲು 'ಗಂಡರೋ ನೀವ್ ಭಂಡರೋ ಮೂರು ಲೋಕವನು ಆಳುವವರು ಎನ್ನನ್ನೊಬ್ಬಳನ್ನಾಳಲಾರಿರಿ' ಎಂದು ಪ್ರಶ್ನಿಸುತ್ತಾಳೆ. ಕುಮಾರವ್ಯಾಸನ ಭಿನ್ನ ರೀತಿಯ ದ್ರೌಪದಿ ಚಿತ್ರಣ ಸ್ತ್ರೀವಾದಿ ನೆಲೆಯಲ್ಲಿ ಕಂಡುಬರುತ್ತದೆ. ಲಕ್ಷ್ಮೀಶನ ಸೀತೆಯು ರಾಘವ ಅವಳನ್ನು ಕಾಡಿಗಟ್ಟಿದಾಗ 'ಕರುಣಾಳು ರಾಘವನಲ್ಲಿ ತಪ್ಪಿಲ್ಲ. ಹೆಣ್ಣಾಗಿ ಹುಟ್ಟಿದ್ದು ನನ್ನ ತಪ್ಪು' ಎಂದು ತನ್ನ ಹೆಣ್ತನವನ್ನೇ ದೂಷಿಸಿಕೊಳ್ಳುತ್ತಾಳೆ. ಆದರೆ ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ'ಯಲ್ಲಿ ಚಿತ್ರಣಗೊಂಡಿರುವ ದ್ರೌಪದಿ ತನ್ನನ್ನು ಪಣಕ್ಕಿಟ್ಟು ಸೋತ ಗಂಡನನ್ನು ಕುರಿತು ದುಶ್ಯಾಸನಲ್ಲಿ ಮೊದಲೇ ತನ್ನನ್ನು ತಾನು ಪಣಕ್ಕೊಡ್ಡಿಕೊಂಡು ಸೋತ ಧರ್ಮರಾಯ ನನ್ನನ್ನು ಪಣಕ್ಕಿಟ್ಟು ಸೋಲಲು ಹೇಗೆ ಸಾಧ್ಯ? ಎಂದು ಪ್ರಶ್ನಿಸುತ್ತಾಳೆ.

ಒಟ್ಟಾರೆ ಮಧ್ಯಕಾಲೀನ ಸಂದರ್ಭದಲ್ಲಿ ಕುಮಾರವ್ಯಾಸ ಮತ್ತು ರಾಘವಾಂಕನ ಕಾವ್ಯಗಳಲ್ಲಿ ಚಿತ್ರಣಗೊಂಡ ಮಹಿಳೆಯ ಸ್ಥಿತಿ ಉತ್ತಮವಾಗೇನೂ ಇರಲಿಲ್ಲ. ಅರಸಿಯರೆ ಆದರೂ ಅವರಿಗೂ ಪುರುಷರ ಶೋಷಣೆಯಿಂದ ವಿನಾಯಿತಿ ಸಿಗಲಿಲ್ಲ. ಸಮಾಜದಲ್ಲಿ ಹೆಣ್ಣು ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಕೂಡ ಹೆಣ್ಣೆಂಬ ಕಾರಣಕ್ಕೆ ಅವಳ ಮೇಲೆ ನಡೆಯುವ ಶೋಷಣೆ ತಪ್ಪಿದ್ದಲ್ಲ ಎಂಬುದಕ್ಕೆ ಇದು ನಿದರ್ಶನವಾಗಿದೆ.

ಪ್ರಾಚೀನ ಕೃತಿಗಳಿಂದ ಇಲ್ಲಿಯವರೆಗೆ ದಲಿತ ಮಹಿಳೆಯರನ್ನು ಕೀಳಾಗಿ ಚಿತ್ರಿಸಿರುವುದೇ ಕಂಡು ಬರುತ್ತದೆ. ಆದರೆ ದಲಿತರೇ ಬರೆದಾಗ ಇಂತಹ ಚರ್ವಿತ ಚರ್ವಣ ದಲಿತ ಸ್ತ್ರೀ ಚಿತ್ರಣದಿಂದ ಹೊರಗೆ ನಿಂತು ಅವಳನ್ನು ಸೃಜನಾತ್ಮಕ ನೆಲೆಯಲ್ಲಿ ಭಿನ್ನ ನೆಲೆಯಲ್ಲಿ ಗುರುತಿಸಿರುವುದುಂಟು. ರಾಘವಾಂಕನ ಹರಿಶ್ಚಂದ್ರ ಕಾವ್ಯ ಇದಕ್ಕೆ ಉದಾಹರಣೆಯಾಗಿದೆ. ಶಿಷ್ಟ ಮಹಿಳೆಯ ಚರಿತ್ರೆಯಂತೆ ದಲಿತ ಮಹಿಳೆಯ ಚರಿತ್ರೆ ಅಪಾರವಾದುದಲ್ಲ. ಪ್ರಾಚೀನ ಕೃತಿಗಳ ಆದಿಯಿಂದ ಪ್ರಸ್ತುತದವರೆಗೆ ಅವಳ ಚಿತ್ರಣ ಎಲೆ ಮರೆಯ ಕಾಯಿಯಂತೆ ಇದೆ. ಒಂದು ವೇಳೆ ಅವಳ ಪ್ರಸ್ತಾಪವಾಗಿದ್ದೇ ಆದರೂ ಹೀನಮಟ್ಟಕ್ಕೆ ನಿಲ್ಲುತ್ತದೆ. ರಾಘವಾಂಕನ ಹೊಲತಿಯರ ಪ್ರಸಂಗ ಇದಕ್ಕೆ ಉತ್ತಮ ನಿದರ್ಶನವಾಗಿದೆ. ಗಾನರಾಣಿಯರ ಹಾಡನ್ನು ಆಲಿಸಿದ, ನಾಟ್ಯವನ್ನು ನೋಡಿದ, ಅವರ ಪರಿಮಳವನ್ನು ಮೂಸಿದ, ಅವರೊಂದಿಗೆ ಮಾತಾಡಿದ ಹರಿಶ್ಚಂದ್ರ ಅವರನ್ನು ಮದುವೆಯಾಗಲು ನಿರಾಕರಿಸುತ್ತಾನೆ. ಕಾರಣ ಗಾನರಾಣಿಯರು ಹೊಲತಿಯರೆಂಬುದು. ಆ ಸಂದರ್ಭದಲ್ಲಿ ಹೊಲತಿಯರನ್ನು ಕುರಿತು ಹರಿಶ್ಚಂದ್ರನಾಡುವ ಮಾತುಗಳು ಗಮನಾರ್ಹವಾದವು. "ಉತ್ತಮರು ಕೀಳು ಹೆಂಗಸರನ್ನು ನೋಡಬಾರದು, ನೋಡಿದರೂ ನುಡಿಸಬಾರದು, ನುಡಿಸಿದರೂ ಮನ್ನಿಸಬಾರದು. ಮನ್ನಿಸಿದರೂ ಕರೆದು ಏನನ್ನೂ ಕೊಡಬಾರದು." (ರಂಗನಾಥ ಶರ್ಮ 'ರಾಘವಾಂಕನ ಹರಿಶ್ಚಂದ್ರ ಚರಿತ್ರೆ:೫೯) ಎನ್ನುವ ಹರಿಶ್ಚಂದ್ರ ನಿಮಗೋಸ್ಕರ ತನ್ನ ಕುಲವನ್ನು ಕೆಡಿಸಿಕೊಳ್ಳಲು ಸಾಧ್ಯವಿಲ್ಲವೆನ್ನುತ್ತಾನೆ. ಸತ್ಯ, ತ್ಯಾಗ, ನ್ಯಾಯ ಮುಂತಾದ ಸದ್ಗುಣಗಳಿಗೆ ಒಡೆಯನಾದ ಹರಿಶ್ಚಂದ್ರನಲ್ಲೇ ಜಾತಿಯನ್ನು ಕಾಣುವುದು ಜಾತಿಯೆಂಬುದು ಎಂಥವರನ್ನೂ ಬಿಟ್ಟಿಲ್ಲ ಎನ್ನುವುದನ್ನು ತಿಳಿಸುತ್ತದೆ. ಅಲ್ಲದೇ ಮಧ್ಯಕಾಲೀನ ಸಂದರ್ಭದಲ್ಲಿ ಸಾಹಿತ್ಯ ಕೃತಿಗಳಲ್ಲಿ ಚಿತ್ರಣಗೊಂಡ ಹೊಲತಿಯರ ಹೀನ ಸ್ಥಿತಿಯನ್ನು ಅರಿಯಲು ಸಾಧ್ಯವಾಗುತ್ತದೆ.

ಆಧುನಿಕ ಸಂದರ್ಭ :

ಆಧುನಿಕ ಸಂದರ್ಭದಲ್ಲಿ ಮಹಿಳೆಯರ ಸುಧಾರಣೆಗಾಗಿ ಸರ್ಕಾರ ಮತ್ತು ಸಮಾಜ ಸುಧಾರಕರು ಸಾಕಷ್ಟು ಯೋಜನೆಗಳನ್ನು, ಕಾನೂನುಗಳನ್ನು ಜಾರಿಗೆ ತಂದಿದ್ದಾರೆ. ಆದರೆ

ಫಲಿತಾಂಶ ನೂರಕ್ಕೆ ನೂರು ಅಲ್ಲ. "ವಿಧವಾ ಪುನರ್‌ವಿವಾಹ ಕಾಯ್ದೆ, ಸತೀ ನಿಷೇಧ ಕಾಯ್ದೆ' ನಾಗರಿಕ ವಿವಾಹ ಕಾಯ್ದೆ, ಬಾಲ್ಯವಿವಾಹ ನಿಷೇಧಕಾಯ್ದೆ, ವಿವಾಹಿತ ಮಹಿಳೆಯರ ಆಸ್ತಿಕಾಯ್ದೆ, ಸಮ್ಮತಿಯ ವಯಸ್ಸಿನ ಕಾಯ್ದೆ, ಹಿಂದೂ ವಿವಾಹ ಕಾಯ್ದೆ, ಹಿಂದೂ ಉತ್ತರಾಧಿಕಾರ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ" (ಅಕ್ಕಮಹಾದೇವಿ 'ದಲಿತ ಮಹಿಳೆ':೨೬) ಮುಂತಾದ ಕಾಯ್ದೆಗಳ ಮುಖಾಂತರ ಮಹಿಳೆಯರ ಹಕ್ಕುಗಳನ್ನು ರಕ್ಷಿಸುವ ಪ್ರಯತ್ನಗಳು ನಡೆದವು. ಆದರೆ ಇವು ಕಡತಗಳಲ್ಲಿ ಬಂಧಿಯಾಗಿರುವ ಕಾನೂನುಗಳೇ ಹೊರತು ವಾಸ್ತವ ಸಮಾಜದಲ್ಲಿ ಅಷ್ಟು ಪರಿಣಾಮವನ್ನು ಬೀರಲಿಲ್ಲ. ಇಷ್ಟೆಲ್ಲಾ ಕಾಯ್ದೆಗಳ ನಂತರವೂ ದಲಿತ ಮಹಿಳೆಯ ಸ್ಥಿತಿಯಲ್ಲಿ ಯಾವುದೇ ಸುಧಾರಣೆಗಳು ಕಂಡು ಬಂದಿಲ್ಲ. ಕಾರಣ ಇವರ ಅಜ್ಞಾನ, ಅನಕ್ಷರತೆ 'ಮೇಲ್ವರ್ಗದ ಮಹಿಳೆಯನ್ನು ಪುರುಷ ಕೇಂದ್ರಿತ ಸಮಾಜ ಆಕೆಯನ್ನು ತನ್ನ ಖಾಸಗೀ ಆಸ್ತಿ ಎಂಬಂತೆ ನೋಡುವುದು ಅವಳಿಗೆ ಒಂದು ರೀತಿಯಲ್ಲಿ ರಕ್ಷಣೆ ಸಿಕ್ಕಿದಂತಾಗಿದೆ'. ಅಲ್ಲದೇ ಮೇಲ್ವರ್ಗದ ಮಹಿಳೆಯರು ಇಂದು ಶಿಕ್ಷಣವನ್ನು ಕಲಿತು ಔದ್ಯೋಗಿಕ ಕ್ಷೇತ್ರಗಳಲ್ಲಿ ದುಡಿಯುತ್ತಿರುವುದರಿಂದ ಅವಳ ಶೋಷಣೆ ದಲಿತ ಮಹಿಳೆಯ ಮಟ್ಟಿಗೆ ನಡೆಯದೆ ಸುಧಾರಿಸಲ್ಪಟ್ಟಿದೆ. ಆದರೆ ದಲಿತ ಮಹಿಳೆ ಕುಟುಂಬದ ಒಳಗೆ ಮತ್ತು ಹೊರಗೆ ಎರಡೂ ಕಡೆಗಳಲ್ಲಿ ಶೋಷಣೆಗೆ ಒಳಗಾಗುತ್ತಿದ್ದಾಳೆ. ಒಂದು ರೀತಿಯಲ್ಲಿ ಎರಡೂ ಕಡೆಗಳಲ್ಲೂ ನೋವುಗಳೇ ತುಂಬಿವೆ.

ಇಂದು ಕನ್ನಡ ದಲಿತ ಸಾಹಿತ್ಯ ಹುಲುಸಾಗಿ ಬೆಳೆದು ಬರುತ್ತಿದೆ. "ಸಾಹಿತ್ಯದ ಅನೇಕ ರೂಪಗಳಲ್ಲಿ ಅದು ವ್ಯಕ್ತವಾಗುತ್ತಿದೆ. ಮುಖ್ಯವಾಗಿ ಕಾವ್ಯ, ಕಥೆ, ಕಾದಂಬರಿ, ನಾಟಕ, ಆತ್ಮಕತೆ, ಶೋಧನೆ, ವಿಚಾರ, ವಿಮರ್ಶೆ ಮತ್ತು ಪ್ರವಾಸ ಕಥನಗಳು ಉಲ್ಲೇಖಾರ್ಹವಾದವು. ಇಲ್ಲಿಯ ಪ್ರತಿಯೊಂದು ಪ್ರಕಾರವು ಪ್ರತ್ಯೇಕ ಗುಣಲಕ್ಷಣಗಳನ್ನು ಹೊಂದಿದೆ. ಜೊತೆಗೆ ಇವುಗಳಲ್ಲಿ ಬಳಕೆಯಾದ ಭಾಷೆ, ಬಂಧ, ಶಿಲ್ಪ, ಸಂಭಾಷಣೆ, ಶೈಲಿ, ತಂತ್ರಗಳು ಕನ್ನಡ ದಲಿತ ಸಾಹಿತ್ಯಕ್ಕೆ ಒಂದು ವಿಶಿಷ್ಟ ನೆಲೆಯನ್ನು ಒದಗಿಸಿವೆ." (ರಂಗರಾಜ ವನದುರ್ಗ (ಲೇ) 'ವಿಮರ್ಶಾ ಲೇಖನಗಳು':೫೮) ದಲಿತರು ಮತ್ತು ದಲಿತೇತರರು ತಮ್ಮ ಸಾಹಿತ್ಯ ಪ್ರಕಾರಗಳಲ್ಲಿ ದಲಿತ ಮಹಿಳೆಯನ್ನು, ದಲಿತ ಮಹಿಳೆಯ ಸುತ್ತ ಆವರಿಸಿರುವ ಅನಿಷ್ಟ ಪದ್ಧತಿಗಳನ್ನು ಕುರಿತು ಎಷ್ಟೇ ಬರೆದರೂ ಆಕೆಯ ಬದುಕಿನಲ್ಲಾಗಲೀ ಸ್ಥಾನಮಾನಗಳಲ್ಲಾಗಲೀ ಪರಿಣಾಮಕಾರಿ ಸುಧಾರಣೆ ಕಂಡು ಬಂದಿಲ್ಲ.

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ 'ದಲಿತ ಮಹಿಳೆ' ಎಂದರೆ 'ಜಾತಿಯ ಕಾರಣಕ್ಕೆ ಶತಮಾನಗಳಿಂದ ಶೋಷಣೆಗೊಳಗಾಗುತ್ತಿರುವವಳು' ಎಂಬ ಅರ್ಥದಲ್ಲಿ ಪರಿಗಣಿಸಲಾಗುತ್ತಿದೆ.

ಸಾಮಾನ್ಯವಾಗಿ ಮಹಿಳೆಯರನ್ನೇ 'ದಲಿತರು' ಎಂದು ಕರೆಯುವ ರೂಢಿಯಿದೆ. ಆದರೆ ಇಲ್ಲಿ ಎಲ್ಲಾ ವರ್ಗದ ಮಹಿಳೆಯರನ್ನೂ ಸೇರಿಸಿಕೊಂಡು 'ದಲಿತ ಮಹಿಳೆ' ಎಂದು ಪರಿಗಣಿಸಿದರೆ ವ್ಯಾಪ್ತಿ ಮೀರುವ ಸಾಧ್ಯತೆ ಇದೆ. ಆದ್ದರಿಂದ 'ಮೇಲ್ಜಾತಿ'ಯ ಮಹಿಳೆ ಶೋಷಣೆಗೊಳಗಾಗುತ್ತಿರುವ ನೆಲೆಗಳನ್ನು ಉಪ ಅಧ್ಯಾಯವಾಗಿ ಪ್ರಸ್ತಾಪಿಸಲಾಗುತ್ತಿದೆ. ಏಕೆಂದರೆ 'ಮೇಲ್ಜಾತಿ' ಮಹಿಳೆ ಸಾಮಾನ್ಯವಾಗಿ ಕೌಟುಂಬಿಕವಾಗಿ ಶೋಷಣೆಗೊಳಗಾಗುವುದು ಕಂಡು ಬರುತ್ತದೆ. ಆದರೆ ಕೆಳಜಾತಿ ಮಹಿಳೆಯಂತೆ ಲೈಂಗಿಕ ಶೋಷಣೆಗೆ ಒಳಗಾಗುವುದು ಅಪರೂಪವಾಗಿದೆ. 'ಕೆಳಜಾತಿ'ಯ ಮಹಿಳೆ ಕುಟುಂಬದ ಒಳಗೆ ಮತ್ತು ಹೊರಗೆ ಅತ್ಯಧಿಕವಾಗಿ ಲೈಂಗಿಕ ಶೋಷಣೆಗೆ ಒಳಗಾಗುತ್ತಿರುವುದರಿಂದ ಅವಳನ್ನು ಪ್ರಸ್ತುತ ಅಧ್ಯಯನದ ವಸ್ತುವಾಗಿ ಪರಿಗಣಿಸಲಾಗುತ್ತಿದೆ. ದಲಿತ ಮಹಿಳೆಯರ ಸಮಸ್ಯೆಗಳ ದೃಷ್ಟಿಯಿಂದ ಅವರನ್ನು ಮಾತ್ರ ಪ್ರತ್ಯೇಕವಾಗಿ ಪರಿಗಣಿಸುತ್ತಿರುವುದು ಸಮಗ್ರ ಮಹಿಳೆಯರಿಗೆ ಅವಮಾನ ಮಾಡಿದಂತೆ ಆಗುವುದಿಲ್ಲ. ನೂರಾರು ವರ್ಷಗಳಿಂದ ಜಾತಿಯ ಕಾರಣಕ್ಕೆ ಹಿಂಸೆಗೊಳಗಾಗುತ್ತಿರುವ ಅಪಮಾನಿತ ಹೆಣ್ಣುಮಕ್ಕಳ ಆದ್ಯತೆ ಮೊದಲು, ನಂತರ ಉಳಿದವು.

ದಲಿತ ಮಹಿಳೆಯರು ತಮ್ಮ ಅಸ್ತಿತ್ವಕ್ಕಾಗಿ ಪ್ರತ್ಯೇಕವಾಗಿ ಹೋರಾಡಬೇಕಾದ ಅಗತ್ಯವಿದೆ. ಏಕೆಂದರೆ ಮಾತಿನ ವರಸೆಗಾಗಿ ಎಲ್ಲಾ ಮಹಿಳೆಯರು ದಲಿತರು ಎಂದಾಕ್ಷಣ ಎಲ್ಲಾ ಮಹಿಳೆಯರ ಸಮಸ್ಯೆಗಳೂ ದಲಿತ ಮಹಿಳೆಗಿಲ್ಲ. ಜಾತಿಯ ಕಾರಣದಿಂದ ಆಕೆ ಸಾಮಾನ್ಯ ಮಹಿಳೆಗಿಂತ ಹೆಚ್ಚು ಶೋಷಣೆಗೆ ಒಳಗಾಗುತ್ತಿದ್ದಾಳೆ. ಆದ್ದರಿಂದ ಆಕೆಯನ್ನು ಪ್ರತ್ಯೇಕವಾಗಿಯೇ ಅಧ್ಯಯನ ಮಾಡುವ ಅವಶ್ಯಕತೆಯಿದೆ. ದಲಿತ ಮಹಿಳೆ ಒಂದೇ ಸಮಯದಲ್ಲಿ ಸಮಾಜದ ಹಲವು ಹೊಡೆತಗಳಿಂದ ಆಕೆ ತಪ್ಪಿಸಿಕೊಳ್ಳಬೇಕಿದೆ. ಸಮಾಜದ ಎಲ್ಲರೊಂದಿಗೂ ಆಕೆ ಹೋರಾಟ ಮಾಡುತ್ತಾ ಮೇಲ್ಜಾತಿ ಪುರುಷರ ದಬ್ಬಾಳಿಕೆಯನ್ನು ಸಹಿಸಿಕೊಳ್ಳುತ್ತಲೇ ಮೇಲ್ಜಾತಿಯ ಮಹಿಳೆಯ ಶೋಷಣೆಯಿಂದ ತಪ್ಪಿಸಿಕೊಳ್ಳಲು ಆಕೆಯೊಂದಿಗೂ ಸ್ಪರ್ಧಿಸಬೇಕಾಗಿದೆ. ಏಕಕಾಲದಲ್ಲಿ ಇಷ್ಟೊಂದು ಒತ್ತಡಗಳನ್ನು ಎದುರಿಸಬೇಕಾದ ಸಂದಿಗ್ಧ ಪರಿಸ್ಥಿತಿಯಲ್ಲಿ ಆಕೆ ಬದುಕುತ್ತಿದ್ದಾಳೆ. ಇಂತಹ ದಲಿತ ಮಹಿಳೆಯನ್ನು ಕುರಿತು ಅಧ್ಯಯನ ಮಾಡುವುದು ಇವತ್ತಿನ ಅಗತ್ಯವಾಗಿದೆ.

'ದಲಿತ' ಮತ್ತು 'ದಲಿತ ಮಹಿಳೆ'ಯನ್ನು ಕುರಿತು ಪ್ರಸ್ತಾಪ ಇಂದು ನೆನ್ನೆಯದಲ್ಲ. ಅದು ಪ್ರಾಚೀನವಾದುದು ಎಂಬುದಕ್ಕೆ ಕೆಲವು ನಿದರ್ಶನಗಳು ಸಿಕ್ಕಿವೆ. "ವಡ್ಡಾರಾಧನೆಯ ಸುಕುಮಾರಸ್ವಾಮಿ ಕಥೆಯಲ್ಲಿ ಹೊಲೆಯ ಮಾದಿಗ ಎನ್ನುವ ಪದಗಳು ಕಾಣಸಿಗುತ್ತವೆ. ವಾಯುಭೂತಿಯು ಋಷಿಗಳನ್ನು ಗರ್ವದಿಂದ ಅಪಮಾನ ಮಾಡಿ ಜಿನಧರ್ಮವನ್ನು

ಹೀಯಾಳಿಸಿದ್ದರ ಪರಿಣಾಮವಾಗಿ ವಾಯುಭೂತಿ ಪುನರ್ ಜನ್ಮಗಳಲ್ಲಿ ಡೊಂಬರ ಮನೆಯಲ್ಲಿ ಹೆಣ್ಣು ಕತ್ತೆಯಾಗಿ ಹುಟ್ಟಿ ಸತ್ತು ಪುನರ್ ಜನ್ಮದಲ್ಲಿ ಮಾದಿಗರ ಮನೆಯಲ್ಲಿ ಹೆಣ್ಣು ನಾಯಿಯಾಗಿ ಹುಟ್ಟಿ ಸತ್ತಿತು. ಅದೇ ಜೀವ ಮುಂದಿನ ಜನ್ಮದಲ್ಲಿ ಮಾದಿಗರ ನಾಯಕ ನೀಳ ಮತ್ತು ಅವನ ಹೆಂಡತಿ ಕೇಸಿಗೆ ಮಗಳಾಗಿ ಹುಟ್ಟಿತು. ಈ ಮಾದಿಗರ ಕುರೂಪಿ, ದುರ್ವರ್ಣಿ, ದುರ್ಗಂದೆ, ದುಸ್ವರ, ಹುಟ್ಟು ಕುರುಡಿ, ವ್ಯಾಧಿ ಪೀಡಿತೆಯಾಗಿ ಹುಟ್ಟುತ್ತಾಳೆ. ಪಾಪ ಪರಿಹಾರಕ್ಕೆ ಹುಟ್ಟು ದಲಿತ ಸಮುದಾಯಗಳಿವೆ. ಅದರಲ್ಲೂ ಹೆಣ್ಣು ಜನ್ಮವೇ ಆಗಬೇಕು. ಅದು ಆರೋಗ್ಯವಂತ ಹೆಣ್ಣಲ್ಲ, ದೋಷಗಳನ್ನು ಹೆಣ್ಣಿಗೆ ಎಷ್ಟು ಸೇರಿಸಬೇಕೋ ಅಷ್ಟೆಲ್ಲವನ್ನೂ ಈ ಕಥೆಯಲ್ಲಿ ಸೇರಿಸಲಾಗಿದೆ. ಡೊಂಬರ ಕತ್ತೆ, ಅದರಲ್ಲೂ ಹೆಣ್ಣು ಕತ್ತೆ, ಮಾದಿಗರ ಮನೆಯ ನಾಯಿ ಅದರಲ್ಲೂ ಹೆಣ್ಣುನಾಯಿ, ಮಾದಿಗರ ಮಗಳು ಅದರಲ್ಲೂ ವಿಕಾರತೆಯ ಸ್ವರೂಪವನ್ನು ಹೊಂದಿರುವಾಕೆ". (ಹೆಚ್.ಟಿ.ವೆಂಕಟೇಶಮೂರ್ತಿ (ಲೇ) 'ವಿಜಯಾನ್ವೇಷಣ':೫೨೮) ದಲಿತ ಮಹಿಳೆಯ ಕನಿಷ್ಟತಮವಾದ, ಹೀನಾತಿ ಹೀನವಾದ ಸಾಮಾಜಿಕ ಸ್ಥಿತಿಯನ್ನು ಪ್ರಾಚೀನ ಕನ್ನಡ ಸಾಹಿತ್ಯದಲ್ಲೇ ಗುರುತಿಸಲು ಸಾಧ್ಯವಿತ್ತು ಎನ್ನುವುದಕ್ಕೆ ಇದು ಉದಾಹರಣೆಯಾಗಿದೆ. ಇನ್ನು ಕೆಲವು ಕೃತಿಗಳಲ್ಲಿ 'ಹೊಲೆಯ' ಮತ್ತು 'ಹೊಲತಿ' ಶಬ್ದಗಳ ಪ್ರಯೋಗವನ್ನು ಗುರುತಿಸಲು ಸಾಧ್ಯವಿದೆ. "ನಯಸೇನನ 'ಧರ್ಮಾಮೃತ' 'ನಿರ್ವಿಚಿಕಿತ್ಸೆಯ ಕಥೆ'ಯ ಒಂದು ಭಾಗದಲ್ಲಿ ಹೊಲೆಯ ಎಂಬುದರ ಪ್ರಸ್ತಾಪವಿದೆ. ಬ್ರಹ್ಮಶಿವನು ತನ್ನ ಕೃತಿ 'ಸಮಯ ಪರೀಕ್ಷೆ'ಯಲ್ಲಿ ಹೊಲೆಯ, ಹೊಲಗೇರಿ, ಶ್ವಪಚ, ಅಂತ್ಯಜ ಎಂಬುದನ್ನು ಹಲವು ಕಡೆ ಬಳಸಿದ್ದಾನೆ. ನಾಗವರ್ಮನು ಕರ್ನಾಟಕ ಕಾದಂಬರಿಯಲ್ಲಿ ಚಂಡಾಳ ಕನ್ಯೆಯ ನಾಮ ವಿಶೇಷಣಗಳನ್ನು ಹತ್ತಾರು ಬಾರಿ ಬಳಸಿದ್ದಾನೆ. ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲೂ ಗಾನರಾಣಿಯರು ಚಂಡಾಳ ಕನ್ಯೆಯರಾಗಿದ್ದಾರೆ. ಮಾದಾರ ಚನ್ನಯ್ಯನಲ್ಲಿ ದಲಿತ ಬಂಡಾಯದ ವಿಚಾರಗಳು ಇವೆ. ಇವನ ಜೊತೆಯಲ್ಲಿ ಕೆಳವರ್ಗಗಳ ವಚನಕಾರರು ಇದ್ದರು. ಮಡಿವಾಳ ಮಾಚಯ್ಯ, ಡೋಹರ ಕಕ್ಕಯ್ಯ, ಹೊಲೇರ ಹೊನ್ನಯ್ಯ, ಮಾದಾರ ಚನ್ನಯ್ಯ, ಅಂಬಿಗರ ಚೌಡಯ್ಯ" (ಹೆಚ್.ಟಿ.ವೆಂಕಟೇಶಮೂರ್ತಿ (ಲೇ) 'ವಿಜಯಾನ್ವೇಷಣ':೫೨೮) ಮುಂತಾದ ದಲಿತ ವಚನಕಾರರ ಪ್ರಸ್ತಾಪವಿದೆ. ಹಾಗೆಯೇ ಕದಿರೆ ಕಾಳವ್ವೆ, ಸಂಕವ್ವೆ, ಗುಡ್ಡಮ್ಮೆ, ರೇಕಮ್ಮ, ಮಸಣಮ್ಮ, ಕಾಮಮ್ಮ, ವೀರಮ್ಮ, ರಾಮಮ್ಮ ಮುಂತಾದವರು ತೀರಾ ಕೆಳಜಾತಿಯ ವಚನಕಾರ್ತಿರಾಗಿ ಕಂಡುಬರುತ್ತಾರೆ.

ಆಧುನಿಕ ಸಂದರ್ಭದಲ್ಲಿ ನವೋದಯ, ನವ್ಯ, ಪ್ರಗತಿಶೀಲ, ದಲಿತ, ಬಂಡಾಯ ಸಂದರ್ಭದಲ್ಲಿ ದಲಿತ ಸಾಹಿತ್ಯ ಹುಲುಸಾಗಿ ಬೆಳೆದುಕೊಂಡು ಬಂದಿದೆ. ಅದರ ಜೊತೆಗೆ ದಲಿತ

ಮಹಿಳೆಯನ್ನು ಕುರಿತು ಹೋರಾಟದ ಹಾಡುಗಳನ್ನು ಕಟ್ಟಲಾಗಿದೆ. ಹೀಗೆ ಶತ–ಶತಮಾನಗಳಿಂದಲೂ ಕೀಳು ಹಿನ್ನಲೆಯಿಂದಲೇ ಗುರುತಿಸಿಕೊಂಡು ಶೋಷಣೆಗೆ ಒಳಗಾಗುತ್ತಲೇ ಬಂದಿರುವ ದಲಿತ ಮಹಿಳೆಯನ್ನು ಕುರಿತ ಅಧ್ಯಯನ ಇಂದಿನ ಅಗತ್ಯವಾಗಿದೆ.

ಅಧ್ಯಯನದ ಉದ್ದೇಶ ಮತ್ತು ಮಹತ್ವ :

'ಕನ್ನಡ ಕಾದಂಬರಿಗಳಲ್ಲಿ ದಲಿತ ಮಹಿಳೆಯ ಶೋಧದ ನೆಲೆಗಳು' ಎಂಬ ಶೀರ್ಷಿಕೆಯು ದಲಿತ ಮಹಿಳೆಯರ ಶೋಷಣೆಯ ವಿವಿಧ ನೆಲೆಗಳನ್ನು ಕುರಿತು ಶೋಧ ಮಾಡುವ ಉದ್ದೇಶವನ್ನು ಹೊಂದಿದೆ. ಅಂತಹ ಶೋಧದ ನೆಲೆಗಳು ಪ್ರಮುಖವಾಗಿ ಹೀಗಿವೆ:

- ಹೆಣ್ಣನ್ನು ಕಾಮಕೇಂದ್ರಿತ ನೆಲೆಯಲ್ಲಿ ಶೋಷಣೆ ಮಾಡುತ್ತಿರುವುದರ ಮೂಲ, ಪರಿಹಾರಗಳ ಶೋಧ.
- 'ಅಸ್ಪೃಶ್ಯತೆ' ಎನ್ನುವುದು ದಲಿತ ಮಹಿಳೆಗೆ ಶೋಷಣೆಯ ರೂಪವಾಗಿ ಕಾಡುತ್ತಿರುವುದರ ಕಾರಣ ಹಾಗೂ ಪರಿಹಾರಗಳನ್ನು ಕುರಿತ ಶೋಧ.
- 'ದುಡಿಮೆ' ಎಂಬುದು ದಲಿತ ಮಹಿಳೆಯ ಪಾಲಿಗೆ ಆಧಾರ ಸ್ತಂಭವಾಗಿರುವುದರ ಶೋಧ ಹಾಗೂ ದುಡಿಯುವ ಜಾಗಗಳಲ್ಲಿ ಶೋಷಣೆಗೆ ಒಳಗಾಗುತ್ತಿರುವ ಕಾರಣಗಳನ್ನು ಕುರಿತ ಶೋಧ.
- 'ದೇವದಾಸಿ'/'ಜೋಗಣಿ' ಎಂಬ ಹೀನಪದ್ಧದತಿಯು ದಲಿತ ಹೆಣ್ಣುಮಕ್ಕಳಿಗೆ ಅತ್ಯಧಿಕವಾಗಿ ಕಾಡುತ್ತಿರುವುದರ ಕಾರಣ ಮತ್ತು ಪರಿಹಾರಗಳನ್ನು ಕುರಿತ ಶೋಧ.
- ಮಹಿಳೆ ಮತ್ತು ಪುರುಷ ಚಿತ್ರಿಸಿರುವ ದಲಿತ ಮಹಿಳೆಗಿರುವ ಭಿನ್ನತೆ ಮತ್ತು ಸಾಮ್ಯತೆ ಹಾಗೂ ಕಾರಣಗಳ ಶೋಧ ನಡೆಸಲಾಗುವುದು.
- ಮೇಲ್ಜಾತಿ ಮಹಿಳೆಯ ಮೇಲೆ ನಡೆಯುತ್ತಿರುವ ಶೋಷಣೆಯನ್ನು ಕುರಿತು ಶೋಧವನ್ನು ನಡೆಸುವ ಉದ್ದೇಶವನ್ನು ಹೊಂದಿದೆ.

ಹೀಗೆ ಒಟ್ಟಾರೆ ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ಹಲವು ರೀತಿಯ ಶೋಷಣೆಯ ನೆಲೆಗಳನ್ನು ಕುರಿತ ಶೋಧವು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

'ಶೋಷಣೆ' ಎಂಬುದು ನಿರಂತರವಾದುದು. ಮನುಷ್ಯ ತನ್ನ ಬದುಕಿನಲ್ಲಿ ವಿವಿಧ ಕಾರಣಗಳಿಂದ ವಿವಿಧ ಸಂದರ್ಭಗಳಲ್ಲಿ ಒಂದಲ್ಲ ಒಂದು ಶೋಷಣೆಗೆ ಗುರಿಯಾಗುತ್ತಾನೆ. ಈ ಪ್ರಕ್ರಿಯೆಯು ನಿರಂತರವಾದುದು. ಆದರೆ ದಲಿತರ ಸಂದರ್ಭದಲ್ಲಿ ಇದಕ್ಕೆ ಅಂತ್ಯವೇ

ಇಲ್ಲದಂತಾಗಿದೆ. ಶೋಷಣೆಯ ನಡಿಗೆಯ ವೇಗದಲ್ಲಿ ತುಸು ವ್ಯತ್ಯಾಸವಾಗಿರಬಹುದಷ್ಟೇ ಹೊರತು ಪೂರ್ಣ ಪ್ರಮಾಣದ ನಡಿಗೆಯಲ್ಲಲ್ಲ. ಪ್ರಸ್ತುತ ಅಧ್ಯಯನದಲ್ಲಿ ಜಾತಿಯ ಕಾರಣದಿಂದ ಒಂದು ಜನಾಂಗದ ಮೇಲೆ ನಡೆಯುತ್ತಿರುವ ಶೋಷಣೆಯ ವಿವಿಧ ಮುಖಗಳನ್ನು ಶೋಧನೆಗೆ ಒಳಗು ಮಾಡಲಾಗುತ್ತಿದೆ.

ಇಲ್ಲಿಯವರೆಗೆ ಬಂದಂತಹ 'ದಲಿತ' ಸಾಹಿತ್ಯವನ್ನು ವಸ್ತುವನ್ನಾಗಿಸಿಕೊಂಡ ಸಂಶೋಧನೆಗಳಲ್ಲಿ ದಲಿತ ಮಹಿಳೆಯನ್ನು ಸಾಮಾಜಿಕವಾಗಿ ನೋಡಲಾಗಿದೆ. ಇಲ್ಲವೇ ದಲಿತ ಸಾಹಿತ್ಯದ ಒಂದು ಭಾಗವಾಗಿ ನೋಡಿದ್ದಾರೆ. ಆದರೆ ಇಡೀ ದಲಿತ ಸಮುದಾಯದ ಮುಖ್ಯ ಭಾಗವೇ ಆದ ಅಥವಾ ದಲಿತರ ಅಸ್ಥಿತ್ವದ ಭಾಗವಾದ ದಲಿತ ಮಹಿಳೆಯನ್ನು ಸಾಹಿತ್ಯಿಕವಾಗಿ ನೋಡುವ ಪ್ರಯತ್ನ ಇದಾಗಿದೆ.

ಇಂದು ದಲಿತ ಬರಹಗಾರ್ತಿಯರ ಸಂಖ್ಯೆ ಕಡಿಮೆ ಇದೆ. ಅಂತೆಯೇ ಅವರ ಕೃತಿಗಳೂ ಕೂಡ. ದಲಿತ ಮಹಿಳೆಯ ನೋವುಗಳನ್ನು ಅವಳ ತುಮುಲಗಳನ್ನು ಬರಹಗಾರರೇ ತಮ್ಮ ಕೃತಿಗಳಲ್ಲಿ ಬರೆಯುತ್ತಿದ್ದಾರೆ. ಹಾಗೆಂದ ಮಾತ್ರಕ್ಕೆ ಬರಹಗಾರರು ಮಹಿಳೆಯರ ವಿರೋಧಿಗಳೆಂದಲ್ಲ. ಆದರೆ ಪುರುಷರು ಬರೆಯುವ ದಲಿತ ಸಾಹಿತ್ಯದಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆ. ಹೇಗೆಂದರೆ ಒಂದು ಕಾದಂಬರಿಯಲ್ಲಿ ಅಥವಾ ಕಥೆಯಲ್ಲಿ ದಲಿತ ಹೆಣ್ಣು ಒಂದು ಪಾತ್ರವಾಗಿ ಬರಬಹುದು. ಆ ಪಾತ್ರವೂ ಮೇಲ್ವರ್ಗದವರಿಂದ ಲೈಂಗಿಕ ಶೋಷಣೆಗೆ ಒಳಗಾಗುವಂತೆಯೇ ಅತ್ಯಧಿಕ ಸಂದರ್ಭಗಳಲ್ಲಿ ಚಿತ್ರಣಗೊಂಡಿರುತ್ತದೆ. ಈ ರೀತಿ ಪ್ರಾತಿನಿಧಿಕವಾಗಿ ಬರುವ ಪಾತ್ರಗಳಲ್ಲಿ ದಲಿತ ಹೆಣ್ಣಿನ ನೋವುಗಳನ್ನು ಲೇಖಕರು ಒಟ್ಟಾರೆಯಾಗಿ ಹಿಡಿದಿಡುವುದು ಹಾಗೂ ಗ್ರಹಿಸುವುದು ಸಾಧ್ಯವಾಗಲಾರದು. ಆದರೆ ಆರಂಭದ ದಲಿತ ಸಾಹಿತ್ಯ ಸಂದರ್ಭಕ್ಕಿಂತ ಇಂದು ಬರಹಗಾರ್ತಿಯರ ಬರವಣಿಗೆಯ ಪ್ರಾತಿನಿಧ್ಯ ಗಮನಾರ್ಹವಾಗಿದೆ. 'ದಲಿತ ಮಹಿಳೆ' 'ಹೆಣ್ಣು' ಎಂಬ ಕಾರಣಕ್ಕಾಗಿ ಅವಳ ಮೇಲೆ ನಡೆಯುತ್ತಿರುವ ಶೋಷಣೆಯ ವಿವಿಧ ಮುಖಗಳನ್ನು ಸಾಹಿತ್ಯಿಕ ಕಾದಂಬರಿಗಳ ಮೂಲಕ ಅಧ್ಯಯನಕ್ಕೊಳಪಡಿಸಲಾಗುತ್ತಿದೆ.

ದಲಿತ ಸಾಹಿತ್ಯದ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಬಿಡಿ–ಬಿಡಿಯಾದ ವಿಮರ್ಶಾಲೇಖನಗಳು, ಎಂ.ಫಿಲ್. ಮತ್ತು ಪಿಎಚ್.ಡಿ. ಸಂಶೋಧನೆಗಳು ನಡೆದಿವೆ. ಆದರೆ ಇಂತಹ ಸಂಶೋಧನೆಗಳಲ್ಲಿ ದಲಿತ ಮಹಿಳೆಯ ಪರಿಪೂರ್ಣ ಅಧ್ಯಯನಗಳು ನಡೆದಿರುವುದು ಕಂಡು ಬರುವುದಿಲ್ಲ. ದಲಿತ ಮಹಿಳೆಯನ್ನು ಕುರಿತಂತೆ ಸಾಹಿತ್ಯವನ್ನು ಹೊರತುಪಡಿಸಿ ಸಾಮಾಜಿಕವಾಗಿ ಅಧ್ಯಯನ ಮಾಡಿರುವುದು ಕಂಡುಬರುತ್ತದೆ. ಇಲ್ಲವೆ ದಲಿತ ಮಹಿಳೆಯರನ್ನು ಕುರಿತು ಪ್ರಸ್ತಾಪಿತವಾದ ಬಿಡಿ–ಬಿಡಿಯಾದ ಒಂದೋ ಎರಡೋ ಕಾದಂಬರಿಗಳಲ್ಲಿ

ಚಿತ್ರಣಗೊಂಡ ದಲಿತ ಮಹಿಳೆಯರನ್ನು ಮಾತ್ರ ಪರಿಗಣಿಸಲಾಗಿದೆ. ಉದಾಹರಣೆಗೆ ಕಾರಂತರ ಚೋಮನದುಡಿ ಕಾದಂಬರಿಯ ಬೆಳ್ಳಿಯನ್ನೋ ಅಥವಾ 'ಗತಿ' ಕಾದಂಬರಿಯ ಲಚ್ಮಿಯನ್ನೋ ಹೀಗೆ ಬಿಡಿ-ಬಿಡಿಯಾದ ಅಧ್ಯಯನಗಳು ನಡೆದಿವೆ. ಇಲ್ಲವೇ ಸಾಕಷ್ಟು ದಲಿತ ಮಹಿಳೆಯನ್ನು ಕುರಿತು ಪ್ರಸ್ತಾಪಿತವಾದ ಕಾದಂಬರಿಗಳನ್ನು ಅಧ್ಯಯನ ಮಾಡುವಾಗ ದಲಿತ ಮಹಿಳೆಯನ್ನು ಸಾಂಸ್ಕೃತಿಕವಾಗಿ ನೋಡಿರುವುದೇ ಹೆಚ್ಚಾಗಿ ಕಂಡುಬರುತ್ತದೆ. ಅಲ್ಲದೇ ಮಾತೃಮೂಲ ಗುಣದಿಂದಲೂ ಅಧ್ಯಯನಗಳು ನಡೆದಿವೆ. ಆದರೆ ದಲಿತ ಮಹಿಳೆಯನ್ನು ಕುರಿತು ಸಂಪೂರ್ಣವಾದ ಅಧ್ಯಯನಗಳು ನಡೆಯುವ ಅಗತ್ಯತೆ ಕಂಡುಬರುತ್ತದೆ.

ದಲಿತ ಮಹಿಳೆಯನ್ನು ಕುರಿತ ವಿಚಾರಸಂಕಿರಣಗಳು ನಡೆದಿವೆ. ಇವು ದಲಿತ ಸಾಹಿತ್ಯದ ಹುಟ್ಟು, ಬೆಳವಣಿಗೆ, ಸಾಮಾಜಿಕ ಪರಿಣಾಮ, ದಲಿತ ಸಾಹಿತ್ಯಕ್ಕೂ ದಲಿತ ಚಳವಳಿಗೂ ಇರುವ ಸಂಬಂಧ, ದಲಿತ ಸಾಹಿತ್ಯಕ್ಕೂ ದಲಿತ ರಾಜಕಾರಣಕ್ಕೂ ಇರುವ ಸಂಬಂಧ, ದಲಿತ ಸಾಹಿತ್ಯಕ್ಕೂ ಮತ್ತು ಸಂಸ್ಕೃತಿಗೂ ಇರುವ ಸಂಬಂಧ ಮುಂತಾದ ವಿಷಯಗಳ ಕುರಿತ ಅಧ್ಯಯನಗಳು ನಡೆದಿವೆ. ಇನ್ನೂ ಕೆಲವು ಅಧ್ಯಯನಗಳು ದಲಿತ ಸಾಹಿತ್ಯ ಪ್ರಕಾರಗಳಾದ ಕಾವ್ಯ, ನಾಟಕ, ಆತ್ಮಕಥೆ ಮುಂತಾದವುಗಳನ್ನು ಕುರಿತು ನಡೆದಿವೆ. ಆದರೆ ದಲಿತ ಮಹಿಳೆಯನ್ನು ಕುರಿತಂತೆ ದಲಿತರು-ದಲಿತೇತರ ಕಾದಂಬರಿಕಾರರ ದೃಷ್ಟಿಯಲ್ಲಿ ದಲಿತ ಮಹಿಳೆಯಾಗಲೀ, ಮಹಿಳೆ ಚಿತ್ರಿಸಿರುವ ಹಾಗೂ ಪುರುಷ ಚಿತ್ರಿಸಿರುವ ದಲಿತ ಮಹಿಳೆಯರನ್ನು ಕುರಿತ ದೃಷ್ಟಿಕೋನದಿಂದಲಾಗಲೀ, ಅಸ್ಪೃಶ್ಯತೆ ಮತ್ತು ದಲಿತ ಮಹಿಳೆಗಿರುವ ಶೋಷಣೆಯ ಸಂಬಂಧವಾಗಲೀ, ಆಕೆಯ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನಾಗಲೀ, ಆಕೆಯನ್ನಾವರಿಸಿರುವ ಅನಿಷ್ಟ ಆಚರಣೆಗಳ ಹಿನ್ನೆಲೆಯಿಂದಾಗಲೀ ಒಟ್ಟಾರೆ ವಿವಿಧ ದೃಷ್ಟಿಕೋನಗಳಿಂದ ದಲಿತ ಮಹಿಳೆಯರನ್ನು ಕುರಿತ ಅಧ್ಯಯನಗಳು ಕಂಡುಬರದ ಕಾರಣ ಈ ವಿಷಯವನ್ನು ಆಯ್ಕೆಮಾಡಿಕೊಳ್ಳಲಾಗಿದೆ. ದಲಿತ ಮಹಿಳೆಯನ್ನು ಕುರಿತಂತೆ ಸಾಹಿತ್ಯದ ಮೂಲಕ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ. ದಲಿತ ಮಹಿಳೆಯ ಶೋಷಣೆಯ ವಿವಿಧ ಮುಖಗಳನ್ನು ಕುರಿತು ಅಧ್ಯಯನ ಮಾಡುವ ಮೂಲಕ ದಲಿತ ಮಹಿಳೆಯ ಸ್ಥಿತಿ-ಗತಿಗಳನ್ನು ಸುಧಾರಣಾ ಕ್ರಮಗಳನ್ನು ತಿಳಿಸುವುದು ಇದರ ಉದ್ದೇಶವಾಗಿದೆ. ಪ್ರಸ್ತುತ ಸಮಾಜಕ್ಕೆ ದಲಿತ ಮಹಿಳೆಯ ಬದುಕಿನ ಅನಾವರಣದೊಂದಿಗೆ ಅರಿವು, ಎಚ್ಚರ ಮೂಡಿಸುವುದು ಸಂಶೋಧನೆಯ ಉದ್ದೇಶ ಮತ್ತು ಮಹತ್ವವಾಗಿದೆ.

- ದಲಿತ ಮತ್ತು ದಲಿತೇತರರ ಕಾದಂಬರಿಗಳಲ್ಲಿ ಚಿತ್ರಣಗೊಂಡ ದಲಿತ ಮಹಿಳೆಯನ್ನು ತೌಲನಿಕ ಅಧ್ಯಯನಕ್ಕೊಳಪಡಿಸುವುದರ ಮೂಲಕ ದಲಿತ

ಕಾದಂಬರಿಗಳಲ್ಲಿ ಹೆಣ್ಣನ್ನು ಸೃಜನಾತ್ಮಕ ನೆಲೆ, ಕ್ರಿಯಾತ್ಮಕ ನೆಲೆಯಲ್ಲಿ ಗುರುತಿಸಲು ಹಾಗೂ ದಲಿತೇತರರು ತಮ್ಮ ಕಾದಂಬರಿಗಳಲ್ಲಿ ದಲಿತ ಹೆಣ್ಣುಗಳನ್ನು ಕಾಮದ ಗೊಂಬೆಯಂತೆ ಚಿತ್ರಿಸಿರುವುದರ ಒತ್ತಡಗಳನ್ನು ಕುರಿತು ಚರ್ಚಿಸುವುದು.

- ದಲಿತ ಮಹಿಳೆಯರ ವಿಭಿನ್ನ ನೆಲೆಗಳನ್ನು ಗುರುತಿಸುವುದು. ಅಸ್ಪೃಶ್ಯತೆ ಎಂಬುದು ದಲಿತ ಮಹಿಳೆಯ ಮೇಲೆ ಉಂಟು ಮಾಡುವ ಅಪಮಾನ, ನೋವುಗಳು, ಪರಿಹಾರಗಳನ್ನು ಕುರಿತು ಕಾದಂಬರಿಗಳ ಅಡಿಯಲ್ಲಿ ಚರ್ಚಿಸುವುದು.

- ದುಡಿಮೆಯೇ ದಲಿತ ಮಹಿಳೆಯ ಪಾಲಿಗೆ ಬೆನ್ನೆಲುಬಾಗಿರುವುದು ಹಾಗೂ ದುಡಿಯುವ ಜಾಗಗಳಲ್ಲಿ ಶೋಷಣೆಗೊಳಗಾಗುವುದು ಮುಂತಾದವುಗಳನ್ನು ಕುರಿತು ಕಾದಂಬರಿಗಳ ಆಧಾರದಲ್ಲಿ ಅಧ್ಯಯನ ಮಾಡುವುದು.

- ಮಹಿಳೆ ಮತ್ತು ಪುರುಷ ಚಿತ್ರಿಸಿರುವ ದಲಿತ ಮಹಿಳೆಗಿರುವ ಭಿನ್ನತೆಗಳ ಮತ್ತು ಸಾಮ್ಯತೆಗಳ ಚರ್ಚೆ ಮತ್ತು ಕಾರಣಗಳ ಶೋಧ.

- ದೇವದಾಸಿ/ಜೋಗಣಿ ಪದ್ಧತಿ ದಲಿತ ಮಹಿಳೆಯ ಪಾಲಿಗೆ ಶಾಪವಾಗಿರುವುದರ ಕಾರಣ ಮತ್ತು ಪರಿಹಾರ ಕುರಿತು ಕಾದಂಬರಿಗಳ ಆಧಾರದಲ್ಲಿ ಚರ್ಚೆ ನಡೆಸುವುದು.

- ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಮತ್ತು ಕುಟುಂಬದ ಒಳಗೆ ಮತ್ತು, ದುಡಿಯುವ ಜಾಗಗಳಲ್ಲಿ ಕಾದಂಬರಿಗಳ ಅಡಿಯಲ್ಲಿ ದೌರ್ಜನ್ಯಕ್ಕೊಳಗಾಗುತ್ತಿರುವ ಕಾರಣಗಳು ಮತ್ತು ಪರಿಹಾರಗಳನ್ನು ಕುರಿತು ಅಧ್ಯಯನ ನಡೆಸುವುದು. ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ವಿಧಾನ :

ಸಂಶೋಧನೆಗೆ ವಿಧಾನಗಳೇ ತಳಹದಿಯಾಗಿವೆ. ವಿಧಾನಗಳನ್ನು ಅನುಸರಿಸುವುದರ ಮೂಲಕವೇ ಸಂಶೋಧನೆ ಮುಂದುವರೆಯುತ್ತದೆ. ಪ್ರಸ್ತುತ ಸಂಶೋಧನೆಗೆ ಬೇಡುವ ಅಧ್ಯಯನದ ವಿಧಾನಗಳು ಕೆಳಗಿನಂತಿವೆ.

೧. **ತೌಲನಿಕ ವಿಧಾನ :**

ದಲಿತರು ಬರೆದಂಥ ಕಾದಂಬರಿಗಳೊಂದಿಗೆ ದಲಿತೇತರರು ಬರೆದಂಥ ಕಾದಂಬರಿಗಳನ್ನು ಹೋಲಿಸುವ ಮೂಲಕ ದಲಿತ ಮಹಿಳೆಯನ್ನು ದಲಿತರು ಕ್ರಿಯಾತ್ಮಕ

ಶಕ್ತಿಯಾಗಿ ಗುರುತಿಸಿರುವುದನ್ನು ದಲಿತೇತರರು ಕಾಮಕೇಂದ್ರಿತ ನೆಲೆಯಲ್ಲಿ ಚಿತ್ರಿಸಲು ಇದ್ದಂಥ ಒತ್ತಡ ಮತ್ತು ಕಾರಣಗಳನ್ನು ಕುರಿತು ಚರ್ಚಿಸಲಾಗಿದೆ. ಹಾಗೆಯೇ ತೌಲನಿಕ ಅಧ್ಯಯನದ ಮುಖಾಂತರ ಮಹಿಳೆ ಮತ್ತು ಪುರುಷ ಚಿತ್ರಿಸಿರುವ ದಲಿತ ಮಹಿಳೆಗಿರುವ ಭಿನ್ನತೆ ಮತ್ತು ಸಾಮ್ಯತೆಗಳನ್ನು ಕುರಿತು ಚರ್ಚಿಸಲಾಗಿದೆ.

೨. ಸಾರಾಂಶಾತ್ಮಕ ವಿಧಾನ :

ಕಾದಂಬರಿಗಳನ್ನು ಕುರಿತ ಅಧ್ಯಯನವಾದ್ದರಿಂದ ಕಾದಂಬರಿಗಳ ಭಾಗಗಳನ್ನು ಉದಾಹರಣೆಗಾಗಿ ತೆಗೆದುಕೊಂಡು ವಿಮರ್ಶೆ ಮಾಡಲಾಗಿದೆ.

೩. ವಿಮರ್ಶಾತ್ಮಕ ವಿಧಾನ :

ಸಂಶೋಧನೆಗೆ ಪರಿಗಣಿಸಿರುವ ಕಾದಂಬರಿಗಳನ್ನು ವಿಮರ್ಶಾತ್ಮಕ ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ. ಕಾದಂಬರಿಕಾರರು ಚಿತ್ರಿಸಿರುವ ದಲಿತ ಮಹಿಳೆ ಕಾಮಕೇಂದ್ರಿತ ನೆಲೆಯಲ್ಲೇ ಹೆಚ್ಚು ಕಂಡಬರುವುದನ್ನು ಸ್ತ್ರೀವಾದಿ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಮೇಲಿನ ವಿಧಾನಗಳ ಮೂಲಕ ದಲಿತ ಮಹಿಳೆಯ ಶೋಷಣೆಯ ವಿಭಿನ್ನ ನೆಲೆಗಳು, ಕಾರಣಗಳು, ಪರಿಹಾರಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಸ್ತ್ರೀವಾದಿ ವಿಶ್ಲೇಷಣಾತ್ಮಕ ವಿಧಾನದ ಮೂಲಕ ದಲಿತ ಮಹಿಳೆಯನ್ನಾವರಿಸಿರುವ ಸಂಕೋಲೆಗಳಿಂದ ಬಿಡಿಸುವ ಹೊಸ ಸಾಧ್ಯತೆಯ ಕಡೆಗೆ ಗಮನ ಕೇಂದ್ರೀಕರಿಸಲಾಗುತ್ತಿದೆ. ದಲಿತ ಮತ್ತು ದಲಿತೇತರರು ಚಿತ್ರಿಸಿರುವ ದಲಿತ ಮಹಿಳೆ ಹಾಗೂ ಮಹಿಳೆ ಮತ್ತು ಪುರುಷ ಚಿತ್ರಿಸಿರುವ ದಲಿತ ಮಹಿಳೆಗಿರುವ ಅಂತರ-ಸಂಬಂಧಗಳನ್ನು ತಿಳಿಯುವುದಕ್ಕಾಗಿ ತೌಲನಿಕ ವಿಧಾನವನ್ನು ಅನುಸರಿಸಲಾಗುತ್ತದೆ. ಅಲ್ಲದೆ ಪ್ರಸ್ತುತ ಸಂಶೋಧನೆಗೆ ಕಾದಂಬರಿಗಳನ್ನು ಮೂಲಪಠ್ಯವಾಗಿಸಿಕೊಂಡಿರುವುದರಿಂದ ಸಾರಾಂಶಾತ್ಮಕ ವಿಧಾನ, ವಿವರಣಾತ್ಮಕ ವಿಧಾನ, ಕೃತಿ ಕೇಂದ್ರಿತ ವಿಧಾನ, ಲೇಖಕ ಕೇಂದ್ರಿತ ವಿಧಾನಗಳ ಮುಖಾಂತರ ಆಶಯ ಕೇಂದ್ರಿತ ವಿಧಾನಗಳನ್ನು ಅನುಸರಿಸಲಾಗಿದೆ.

ಅಧ್ಯಯನದ ವ್ಯಾಪ್ತಿ :

ದಲಿತ ಮಹಿಳೆಯ ಶೋಷಣೆ ಶತಮಾನಗಳಿಂದಲೂ ನಡೆದುಕೊಂಡು ಬರುತ್ತಿದೆ, ಈಗಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಶೋಷಣೆಯ ಸ್ವರೂಪದಲ್ಲಿ ಕೊಂಚ ಬದಲಾವಣೆಯಾಗಿದ್ದರೂ ಅಸ್ತಿತ್ವದ ಆಯಾಮದಲ್ಲಿ ಸಂಪೂರ್ಣ ಬದಲಾವಣೆ ಸಾಧ್ಯವಾಗಿಲ್ಲ. ಪ್ರಾಚೀನ ಸಂದರ್ಭದಿಂದಲೂ ದಲಿತ ಮಹಿಳೆಯ ಮೇಲೆ ಶೋಷಣೆ ನಡೆಯುತ್ತಿದ್ದರೂ ನೂರು

ವರ್ಷಗಳಿಂದ ಈಚೆಗೆ ರಚನೆಯಾಗಿರುವ ಪ್ರಾತಿನಿಧಿಕ ಕಾದಂಬರಿಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

'ದಲಿತ' ಪದಕ್ಕೆ ವಿಶಾಲವಾದ ಅರ್ಥವಿದೆ. "ಅರವಿಂದ ಮಾಲಗತ್ತಿಯವರ ವ್ಯಾಖ್ಯಾನ' ಶೋಷಣೆ ಎಂಬ ಪದಕ್ಕೆ ಜಾತಿ ಎಂಬ ಭೇದವಿಲ್ಲ; ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲಾ ಶೋಷಣೆಗೆ ಒಳಗಾದ ಎಲ್ಲಾ ಜನರೂ ದಲಿತರು" (ದಲಿತಮಾರ್ಗ:೦೬) ಎಂಬ ಅರ್ಥದಲ್ಲಿ ಸಂಶೋಧನೆ ಮುಂದುವರಿಸಿದರೆ ಸಮಾಜದ ಎಲ್ಲಾ ವರ್ಗದ ಮಹಿಳೆಯರನ್ನು ಅಧ್ಯಯನಕ್ಕೆ ಪರಿಗಣಿಸಬೇಕಾಗುತ್ತದೆ. ಅಲ್ಲದೆ ಎಲ್ಲಾ ವರ್ಗದ ಮಹಿಳೆಯರನ್ನೂ ಒಟ್ಟಾಗಿ 'ದಲಿತರು' ಎಂದು ಕರೆಯುವ ನಿಟ್ಟಿನಿಂದ ಸಂಶೋಧನೆ ಮುಂದುವರಿಸಿದರೂ ಕೂಡ ವ್ಯಾಪ್ತಿ ಮೀರುವ ಸಾಧ್ಯತೆ ಇರುತ್ತದೆ. 'ಮೇಲ್ಜಾತಿ'ಯ ಮಹಿಳೆಯ ಶೋಷಣೆಯ ನೆಲೆಗಳನ್ನು ಉಪ ಕಾದಂಬರಿಗಳ ಅಡಿಯಲ್ಲಿ ಉಪ ಅಧ್ಯಾಯಗಳನ್ನಾಗಿ ಮಾಡಿಕೊಂಡು ಚರ್ಚಿಸಲಾಗುತ್ತಿದೆ. ಏಕೆಂದರೆ ನೂರಾರು ವರ್ಷಗಳಿಂದ ಜಾತಿಯ ಕಾರಣಕ್ಕೆ ಲೈಂಗಿಕವಾಗಿ ಶೋಷಣೆಗೆ ಒಳಗಾಗುತ್ತಿರುವವಳು 'ಕೆಳಜಾತಿ'ಯ ಮಹಿಳೆಯಾಗಿದ್ದಾಳೆ. ಆದ್ದರಿಂದ "ಶತಮಾನಗಳಿಂದಲೂ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು; ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರ ಹೊರಗೆ ವಾಸಿಸಿ ಕೀಳುವೃತ್ತಿಗೆ ಅವಲಂಬಿತರಾಗಿ, ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ" (ದಲಿತಮಾರ್ಗ:೦೭) ಎನ್ನುವ ಅರವಿಂದ ಮಾಲಗತ್ತಿಯವರ ವಾದದ ಆಧಾರದಲ್ಲಿ 'ದಲಿತ ಮಹಿಳೆ'ಯನ್ನು ಕುರಿತು ಅಧ್ಯಯನ ಮುಂದುವರೆದಿದೆ.

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ವಿಷಯ ದಲಿತ ಮಹಿಳೆಯಾಗಿರುವುದರಿಂದ ದಲಿತೇತರ ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ದಲಿತ ಮಹಿಳೆಯನ್ನು ಅಧ್ಯಯನದ ವಿಷಯವನ್ನಾಗಿ ಪರಿಗಣಿಸಲಾಗಿದೆ. ಏಕೆಂದರೆ ಪ್ರಧಾನ ವಸ್ತು 'ದಲಿತ ಮಹಿಳೆ'ಯೇ ಹೊರತು ಲೇಖಕರಲ್ಲ. ಕಾದಂಬರಿಗಳನ್ನು ಬರೆದವರು ಯಾವ ವರ್ಗದವರು ಎನ್ನುವುದಕ್ಕಿಂತ ಕಾದಂಬರಿಗಳಲ್ಲಿ ಚರ್ಚೆಗೊಂಡಿರುವ 'ದಲಿತ ಮಹಿಳೆ' ಮುಖ್ಯವಾಗುತ್ತಾಳೆ. ಇತ್ತೀಚಿನ ಸಂದರ್ಭದಲ್ಲಿ ದಲಿತ ಮಹಿಳೆಯರಲ್ಲಿ ಕೆಲವರು ಅಕ್ಷರ ಕಲಿತು ನಗರ ಪ್ರದೇಶಗಳಲ್ಲಿ ದುಡಿಯುತ್ತಿದ್ದಾರೆ. ಇನ್ನು ಬಹುಸಂಖ್ಯಾತರು ಗ್ರಾಮೀಣ ಪ್ರದೇಶದ ಮಹಿಳೆಯರು. ಇವರು ಅನಕ್ಷರಸ್ಥರು ಮತ್ತು ಹೊರಗೆ ದುಡಿಯುವವರಾಗಿದ್ದಾರೆ. ಮೇಲಿನ ಎರಡೂ ರೀತಿಯ ದಲಿತ ಮಹಿಳೆಯರಲ್ಲಿ ಎರಡನೇ ವರ್ಗಕ್ಕೆ ಸೇರುವ ಅವಿದ್ಯಾವಂತ ದಲಿತ

ಮಹಿಳೆಯರನ್ನು ಪ್ರಸ್ತುತ ಸಂಶೋಧನೆಯ ಸಂದರ್ಭದಲ್ಲಿ ಬಳಸಿಕೊಳ್ಳಲಾಗುತ್ತಿದೆ. ನಗರ ಪ್ರದೇಶದ ದಲಿತ ಮಹಿಳೆಯರನ್ನು ಅಗತ್ಯವಿದ್ದಲ್ಲಿ ಉದಾಹರಣೆಗೆ ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.

'ಕನ್ನಡ ಕಾದಂಬರಿಗಳಲ್ಲಿ ದಲಿತ ಮಹಿಳೆಯ ಶೋಧದ ನೆಲೆಗಳು' (ಪ್ರಾತಿನಿಧಿಕ ಕಾದಂಬರಿಗಳನ್ನು ಅನುಲಕ್ಷಿಸಿ) ಎಂಬ ವಿಷಯದ ಸಂಶೋಧನಾ ವ್ಯಾಪ್ತಿಯೊಳಗೆ ಆಧುನಿಕ ಸಂದರ್ಭದ ಒಂಬತ್ತು ಕಾದಂಬರಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ: 'ಚೋಮನ ದುಡಿ', 'ಮಲೆಗಳಲ್ಲಿ ಮದುಮಗಳು', 'ಸಂಸ್ಕಾರ', 'ಭಾರತೀಪುರ', 'ಒಡಲಾಳ', 'ಅಸ್ಪೃಶ್ಯರು', 'ಹಸಿಮಾಂಸ ಮತ್ತು ಹದ್ದುಗಳು', 'ಬದುಕು' ಮತ್ತು 'ಗತಿ' ಕಾದಂಬರಿಗಳು.

ಮೇಲಿನ ವಿಷಯವನ್ನು ಕಾದಂಬರಿಗಳ ಆಧಾರದಲ್ಲಿ ಆರು ಅಧ್ಯಾಯಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ. ಒಟ್ಟಾರೆ ಈ ಕಾದಂಬರಿಗಳ ಮೂಲಕ ದಲಿತ ಮಹಿಳೆಯ ನೋವು ಮತ್ತು ಅಪಮಾನಗಳನ್ನು ಮನವರಿಕೆ ಮಾಡಿಕೊಡುವುದರೊಂದಿಗೆ ಅವುಗಳಿಗೆ ಪರಿಹಾರವನ್ನು ತಿಳಿಸಿಕೊಡುವ ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಕನ್ನಡ ಕಾದಂಬರಿಗಳನ್ನು ಕುರಿತ ಪ್ರಸ್ತಾಪದೊಂದಿಗೆ ಆರಂಭಿಸಿ ಸಮಗ್ರ ನಾರಿಯ ಶೋಷಣೆಯ ಮುಖಗಳ ಅನಾವರಣದೊಂದಿಗೆ ದಲಿತ ಮಹಿಳೆಯ ಶೋಷಣೆಯ ಆರಂಭವನ್ನು ಕಂಡುಕೊಳ್ಳಲಾಗಿದೆ. ದಲಿತ ಮಹಿಳೆ ಯಾರು? ಯಾಕೆ ಅವಳನ್ನು ಕುರಿತು ಅಧ್ಯಯನ ಮಾಡಬೇಕು? ಅಧ್ಯಯನದ ಉದ್ದೇಶ, ಮಹತ್ವ, ವಿಧಾನ ಮತ್ತು ವ್ಯಾಪ್ತಿಯನ್ನು ಕುರಿತು ಚರ್ಚಿಸಲಾಗಿದೆ. ಮುಂದಿನ ಅಧ್ಯಾಯದಲ್ಲಿ ದಲಿತರನ್ನು ಮತ್ತು ದಲಿತ ಮಹಿಳೆಯನ್ನು ಕುರಿತಂತೆ ಇದುವರೆಗೂ ನಡೆದಿರುವ ಅಧ್ಯಯನಗಳನ್ನು ಕುರಿತು ಸ್ಥೂಲವಾಗಿ ಪರಿಶೀಲಿಸಲಾಗಿದೆ.

ಅಧ್ಯಾಯ – ೨

ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ

೨.೧ ಸಂಶೋಧನಾ ಮಹಾಪ್ರಬಂಧಗಳ ಸಮೀಕ್ಷೆ

೨.೨ ಸಂಶೋಧನಾ ನಿಬಂಧಗಳ ಸಮೀಕ್ಷೆ

೨.೩ ವಿಮರ್ಶಾ ಕೃತಿಗಳ ಸಮೀಕ್ಷೆ

ಅಧ್ಯಾಯ – ೨

ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆಗಾಗಿ ವಿಶ್ವವಿದ್ಯಾಲಯಗಳಿಗೆ ಸಲ್ಲಿಸಿರುವ ಸಾಕಷ್ಟು ಸಂಶೋಧನಾ ಮಹಾಪ್ರಬಂಧಗಳನ್ನು, ಸಂಶೋಧನಾ ನಿಬಂಧಗಳನ್ನು, ವಿಮರ್ಶಾಕೃತಿಗಳನ್ನು ಅಭ್ಯಸಿಸಲಾಗಿದೆ. ಈ ಅಧ್ಯಯನದ ಗ್ರಹಿಕೆಯಿಂದ ಕಂಡುಕೊಂಡ ಸತ್ಯ ದಲಿತ ಮಹಿಳೆಯನ್ನು ಕುರಿತು ಸಾಹಿತ್ಯ ಕೃತಿಗಳ ಆಧಾರದ ಮೇಲೆ ಸಮರ್ಪಕವಾದ ಮತ್ತು ಸಮಗ್ರವಾದ ಅಧ್ಯಯನಗಳು ನಡೆದಿಲ್ಲ ಎಂಬುದೇ ಆಗಿದೆ. ಈ ಮಾತನ್ನು ಪುಷ್ಟೀಕರಿಸಲು ಈ ಕೆಳಗಿನ ಅಧ್ಯಯನದ ವಿವರಗಳು ಸಹಕರಿಸುತ್ತವೆ.

ಸಂಶೋಧಕ ರೇವಯ್ಯ ಒಡೆಯಾರ್ ಎಂಬುವರು ಪ್ರೊ.ಎ.ವಿ. ನಾವಡ ಅವರ ಮಾರ್ಗದರ್ಶನದಲ್ಲಿ ೨೦೦೦ನೇ ಇಸವಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಮಾನವೀಕರಣದ ನೆಲೆಗಳು' ಎಂಬ ಸಂಶೋಧನಾ ಪ್ರಬಂಧವನ್ನು ಪರಾಮರ್ಶಿಸಲಾಯಿತು. 'ಮಾನವೀಕರಣದ ತಾತ್ವಿಕ ಪರಿಕಲ್ಪನೆ' ಎಂಬ ಎರಡನೆಯ ಅಧ್ಯಾಯದಲ್ಲಿ ಜಾಗತಿಕ ನೆಲೆ, ಭಾರತೀಯ ನೆಲೆ, ಕನ್ನಡ ನೆಲೆ ಎಂಬಂತೆ ಮೂರು ವಿಭಾಗಗಳನ್ನು ಮಾಡಿಕೊಂಡಿದ್ದಾರೆ. ಈ ಮೂರೂ ವಿಭಾಗಗಳಿಗೆ ಆಧಾರವಾಗಿ ಕಾದಂಬರಿಗಳನ್ನು ಬಳಸಿಕೊಂಡಿಲ್ಲ. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಇದು ಸಂಬಂಧಪಡುವುದಿಲ್ಲ. 'ಕನ್ನಡ ಕಾದಂಬರಿಗಳಲ್ಲಿ ಮಾನವೀಕರಣ' ಎಂಬ ಅಧ್ಯಾಯದಲ್ಲಿ ಕಾದಂಬರಿಗಳ ಬಗ್ಗೆ ಚುಟುಕಾಗಿ ಪೀಠಿಕೆ ಹೇಳಿ, ನವೋದಯ ಘಟ್ಟದ ಕಾದಂಬರಿಗಳ ಮೂಲಕ ಮಾನವೀಕರಣವನ್ನು ಹೇಳಿದ್ದಾರೆ. ಈ ಭಾಗದಲ್ಲಿ ಸ್ವಾತಂತ್ರ್ಯ ಪೂರ್ವದ ಪ್ರಥಮ ಕಾದಂಬರಿಗಳಿಂದ ಆರಂಭಿಸಿ ನಂತರ ನವೋದಯಕ್ಕೆ ಬಂದಿದ್ದಾರೆ. ಈ ಅಧ್ಯಾಯದಲ್ಲಿ ಪ್ರಸ್ತುತ ಸಂಶೋಧನೆಗೆ ಸಂಬಂಧಪಟ್ಟ ಐತ–ಪೀಂಚಲು, ಮುಕುಂದಯ್ಯ ಪಾತ್ರಗಳ ಸಂಬಂಧಗಳನ್ನು ಮಾನವೀಕರಣದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

ಉದಾ: ೧. ಮೇಲ್ಜಾತಿ ಪಾತ್ರಗಳ ಮಾನವೀಕರಣ

೨. ಮೇಲ್ಜಾತಿ–ಕೆಳಜಾತಿ ಪಾತ್ರಗಳ ಮಾನವೀಕರಣ

೩. ಕೆಳಜಾತಿ ಪಾತ್ರಗಳ ಮಾನವೀಕರಣ

ಹೀಗೆ ಗುರುತಿಸಿದ್ದಾರೆ. ಈ ಗುರುತಿಸುವಿಕೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಮೇಲ್ಜಾತಿ–ಕೆಳಜಾತಿ ಪಾತ್ರಗಳ ಮಾನವೀಕರಣಕ್ಕೆ ಐತ–ಪೀಂಚಲು–ಮುಕುಂದಯ್ಯನವರ ಪ್ರಸ್ತಾಪ ಪರೋಕ್ಷವಾಗಿ ಸಂಬಂಧಪಡುತ್ತದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿನ ಮಾನವೀಕರಣದ ಅಂಶಗಳನ್ನು ಬೇರೆ ಪಾತ್ರಗಳ ಮುಖಾಂತರವೂ ವಿಸ್ತರಿಸುವ ಪ್ರಯತ್ನ ಮಾಡಿದ್ದಾರೆ. ತನ್ನ ಕೇರಿಯ ಒಡೆತನದಲ್ಲಿದ್ದ ಹೆಣ್ಣಾಳನ್ನು ಇನ್ನೊಬ್ಬ ಶ್ರೀಮಂತನ ಒಡೆತನದಲ್ಲಿದ್ದ ಕೇರಿಗೆ ಮದುವೆ ಮಾಡಲು ಸಮ್ಮತಿ ನೀಡುವುದಿಲ್ಲ. ಇದಕ್ಕೆ ಕಾರಣ ಒಡೆಯರಿಗೆ ಬೇಕಾಗಿದ್ದುದು ಜೀತ ಮಾಡಲು ಒಂದು ಆಳು ಮಾತ್ರ. ತಮ್ಮ ಹೊಲಗೇರಿಯ ಒಂದು ಹೆಣ್ಣನ್ನು ಹೊರಗೆ ಕೊಟ್ಟರೆ ತಮ್ಮ ಕೆಲಸಕ್ಕೆ ಒಂದಾಳು ಖೋತಾ ಬೀಳುತ್ತದೆ. ಆದ್ದರಿಂದ ಹೆಣ್ಣನ್ನು ಕೇರಿಯ ಗಂಡೇ ಮದುವೆಯಾಗಬೇಕೆಂಬ ಅವರ ಕಟ್ಟಪ್ಪಣೆ. ಬೇರೆ ರೀತಿಯಿಂದ ವರ್ತಿಸಿದರೆ ಆ ಹೆಣ್ಣು ಇನ್ನೊಬ್ಬ ಬೇರೆ ಹಳ್ಳಿಯ ಕೇರಿಯವನಿಂದ ತಾಳಿ ಕಟ್ಟಿಸಿಕೊಂಡಿದ್ದರೂ ಸರಿ, ಅವಳನ್ನು ಎಳೆದು ತರಿಸಿ, ತಾಳಿ ಕೀಳಿಸಿ, ತಮ್ಮ ಕೇರಿಯವನಿಗೇ ಮದುವೆ ಮಾಡಿಸುತ್ತಿದ್ದರೆಂಬುದರಲ್ಲಿ ಸಂದೇಹವಿರಲಿಲ್ಲ. ಇಂತಹ ಕಠೋರ ನೀತಿಯನ್ನು ಅನುಸರಿಸುವ ಶ್ರೀಮಂತಿಕೆಯ ದರ್ಪಣದಲ್ಲಿ ಮಾನವೀಯತೆ ಕಾಣುವುದಿಲ್ಲ. ಶ್ರೀಮಂತರು ಬಡವರನ್ನು ಬೆಳೆಯಲು ಬಿಡುವುದಿಲ್ಲ ಎಂಬಂತೆ ಚಿತ್ರಿಸಿದ್ದಾರೆ. ಈ ಅಂಶಗಳು ಪ್ರಸ್ತುತ ಸಂಶೋಧನೆಗೆ ಸಂಬಂಧಪಡುವುದಿಲ್ಲ. ಲೈಂಗಿಕ ಶೋಷಣೆಯ ಅಂಶಗಳನ್ನು ಇವರು ಮಾನವೀಕರಣ ನೆಲೆಯಲ್ಲಿ ನೋಡಿದ್ದಾರೆ.

ಹೀಗೆ ಮುಂದುವರೆದಂತೆ ಮಾನವೀಕರಣದ ಅಂಶಗಳನ್ನು ಕಾನೂರು ಹೆಗ್ಗಡತಿ ಹಾಗೂ ಕೆಲವು ಪ್ರಗತಿಶೀಲ ಕಾದಂಬರಿಗಳ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ. ನವ್ಯ ಕಾದಂಬರಿಗಳ ಹಿನ್ನೆಲೆಯಲ್ಲೂ ಮಾನವೀಕರಣದ ಅಂಶಗಳನ್ನು ಗುರುತಿಸಿದ್ದಾರೆ. 'ಸಂಸ್ಕಾರ' ಕಾದಂಬರಿಯ ಪ್ರಾಣೇಶಾಚಾರ್ಯರಲ್ಲೂ ಮಾನವೀಕರಣದ ಅಂಶಗಳನ್ನು ಗುರುತಿಸಿದ್ದಾರೆ. 'ಭಾರತೀಪುರ' ಕಾದಂಬರಿಯಲ್ಲಿ ಮಂಜುನಾಥನ ಗುಡಿಯನ್ನು ಹೊಲೆಯರು ಪ್ರವೇಶಿಸಿದ್ದು, ಜಗನ್ನಾಥ್ ಮಾರ್ಗರೇಟ್‌ಳನ್ನು ಸ್ವೀಕರಿಸುವುದು ಮುಂತಾದವುಗಳನ್ನು ಧಾರ್ಮಿಕ ನಿಬಂಧನೆಗಳನ್ನು ಮೀರುವ ಮಾನವೀಕರಣವಾಗಿ ಗುರುತಿಸಿದ್ದಾರೆ. ನಂತರ ಲಂಕೇಶ್, ತೇಜಸ್ವಿ ಕಾದಂಬರಿಗಳಲ್ಲಿನ ಮಾನವೀಕರಣದ ಚರ್ಚೆ ಇದೆ. ದಲಿತ ಬಂಡಾಯ ಸಂದರ್ಭದ ಮಾನವೀಕರಣ ಅಂಶಗಳನ್ನು 'ಕುಸುಮಬಾಲೆ', 'ವೈಶಾಖ', 'ಬಂಡಾಯ', 'ಅಸ್ಪೃಶ್ಯರು', 'ಕಪ್ಪು', 'ಸೂರ್ಯ', 'ಕಾರ್ಯ' ಕಾದಂಬರಿಗಳ ಆಧಾರದಲ್ಲಿ ಕಂಡುಕೊಂಡಿದ್ದಾರೆ.

ಸ್ವಾತಂತ್ರ್ಯ ಪೂರ್ವ ಕಾದಂಬರಿಗಳಲ್ಲಿ ಮಾನವೀಕರಣದ ನೆಲೆಗಳನ್ನು 'ಚೋಮನ ದುಡಿ' ಕಾದಂಬರಿಯಲ್ಲಿ ಒಡೆಯ (ಧಣಿ) ಸಂಕಪ್ಪಯ್ಯನವರು ತಾಯಿಯ ಮಾತಿಗೆ ಕಟ್ಟುಬಿದ್ದು ಚೋಮನಿಗೆ ಭೂಮಿ ಕೊಡದಿದ್ದುದರ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ. ಹೀಗೆ ಕಾರಂತರ 'ಚೋಮನ ದುಡಿ', 'ಸರಸಮ್ಮನ ಸಮಾಧಿ', 'ಮರಳಿ ಮಣ್ಣಿಗೆ', 'ಬೆಟ್ಟದ ಜೀವ', 'ಔದಾರ್ಯದ ಉರುಳಲ್ಲಿ', 'ಅಳಿದ ಮೇಲೆ', 'ಸ್ವಪ್ನದ ಹೊಳೆ', 'ಮೂಕಜ್ಜಿಯ ಕನಸುಗಳು', 'ಮೈಮನಗಳ ಸುಳಿಯಲ್ಲಿ' ಮುಂತಾದ ಕಾದಂಬರಿಗಳ ಮೂಲಕ ಮಾನವೀಕರಣದ ಅಂಶಗಳನ್ನು ಕಂಡುಕೊಂಡಿದ್ದಾರೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಕೆಳಜಾತಿಯ, ಹೆಣ್ಣಿನ ದೃಷ್ಟಿಯಲ್ಲಿ ಅಧ್ಯಯನ ನಡೆದಿಲ್ಲ ಎಂಬುದು ಮಹಾಪ್ರಬಂಧದ ಅಧ್ಯಯನದಿಂದ ತಿಳಿದುಬರುತ್ತದೆ.

ಸಂಶೋಧಕರಾದ ಬಿ.ಎಂ. ಪುಟ್ಟಯ್ಯ ಅವರು ಪ್ರೊ. ಶ್ರೀಕಂಠ ಕೂಡಿಗೆ ಅವರ ಮಾರ್ಗದರ್ಶನದಲ್ಲಿ ಮಂಡಿಸಿರುವ 'ಕನ್ನಡ ದಲಿತ ಸಾಹಿತ್ಯ ಮತ್ತು ಪ್ರತಿಸಂಸ್ಕೃತಿ' ಎಂಬ ಮಹಾಪ್ರಬಂಧವನ್ನು ಅಧ್ಯಯನ ಮಾಡಲಾಯಿತು. ಇವರು ದಲಿತ ಸಾಹಿತ್ಯದ ಹಿನ್ನೆಲೆ, ದಲಿತ ಕೆಲವು ವಿಚಾರಗಳು, ದಲಿತ ಸಾಹಿತ್ಯದ ಹಿನ್ನೆಲೆಯ ಸ್ವರೂಪ ಮತ್ತು ಮುಖ್ಯ ನೆಲೆಗಳನ್ನು ಕುರಿತು ಅಧ್ಯಯನಕ್ಕೊಳಪಡಿಸಿದ್ದಾರೆ. ದಲಿತ ಕಾವ್ಯ: ಪ್ರತಿಸಂಸ್ಕೃತಿ ನೆಲೆಗಳು, ಕಾವ್ಯ: ಪಾರಂಪರಿಕ ಹಿನ್ನೋಟ, ಕಾವ್ಯ: ದಲಿತ ಪರಿಸರದ ಹಿನ್ನೆಲೆ, ದಲಿತ ಕಾವ್ಯ: ಪ್ರತಿ ಸಂಸ್ಕೃತಿಯಾಗಿ ಗುರುತಿಸಿಕೊಂಡು ಅಧ್ಯಯನ ಮಾಡಿದ್ದಾರೆ. ನಂತರ ದಲಿತ ಕಥಾ ಸಾಹಿತ್ಯ: ಪ್ರತಿಸಂಸ್ಕೃತಿ ನೆಲೆ, ಕಥಾ ಸಾಹಿತ್ಯ: ಪಾರಂಪರಿಕ ಹಿನ್ನೋಟ, ಕಥಾ ಸಾಹಿತ್ಯ: ದಲಿತ ಪರಿಸರದಲ್ಲಿ, ದಲಿತ ಕಥಾ ಸಾಹಿತ್ಯ: ಪ್ರತಿಸಂಸ್ಕೃತಿ ನೆಲೆಗಳಾಗಿ ಗುರುತಿಸಿಕೊಂಡಿದ್ದಾರೆ. ಈ ಭಾಗದಲ್ಲಿ ಸಣ್ಣ ಕಥೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಆದ್ದರಿಂದ ಇವರ ಸಂಶೋಧನಾ ಪ್ರಬಂಧ 'ಕಾದಂಬರಿಗಳಲ್ಲಿ ದಲಿತ ಮಹಿಳೆ' ವ್ಯಾಪ್ತಿಗೆ ಒಳಪಡುವುದಿಲ್ಲ. ಇಲ್ಲಿ ಪ್ರಸ್ತಾಪಗೊಂಡಿರುವುದು ಕಾವ್ಯ ಮತ್ತು ಸಣ್ಣಕಥೆಗಳು ಮಾತ್ರ.

ಇದರ ನಂತರ ಎ.ಎಸ್. ಮಹದೇವ ಅವರ 'ದೇವನೂರ ಮಹಾದೇವರ ಸಮಗ್ರ ಕೃತಿಗಳು ಒಂದು ಭಾಷಾ ವೈಜ್ಞಾನಿಕ-ಕಾವ್ಯ ಮೀಮಾಂಸಾತ್ಮಕ ಅಧ್ಯಯನ' ಎಂಬ ಮಹಾಪ್ರಬಂಧವನ್ನು ಅಭ್ಯಸಿಸಲಾಯಿತು. ಇವರು ದೇವನೂರರ ಕಥನ ಸಾಹಿತ್ಯವನ್ನು ಭಾಷಾ ವೈಜ್ಞಾನಿಕ ದೃಷ್ಟಿಯಿಂದ ನೋಡಿದ್ದಾರೆ. ಉಳಿದಂತೆ ದೇವನೂರರ ಸಮಗ್ರ ಕಥೆಗಳನ್ನು ಹಾಗೂ ಅವರ ಎರಡು ಕಾದಂಬರಿಗಳನ್ನು ಕುರಿತು ಸಾರಾಂಶಾತ್ಮಕ ಮಾದರಿಯನ್ನು ಅನುಸರಿಸಿದ್ದಾರೆ. ಒಟ್ಟಾರೆ ದೇವನೂರರ ಕಥಾ ಸಾಹಿತ್ಯವನ್ನು ಹಂತ-ಹಂತವಾಗಿ ವಿಮರ್ಶಿಸುತ್ತಾರೆ. ದೇವನೂರು

ಕಥೆಗಳಲ್ಲಿನ ಪ್ರತಿಭಟನೆ, ಸಣ್ಣಯ್ಯ ಆಸ್ತಿಗಾಗಿ ತನ್ನ ತಾಯಿಯೊಂದಿಗೆ ನಡೆಸುವ ಪ್ರತಿಭಟನೆ. ಇಂತಹ ಬೇರೆ ಬೇರೆ ಸಂದರ್ಭದ ಸಣ್ಣ ಪುಟ್ಟ ಪ್ರತಿಭಟನೆಗಳನ್ನು ಮಾತ್ರ ಕಾಣಬಹುದು.

'ವಸ್ತು-ಆಕೃತಿ, ವೈರುಧ್ಯ ಮತ್ತು ದೇವನೂರರ ಕೃತಿಗಳು' ಎಂಬಲ್ಲಿ ವಸ್ತುವನ್ನು ಕುರಿತು ಚರ್ಚಿಸಿದ್ದಾರೆ. ಅದೇ ಅಧ್ಯಾಯದಲ್ಲಿ 'ಜೀವನ ದರ್ಶನ' ಎಂಬ ಉಪ ಅಧ್ಯಾಯದಲ್ಲಿ ಕಥಾಸಾರಾಂಶವನ್ನೇ ಬರೆದಿದ್ದಾರೆ. 'ಪ್ರತಿಭಟನೆ ಮತ್ತು ಯಥಾಸ್ಥಿತಿ' ಎಂಬಲ್ಲಿ ಕಥೆಗಳ ಆಧಾರದಿಂದ ಪ್ರತಿಭಟನಾತ್ಮಕ ಅಂಶಗಳನ್ನು ಶೋಧಿಸಿದ್ದಾರೆ. 'ವಸ್ತು ಸ್ಥಿತಿಯ ಸ್ವೀಕಾರ' ಎಂಬ ಭಾಗದಲ್ಲಿ ಯಾವುದೇ ವಿಶೇಷತೆಯಿಲ್ಲ. 'ಮಿತಿಮೀರಿದ ಜೀವನ ಗ್ರಹಿಕೆ' ಎಂಬಲ್ಲೂ ಯಾವುದೇ ವಿಶೇಷವಿಲ್ಲ. 'ದಲಿತ ಜೀವನ ಚಿತ್ರಣ' ಎಂಬ ಭಾಗದಲ್ಲಿ ಕಥಾ ಸಾರಾಂಶವಿದೆ. ಪ್ರಬಂಧದಲ್ಲಿ ಚರ್ಚಿತವಾಗಿರುವ ವಿಮರ್ಶಾ ಅಂಶಗಳು ತೀರಾ ಕಡಿಮೆ ಎಂದು ಹೇಳಬಹುದು.

ಮಲ್ಲಿನಾಥ ಎಸ್. ತಳವಾರ ಅವರ 'ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ-ಪ್ರಪಂಚ' ಎಂಬ ಸಂಶೋಧನಾ ಮಹಾಪ್ರಬಂಧವನ್ನು ಗಮನಿಸಲಾಯಿತು. ಇವರು 'ಕೌಟುಂಬಿಕ ಪ್ರಪಂಚ' ಎಂಬ ಅಧ್ಯಾಯವನ್ನು ಸಂಯಮಿಗಳು, ಪ್ರತಿರೋಧ, ಸಂಪ್ರದಾಯಶೀಲರು, ವಿಲಾಸಿ ಮನೋಭಾವ, ಹೀಗೆ ವಿಭಾಗಿಸಿಕೊಂಡಿದ್ದಾರೆ. ಈ ಅಧ್ಯಾಯದಲ್ಲಿ ಕುಟುಂಬ ಅಂದರೆ ಯಾವುದು? ಕುಟುಂಬದಲ್ಲಿನ ಕೂಡಿ ಬಾಳುವಿಕೆಯಲ್ಲಿನ ಸಿಹಿ ಎಂಥದ್ದು ಎಂಬ ಪೀಠಿಕೆಯೊಂದಿಗೆ ಆರಂಭಿಸಿದ್ದಾರೆ. ಈ ಪ್ರಬಂಧದ 'ಸಂಯಮಿಗಳು' ಎಂಬ ಉಪ ಅಧ್ಯಾಯದಲ್ಲಿ ಸಂಯಮಿಯಾದ ಹೆಣ್ಣಾಗಿ ಚೋಮನ ದುಡಿಯ ಬೆಳ್ಳಿಯನ್ನು ಪ್ರಸ್ತಾಪಿಸಲಾಗಿದೆ. ಕಾದಂಬರಿಯ ಸಾರಾಂಶವನ್ನು ಬೆಳ್ಳಿಯಿಂದ ಆರಂಭಿಸುತ್ತಾರೆ. ಬೆಳ್ಳಿಯನ್ನು ಹೊರತುಪಡಿಸಿದಂತೆ ಸಂಕಪ್ಪಯ್ಯನ ತಾಯಿ ಬಗ್ಗೆ ಸಾರಾಂಶವಿದೆ. ಅಬ್ಬಾ ! ಈ ಹೊಲೆಯರಿಗೆ ಬಂದ ಸೊಕ್ಕೆ' ಯಾರೂ ಮಾಡದ ಕೆಲಸ ನೀನು ಮಾಡಬೇಡ ಎಂಬಂತಹ ಮಾತುಗಳ ಪ್ರಸ್ತಾಪವಿದೆ. ಹಾಗೆಯೇ ಚೋಮನ ದುಡಿ ಕಾದಂಬರಿಯನ್ನು 'ಭೂ ಮಸೂದೆ' ಜಾರಿಗೆ ಬರುವುದಕ್ಕಿಂತ ಮುಂಚಿನ 'ಭೂ ಹೋರಾಟದ' ಬಗ್ಗೆ ದನಿ ಎತ್ತಿದ ಮೊದಲ ಕೃತಿ ಎಂದು ಹೇಳಲಾಗಿದೆ. ಆದರೆ ಚೋಮನ ಜಾತಿಗೆ ಸಾಂಪ್ರದಾಯಿಕ ಸಮಾಜದಲ್ಲಿ ಆಸ್ತಿಯ ಹಕ್ಕಿಲ್ಲ ಎಂಬುದನ್ನು ಸಂಕಪ್ಪಯ್ಯ ಧಣಿಗಳ ನಿಲುವಿನಿಂದ ಹಾಗೂ ಬೆಳ್ಳಿಯ ಮೃದು ಧೋರಣೆಯಿಂದ ಸ್ಪಷ್ಟವಾಗುತ್ತದೆ ಎಂದು ಸಂಶೋಧಕರು ಹೇಳುತ್ತಾರೆ.

ಇದನ್ನು ಹೊರತುಪಡಿಸಿದರೆ 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿನ ಸ್ತ್ರೀ, 'ಮರಳಿಮಣ್ಣಿಗೆ', ಕಾದಂಬರಿಯಲ್ಲಿನ ಸ್ತ್ರೀಯರು, ಬೆಟ್ಟದ ಜೀವ ಕಾದಂಬರಿಯಲ್ಲಿನ ಸ್ತ್ರೀಯರು, 'ಔದಾರ್ಯದ ಉರುಳಲ್ಲಿ' ಕಾದಂಬರಿಯಲ್ಲಿನ ಸ್ತ್ರೀಯರನ್ನು, 'ಜಾರುವ ದಾರಿಯಲ್ಲಿ'

ಕಾದಂಬರಿಯ 'ಗುಲಾಬಿ' ಎಂಬ ಸೂಳೆಯು ಗರತಿಯಾಗಿಯೂ ಇದ್ದುದರ ಪ್ರಸ್ತಾಪವಿದೆ. ಇವಳು ಮದುವೆಯಾಗಬೇಕೆಂದು ಆಸೆ ಪಡುತ್ತಾಳೆ. ಆದರೆ 'ಬತ್ತದ ತೊರೆ' ಕಾದಂಬರಿಯ ನಾಯಕಿ ವಿನುತೆ ಮದುವೆಯನ್ನು ನಿರಾಕರಿಸುತ್ತಾಳೆ. ಶಿವರಾಮ ಕಾರಂತರ ಕಾದಂಬರಿಗಳೊಂದಿಗೆ ಬರಗೂರು ರಾಮಚಂದ್ರಪ್ಪ, ಅನಕೃ, ಕಟ್ಟೀಮನಿ, ಕಂಬಾರ ಮುಂತಾದವರ ಹೇಳಿಕೆ ಮತ್ತು ಕಾದಂಬರಿಗಳನ್ನು ಉಲ್ಲೇಖಿಸುತ್ತಾರೆ.

'ಪ್ರತಿರೋಧ': ವ್ಯವಸ್ಥೆಯ ವಿರುದ್ಧ ಪ್ರತಿರೋಧ ತೋರುವ ಹೆಣ್ಣುಗಳನ್ನು ಈ ಭಾಗದಲ್ಲಿ ಪ್ರಸ್ತಾಪಿಸಲಾಗಿದೆ. ಸಂಪ್ರದಾಯಶೀಲರು: ಈ ಉಪ ಅಧ್ಯಾಯದಲ್ಲಿ ಇದಕ್ಕೆ ಉದಾಹರಣೆಯಾಗಿ ಕಾರಂತರ ಕಾದಂಬರಿಗಳನ್ನು ಪರಿಗಣಿಸಲಾಗಿದೆ. 'ವಿಲಾಸಿ ಮನೋಭಾವ': ಎಂಬ ಅಧ್ಯಾಯದಲ್ಲಿ ವ್ಯಕ್ತಿಗಳ ಬದುಕಿಗೆ ಅವರೇ ಸೂತ್ರದಾರರಾಗುತ್ತಾರೆ. ಬದುಕಿನ ಏಳ್ಗೆಗೂ ಹಾಗೂ ಅವನತಿಗೂ ಅವರೇ ಕಾರಣೀಭೂತರಾಗಿರುತ್ತಾರೆ. ವಿಲಾಸಿ ಮನೋಭಾವ ಹೊಂದಿದವರು ಅನ್ಯರ ಸುಖ-ದುಃಖಗಳಿಗೆ ಸ್ಪಂದಿಸದೆ, ಯಾವಾಗಲೂ ತಮ್ಮ ಸುಖಕ್ಕಾಗಿಯೇ ಹಂಬಲಿಸುತ್ತಿರುತ್ತಾರೆ. ಆದರಿಂದ ಬೇರೆಯವರಿಗೆ ದುಃಖವಾದರೂ ಅವರಿಗೆ ಯಾವುದೇ ಪಾಪಪ್ರಜ್ಞೆ ಕಾಡುವುದಿಲ್ಲ. ಇಂತಹ ಸ್ತ್ರೀಪಾತ್ರಗಳು ಕಾರಂತರ ಕಾದಂಬರಿಗಳಲ್ಲಿಯೂ ಇರುವುದನ್ನು ಒಡಹುಟ್ಟಿದವರು, ಅಳಿದ ಮೇಲೆ, ಸರಸಮ್ಮನ ಸಮಾಧಿ, ಮರಳಿ ಮಣ್ಣಿಗೆ, ಒಂಟಿದನಿ, ಸನ್ಯಾಸಿಯ ಬದುಕು, ಸ್ವಪ್ನದ ಹೊಳೆ, ಕನ್ನಡಿಯಲ್ಲಿ ಕಂಡಾತ, ಇನ್ನೊಂದೇ ದಾರಿ, ಧರ್ಮರಾಯನ ಸಂಸಾರ, ಮೈಮನಗಳ ಸುಳಿಯಲ್ಲಿ, ಮೊಗಪಡೆದ ಮನ, ನಂಬಿದವರ ನಾಕ ನರಕ, ಕಣ್ಣಿದ್ದೂ ಕಾಣರು ಮುಂತಾದ ಕಾದಂಬರಿಗಳ ಸ್ತ್ರೀ ಪಾತ್ರಗಳ ಮೂಲಕ ವಿಲಾಸಿ ಜೀವನವನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

'ಲೈಂಗಿಕ ಪ್ರಪಂಚ' ಎಂಬ ಅಧ್ಯಾಯದಲ್ಲಿ ಸರಸ ದಾಂಪತ್ಯ, ವಿರಸ ದಾಂಪತ್ಯ, ಕಾಮದಾಹ, ವಿವಾಹ ಬಾಹಿರ ಸಂಬಂಧಗಳು, ಅನೈತಿಕತೆ, ಸಂತಾನಾಪೇಕ್ಷೆ, ಪ್ರತಿಭಟನೆ, ಕೌಟುಂಬಿಕ ಒತ್ತಡ, ಆರ್ಥಿಕನೆಲೆ ಮುಂತಾದ ಅಂಶಗಳಿಂದ ಸಂಶೋಧಿಸಿದ್ದಾರೆ. ಮಾನವನು ಸಮಾಜಜೀವಿ. ಒಂಟಿಯಾಗಿರಲು ಬಯಸುವುದಿಲ್ಲ. ಯಾವಾಗಲೂ ಇತರರೊಂದಿಗೆ ಸಂಪರ್ಕದಲ್ಲಿರಲು ಬಯಸುತ್ತಾನೆ. ಅವನ ಆರೋಗ್ಯಕ್ಕೆ ಗಾಳಿ, ನೀರು, ಆಹಾರದಷ್ಟೇ ಕಾಮವೂ ಅವಶ್ಯಕವೆಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಈ ಅಧ್ಯಾಯದಲ್ಲಿ ಆಯಾ ಕಾದಂಬರಿಗಳ ಪಾತ್ರಗಳ ಮೂಲಕ ಆಯಾ ಅಧ್ಯಾಯಗಳಲ್ಲಿನ ವಿಚಾರಗಳನ್ನು ಕುರಿತು ಚರ್ಚಿಸಿದ್ದಾರೆ.

'ಧಾರ್ಮಿಕ ಪ್ರಪಂಚ' ಎಂಬ ಅಧ್ಯಾಯದಲ್ಲಿ ಧರ್ಮಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಕಾದಂಬರಿಗಳಲ್ಲಿನ ಪಾತ್ರಗಳ ಆಧಾರದಿಂದ ಚರ್ಚಿಸುತ್ತಾರೆ. 'ವೈಚಾರಿಕ ಪ್ರಪಂಚ' ಎಂಬ ಅಧ್ಯಾಯದಲ್ಲಿ ದೇವರ ಅಸ್ತಿತ್ವ ವಿಚಾರ, ಲೈಂಗಿಕ ಜೀವನದಿಂದ ಅಧ್ಯಾತ್ಮ ಜೀವನಕ್ಕೆ ಯಾವುದೇ ತೊಂದರೆಯಾಗುವುದಿಲ್ಲ ಎಂಬುದನ್ನು 'ಭರತೇಶ ವೈಭವ'ದ 'ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ' ಎಂಬ ಹೇಳಿಕೆಯ ಮೂಲಕ ಸ್ಪಷ್ಟಪಡಿಸುತ್ತಾರೆ. ಕಾದಂಬರಿಗಳ ಪಾತ್ರಗಳ ಮುಖಾಂತರ ವೈಚಾರಿಕತೆಗೆ ಕಾರಣವಾದ ಅಂಶಗಳನ್ನು ಈ ಅಧ್ಯಾಯದಲ್ಲಿ ಪ್ರಸ್ತಾಪಿಸುತ್ತಾರೆ. ಪ್ರಸ್ತುತ ಸಂಶೋಧನೆಗೆ ಸಂಬಂಧಪಟ್ಟ ಬೆಳ್ಳಿಯ ಪಾತ್ರ ಒಂದು ಅಧ್ಯಾಯದಲ್ಲಿ ಮಾತ್ರ ಪ್ರಸ್ತಾಪವಾಗಿದೆ. ಒಟ್ಟಾರೆ ಸಂಶೋಧಕರು ತಮ್ಮ ಅಧ್ಯಯನದಲ್ಲಿ ಹಲವು ಕಾದಂಬರಿಗಳಲ್ಲಿನ ದಲಿತ ಮಹಿಳಾ ಪಾತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಿಲ್ಲ ಎಂಬುದು ಗಮನಾರ್ಹ ಅಂಶವಾಗಿದೆ. ಹಲವು ಕಾದಂಬರಿಗಳಲ್ಲಿನ ದಲಿತ ಮಹಿಳೆಯ ಪ್ರಸ್ತಾಪವಿಲ್ಲ.

ನೇತ್ರಾವತಿ ಕೆ.ವಿ. ಅವರ 'ದಲಿತ ಮಹಿಳಾ ಸಂಕಥನ' ಎಂಬ ಸಂಶೋಧನಾ ಮಹಾಪ್ರಬಂಧವನ್ನು ಅಧ್ಯಯನಕ್ಕೆ ಪೂರಕವಾಗಿ ಪರಾಮರ್ಶನ ಮಾಡಲಾಯಿತು. ಇವರು ತಮ್ಮ ಸಂಶೋಧನೆಯಲ್ಲಿ ದಲಿತ ಮಹಿಳಾ ಚಳವಳಿ ಮತ್ತು ಸಬಲೀಕರಣ ಎಂಬ ಅಧ್ಯಾಯದಲ್ಲಿ 'ದಲಿತ ಚಳವಳಿ ಮತ್ತು ದಲಿತ ಮಹಿಳೆ', ದಲಿತ ಮಹಿಳಾ ಚಳವಳಿಯ ಅನಿವಾರ್ಯತೆ, ದಲಿತ ಮಹಿಳಾ ಚಳವಳಿಯ ಸಾಧ್ಯತೆಗಳು ಮತ್ತು ರಾಜಕೀಯ ಪ್ರಜ್ಞೆ ಮುಂತಾದ ವಿಚಾರಗಳನ್ನು ಕುರಿತು ಸಂಶೋಧಿಸಿದ್ದಾರೆ. 'ದಲಿತ ಮಹಿಳಾ ಸಾಂಸ್ಕೃತಿಕ ರಚನೆ' ಎಂಬ ಅಧ್ಯಾಯದಲ್ಲಿ ನಿಸರ್ಗನಿಷ್ಠ ತತ್ವ, ಮಾತೃಮೂಲಗುಣ, ಫಲವಂತಿಕೆ ನೀತಿ, ವಿಶ್ವಾತ್ಮಕ ಪ್ರಜ್ಞೆ ಮುಂತಾದವುಗಳನ್ನು ಕುರಿತು ಚರ್ಚಿಸಿದ್ದಾರೆ. ಇವರು ತಮ್ಮ ಪ್ರಬಂಧದಲ್ಲಿ ದಲಿತ ಮಹಿಳೆ ಶೋಷಣೆಗೆ ಒಳಗಾಗುತ್ತಿರುವ ಸಾಮಾಜಿಕ ಮೂಲಗಳನ್ನು ಕುರಿತು ಚರ್ಚಿಸಿದ್ದಾರೆ. ಆದರೆ ಎಲ್ಲಾ ಕಾದಂಬರಿ ಅಥವಾ ಸಾಹಿತ್ಯ ಕೃತಿಗಳಲ್ಲಿ ಚಿತ್ರಿತವಾಗಿರುವ ದಲಿತ ಮಹಿಳೆಯ ಶೋಷಣೆಯನ್ನು ಕುರಿತು ಪ್ರಸ್ತಾಪಿಸಿಲ್ಲ. ಆದ್ದರಿಂದ ಇದೊಂದು ಸಾಮಾಜಿಕ ಅಧ್ಯಯನವಾಗಿದೆ.

ಸುಕನ್ಯಾ ಅವರ 'ದಲಿತ ಬಂಡಾಯ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧಿಕರಣ' ಎಂಬ ಸಂಶೋಧನಾ ಮಹಾಪ್ರಬಂಧವನ್ನು ಅಧ್ಯಯನ ಮಾಡಲಾಯಿತು. ಇವರು ಮಹಿಳಾ ಸಾಹಿತ್ಯ ಅಧ್ಯಯನದ ಪರಂಪರೆಯಲ್ಲಿ ಮಹಿಳಾ ಪರಿಗಣನೆ ಮತ್ತು ಪುರುಷ ಸಾಹಿತ್ಯ ಅಧ್ಯಯನ ಪರಂಪರೆಯಲ್ಲಿ ಮಹಿಳಾ ಪರಿಗಣನೆಯನ್ನು ಕುರಿತು ಚರ್ಚಿಸಿದ್ದಾರೆ. ೬೦–೭೦ರ ದಶಕದ ಚಾರಿತ್ರಿಕ ಸಂದರ್ಭ ಎಂಬ ಉಪ ಅಧ್ಯಾಯದಲ್ಲಿ ದಲಿತ ಜಾಗೃತಿಯ ಮೊದಲ ಅಲೆ, ಮಹಿಳಾ ಜಾಗೃತಿಯ ಮೊದಲ ಅಲೆ, ಬಂಡಾಯ ಜಾಗೃತಿಯ ಮೊದಲ ಅಲೆ, ಸಾಹಿತ್ಯೇತರ

ಪ್ರಭಾವಗಳು, ಮಾರ್ಕ್ಸ್‌ವಾದ ಲೋಹಿಯಾವಾದ, ಅಂಬೇಡ್ಕರ್‌ವಾದ, ರಾಜಕೀಯ ಪ್ರಭಾವ ಮುಂತಾದ ವಿಚಾರಗಳನ್ನು ಕುರಿತು ಚರ್ಚಿಸಿದ್ದಾರೆ. ಮಹಿಳಾ ಚಳವಳಿ ಹಾಗೂ ಇತರ ಚಳವಳಿಗಳ ಚಾರಿತ್ರಿಕ ಸಮೀಕ್ಷೆ, ದಲಿತ ಬಂಡಾಯ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧಿಕರಣದ ಚರ್ಚೆಯ ನೆಲೆಗಳು, ದಲಿತ ಪರಿಕಲ್ಪನೆಯ ವಿವೇಚನೆ, ದಲಿತ ಸಾಹಿತ್ಯದ ನಿರ್ವಚನ, ದಲಿತ ಸಾಹಿತ್ಯದ ಪ್ರೇರಕ ಮತ್ತು ಪೂರಕ ಅಂಶಗಳು, ಮಹಿಳಾ ಪ್ರತಿನಿಧಿಕರಣದ ಗ್ರಹಿಕೆ ಮತ್ತು ಅಭಿವ್ಯಕ್ತಿಯ ತೊಡಕು, ಲೋಕ ಗ್ರಹಿಕೆಯ ತೊಡಕು, ಭಾಷಾ ಮಾಧ್ಯಮ, ಅಭಿವ್ಯಕ್ತಿ ತೊಡಕು, ಕಥನ ಸಾಹಿತ್ಯದಲ್ಲಿ ಪ್ರತಿಬಿಂಬಿತವಾಗಿರುವ ಪಿತೃಪ್ರಧಾನ ಮೌಲ್ಯಗಳು, ಪ್ರತಿಭಟನೆಯ ಸ್ವರೂಪ, ಗಂಡು-ಹೆಣ್ಣು ಗುಣಗಳ ಚಿತ್ರಣ, ಕಥನ ಸಾಹಿತ್ಯದಲ್ಲಿ ಪ್ರಕಟವಾದ ಸ್ತ್ರೀಪ್ರಜ್ಞೆ, ಆಚರಣೆ, ಸಂಪ್ರದಾಯಗಳ ನೆಲೆಯಲ್ಲಿ ಮಹಿಳಾ ಪ್ರತಿನಿಧಿಕರಣ, ಬಂಡಾಯ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧಿಕರಣ ಎಂಬ ವಿಚಾರಗಳನ್ನು ಸಂಶೋಧನೆಗೊಳಪಡಿಸಿದ್ದಾರೆ. ಬಂಡಾಯ ಸಾಹಿತ್ಯದ ನಿರ್ವಚನ ಪರಿಕಲ್ಪನೆಯನ್ನು ತುಂಬಾ ಆಳವಾಗಿ ಚರ್ಚಿಸಿದ್ದಾರೆ. ಇವರು ಒಡಲಾಳ ಕಾದಂಬರಿಯನ್ನು ಬಂಡಾಯ ಸಂದರ್ಭದ ಹಿನ್ನೆಲೆಯಲ್ಲಿ ಗ್ರಹಿಸಿದ್ದಾರೆ.

ಎ.ಎಚ್. ಚಂದ್ರಶೇಖರ್ ಅವರು ಬರೆದ 'ಕನ್ನಡದಲ್ಲಿ ದಲಿತ ಬಂಡಾಯ ಕಾದಂಬರಿಗಳು' ಒಂದು ಅಧ್ಯಯನ ಎಂಬ ಸಂಶೋಧನಾ ಪ್ರಬಂಧದಲ್ಲಿ ಅತ್ಯಧಿಕವಾಗಿ ಬಂಡಾಯ ಕಾದಂಬರಿಗಳನ್ನೇ ಆಯ್ಕೆ ಮಾಡಿಕೊಂಡಿದ್ದಾರೆ. ಅಲ್ಲಲ್ಲಿ 'ದಲಿತ' ಸಂವೇದನೆಯ ಕಾದಂಬರಿಗಳನ್ನು ಬಳಸಿಕೊಂಡಿದ್ದಾರೆ. 'ಒಡಲಾಳ' ಮತ್ತು 'ಗತಿ' ಕಾದಂಬರಿಗಳನ್ನು ತಮ್ಮ ಅಧ್ಯಯನದ ವ್ಯಾಪ್ತಿಯಲ್ಲಿ ಚರ್ಚಿಸಿದ್ದಾರೆ. ಇವರು ಈ ಕಾದಂಬರಿಗಳಿಗಾಗಿ ಇತರ ವಿಮರ್ಶಕರ ವಿಚಾರಗಳನ್ನೂ ತೆಗೆದುಕೊಂಡಿದ್ದಾರೆ. ಅಲ್ಲದೇ ಒಡಲಾಳ, ಗತಿ ಕಾದಂಬರಿಗಳನ್ನು ಕುರಿತು ಸಾರಾಂಶ ಕೇಂದ್ರಿತ ನೆಲೆಯಲ್ಲಿ ಬರೆದಿದ್ದಾರೆ.

ಹಸಿಮಾಂಸ ಮತ್ತು ಹದ್ದುಗಳು ಕಾದಂಬರಿಯನ್ನು ಕುರಿತು ಅವರು ಹೀಗೆ ಬರೆಯುತ್ತಾರೆ. 'ಮನುಷ್ಯನನ್ನು ತಲ್ಲಣಗೊಳಿಸುವ ಹಸಿವು ಮತ್ತು ಕಾಮಗಳ ಚಿತ್ರಣ ಗೀತಾ ನಾಗಭೂಷಣ ಅವರ ಕಾದಂಬರಿಯ ಮೂಲದ್ರವ್ಯ. ಈ ಎರಡು ಬೆಂಕಿಯಂತಹ ಸಮಸ್ಯೆಗಳಿಗಾಗಿ ದಲಿತರು, ಹೇಗೆ ಶೋಷಿತರಾಗುತ್ತಾರೆಂಬುದನ್ನು ಹಸಿ ಹಸಿಯಾಗಿಯೇ ಇವರು ಮೂಡಿಸುತ್ತಾರೆ. ಕೆಳವರ್ಗದ ಮುಗ್ಧ ಹೆಣ್ಣನ್ನು ಶೋಷಿಸುವ ಕುಲಕರ್ಣಿಯ ಯಜಮಾನ್ಯತೆ, ದೇವಿಯ ಮಹಿಮೆ, ಮುದಿ ಪೂಜಾರಿಯ ಮುದಿ ತೆವಲು ಇವೆಲ್ಲಾ ಕಾದಂಬರಿಯಲ್ಲಿ ಪದರು ಪದರಾಗಿ ಬಿಚ್ಚಿಕೊಳ್ಳುತ್ತವೆ.

ಲಚ್ಚಿ ಕಾದಂಬರಿಯ ಮುಖ್ಯ ಪಾತ್ರ. ಅನಾಥೆಯಾಗಿ ಬೆಳೆಯುತ್ತಿದ್ದಂತೆಯೇ ತನ್ನ ಮೇಲೆ ನಡೆಯಬಹುದಾದ ದೌರ್ಜನ್ಯ ಪ್ರತಿಭಟಿಸಿ ಕುಲಕರ್ಣಿಯ ಕ್ರೌರ್ಯಕ್ಕೆ ತುತ್ತಾಗುತ್ತಾಳೆ. ಪ್ರೀತಿಸುವ ಕಾಸಿಯೂ ವಿಮುಖನಾದಾಗ ಲಚ್ಚಿ ಅನಾಥಾಶ್ರಮದ ಸ್ತ್ರೀನಿಕೇತನದ ಆಶ್ರಯ ಪಡೆಯುತ್ತಾಳೆ. ಆದರೆ ಅಲ್ಲಿಯೂ ಶೋಷಣೆಯ ಹಸ್ತ ಚಾಚುತ್ತದೆ. ಸ್ತ್ರೀನಿಕೇತನ ಅಧಿಕಾರಿಣಿ ಲಚ್ಚಿಯ ದೇಹವನ್ನು ನರಹದ್ದುಗಳಿಗೆ ಮಾರುತ್ತಾಳೆ. ಬದುಕು ಕೊಡುವೆನೆಂದು ಹೇಳುವ ಬಸಣ್ಣ ಕೊನೆಗೆ ಬೀದಿಗೆ ದೂಡುತ್ತಾನೆ. 'ಲಚ್ಚಿ ಕಾಮದ ಕ್ರೌರ್ಯಕ್ಕೆ ಸಿಕ್ಕು ದುರಂತವನ್ನಪ್ಪುತ್ತಾಳೆ. ಇದು ಕೇವಲ ಲಚ್ಚಿಯ ಕಥೆಯಾಗದೆ ಮುಗ್ಧ ಅಮಾಯಕ ಕೆಳವರ್ಗದ ಹೆಣ್ಣುಗಳ ಮೇಲೆ ನಡೆಯುವ ದೌರ್ಜನ್ಯವನ್ನು ಪ್ರತಿನಿಧಿಸುತ್ತದೆ.' ಎಂಬ ಸರಜೂಕಾಟ್ಕರರ ನಿಲುವು ಸಹಜವಾದದ್ದು ಎಂಬುದಾಗಿ ಸರಜೂಕಾಟ್ಕರರ ಅಭಿಪ್ರಾಯವನ್ನೇ ಚಂದ್ರಶೇಖರ್ ಅವರು ಉಲ್ಲೇಖಿಸುತ್ತಾರೆ. ಈ ಮೂಲಕ ದಲಿತ ಹೆಣ್ಣಿನ ಶೋಷಣೆಗೆ ಕಾರಣ ಅವಳ ಹಸಿವು, ಬಡತನ ಹಾಗೂ ಅಂತಹ ಹೆಣ್ಣು ಮಕ್ಕಳ ತಂದೆಯರು ಕುಡಿತಕ್ಕೆ ಬಲಿಯಾಗಿ ಸಂಸಾರವನ್ನು ಪೋಷಿಸುವ ಸಾಮರ್ಥ್ಯವನ್ನು ಕಳೆದುಕೊಂಡಿರುವುದೆಂದು ತಿಳಿಸುತ್ತಾರೆ.

ದೇವನೂರರ 'ಒಡಲಾಳ' ಕಾದಂಬರಿಯನ್ನು ಕುರಿತು ವಿವರಣಾತ್ಮಕ ರೀತಿಯಲ್ಲಿ ಚರ್ಚಿಸಿದ್ದಾರೆ. ಇದು ಪರಿಚಯಾತ್ಮಕ ಮಾದರಿಯಲ್ಲೂ ಇದೆ. ಇದನ್ನು ಹೊರತುಪಡಿಸಿದರೆ ನಂಜನಗೂಡಿನ ಭಾಷಾ ಬಳಕೆಯ ವಿಶಿಷ್ಟತೆಯನ್ನು ಕ್ವಚಿತ್ತಾಗಿ ಪ್ರಸ್ತಾಪಿಸಲಾಗಿದೆ. 'ಒಡಲಾಳ'ದ ಬಗ್ಗೆ ಪುರುಷೋತ್ತಮ ಬಿಳಿಮಲೆಯವರು ಹೀಗೆ ಅಭಿಪ್ರಾಯ ಪಡುತ್ತಾರೆ. 'ದಲಿತ ಕುಟುಂಬವೊಂದರ ಬಡತನ, ಮಾನವೀಯತೆ, ಆಸೆ–ಆಕಾಂಕ್ಷೆಗಳ, ಕೌಟುಂಬಿಕ ಕಲಹಗಳ ಪುಟ್ಟ ವಿಶ್ವವನ್ನು ಈ ಕೃತಿ ತೆರೆದಿಡುತ್ತದೆ. ಮೇಲ್ನೋಟಕ್ಕೆ ವೈನೋದಿಕ ಪ್ರಪಂಚದಂತೆ ಕಾಣುವ ಈ ಕಾದಂಬರಿಯು ಗರ್ಭದಲ್ಲಿ ವಿಷಾದವನ್ನೇ ಧರಿಸಿದೆ. ಸಾಕವ್ವ ಎಂಬ ಮುದುಕಿಯೊಬ್ಬಳು ಕಳೆದುಕೊಂಡ ಹುಂಜವನ್ನು ಹುಡುಕುವಲ್ಲಿಂದ ಆರಂಭವಾಗುವ ಕಾದಂಬರಿ, ಸಾಕವ್ವಳ ನಿರಂತರ ದುಃಖವನ್ನು ನಮ್ಮ ಮುಂದಿರಿಸಿ ಮೌನವಾಗುತ್ತದೆ. ಆಕೆಗೆ ಕೊನೆಗೂ ಹುಂಜ ದೊರೆಯುವುದಿಲ್ಲ ಕಾದಂಬರಿ ಬೆಳೆದಂತೆ, ಬೆಳೆಯುತ್ತಿದ್ದಂತೆ, ಸಾಕವ್ವನ ಕೋಳಿಯ ಹುಡುಕಾಟ, ಆಕೆ ಕಳೆದುಕೊಂಡ ಅಥವಾ ಆಕೆಯಿಂದ, ಕಸಿದುಕೊಳ್ಳಲಾದ ಜೀವನ ಪ್ರೀತಿಗಾಗಿ ಆಕೆಯೇ ನಡೆಯಿಸುವ ಹುಡುಕಾಟವೆಂಬಂತೆ ತೋರುತ್ತದೆ. ಆಕೆಯ ಕುಟುಂಬವೂ ಇಂಥ ಹುಡುಕಾಟದ ಹಾದಿಯಲ್ಲಿ ಆಕೆಗೆ ಸಹಭಾಗಿಗಳಾಗುತ್ತಾರೆ. ಮಹಾದೇವ ಅವರು, ಪಾತ್ರಗಳನ್ನು ಸರಳೀಕೃತ ಮಾದರಿಗಳಾಗಿ ತಾರದೆ, ಒಂದೊಂದು ವ್ಯವಸ್ಥೆಯೊಳಗಿನ ವಿಕಾರಗಳನ್ನು ಮತ್ತು ನೋವುಗಳನ್ನು ವ್ಯಂಗ್ಯವಾಗಿ ಪ್ರಕಟಿಸಿದ್ದಾರೆ ಎಂಬ ಸಾಲುಗಳನ್ನು ಎ.ಎಚ್.ಚಂದ್ರೇಖರ್ ಅವರು

ತಮ್ಮ ಸಂಶೋಧನಾ ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಇವರು ವಿಮರ್ಶಕರ ಹೇಳಿಕೆಗಳನ್ನು ಹೆಚ್ಚಾಗಿ ತೆಗೆದುಕೊಂಡಿದ್ದಾರೆ.

'ಗತಿ' ಕಾದಂಬರಿಯನ್ನು ಕುರಿತು ವಿವರಣಾತ್ಮಕ ವಿಧಾನ ಮತ್ತು ಪರಿಚಯಾತ್ಮಕ ವಿಧಾನವನ್ನು ಅನುಸರಿಸಿದ್ದಾರೆ. ಅದರ ಜೊತೆಗೆ 'ಗತಿ' ಕಾದಂಬರಿಯನ್ನು ಕುರಿತು ಮಲ್ಲಿಕಾ ಘಂಟಿಯವರ ಮಾತುಗಳನ್ನು ಉಲ್ಲೇಖಿಸಿದ್ದಾರೆ. 'ಗತಿ' ಕಾದಂಬರಿಯಲ್ಲಿ ತೀವ್ರತರವಾದ ಪ್ರತಿಭಟನೆಯಿದೆ. ಈ ಕಾದಂಬರಿಯ ಹೆಣ್ಣುಗಳೆಲ್ಲ ವ್ಯವಸ್ಥೆಯ ಜೊತೆಗೆ ಮುಖಾಮುಖಿಯಾಗಿ ನಿಲ್ಲುತ್ತಾರೆ. ಹೀಗೆ ಮುಖಾಮುಖಿಯಾಗಿ ನಿಲ್ಲುವ ಹೆಣ್ಣುಗಳಿಗೆ ಅವರ ದುಡಿಮೆಯ ಆರ್ಥಿಕ ಬಲ ಕಾರಣವೆನ್ನಬಹುದು. ಇವತ್ತಿಗೂ ಜಮೀನ್ದಾರಿಕೆಯ ಕೋಟೆಕೊತ್ತಲದೊಳಗೆ ಬೆಳಕು ಕಾಣದೆ ಕತ್ತಲ ಲೋಕದಲ್ಲಿ ಮತ್ತು ಗಂಡಿನ ಹಿಂದೆ ಕುಬ್ಜಗೊಂಡಿರುವ ಹೆಣ್ಣುಗಳು ಸಂಘರ್ಷಕ್ಕೆ ನೇರವಾಗಿ ಮುಖಾಮುಖಿಯಾಗಿರುವುದು ವಿರಳ. ಆದರೆ ಅದೇ ದುಡಿಯುವ ಮಹಿಳೆಯರಲ್ಲಿ ಈ ಗಟ್ಟಿತನವಿರುತ್ತದೆ. 'ಗತಿ' ಕಾದಂಬರಿಯಲ್ಲಿ ಸೋನಿ ಮತ್ತು ಲಚ್ಮಿಯರು ಪಂಚರ ತೀರ್ಮಾನಕ್ಕೆ ಎದುರಾಡುವಷ್ಟು ಮತ್ತು ಆ ತೀರ್ಮಾನವನ್ನು ತಿರಸ್ಕರಿಸುವಷ್ಟು ಧೈರ್ಯಶಾಲಿಗಳು. ಸೋನಿ ಪಂಚರ ಎದುರಿನಲ್ಲಿಯೇ ತನ್ನ ಗಂಡನನ್ನು ನಿರಾಕರಿಸುತ್ತಾಳೆ ಮತ್ತು ತಾಳಿಯನ್ನು ಕಿತ್ತು ಬಿಸಾಡುತ್ತಾಳೆ. 'ಒಂದು ಸಲ ಹೆಣ್ಣನ್ನು ತನ್ನ ಒಡೆತನಕ್ಕೆ ಒಪ್ಪಿಸಿಕೊಂಡ ಗಂಡು ಅದನ್ನು ಬಿಟ್ಟುಕೊಡುವ ಪ್ರಶ್ನೆಯೇ ಹುಟ್ಟಲ್ಲ. ಹೆಣ್ಣು ಎಷ್ಟೇ ಗಂಡನನ್ನು ನಿರಾಕರಿಸಿದರೂ ಸಮಾಜ ಅದನ್ನು ಒಪ್ಪುವುದಿಲ್ಲ'. ಎಂಬಂತಹ ಮಾತುಗಳನ್ನು ತೆಗೆದುಕೊಂಡಿದ್ದಾರೆ. ಉಳಿದಂತೆ 'ಗತಿ' ಕಾದಂಬರಿಯ ಸ್ವಲ್ಪ ಭಾಗವನ್ನು ಅಲ್ಲಿ ಸೇರಿಸಿದ್ದಾರೆ. 'ಗತಿ' ಕಾದಂಬರಿಯನ್ನು ಕುರಿತು ವಿಶ್ಲೇಷಣಾತ್ಮಕ ವಿಧಾನವಾಗಲೀ, ಸಂಶೋಧನಾ ಪ್ರಧಾನ ಓದಾಗಲೀ ಕಾಣಸಿಗುವುದಿಲ್ಲ.

'ಒಡಲಾಳ' ಕಾದಂಬರಿಯನ್ನು ಕುರಿತು ಪಿ.ಲಂಕೇಶ್ ಅವರ ಅಭಿಪ್ರಾಯವನ್ನು ಸಂಶೋಧಕರು ಉಲ್ಲೇಖಿಸಿದ್ದಾರೆ. 'ಮುದುಕಿ ಸಾಕವ್ವನ ಹುಂಜ ತಪ್ಪಿಸಿಕೊಂಡಿದೆ. ಇದು ಆಕೆಯ ಸಾವು ಬದುಕಿನ ಪ್ರಶ್ನೆಯಾದರೂ ಬೇರೆಯವರಿಗೆ ಆಕೆ ಹುಡುಕುವುದು ಐಲಾಟದಂತೆ ಕಾಣುತ್ತಿದೆ. ದೇವರಿಗೆ ಬಿಟ್ಟ ಕೋಳಿ ನಿಜಕ್ಕೂ ಕಳೆದುಹೋದರೆ ಅದು ಆಕೆಗಾದ ನಷ್ಟದಂತೆಯೇ ದೇವರ ನಿರ್ಲಕ್ಷ್ಯವನ್ನು ತೋರುತ್ತದೆ. ದೇವರನ್ನು ಕುರಿತು ಧೈರ್ಯವಾಗಿ ಮಾತಾಡಬಲ್ಲ ಆಕೆ ಯಮನನ್ನು ಪ್ರಶ್ನಿಸಿ ಓಮ್ಮೆಟ್ಟಿಸಬಲ್ಲಳು. ಆಕೆಗೆ ಈ ಜೀವನವೇ ಎಲ್ಲ ಸಾವು ನರಕಕ್ಕಿಂತ ಕೆಟ್ಟದೆಂದು ಗೊತ್ತು'. ಲಂಕೇಶ್ ಅವರ ಅಭಿಪ್ರಾಯವನ್ನೇ ಮುಂದುವರೆಸುತ್ತಾ 'ಬಡತನದಿಂದಾಗಿ ತಾಯಿ ಸಾಕವ್ವ ತಾಯಿಯ ಸ್ಥಾನವನ್ನು ಪಡೆದಿಲ್ಲ. ಆಕೆಯ ಹಿರಿಯ ಮಗ

ಕಾಳಣ್ಣ ಹಿರಿಯನ ಅಧಿಕಾರ ಹೊಂದಿಲ್ಲ. ಸಾಕವ್ವ ತನ್ನ ಮಕ್ಕಳೊಂದಿಗೆ 'ಆಸ್ತಿ'ಯ ಬಗ್ಗೆ ಜಗಳವಾಡುತ್ತಾಳೆ. ಈ ಜಗಳ ಸೊಸೆಯರ ಜಗಳಕ್ಕೆ ದಾರಿಮಾಡಿಕೊಟ್ಟು ಆಕೆಯ ಮಕ್ಕಳು ಹಾಸ್ಯಾಸ್ಪದರಾಗುತ್ತಾರೆ' ಎಂದು ಲಂಕೇಶರ ಅಭಿಪ್ರಾಯವನ್ನು ಹೇಳಿದ ನಂತರ ಬಸವರಾಜ ಸಬರದರ ಅಭಿಪ್ರಾಯವನ್ನು ಆರಂಭಿಸುತ್ತಾರೆ. 'ಸಾಕವ್ವ ಹುಂಜ ಕಳೆದುಕೊಂಡ ಘಟನೆಯಿಂದ ಪ್ರಾರಂಭವಾಗುವ ಇಲ್ಲಿನ ಕತೆ ಆಕೆ ಮತ್ತೊಂದು ಹುಂಜವನ್ನು ಕಳೆದುಕೊಳ್ಳುವುದರ ಮೂಲಕ ಮುಕ್ತಾಯವಾಗುತ್ತದೆ. ಇಲ್ಲಿನ ಹುಂಜ ಸಾಕವ್ವನ ಬದುಕಿನ ಸಂಕೇತವಾಗಿ ಬಂದಿದೆ. ಕಳೆದುಹೋದ ಹುಂಜವನ್ನು ಪೊಲೀಸರು ಹುಡುಕಿಕೊಡುತ್ತಾರೆಂದು ನಂಬಿ, ಆ ಹುಂಜವನ್ನು ಹಿಡಿದುಕೊಂಡು ಬರಲು ಇದ್ದೊಂದು ಹುಂಜವನ್ನು ಪೊಲೀಸರಿಗೆ ಕೊಟ್ಟುಬಿಡುವುದು ಸಾಕವ್ವನಂತಹ ಮುಗ್ಧ ಜೀವಿಗಳ ಅಸಹಾಯಕತೆಯನ್ನು ತೋರಿಸುತ್ತದೆ' ಎಂಬ ಬಸವರಾಜ ಸಬರದರ ಅಭಿಪ್ರಾಯದ ಜೊತೆಗೆ ತಮ್ಮ ಅಭಿಪ್ರಾಯವನ್ನು ಸೇರಿಸುತ್ತಾರೆ. ಅಂದರೆ ಇದೇ ಕಾದಂಬರಿಯ ಗೌರಮ್ಮ, ಸಣ್ಣಮ್ಮ, ಪುಟ್ಟಗೌರಿ ಸ್ತ್ರೀ ಪಾತ್ರಗಳಿಗೂ ಸ್ವತಂತ್ರವಾದ ಅಸ್ತಿತ್ವವಿಲ್ಲ ಎಂಬುದನ್ನು ಸಂಶೋಧಕರು ಮನಗಂಡಂತೆ ಕಾಣುತ್ತದೆ.

ಇದೇ ಒಡಲಾಳದ ಬಗ್ಗೆ ಡಾ. ಚಕ್ಕರೆ ಶಿವಶಂಕರ್ ಅವರ ಅಭಿಪ್ರಾಯವನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡಿದ್ದಾರೆ. 'ಒಡಲಾಳ ಕಾದಂಬರಿಯಲ್ಲಿ ಜಾನಪದೀಯ ಅಂಶಗಳನ್ನು ಗುರುತಿಸುತ್ತ ಕನ್ನಡ ಸಾಹಿತ್ಯದಲ್ಲಿ ಮೊದಲ ಬಾರಿಗೆ ಕತ್ತಲ ಜಗತ್ತಿನೊಂದಿಗೆ ಮಾತನಾಡಲಾರಂಭಿಸಿದ ಲೇಖಕರ ದೇವನೂರು ಮಹಾದೇವ, ಸಮಾಜದ ಅತ್ಯಂತ ಕೆಳಸ್ತರದ ಮನುಷ್ಯ ಮತ್ತು ಜನಪದರ ಬದುಕು ಮಹಾದೇವರ ಕಥೆಗಳ ವಸ್ತು. ನಾನು ಬರೆಯಲು ಕುಂತಾಗ ಚಿಕ್ಕಂದಿನಿಂದವೇ ಹೆಚ್ಚಿಗೆ ಬರುತ್ತದೆ. ಹಂಗಾಗಿ ದೇವನೂರು ನೆಲ, ವ್ಯಕ್ತಿವಾಸನೆ, ಒಂದಲ್ಲ ಒಂದು ರೀತೀಲಿ ನನ್ನ ಬರವಣಿಗೇಲಿ ಬರುತ್ತದೆ ಎಂದು ತಮ್ಮ ಅಭಿವ್ಯಕ್ತಿ ಪರಿಕರಗಳ ಮೂಲದ ಬಗ್ಗೆ ಹೇಳುವ ಮಹಾದೇವ ಅವರ ಪಾತ್ರಗಳು ಮತ್ತು ಭಾಷಿಕ ನೆಲೆಗಳ ಪ್ರೇರಣೆ ಜಾನಪದದಿಂದ ಎತ್ತಿಕೊಂಡದ್ದೇ ಆಗಿದೆ' ಎಂಬ ಅಭಿಪ್ರಾಯವನ್ನು ಎ.ಎಚ್. ಚಂದ್ರಶೇಖರ್ ಅವರು ಬರೆಯುತ್ತಾರೆ. ಇದರ ನಂತರ ಒಡಲಾಳದ ಕಥೆಯನ್ನು ಉದಾಹರಣೆಗಾಗಿ ತರುತ್ತಾರೆ. ಮುಂದುವರೆಸುತ್ತಾ ಪುರಷೋತ್ತಮ ಬಿಳಿಮಲೆಯವರು ಒಡಲಾಳವನ್ನು ಕುರಿತ 'ಸಾಕವ್ವಳ ಕುಟುಂಬವು ಆಕೆ ಬದುಕುತ್ತಿರುವ ಸಮಾಜದ ಪ್ರಾತಿನಿಧಿಕ ಮತ್ತು ಸಾಂಕೇತಿಕ ರೂಪವೂ ಆಗಿಬಿಡುತ್ತದೆ. ಇಲ್ಲಿ ಮಹಾದೇವರ ಕೃತಿಗೆ ಜನಪದ ವಿನ್ಯಾಸದ ಲೇಪನವು ಇರುವುದನ್ನು ಗುರುತಿಸಬಹುದು. ಇದರೊಂದಿಗೆ ಬಿ.ಎ. ವಿವೇಕರೈ ಅವರು ಒಡಲಾಳದ ಬಗ್ಗೆ ಈ ಅಭಿಪ್ರಾಯವನ್ನು ತಳೆದಿದ್ದಾರೆ. 'ಜನಪದ ಕಥೆಗಳಲ್ಲಿ ಕಥೆಗಳು ಕೊನೆಯಾಗುವಂತೆ ರಾಕ್ಷಸರ

ವಿರುದ್ಧ ಹೋರಾಡಿ ನಾಯಕ ಅಥವಾ ನಾಯಕಿ ಜಯಗಳಿಸುವ ಸಿದ್ಧಮಾದರಿ ಇಂಥ ಕಾದಂಬರಿಗಳಲ್ಲಿ ಇಲ್ಲ. ಆದ್ದರಿಂದಲೇ ಜನಪದ ರೂಪ ಮತ್ತು ವಿನ್ಯಾಸಗಳನ್ನು ಬಳಸಿಕೊಂಡು ಶಿಷ್ಟ ಪರಂಪರೆಗೆ ಬರುವಾಗ ದಲಿತ ಸಾಹಿತ್ಯ ಕೃತಿಗಳು ಯಾವ ಬದಲಾವಣೆಯನ್ನು ಪಡೆಯುತ್ತವೆ ಎನ್ನುವುದನ್ನು ಒಡಲಾಳದ ನಿದರ್ಶನದಿಂದ ಗಮನಿಸಬಹುದು. ಒಂದು ಜಾನಪದ ಹೆಣ್ಣಿನ ಗುಣಗಳಾದ ಮುಗ್ಧತೆ, ಪ್ರೀತಿ, ದುಃಖ ಬೈಗುಳಗಳ ಮೂಲಕ ಪ್ರಕಟವಾಗುವ ರೋಷ ಈ ಗುಣಗಳಿಂದ ಕೂಡಿದ ಸಾಕವ್ವ ತನ್ನ ಮುಗ್ಧತೆಯ ಕಾರಣದಿಂದಾಗಿ ಒಂದು ವ್ಯವಸ್ಥೆಯ ಕ್ರೌರ್ಯಕ್ಕೆ ಒಳಗಾಗಿ ಎಲ್ಲವನ್ನು ಕಳೆದುಕೊಳ್ಳುತ್ತಾಳೆ. ಕೊನೆಯಲ್ಲಿ ಇದ್ದ ಒಂದು ಹುಂಜವನ್ನು ಕೂಡ. ಹೀಗೆ ದಲಿತ ಮುಗ್ಧತೆ, ಜನಪದ ಜಗತ್ತಿನಲ್ಲಿ ಒಂದು ಮೆಚ್ಚುಗೆಯ ಮೌಲ್ಯವಾಗಿದೆ. ಶಿಷ್ಟ ಪ್ರಪಂಚದಲ್ಲಿ ಶೋಷಣೆಗೆ ಒಳಗಾಗುವ ಒಂದು ದೌರ್ಬಲ್ಯವಾಗುತ್ತದೆ. ಆದ್ದರಿಂದಲೇ ಜನಪರವಾದ ಶಿಷ್ಟ ಜಗತ್ತಿಗೆ ಬದಲಾವಣೆ ಹೊಂದುತ್ತಿರುವ ದಲಿತ ಜಗತ್ತಿನ ಬದುಕಿನಲ್ಲಿ ದ್ವಂದ್ವಗಳು ಮತ್ತು ನೋವುಗಳು ಈ ಕಾದಂಬರಿಯ ಮೂಲಕ ಧ್ವನಿತವಾಗಿದೆ' ಎಂಬಂಥ ವಿವೇಕ ರೈ ಅವರ ಮಾತುಗಳನ್ನು ಉಲ್ಲೇಖಿಸಿದ್ದಾರೆ.

ಹೀಗೆ ಒಡಲಾಳ ಕಾದಂಬರಿಯನ್ನು ಕುರಿತು ಸಾಕಷ್ಟು ವಿಮರ್ಶಕರ ಅಭಿಪ್ರಾಯಗಳನ್ನು ಸಂಶೋಧಕರಾದ ಎ.ಎಚ್. ಚಂದ್ರಶೇಖರ್ ಅವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ. ಪ್ರಸ್ತುತ ಈ ಸಂಶೋಧನೆಯಲ್ಲಿ ಎಲ್ಲರ ಅಭಿಪ್ರಾಯಗಳಿಗಿಂತ ಭಿನ್ನವಾದ ಸಂಶೋಧನಾ ಓದಿನ ಮೂಲಕ ಹೊಸದನ್ನು ಹೇಳಲು ಪ್ರಯತ್ನಿಸಲಾಗುವುದು. ಇಷ್ಟನ್ನು ಹೊರತುಪಡಿಸಿದರೆ 'ಗತಿ' ಕಾದಂಬರಿಯಲ್ಲಿನ ಕ್ರೌರ್ಯದ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಇದೇ ಕಾದಂಬರಿಯ ಸ್ತ್ರೀಪಾತ್ರಧಾರಿಣಿ ಲಚ್ಮಿ ಕೂಡಾ ಮಠದಯ್ಯನ ಕ್ರೌರ್ಯಕ್ಕೆ ಬಲಿಯಾಗಿರುವುದನ್ನು ಪ್ರಸ್ತಾಪಿಸಿರುತ್ತಾರೆ. ದೇವರನ್ನು ಅಡ್ಡ ಇಟ್ಟುಕೊಂಡು ಪುರೋಹಿತಶಾಹಿಗಳು ಈ ದೇಶದ ಬಡಜನತೆಯನ್ನು ಹೇಗೆ ಶೋಷಿಸುತ್ತಿದ್ದಾರೆ, ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ. ಗಂಡನೊಡನೆ ಮೈಸೂರು ನೋಡಲು ಹೋದ ಲಚ್ಮಿ, ಗಂಡ, ಮಗುವನ್ನು ಕಾಲರಾ ರೋಗದಿಂದ ಕಳೆದುಕೊಳ್ಳುತ್ತಾಳೆ. ಅವಳ ರೂಪ, ಯೌವ್ವನ ಕಂಡ ಮಠದಯ್ಯ ಅವಳನ್ನು ಅನುಭವಿಸುವುದಕ್ಕೆ ಮಾಡಬಾರದ ಕಸರತ್ತು ಮಾಡಿ ಕಡೆಗೆ ದೇವರು, ಪೊಲೀಸು, ಕೋರ್ಟು ಎಂದು ಹೆದರಿಸಿ ಬುಟ್ಟಿಗೆ ಹಾಕಿಕೊಂಡು ಅವಳ ಯೌವ್ವನವನ್ನು ಹಾಳು ಮಾಡಿ ಕಸವನ್ನು ತಿಪ್ಪೆಗೆ ಎಸೆಯುವಂತೆ ಅವಳನ್ನು ಎಸೆಯುತ್ತಾನೆ ಎಂಬ ಸಾಲುಗಳನ್ನು ಎ.ಎಚ್.ಚಂದ್ರಶೇಖರ್ ಬರೆಯುತ್ತಾರೆ.

ಸಂಶೋಧಕರಾದ ಕವಿತಾರಾಣಿ ಎಂ.ಎಂ. ಅವರ 'ಡಾ.ಯು.ಆರ್. ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ' ಎಂಬ ಮಹಾಪ್ರಬಂಧವನ್ನು ಅಧ್ಯಯನ ಮಾಡಲಾಯಿತು. 'ಪರಂಪರೆ ಮತ್ತು ಆಧುನಿಕತೆ' ಎಂಬ ಅಧ್ಯಾಯದಲ್ಲಿ ಸಂಸ್ಕೃತಿಯೆಂಬುದು ಕೇವಲ ಹಳೆಯದಲ್ಲ, ಪರಂಪರೆಯ ಬೇರುಗಳನ್ನು ತಳಹದಿಯಾಗಿಟ್ಟುಕೊಂಡು ಅಂದಂದಿನ ಆಧುನಿಕತೆಯ ಚಿಗುರುಗಳನ್ನು ತನ್ನಲ್ಲಿ ಸೇರಿಸಿಕೊಳ್ಳುತ್ತದೆ ಎಂಬ ಅಂಶಗಳ ಕಡೆ ಸಂಶೋಧಕಿ ತಮ್ಮ ಗಮನ ಕೇಂದ್ರೀಕರಿಸಿದ್ದಾರೆ. ಇದೇ ಭಾಗದಲ್ಲಿ ನಮ್ಮ ಸಂಸ್ಕೃತಿಯ ಮೇಲಾದ ಪಾಶ್ಚಾತ್ಯರ ಪ್ರಭಾವವನ್ನು ಕುರಿತು ಚರ್ಚಿಸಿದ್ದಾರೆ. 'ಸಮಾಜ ಮತ್ತು ಜಾತಿವ್ಯವಸ್ಥೆ' ಎಂಬ ಭಾಗದಲ್ಲಿ ಬ್ರಾಹ್ಮಣ ಮತ್ತು ಶೂದ್ರ, ಹೆಣ್ಣು ಮತ್ತು ಗಂಡು, ವ್ಯಕ್ತಿ ಮತ್ತು ಸಮಾಜ ಮುಂತಾದವುಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. 'ಹೆಣ್ಣು ಮತ್ತು ಗಂಡು' ಎಂಬ ಭಾಗದಲ್ಲಿ ಯು.ಆರ್. ಅನಂತಮೂರ್ತಿಯವರ ಕಥನ ಸಾಹಿತ್ಯದ ವಿಚಾರಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. 'ಪ್ರಶ್ನೆ', 'ಘಟಶ್ರಾದ್ಧ', 'ಸೂರ್ಯನ ಕುದುರೆ', 'ಅಕ್ಕಯ್ಯ', 'ಪ್ರಸ್ತ' ಕಥೆಗಳನ್ನು ಪ್ರಮುಖವಾಗಿ ಪರಿಗಣಿಸಿದ್ದಾರೆ.

ಕಥೆಗಳ ನಂತರ ಕಾದಂಬರಿಗಳನ್ನು ಪರಿಗಣಿಸಿದ್ದಾರೆ. ಕಾದಂಬರಿಗಳಲ್ಲಿ 'ಸಂಸ್ಕಾರ'ದ ಚಂದ್ರಿಯ ಮೇಲೆ ಗಮನ ಕೇಂದ್ರೀಕರಿಸಿದ್ದಾರೆ. ನಾರಾಯಣಪ್ಪನ 'ಬ್ರಾಹ್ಮಣ್ಯ' ಮೀರಿದ ಜೀವನ ಕ್ರಮವನ್ನು ವಿರೋಧಿಸುವ ಪ್ರಾಣೇಶಾಚಾರ್ಯ ಕೊನೆಗೆ ಚಂದ್ರಿಯೊಡನೆ ಸಂಬಂಧ ಬೆಳೆಸುತ್ತಾನೆ. ಶೂದ್ರ ಸ್ತ್ರೀಯರ ಸಂಗವನ್ನು ಬಯಸುವ 'ಬ್ರಾಹ್ಮಣ ಪುರುಷರು' ಅವರನ್ನು ಕೇವಲ ಭೋಗಕ್ಕಾಗಿ ಇಷ್ಟಪಡುತ್ತಾರೆಯೇ ಹೊರತು ಜೀವನ ಸಾಗಿಸಲು ಅಲ್ಲ. ಹೆಂಡತಿಯನ್ನು ಇಷ್ಟಪಡದ ಶ್ರೀಪತಿಯು ಶೂದ್ರ ಬೆಳ್ಳಿಯು ಮಲಗಲು ಯೋಗ್ಯವೇ ಹೊರತು ಮಾತನಾಡಲು ಅಲ್ಲ ಎಂಬುದು ಅವನು ಹೆಣ್ಣನ್ನು ಗ್ರಹಿಸಿರುವ ರೀತಿಯನ್ನು ಸ್ಪಷ್ಟಪಡಿಸುತ್ತದೆ. ಇಲ್ಲಿನ ಪುರುಷರು ಬ್ರಾಹ್ಮಣ ಸ್ತ್ರೀಗಾಗಲೀ ಅಥವಾ ಶೂದ್ರ ಸ್ತ್ರೀಗಾಗಲೀ ಒಳ್ಳೆಯ ಸ್ಥಾನವನ್ನು ಕಲ್ಪಿಸಿಲ್ಲ.

ಹೆಣ್ಣು ಕೌಟುಂಬಿಕ ಆವರಣದ ಮಿತಿಯಲ್ಲಿ ಬದುಕಬೇಕೆನ್ನುವ ಪುರುಷರು ತಾವು ಸ್ವತಂತ್ರವಾಗಿರಬೇಕೆಂದು ಬಯಸುವ ಪಾತ್ರಗಳನ್ನು 'ಭಾರತೀಪುರ' ಕಾದಂಬರಿಯಲ್ಲಿ ಕಾಣಬಹುದು. ಇಲ್ಲಿನ ಕೆಲವು ಪುರುಷರು ಬೆಳಿಗ್ಗೆ ತಿಂದ ತಿಂಡಿಯನ್ನು ಕರಗಿಸಿಕೊಳ್ಳಲು ಇಡೀ ದಿನ ಹರಟೆಗೆ ಕೂಡುತ್ತಾರೆ. ಅವರ ಹೆಂಗಸರು ಹೊಗೆ ತುಂಬಿದ ಒಲೆಯ ಮುಂದೆ ಇಡೀ ದಿನ ಕೂಡಬೇಕಾಗುತ್ತದೆ. ಜಗನ್ನಾಥನು ಜೋಯಿಸರ ಸೊಸೆ ನಾಗಮಣಿಯನ್ನು ಕಂಡು ಈ ರೀತಿ ಚಿಂತಿಸುತ್ತಾನೆ. ಮೈಯಲ್ಲಿ ಅರಳುತ್ತಿರುವ ಸೌಂದರ್ಯದ ಪರಿವೆ ಇಲ್ಲದ ಇವಳು ಸದಾ ಅಡಿಗೆ

ಮನೆಯಲ್ಲಿ ರುಚಿ-ರುಚಿಯಾದ ಕೂಳು ಬೇಯಿಸಲೆಂದೆ ಬದುಕುವ ಹೆಂಗಸರ ಗುಂಪಿಗೆ ಸೇರುತ್ತಾಳೆ ಎಂದುಕೊಳ್ಳುತ್ತಾನೆ.

'ನಾಗಮಣಿ ಅರಳಬೇಕೆಂದು, ಭಾರತೀಪುರದ ಪೌರರು ಕ್ರಿಯಾಶೀಲರಾಗಬೇಕೆಂದು ಕುದಿಯುವ ಜಗನ್ನಾಥ ಸ್ವತಃ ತಾನೇ ಕ್ರಿಯಾಶೀಲನಾಗಿದ್ದಾನೆಯೇ ಎಂದು ಯೋಚಿಸುವುದೇ ಇಲ್ಲ. ಆದರೆ, ತನ್ನ ಸ್ನೇಹದ ನಡವಳಿಕೆಯಿಂದ ನಾಗಮಣಿಯನ್ನು ಆಕರ್ಷಿಸಲು ಪ್ರಯತ್ನಿಸುವಾಗಲೇ ಭಾರತೀಪುರದ ಜಡತ್ವ, ನಿರ್ವೀರ್ಯತೆ, ನೋವು, ಕ್ರಿಯಾಹೀನ ಬದುಕಿಗೆ ಜೀವಂತ ಸಾಕ್ಷಿಯಾಗುವ ಅವಳ ಸಾವು ಅವನಿಗೆ ಆಘಾತವುಂಟು ಮಾಡುತ್ತದೆ. ಆದರೆ ಇಂತಹ ನೋವನ್ನು ಸೀಳಿಕೊಂಡು ಬರಬೇಕಾದ ಬದಲಾವಣೆ ಆ ಸಮಾಜದ ಅಂತಃಸತ್ವವನ್ನೇ ಅವಲಂಬಿಸಿದೆಯಾದ್ದರಿಂದ ಜಗನ್ನಾಥ ಮತ್ತೆ ಇಲ್ಲಿ ಅಸಹಾಯಕನಾಗುತ್ತಾನೆ.' ಮಾರ್ಗರೇಟ್‌ಳೊಂದಿಗೆ ಸಂಬಂಧವನ್ನು ಬೆಳೆಸಿರುವ ಜಗನ್ನಾಥ ಅವಳು ಬೇರೆಯವರೊಂದಿಗೆ ಸಲಿಗೆಯಿಂದಿರುವುದನ್ನು ಇಷ್ಟಪಡುವುದಿಲ್ಲ. ಬದಲಾವಣೆಯನ್ನು ಬಯಸುವ ಜಗನ್ನಾಥ ತಾಯಿಯ ಅನೈತಿಕ ಸಂಬಂಧದ ಬಗ್ಗೆ ತಿಳಿದಾಗ ಮಾನಸಿಕ ಸಂಘರ್ಷವನ್ನು ಎದುರಿಸುತ್ತಾನೆ. ಹೀಗೆ ಹೆಣ್ಣು ಮತ್ತು ಗಂಡಿನ ವಿಚಾರಗಳು ಪರಿಸ್ಥಿತಿಗೆ ತಕ್ಕಂತೆ ಕಾದಂಬರಿಯಲ್ಲಿ ಸಹಜವಾಗಿ ಮೂಡಿಬಂದಿವೆ. ಭಾರತೀಪುರ ಕಾದಂಬರಿಯನ್ನು ದಲಿತ ಮಹಿಳೆ ಕಾವೇರಿ ದೃಷ್ಟಿಕೋನದಿಂದ ಇವರು ಪ್ರಸ್ತಾಪಿಸಿಲ್ಲ. 'ಸಂಸ್ಕಾರ' ಕಾದಂಬರಿಯನ್ನು ಕುರಿತು ಹೆಚ್ಚು ಪ್ರಸ್ತಾಪಿಸಿದ್ದಾರಾದರೂ ಅಲ್ಲಿ ಶೂದ್ರ ಮಹಿಳೆಯಾದ ಚಂದ್ರಿಯನ್ನೇ ಕೇಂದ್ರೀಕರಿಸಿದ್ದಾರೆ. ಅದೇ ಕಾದಂಬರಿಯಲ್ಲಿನ ದಲಿತ ಮಹಿಳೆಯಾದ ಬೆಳ್ಳಿಯ ಕಡೆ ಹೆಚ್ಚು ಗಮನ ಹರಿಸಿಲ್ಲ. ಈ ಎರಡು ಕಾದಂಬರಿಗಳನ್ನು ಹೊರತುಪಡಿಸಿ ಪ್ರಸ್ತುತ ಸಂಶೋಧನೆಗೆ ಸಂಬಂಧಪಡದ 'ಅವಸ್ಥೆ', 'ದಿವ್ಯ' ಕಾದಂಬರಿಗಳಲ್ಲಿನ ಹೆಣ್ಣು-ಗಂಡಿನ ಸಂಬಂಧವನ್ನು ಕಾಮ, ಪ್ರೇಮ, ವಿಧವೆ, ಪತ್ನಿಯಾಗಿ, ದಾಸಿಯಾಗಿ, ವೇಶ್ಯೆಯಾಗಿ ನೋಡಿದ್ದಾರೆ. ಉಳಿದ ಭಾಗದಲ್ಲಿ 'ಬ್ರಾಹ್ಮಣ' ಹೆಣ್ಣನ್ನು ಅನಂತಮೂರ್ತಿಯವರ ಕಥಾ ಸಾಹಿತ್ಯ ಗುರುತಿಸಿರುವ ಕ್ರಮವನ್ನು ಹೇಳುತ್ತಾರೆ.

'ವ್ಯಕ್ತಿ ಮತ್ತು ಸಮಾಜ' ಎಂಬ ಭಾಗದಲ್ಲಿ 'ಘಟಶ್ರಾದ್ಧ', 'ಮೌನಿ', 'ಸೂರ್ಯನ ಕುದುರೆ', 'ಪ್ರಕೃತಿ', 'ಅಕ್ಕಯ್ಯ' ಕಥೆಗಳನ್ನು ಆಧರಿಸಿ ಅಲ್ಲಿನ ಸ್ತ್ರೀಪಾತ್ರಗಳ ಮೂಲಕ ಗುರುತಿಸುತ್ತಾರೆ. ನಂತರ 'ಸಂಸ್ಕಾರ' ಕಾದಂಬರಿಯ ಪ್ರಾಣೇಶಾಚಾರ್ಯರಿಂದ, ಭಾರತೀಪುರ ಕಾದಂಬರಿಯ ಜಗನ್ನಾಥನಿಂದ, ಅವಸ್ಥೆ ಕಾದಂಬರಿಯಲ್ಲಿನ ಕೃಷ್ಣಪ್ಪನಿಂದ 'ದಿವ್ಯ' ಕಾದಂಬರಿಯಲ್ಲಿನ 'ಅಕ್ಕು' ಪಾತ್ರಗಳಿಂದ ವ್ಯಕ್ತಿ ಮತ್ತು ಸಮಾಜದ ಸಂಬಂಧವನ್ನು ಚರ್ಚಿಸುತ್ತಾರೆ. 'ನಾರಣಪ್ಪನ ಮೂಲಕ ಪ್ರತ್ಯಕ್ಷವಾಗಿ ಸಾಮಾಜಿಕ ಮತ್ತು ಧಾರ್ಮಿಕ

ಮೌಲ್ಯಗಳನ್ನು ಪ್ರಶ್ನಿಸುತ್ತಾರೆ. ಜಾತಿ ಸಮುದಾಯದಲ್ಲಿ ನಡೆಯುವ ಒಳ ಬಂಡಾಯ ನಾರಣಪ್ಪನದು ಎಂದಿದ್ದಾರೆ. ಇವು ಪ್ರಸ್ತುತ ಸಂಶೋಧನೆಗೆ ಸಂಬಂಧಪಡುವುದಿಲ್ಲ. ಇವರು ನಾರಣಪ್ಪ ಮತ್ತು ಪ್ರಾಣೇಶಾಚಾರ್ಯ ಪಾತ್ರಗಳ ಮೂಲಕ ಬೇರೆಬೇರೆ ಅಧ್ಯಾಯಗಳಿಗೆ ಉತ್ತರಗಳನ್ನು ಹುಡುಕುತ್ತಾರೆ. ದಲಿತ ಮಹಿಳೆಯರಾದ ಚಂದ್ರಿ ಮತ್ತು ಬೆಳ್ಳಿಯರ ಶೋಷಣೆಯನ್ನಾಗಲೀ ಅದಕ್ಕೆ ಕಾರಣಗಳನ್ನಾಗಲೀ ಶೋಧಿಸಿಲ್ಲ. ಇದು ಇವರ ಅಧ್ಯಾಯಗಳ ವಿಭಾಗೀಕರಣದ ವ್ಯಾಪ್ತಿಗೆ ಬರುವುದಿಲ್ಲ.

ನಂತರ 'ವ್ಯವಸ್ಥೆ ಮತ್ತು ವಾಸ್ತವ', 'ವ್ಯಕ್ತಿಗಳ ತಾಕಲಾಟ' ಎಂಬ ಉಪ ಅಧ್ಯಾಯಗಳಲ್ಲೂ ನಾರಣಪ್ಪ ಮತ್ತು ಪ್ರಾಣೇಶಾಚಾರ್ಯರನ್ನು ಮುಖಾಮುಖಿಯಾಗಿಸಿ ಆ ಹಿನ್ನೆಲೆಯಲ್ಲೇ ನೋಡುತ್ತಾರೆ. ಬೆಳ್ಳಿ, ಚಂದ್ರಿಯರಿಗೆ ಪೂರ್ಣ ಆದ್ಯತೆ ಇಲ್ಲ. ವೈಚಾರಿಕತೆ ಮತ್ತು ಸ್ವಾತಂತ್ರ್ಯ ಎಂಬ ಅಧ್ಯಾಯದಲ್ಲಿ ಜೀವನ ಮತ್ತು ಸಿದ್ಧಾಂತ, ಬದುಕು ಮತ್ತು ಸಾವಿನ ಪ್ರಶ್ನೆ, ಸಾಫಲ್ಯ ಸಾಧ್ಯತೆ ಮತ್ತು ನೈತಿಕತೆ ಮುಂತಾದವುಗಳನ್ನು ಕಥನದ ಪಾತ್ರಗಳಿಂದ ಸಂಶೋಧನೆಗೊಳಪಡಿಸಿದ್ದಾರೆ.

ಎ.ರಘುರಾಂ ಅವರ 'ನವ್ಯೋತ್ತರ ಕಾದಂಬರಿಗಳು ಒಂದು ಅಧ್ಯಯನ' ಎಂಬ ಮಹಾಪ್ರಬಂಧದ ಕಾದಂಬರಿ: ಸ್ವರೂಪ–ಸಾರ್ವತ್ರಿಕ ಸಂವಾದ ಎಂಬ ಅಧ್ಯಾಯದಲ್ಲಿ ಕಾದಂಬರಿ: ಕಲ್ಪನೆ, ಕಥನ, ಕಾದಂಬರಿ: ಪ್ರಗತಿಶೀಲತೆಯ ಹಾದಿ, ಕಾದಂಬರಿ: ನವ್ಯ ಸಂವೇದನೆ, ಕಾದಂಬರಿ: ಹೊಸಹೆಜ್ಜೆಗಳು ಎಂಬ ಶೀರ್ಷಿಕೆಗಳಡಿಯಲ್ಲಿ ಕಾದಂಬರಿ ಕುರಿತು ಸ್ಥೂಲ ಚರ್ಚೆಯನ್ನು ಮಾಡಿದ್ದಾರೆ. ಜೊತೆಗೆ ನವ್ಯೋತ್ತರ ಸ್ವರೂಪ ಮತ್ತು ಹಿನ್ನೆಲೆಯನ್ನು ಕುರಿತು ಚರ್ಚಿಸಿದ್ದಾರೆ. ನವ್ಯ: ಅಪರಿಪೂರ್ಣ ಪ್ರಶ್ನೆ, ನವ್ಯೋತ್ತರ: ಹೊಸಹೆಜ್ಜೆ ಪರಿವರ್ತನೆ, ಲಕ್ಷಣಗಳು, ನವ್ಯೋತ್ತರ: ಪಾಶ್ಚಾತ್ಯ ಸಂದರ್ಭವನ್ನು ಕುರಿತು ತಮ್ಮ ವಿಚಾರಗಳನ್ನು ಮಹಾಪ್ರಬಂಧದಲ್ಲಿ ಸಾದರಪಡಿಸಿದ್ದಾರೆ. ನವ್ಯೋತ್ತರ ಕಾದಂಬರಿಗಳು: ಹಿನ್ನೆಲೆ, ತಾತ್ವಿಕ ಸ್ವರೂಪ ಮತ್ತು ಒಲವು ನಿಲುವುಗಳು ಎಂಬ ಅಧ್ಯಾಯದಲ್ಲಿ ಹಿನ್ನೆಲೆ, ತಾತ್ವಿಕತೆ, ಒಲವು–ನಿಲುವು ಇತ್ಯಾದಿಗಳನ್ನು ಕುರಿತು ಚರ್ಚಿಸಿದ್ದಾರೆ. ನವ್ಯೋತ್ತರ ಕಾದಂಬರಿಗಳು: ಪ್ರಭಾವ–ಪರಂಪರೆ–ಪ್ರಯೋಗ ಎಂಬ ಅಧ್ಯಾಯದಲ್ಲಿ ಸಾಹಿತ್ಯದಲ್ಲಿ ಪ್ರಭಾವ, ಅಸ್ತಿತ್ವವಾದ, ಲೋಹಿಯಾವಾದ, ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ, ನವಮಾನತಾವಾದ, ಜೆ.ಪಿ. ಆಂದೋಲನ, ವಾಸ್ತವತಾವಾದ ಮುಂತಾದವುಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. ಹಾಗೆಯೇ ನವ್ಯೋತ್ತರ ಕಾದಂಬರಿಗಳು:ವಸ್ತು, ಭಾಷೆ, ತಂತ್ರ, ಸಾರ್ವತ್ರಿಕ ಸಂವಾದ: ವಸ್ತು–ಭಾಷೆ–ತಂತ್ರ, ನವ್ಯೋತ್ತರ: ಸ್ವಗತ–ಸಂವಾದಗಳ ಚರ್ಚೆ ಮಾಡಿದ್ದಾರೆ.

'ಪ್ರಾತಿನಿಧಿಕ ನವ್ಯೋತ್ತರ ಲೇಖಕರು ಮತ್ತು ಅವರ ಕಾದಂಬರಿಗಳು' ಎಂಬ ಅಧ್ಯಾಯದಲ್ಲಿ

ಕೆ.ಪಿ. ಪೂರ್ಣಚಂದ್ರ ತೇಜಸ್ವಿ : ಹೊಸದಿಗಂತದೆಡೆಗೆ

ಪಿ. ಲಂಕೇಶ್ : ಒಳತುಡಿತಗಳ ಶೋಧ

ಯು.ಆರ್. ಅನಂತಮೂರ್ತಿ : ಪರಂಪರೆ ಹಾಗೂ ಪರಿವರ್ತನೆ

ಶಾಂತಿನಾಥ ದೇಸಾಯಿ : ಸಂಬಂಧಗಳ ಮುಕ್ತತೆ

ಚಂದ್ರಶೇಖರ ಕಂಬಾರ : ಜಾನಪದದ ಜೀವಸೆಲೆ

ಬಿ.ವಿ. ವೈಕುಂಠರಾಜು : ನಾಗರಿಕತೆ ಮತ್ತು ಮಾಯಾಜಾಲ

ಶ್ರೀಕೃಷ್ಣ ಆಲನಹಳ್ಳಿ : ಬಾಲ್ಯ ಸಂವೇದನೆಯಿಂದ ಪ್ರಬುದ್ಧ ವೈಚಾರಿಕತೆಯೆಡೆಗೆ

ದೇವನೂರ ಮಹಾದೇವ : ಅರಿವಿನ ಸ್ಫೋಟ

ಯಶವಂತ ಚಿತ್ತಾಲ : ನಿರಪರಾಧಿಯಾತನೆ ಹಾಗೂ ಮೃತ್ಯು

ಹೀಗೆ ವಿಭಾಗ ಮಾಡಿಕೊಂಡು ಒಬ್ಬೊಬ್ಬ ಕವಿಯಲ್ಲೂ ಒಂದೊಂದು ವಿಶೇಷತೆಯನ್ನು ಕುರಿತು ಸಂಶೋಧನೆಗೊಳಪಡಿಸಿದ್ದಾರೆ. ಅನಂತಮೂರ್ತಿಯವರ ಸಂಸ್ಕಾರ, ಭಾರತೀಪುರ, ಅವಸ್ಥೆ, ಭವ, ದಿವ್ಯ ಕಾದಂಬರಿಗಳ ಮೂಲಕ ಹಲವು ವಿಚಾರಗಳನ್ನು ಶೋಧಿಸಿದ್ದಾರೆ. ಆದರೆ ಭಾರತೀಪುರ ಮತ್ತು ಸಂಸ್ಕಾರ ಕಾದಂಬರಿಗಳನ್ನು ಜಗನ್ನಾಥನ ಕ್ರಾಂತಿಕಾರಕ ಆದರ್ಶಗಳ ದೃಷ್ಟಿಯಲ್ಲಿ ನೋಡಲಾಗಿದೆ. ದೇವನೂರ ಮಹಾದೇವ : ಅರಿವಿನ ಸ್ಫೋಟ ಎಂಬಲ್ಲಿ ದೇವನೂರರ ಸಮಗ್ರ ಸಾಹಿತ್ಯವನ್ನು ಪರಿಗಣಿಸಲಾಗಿದೆ. ಒಡಲಾಳವನ್ನು ತುಂಬಾ ವಿವರವಾಗಿ ಸಾರಾಂಶಾತ್ಮಕವಾಗಿ ಹೇಳಲಾಗಿದೆ. ಹಾಗೂ ಕಾದಂಬರಿಯಲ್ಲಿ ಅಭಿವ್ಯಕ್ತವಾಗಿರುವ ಸಾಮಾಜಿಕ ವಾಸ್ತವ–ಮಾನಸಿಕ ಸಂಘರ್ಷವನ್ನು ಗುರುತಿಸಿದ್ದಾರೆ.

'ಸ್ವಾತಂತ್ರ್ಯ ಪೂರ್ವ ಹೊಸಗನ್ನಡ ಕಥನ ಸಾಹಿತ್ಯದಲ್ಲಿ ದಲಿತ ಲೋಕ' ಎಂಬ ಗಂಗಭೈರಯ್ಯ ಆರ್. ಅವರ ಸಂಶೋಧನಾ ಮಹಾಪ್ರಬಂಧದಲ್ಲಿ ಕಥನ ಸಾಹಿತ್ಯದ ಹುಟ್ಟು ಮತ್ತು ಬೆಳವಣಿಗೆಗೆ, ಸಮಕಾಲೀನ ಸಾಮಾಜಿಕ ವಾಸ್ತವದ ಅಂತರ್ ಸಂಬಂಧಗಳು ಎಂಬಲ್ಲಿ ವರ್ಣ ವರ್ಗದ ಗ್ರಹಿಕೆ ವಿಧಾನ, ಆಧುನಿಕ ಶಿಕ್ಷಣದಿಂದ ಸಮುದಾಯದ ನಡವಳಿಕೆಯ ಗ್ರಹಿಕೆ ವಿಧಾನ, ಸಮುದಾಯದೊಳಗಿನ ನಂಬಿಕೆ ನಡವಳಿಕೆಯ ಗ್ರಹಿಕೆ ವಿಧಾನ, ಧರ್ಮ ಧಾರ್ಮಿಕತೆಯ ಗ್ರಹಿಕೆ ವಿಧಾನ, ಸಮಾಜ ಸುಧಾರಣೆಯ ಬಗೆಗೆ ನೇರ ಗ್ರಹಿಕೆ ವಿಧಾನ ಮುಂತಾದ ವಿಚಾರಗಳನ್ನು ಕುರಿತ ಚರ್ಚೆ ಮಾಡಿದ್ದಾರೆ. ನಂತರ 'ಆಳು–ಒಡೆಯನ

ಸಂಬಂಧಗಳು', 'ಹೆಣ್ಣು-ಗಂಡಿನ ಸಂಬಂಧಗಳು' ಎಂಬ ಭಾಗದಲ್ಲಿ ವ್ಯವಸ್ಥೆಯ ದೌರ್ಜನ್ಯದ ನೆಲೆಯಲ್ಲಿ ಹೆಣ್ಣು ಮತ್ತು ಗಂಡಿನ ಸಂಬಂಧ, ಮಾನಸಿಕ ಅಪೇಕ್ಷೆಯ ನೆಲೆಯಲ್ಲಿ ಹೆಣ್ಣು ಮತ್ತು ಗಂಡಿನ ಸಂಬಂಧ, ಬದುಕಿನ ಭಾಗವಾಗಿ ಹೆಣ್ಣು ಮತ್ತು ಗಂಡಿನ ಸಂಬಂಧ ಮುಂತಾದವುಗಳನ್ನು ಕುರಿತು ಸಂಶೋಧನೆಗೊಳಪಡಿಸಿದ್ದಾರೆ.

'ದಲಿತ ಮತ್ತು ದಲಿತೇತರ ಪಾತ್ರಗಳ ಬೆಳವಣಿಗೆ ಸ್ವರೂಪ 'ದಲಿತ ಲೋಕದ ನಿರೂಪಣಾ ವಿಧಾನ' ವ್ಯವಸ್ಥೆಗೆ ಪ್ರತಿರೋಧ ಮತ್ತು ರಾಜಿ, ಸ್ವಾತಂತ್ರೋತ್ತರ ಕಥನ ಸಾಹಿತ್ಯದಲ್ಲಿ ದಲಿತ ಲೋಕ ಮುಂತಾದವುಗಳನ್ನು ಕುರಿತು ಸಂಶೋಧನೆಗೊಳಪಡಿಸಿದ್ದಾರೆ.

'ಆಳು ಮತ್ತು ಒಡೆಯನ ಸಂಬಂಧಗಳು' ಎಂಬ ಭಾಗದಲ್ಲಿ ಆಳು ಮತ್ತು ಒಡೆಯನ ಸಂಬಂಧಗಳನ್ನು ಗುರುತಿಸಲು ಚೋಮನ ದುಡಿ ಕಾದಂಬರಿಯನ್ನು ತೆಗೆದುಕೊಳ್ಳಲಾಗಿದೆ. ಆಳು ಮತ್ತು ಒಡೆಯನಿಗೆ ಸಂಬಂಧಪಟ್ಟ ವಿಚಾರಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಿದ್ದಾರೆ. ಮುಂದುವರೆದಂತೆ ಆಳು ಒಡೆಯನ ಸಂಬಂಧವನ್ನು ಶೋಧಿಸಲು 'ದುಡಿಯುವ ಮಕ್ಕಳು' ಕಥೆಯನ್ನು ಬಳಸಿಕೊಳ್ಳಲಾಗಿದೆ. 'ಸಾಲದ ಮಗು' 'ಯಾರೂ ಅರಿಯದ ವೀರ' 'ಧನಿಯರ ಸತ್ಯನಾರಾಯಣ' 'ಕಲ್ಮಾಡಿಯ ಕೋಣ' ಕಥೆಗಳು ಹಾಗೂ 'ಹೇಮಾವತಿ', 'ಮಲೆಗಳಲ್ಲಿ ಮದುಮಗಳು' ಮುಂತಾದ ಕಾದಂಬರಿಗಳ ಮೂಲಕ ಮತ್ತಷ್ಟು ವಿಶ್ಲೇಷಣಾತ್ಮಕ ಅಧ್ಯಯನ ನಡೆಸಲಾಗಿದೆ.

'ಹೆಣ್ಣು ಮತ್ತು ಗಂಡಿನ ಸಂಬಂಧಗಳು' ಎಂಬ ಅಧ್ಯಾಯದಲ್ಲಿ ವ್ಯವಸ್ಥೆಯ ದೌರ್ಜನ್ಯದ ನೆಲೆಯಲ್ಲಿ ಹೆಣ್ಣು ಮತ್ತು ಗಂಡಿನ ಸಂಬಂಧ ಎಂಬ ಉಪ ಅಧ್ಯಾಯದಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕುಳವಾಡಿ ಸಣ್ಣನ ಮಗಳು ಪುಟ್ಟಿ-ತಿಮ್ಮಪ್ಪ ಹೆಗಡೆಯ ಪ್ರಸ್ತಾಪವಿದೆ. ಹಾಗೆಯೇ 'ಕಾನೂರು ಹೆಗ್ಗಡತಿ', 'ಮರಳಿ ಮಣ್ಣಿಗೆ', 'ವೆಂಕಟಶಾಮಿಯ ಪ್ರಣಯ ಪ್ರಸಂಗ' ಮುಂತಾದ ಕಾದಂಬರಿಗಳನ್ನು ಬಳಸಿಕೊಳ್ಳಲಾಗಿದೆ. 'ವೆಂಕಟಿಗನ ಹೆಂಡತಿ', 'ಕೊನೆಯ ಗಿರಾಕಿ', 'ಮಲೆಗಳಲ್ಲಿ ಮದುಮಗಳು', ಕಾದಂಬರಿಯ ಗುತ್ತಿ ಮತ್ತು ಕಾವೇರಿ, ರಂಗಿಕಥೆ ಕಥನಗಳ ಪಾತ್ರಗಳ ಮೂಲಕ ಗುರ್ತಿಸಲಾಗಿದೆ. ಬದುಕಿನ ಒಂದು ಭಾಗವಾಗಿ ಹೆಣ್ಣು ಮತ್ತು ಗಂಡಿನ ಸಂಬಂಧ, ಪಕ್ಷಪಾತಿ, 'ದುರದೃಷ್ಟದ ಹೆಣ್ಣು', ಗೌತಮಿ ಹೇಳಿದ ಕತೆ, ಕೃಷ್ಣಮೂರ್ತಿಯ ಹೆಂಡತಿ, ಸನ್ಯಾಸವಲ್ಲದ ಸನ್ಯಾಸ, ಕಾಮನಹಬ್ಬ' ನೀಲೆಯ ಸಂಸಾರ, ಪುನರ್ ವಿವಾಹ ಮುಂತಾದ ಕಥನಗಳು ಮತ್ತು ಐತ, ಪೀಂಚಲು, ನಾಗಕ್ಕ, ನಾಗತ್ತೆ, ವೈಶಾಖ ಮುಂತಾದ ಕಥನಗಳ ಪಾತ್ರಗಳ ಮೂಲಕ ಸಂಶೋಧನೆಗೊಳಪಡಿಸಿದ್ದಾರೆ.

'ದಲಿತ ಮತ್ತು ದಲಿತೇತರ ಪಾತ್ರಗಳ ಬೆಳವಣಿಗೆಯ ಸ್ವರೂಪ' ಎಂಬ ಅಧ್ಯಾಯದಲ್ಲಿ ಆರ್ಥಿಕ ಗಳಿಕೆಯೊಳಗಿನ ಬೆಳವಣಿಗೆ, ಧಾರ್ಮಿಕವಾಗಿ ಪಾಲ್ಗೊಳ್ಳುವುದರ ಬಗೆಗೆ, ಬೌದ್ಧಿಕ ಬೆಳವಣಿಗೆ ಬಗೆಗೆ, ಸಾಮಾಜಿಕ ಬೆಳವಣಿಗೆ ಬಗೆಗೆ ಹಲವು ಪಾತ್ರಗಳ ಮೂಲಕ ಚರ್ಚಿಸಲಾಗಿದೆ. 'ವ್ಯವಸ್ಥೆಗೆ ಪ್ರತಿರೋಧ ಮತ್ತು ರಾಜಿ' ಎಂಬ ಅಧ್ಯಾಯದಲ್ಲಿ ಚೋಮನದುಡಿ ಕಾದಂಬರಿಯ ಚೋಮ, ಮಲೆಗಳಲ್ಲಿ ಮದುಮಗಳು ಕಾದಂಬರಿಯ ಚರ್ಚ್ ಹಾಗೂ ಪಾದ್ರಿಗಳ ಚಿತ್ರಗಳು, ಕಾನೂರು ಹೆಗ್ಗಡತಿಯ ವಿವರವಾದ ಪಾತ್ರಗಳ ಮೂಲಕ ಕಟ್ಟಿಕೊಡಲಾಗಿದೆ. 'ಸ್ವಾತಂತ್ರ್ಯೋತ್ತರ ಕಥನ ಸಾಹಿತ್ಯದಲ್ಲಿ ದಲಿತ ಲೋಕ' ಎಂಬ ಅಧ್ಯಾಯದಲ್ಲಿ ರೊಟ್ಟಿ, ಮುಟ್ಟಿಸಿಕೊಂಡವನು, ಅಬಚೂರಿನ ಪೋಸ್ಟಾಪೀಸು, ಅವನತಿ, ಗ್ರಸ್ತರು, ಮಾರಿಕೊಂಡವರು, ಕಕರನ ಯುಗಾದಿ, ಸಾಲದ ಮಗು, ಎದುರಾಳಿ, ಸೂರ್ಯ, ಹುತ್ತ, ಕಪ್ಪು ನೆಲದ ಕೆಂಪು ಕಾಲು' ಕುಂ. ವೀರಭದ್ರಪ್ಪನವರ ಎಲುಗನೆಂಬ ಕೊರಚನೂ ಚವುಡನೆಂಬ ಹಂದಿಯೂ, ದೇವರ ಹೆಣ ಮುಂತಾದ ಕಥನ ಸಾಹಿತ್ಯದ ಪಾತ್ರಗಳ ಮೂಲಕ ದಲಿತ ಲೋಕವನ್ನು ಕಟ್ಟಿಕೊಡಲಾಗಿದೆ. ಅದು ಬಿಟ್ಟರೆ ಪೂರ್ಣ ಪ್ರಮಾಣದ ದಲಿತ ಮಹಿಳೆಯನ್ನು ಕುರಿತು ಅಧ್ಯಯನ ನಡೆದಿಲ್ಲವೆಂದು ಹೇಳಬಹುದು.

'ದಲಿತ-ಬಂಡಾಯ ಕಾದಂಬರಿಗಳಲ್ಲಿ ಶ್ರಮ ಸಂಸ್ಕೃತಿಯ ಎಚ್ಚರ ಹಾಗೂ ಪರ್ಯಾಯಗಳ ಹುಡುಕಾಟ' ಎಂಬ ಕೇಶವಮೂರ್ತಿ ಕೆ.ಆರ್. ಅವರ ಸಂಶೋಧನಾ ಮಹಾಪ್ರಬಂಧದಲ್ಲಿ 'ದಲಿತ-ಬಂಡಾಯ ಕಾದಂಬರಿಗಳ ತಾತ್ವಿಕ ಸ್ವರೂಪ ಮತ್ತು ಒಲವು-ನಿಲುವು ಎಂಬ ಅಧ್ಯಾಯದಲ್ಲಿ ದಲಿತ ಸಾಹಿತ್ಯದ ಪ್ರಭಾವ-ಪರಂಪರೆ-ಪ್ರಯೋಜನಗಳನ್ನು ಗುರುತಿಸಿದ್ದಾರೆ. ಇದೇ ಅಧ್ಯಾಯದಲ್ಲಿ ವಸ್ತು, ಭಾಷೆ, ತಂತ್ರ, ಸಮಕಾಲೀನ ಸಂದರ್ಭದ ಆಸೆ-ನಿರಾಸೆ, ನೋವು-ನಲಿವು, ಜನಮುಖಿ ಹೋರಾಟಕ್ಕೆ ಒತ್ತಾಯ, ಅಂತರ್ಮುಖಿ ಹೋರಾಟಕ್ಕೆ ಸ್ಥಿರತೆ ಮುಂತಾದವುಗಳನ್ನು ಕುರಿತು ಚರ್ಚಿಸಿದ್ದಾರೆ. ಪ್ರಾತಿನಿಧಿಕ ದಲಿತಬಂಡಾಯ ಕಾದಂಬರಿಗಳು ಹಾಗೂ ಕಾದಂಬರಿಕಾರರು ಎಂಬ ಅಧ್ಯಾಯದಲ್ಲಿ ಕುಸುಮಬಾಲೆ, ಮಾಗಿ ಕಾದಂಬರಿಗಳನ್ನು ಕುರಿತ ಚರ್ಚೆಯಿದೆ. ನಂತರ ದಲಿತ ಚಳವಳಿಯ ಹಿನ್ನೆಲೆಯಲ್ಲಿ ಬಂದ 'ಮರಣ ಮಂಡಲ ಮಧ್ಯದೊಳಗೆ' ಕಾದಂಬರಿಯನ್ನು ಕುರಿತು ಚರ್ಚಿಸುತ್ತಾರೆ. ಇದೇ ಅಧ್ಯಾಯದಲ್ಲಿ ದಲಿತ ಸಾಹಿತಿಗಳಾಗಿ ಅರವಿಂದ ಮಾಲಗತ್ತಿ, ಜಂಬಣ್ಣ ಅಮರಚಿಂತ, ಬರಗೂರು ರಾಮಚಂದ್ರಪ್ಪನವರ 'ಗತಿ' ಮುಂತಾದ ಕಾದಂಬರಿಗಳ ಕುರಿತು ಸಾರಾಂಶೀಕರಣ ರೂಪದಲ್ಲಿ ಬರೆದಿದ್ದಾರೆ. 'ಗತಿ' ಕಾದಂಬರಿಯನ್ನು ಸಂಶೋಧಕರು ವಿಮರ್ಶಾತ್ಮಕ ನೆಲೆಯಲ್ಲಿ ಮಾತ್ರ ಅಧ್ಯಯನ ಮಾಡಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. 'ದಲಿತ-ಬಂಡಾಯ

ಕಾದಂಬರಿಗಳಲ್ಲಿ ಪ್ರಜ್ಞೆ ಮತ್ತು ಹುಡುಕಾಟ' ಎಂಬ ಅಧ್ಯಾಯದಲ್ಲಿ ಗ್ರಾಮೀಣ ಬದುಕಿನ ಸಮಸ್ಯೆಗಳು ಹಾಗೂ ಸ್ಥಿತ್ಯಂತರಗಳನ್ನು, ಆರ್ಥಿಕ ಸಮಸ್ಯೆ ಮುಂತಾದವುಗಳನ್ನು 'ಕುಸುಮಬಾಲೆ' ಕಾದಂಬರಿ, 'ಅಮಾಸ' ಕಥೆ, 'ಅಸ್ಪೃಶ್ಯ' ಕಾದಂಬರಿ ಮಾಗಿ, ಸೂರ್ಯ, ಒಡಲಾಳ, ಉಚಲ್ಯಾ ಮುಂತಾದ ಕಥನಗಳ ಮೂಲಕ ಚರ್ಚಿಸಿದ್ದಾರೆ. ಇದೇ ಭಾಗದಲ್ಲಿ ರಾಜಕೀಯ ಸಮಸ್ಯೆ ಅಂದರೆ ಅಧಿಕಾರ ಚಲಾಯಿಸುವಿಕೆಯನ್ನು 'ಒಂದು ಊರಿನ ಕತೆ', 'ಮಾಗಿ', 'ಕಾರ್ಯ', 'ಸೂರ್ಯ', 'ಕುರುಮಯ್ಯ ಮತ್ತು ಅಂಕುಶದೊಡ್ಡಿ, ಕುಂ.ವೀ.ಯವರ 'ಬೇಲಿ ಮತ್ತು ಹೊಲ' ಕಾದಂಬರಿಗಳ ಆಧಾರದಿಂದ ಶೋಧನೆಗೊಳಪಡಿಸಿದ್ದಾರೆ. ಇಡೀ ರಾಜಕೀಯ ಸಮಸ್ಯೆಯನ್ನು 'ಗತಿ', 'ಕಪ್ಪು' ಕಾದಂಬರಿಗಳಲ್ಲಿನ ಪಾತ್ರಗಳ ಮೂಲಕ ಚರ್ಚಿಸಿದ್ದಾರೆ. ಊಳಿಗಮಾನ್ಯ ವ್ಯವಸ್ಥೆ, ಶೋಷಣೆ, ಶೋಷಿತರ ಪ್ರತಿಭಟನೆಯ ಸ್ವರೂಪವನ್ನು ಕುಸುಮಬಾಲೆ, ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ' ಜಂಬಣ್ಣ ಅಮರಚಿಂತರ 'ಕುರುಮಯ್ಯ ಮತ್ತು ಅಂಕುಶದೊಡ್ಡಿ' ಮುಂತಾದ ಕಾದಂಬರಿಗಳಿಂದ ಶೋಧಿಸಿದ್ದಾರೆ. ನಂತರ 'ಬಂಡಾಯ' ಕಾದಂಬರಿಗಳಲ್ಲಿ ಪ್ರತಿಭಟನೆಯ ಸ್ವರೂಪ, ವರ್ಣ-ವರ್ಗ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆ ಮತ್ತು ಪರ್ಯಾಯ ಹುಡುಕಾಟವನ್ನು ಬಂಡಾಯ ಕಾದಂಬರಿಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ. 'ಒಡಲಾಳ' ಮತ್ತು 'ಗತಿ' ಕಾದಂಬರಿಗಳನ್ನು ಬಿಡಿ-ಬಿಡಿಯಾಗಿ ಚಿತ್ರಿಸಿದ್ದಾರೆ. ಆದರೆ ದಲಿತ ಮಹಿಳೆಯ ಶೋಷಣೆಯ ನಿಟ್ಟಿನಿಂದ ಇವೆರಡು ಕಾದಂಬರಿಗಳನ್ನು ಪರಿಗಣಿಸಿಲ್ಲ.

'ಕುವೆಂಪು ಕಾದಂಬರಿಗಳಲ್ಲಿ ದಲಿತ ಜಗತ್ತು' ಎಂಬ ಜಯರಾಮು ಅವರ ನಿಬಂಧದಲ್ಲಿ ದಲಿತ ಸಾಹಿತ್ಯ ಕುರಿತಾದ ಪರಿಚಯಾತ್ಮಕ ಮಾಹಿತಿ ಇದೆ. ಕುವೆಂಪು ಮತ್ತು ದಲಿತ ಕಾದಂಬರಿಗಳಲ್ಲಿ ದಾಖಲಾಗಿರುವ ದಲಿತ ಜಗತ್ತಿನ ಸಾಮ್ಯತೆ-ಭಿನ್ನತೆಗಳನ್ನು ಕುರಿತು ಚರ್ಚಿಸಿದ್ದಾರೆ. ಕುವೆಂಪು ಮತ್ತು ದಲಿತ ಕಾದಂಬರಿಗಳಲ್ಲಿನ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ಅಂಶಗಳು, ಕುವೆಂಪು ಮತ್ತು ದಲಿತ ಕಾದಂಬರಿಗಳಲ್ಲಿನ ಮತಾಂತರದ ಸಮಸ್ಯೆಗಳು, ಕುವೆಂಪು ಮತ್ತು ದಲಿತ ಕಾದಂಬರಿಗಳಲ್ಲಿನ ಲೈಂಗಿಕ ಶೋಷಣೆಯ ಸಮಸ್ಯೆಗಳು, ಕುವೆಂಪು ಮತ್ತು ದಲಿತ ಕಾದಂಬರಿಗಳಲ್ಲಿನ ಜೀತಪದ್ಧತಿಯ ಅಮಾನವೀಯ ವರ್ತನೆಗಳು, ಕುವೆಂಪು ಮತ್ತು ದಲಿತ ಕಾದಂಬರಿಗಳಲ್ಲಿನ ಗ್ರಾಮೀಣ ನ್ಯಾಯ ವ್ಯವಸ್ಥೆ ಮುಂತಾದವುಗಳನ್ನು ಇತರ ದಲಿತ ಕಾದಂಬರಿಗಳಲ್ಲಿ ಚಿತ್ರಿತವಾಗಿರುವ ಬಗೆ ಹಾಗೂ ಕಾದಂಬರಿಗಳಾದ ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಹೆಗ್ಗಡತಿಗಳಲ್ಲಿ ದಾಖಲಾಗಿರುವ ರೀತಿಯನ್ನು ಗುರುತಿಸಲಾಗಿದೆ. ದಲಿತ ಕಾದಂಬರಿಗಳಾಗಿ 'ಒಡಲಾಳ', 'ಮರಣ ಮಂಡಲ ಮಧ್ಯದೊಳಗೆ' ಕಾದಂಬರಿಗಳ ಮೂಲಕ ಚರ್ಚಿಸಿದ್ದಾರೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ದಲಿತ

ಪಾತ್ರಗಳ ತೌಲನಿಕ ಅಧ್ಯಯನ ಮಾದರಿಯಲ್ಲಿ ಸಂಶೋಧಕರು ಅಭ್ಯಸಿಸಿರುವುದು ತಿಳಿದುಬರುತ್ತದೆ.

ಕುವೆಂಪು ಮತ್ತು ದಲಿತ ಕಾದಂಬರಿಗಳಲ್ಲಿ ಲೈಂಗಿಕ ಶೋಷಣೆಯ ಸ್ವರೂಪವನ್ನು ಅಕ್ಕಣಿ, ಕಾಡಿ ಪಾತ್ರಗಳ ಮೂಲಕ ಗುರುತಿಸಿದ್ದಾರೆ. ಅಕ್ಕಣಿಯನ್ನು ಚೀಂಕ್ರನೊಂದಿಗೆ ಇದ್ದ ಅನೈತಿಕ ಸಂಬಂಧವನ್ನು ಕಳೆದುಕೊಳ್ಳಲು ರಂಗಪ್ಪಗೌಡರಿಗೆ ಹೇಳುತ್ತಾರೆ. ಆದರೆ ರಂಗಪ್ಪ ಗೌಡರೇ ಅಕ್ಕಣಿಯನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ, ಕಾಡಿಯ ಮತ್ತೊಂದು ಪ್ರಕರಣದಲ್ಲಿ ಕಾಡಿಯನ್ನು ದುರುಪಯೋಗಪಡಿಸಿಕೊಂಡ ಸೇಸನಾಯ್ಕನು ತನ್ನ ಸಮುದಾಯದ ಹಿರಿಯರಿಗೆ ಚೆನ್ನಾಗಿ ತುಂಡು ಕಡುಬು ಕಳ್ಳುಗಳ ಹಬ್ಬ ಮಾಡಿಸಿ ಸಂತೃಪ್ತಗೊಳಿಸುತ್ತಾನೆ. ಈ ಅಧ್ಯಾಯದಲ್ಲಿ ಕುವೆಂಪು ಅವರ ಕಾದಂಬರಿಗಳಲ್ಲಿನ ಸ್ತ್ರೀಪಾತ್ರಗಳ ಜೊತೆಗೆ ಕಾರಂತರ ಚೋಮನ ದುಡಿಯ ಬೆಳ್ಳಿಯನ್ನೂ ಪರಿಗಣಿಸಿದ್ದಾರೆ. ಹಾಗೆಯೇ 'ಕುಡಿಯರ ಕೂಸು' ಕಾದಂಬರಿಯನ್ನು, ಮರಣ ಮಂಡಲ ಮಧ್ಯದೊಳಗೆ, ಕುಸುಮಬಾಲೆ ಕಾದಂಬರಿಗಳನ್ನು ಅಧ್ಯಯನಕ್ಕಾಗಿ ಪರಿಗಣಿಸಿದ್ದಾರೆ. ಇವರು ಬೆಳ್ಳಿಯನ್ನು ಒಬ್ಬ ಸಾಮಾನ್ಯ ಮಹಿಳೆಯಾಗಿ ಗುರುತಿಸಿದ್ದಾರೆಯೇ ಹೊರತು ದಲಿತ ಮಹಿಳಾ ದೃಷ್ಟಿಕೋನದಿಂದಲ್ಲ.

ಕುವೆಂಪು ಮತ್ತು ದಲಿತ ಕಾದಂಬರಿಗಳಲ್ಲಿನ ಜೀತಪದ್ಧತಿಯ ಅಮಾನವೀಯ ವರ್ತನೆಗಳನ್ನು ಗುರುತಿಸಿದ್ದಾರೆ. ಜೀತಪದ್ಧತಿಯನ್ನು ಕುರಿತು ಚರ್ಚಿಸಲು ಚೋಮನ ದುಡಿ, ಕುಡಿಯರ ಕೂಸು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಕುಸುಮಬಾಲೆ, ಒಡಲಾಳ ಕಾದಂಬರಿಗಳನ್ನು ಪರಿಗಣಿಸಿದ್ದಾರೆ. ಇವರು ಜೀತದ ದೃಷ್ಟಿಯಿಂದ ದಲಿತ ಪಾತ್ರಗಳನ್ನು ನೋಡಿದ್ದಾರೆ. ಕುವೆಂಪು ಕಾದಂಬರಿಗಳಲ್ಲಿ ಗ್ರಾಮೀಣ ನ್ಯಾಯವ್ಯವಸ್ಥೆಯನ್ನು ಗುರುತಿಸಿದ್ದಾರೆ. 'ಕುವೆಂಪು ಕಾದಂಬರಿಗಳಲ್ಲಿನ ದಲಿತಪ್ರಜ್ಞೆ' ಎಂಬ ಅಧ್ಯಾಯವನ್ನು ಕುವೆಂಪು ಕಾದಂಬರಿಗಳನ್ನು ಕುರಿತ ಹಲವು ವಿಮರ್ಶಕರ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಉದಾ: ಡಿ.ಆರ್. ನಾಗರಾಜ್ ಅವರ 'ಕುವೆಂಪು ಕಾದಂಬರಿಗಳಲ್ಲಿ ವರ್ಣ–ವರ್ಗ ಸಂಘರ್ಷ', ಎಚ್.ಎಂ. ಚನ್ನಯ್ಯ ಅವರ 'ಕುವೆಂಪು ಸಾಹಿತ್ಯದ ಒಂದು ಪುನರ್ ವಿಮರ್ಶೆ', ರಹಮತ್ ತರೀಕೆರೆ ಅವರ 'ಕುವೆಂಪು ಕಾದಂಬರಿಗಳಲ್ಲಿ ಸಂಘರ್ಷದ ಸ್ವರೂಪ', ರಾಜೇಂದ್ರ ಚೆನ್ನಿರವರ 'ಕುವೆಂಪು ಮತ್ತು ಕನ್ನಡ ಕಾದಂಬರಿ', ರಾಜಾರಾಮ ಹೆಗ್ಗಡೆ ಅವರ 'ಕುವೆಂಪು ಕಾದಂಬರಿಗಳಲ್ಲಿ ವಸಾಹತುಶಾಹಿ ಅನುಭವದ ಸ್ವರೂಪ', ಕೆ.ವಿ. ಸುಬ್ಬಣ್ಣನವರ 'ಕುವೆಂಪುಗೆ ಪುಟ್ಟ ಕನ್ನಡಿ', ಎಲ್.ಸಿ. ಸುಮಿತ್ರ ಅವರ 'ಮಲೆನಾಡ ಸಂಸ್ಕೃತಿಯ ವಿಕಾಸದ ಕಥೆಯಾಗಿ

ಕುವೆಂಪು' ಧರಣೀದೇವಿ ಮಾಲಗತ್ತಿ ಅವರ 'ಕುವೆಂಪು ಸಾಹಿತ್ಯದಲ್ಲಿ ದಮನಿತವಾದದ ಸುಳಿವುಗಳು' ಮುಂತಾದವನ್ನು ಪರಿಗಣಿಸಿದ್ದಾರೆ.

'ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕೆಳವರ್ಗದ ಜೀವನ ಚಿತ್ರಣ' ಎಂಬ ಕೆ.ಎಲ್. ಕಾಂಚನಮಾಲ ಅವರ ನಿಬಂಧದಲ್ಲಿ ಸಾಮಾಜಿಕ ಪರಿವರ್ತನೆಯ ಹರಿಕಾರರಾಗಿ ಕುವೆಂಪು, ಮಲೆಗಳಲ್ಲಿ ಮದುಮಗಳು ವಸ್ತು ವಿಶ್ಲೇಷಣೆ, ಭಾರತದಲ್ಲಿ ಜಾತಿಪದ್ಧತಿ, ಕಾದಂಬರಿಯಲ್ಲಿನ ಜಾತಿ ಪದ್ಧತಿ ಮತ್ತು ಜೀತಪದ್ಧತಿ, ಕೆಳವರ್ಗದ ಪಾತ್ರ ವಿಶ್ಲೇಷಣೆ, ಕೆಳವರ್ಗದ ಸಾಂಸ್ಕೃತಿಕ ಜೀವನ, ಸ್ತ್ರೀಯರ ಸ್ಥಾನ–ಮಾನಗಳನ್ನು, ಕೆಳವರ್ಗದ ಭಾಷೆಯನ್ನು, ಮತಾಂತರ ಪ್ರಕ್ರಿಯೆಯನ್ನು ಕುರಿತ ಹಲವು ವಿಚಾರಗಳನ್ನು ಸಂಶೋಧನೆಗೊಳಪಡಿಸಿದ್ದಾರೆ. ಇಲ್ಲಿ ಗುತ್ತಿ–ತಿಮ್ಮಿಯರ ಪ್ರೇಮ, ಕಾಮದ ವಿವರವಿದೆ. ಐತ–ಪೀಂಚಲು–ಮುಕುಂದಯ್ಯರ ಕುರಿತು ಚರ್ಚಿಸುತ್ತಾರೆ. ಅಲ್ಲದೇ ಐತ–ಪೀಂಚಲು ವೈವಾಹಿಕ ಜೀವನದ ಪ್ರೇಮವನ್ನು, ಮುಕುಂದಯ್ಯ ಬಯಸಿದ್ದರೆ ಪೀಂಚಲು ಅರ್ಪಿಸಿಕೊಳ್ಳುವೆ ಎನ್ನುವ ಪ್ರಸಂಗವನ್ನು ಗಮನಿಸಿದ್ದಾರೆ. ಇವರ ನಿಬಂಧದಲ್ಲಿ ಕುಳವಾಡಿ ಸಣ್ಣನ ಮಗಳು ಪುಟ್ಟಿಯ ಪ್ರಸ್ತಾಪವಿಲ್ಲದಿರುವುದು ಗಮನಾರ್ಹ ಅಂಶ.

'ಕುವೆಂಪು ಮತ್ತು ಕಾರಂತರ ಕಾದಂಬರಿಗಳಲ್ಲಿ ದಲಿತ ಪ್ರಜ್ಞೆ–ತೌಲನಿಕ ಅಧ್ಯಯನ' ಎಂಬ ಸಂಶೋಧನೆ ಪ್ರಬಂಧದಲ್ಲಿ ವಸಂತ ಜಿ. ಅವರು 'ಕಾರಂತರ ಕಾದಂಬರಿಗಳಲ್ಲಿ ದಲಿತ ಪ್ರಜ್ಞೆ' ಎಂಬ ಅಧ್ಯಾಯದಲ್ಲಿ ಕಾರಂತರ ಚೋಮನ ದುಡಿ ಮತ್ತು ಕುಡಿಯರ ಕೂಸು ಎರಡೂ ಕಾದಂಬರಿಗಳ ಚರ್ಚೆಯಿದೆ. ಚೋಮನನ್ನು ಮಾತ್ರ ಕೇಂದ್ರವಾಗಿಸಿಕೊಂಡು ಸಂಶೋಧಿಸಲಾಗಿದೆ. ಬೆಳ್ಳಿಯ ಪ್ರಸ್ತಾಪವಿಲ್ಲ. 'ಕುವೆಂಪು ಕಾದಂಬರಿಗಳಲ್ಲಿ ದಲಿತ ಪ್ರಜ್ಞೆ' ಎಂಬ ಅಧ್ಯಾಯದಲ್ಲಿ ದಲಿತಳಾದ ಕುಳವಾಡಿ ಸಣ್ಣನ ಮಗಳು ಪುಟ್ಟಿಯ ಪ್ರಸ್ತಾಪವಿಲ್ಲ. ಬರಿಯ ದಲಿತರ ಚಿತ್ರಣಗಳನ್ನು ಕಥೆಯ ರೂಪದಲ್ಲಿ ಚಿತ್ರಿಸಲಾಗಿದೆ. 'ಕುವೆಂಪು, ಕಾರಂತರ ಕಾದಂಬರಿಗಳ ದಲಿತ ಪ್ರಜ್ಞೆಯ ತೌಲನಿಕ ಅಧ್ಯಯನ ಎಂಬ ಅಧ್ಯಾಯದಲ್ಲಿ ದಲಿತ ಮಹಿಳೆಯರಾದ ಪುಟ್ಟಿ ಮತ್ತು ಬೆಳ್ಳಿಯ ಪ್ರಸ್ತಾಪವಿಲ್ಲದಿರುವುದು ನಿಬಂಧದ ಸೀಮಿತ ವ್ಯಾಪ್ತಿಯ ಕಾರಣದಿಂದ ಎಂದು ಹೇಳಬಹುದು.

'ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಕರ್ನಾಟಕ ದಲಿತ ಚಳವಳಿ ಮತ್ತು ಸಾಹಿತ್ಯ' ಎಂಬ ಎಚ್.ಟಿ. ವೆಂಕಟೇಶಮೂರ್ತಿ ಅವರ ಸಂಶೋಧನಾ ಪ್ರಬಂಧದಲ್ಲಿ ಕರ್ನಾಟಕ ದಲಿತ ಚಳವಳಿಯ ಹುಟ್ಟು ಮತ್ತು ವಿಕಾಸ, ದಲಿತ ಚಳವಳಿಯ ಹಿನ್ನೆಲೆ, ದಲಿತ ಚಳವಳಿಯ ಪ್ರೇರಣೆ ಮತ್ತು ಪ್ರಭಾವ, ದಲಿತ ಚಳವಳಿಯ ಇಂದಿನ ಅನಿವಾರ್ಯತೆ, ಕನ್ನಡ ದಲಿತ

ಸಾಹಿತ್ಯದ ಹಿನ್ನೆಲೆ, ಹುಟ್ಟು, ಕಾರಣ ಮತ್ತು ಅದರ ಅನಿವಾರ್ಯತೆ, ಕನ್ನಡ ಸಾಹಿತ್ಯದಲ್ಲಿ ದಲಿತರ ಚಿತ್ರಣ, ದಲಿತ ಸಾಹಿತ್ಯದ ತಾತ್ವಿಕ ಚರ್ಚೆ, ದಲಿತ ಸಾಹಿತ್ಯದ ಲಕ್ಷಣ ಮತ್ತು ಸ್ವರೂಪ, ದಲಿತ ಸಾಹಿತ್ಯದ ಪ್ರೇರಣೆ ಮತ್ತು ಪ್ರಭಾವ, ದಲಿತ–ಬಂಡಾಯ ಸಾಹಿತ್ಯದ ವಿಭಿನ್ನ ನೆಲೆಗಳು, ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ದಲಿತರ ಬದುಕು, ದಲಿತರ ಶಿಕ್ಷಣ, ದಲಿತರು ಮತ್ತು ನೌಕರಿ, ದಲಿತರು ಮತ್ತು ರಾಜಕೀಯ, ದಲಿತರು ಮತ್ತು ಜಮೀನ್ದಾರರು. ದಲಿತರು ಮತ್ತು ಕೂಲಿ, ದಲಿತರ ಕಸುಬು, ದಲಿತರ ಜೀತ, ದಲಿತ ಕಾರ್ಮಿಕರು, ದಲಿತರು ಮತ್ತು ಅಸ್ಪೃಶ್ಯತೆ, ದಲಿತರು ಮತ್ತು ಸಾಮಾಜಿಕ ಬಹಿಷ್ಕಾರ, ದಲಿತರ ಮೇಲೆ ಹಲ್ಲೆ, ದಲಿತರ ಮೇಲಿನ ಅತ್ಯಾಚಾರ, ದಲಿತರ ನಗರ ಜೀವನ, ದಲಿತರ ಮನೆಗಳ ಸ್ಥಿತಿ, 'ಬದಲಾಗುತ್ತಿರುವ ಸಂದರ್ಭದಲ್ಲಿ ದಲಿತ ಚಳವಳಿ' ಎಂಬ ಅಧ್ಯಾಯದಲ್ಲಿ ತಲೆಮಾರುಗಳಲ್ಲಿನ ವಿಭಿನ್ನತೆ, ದಲಿತ ಚಳವಳಿಯ ಶತ್ರುಸ್ವರೂಪ ಮತ್ತು ಮಿತ್ರಸ್ವರೂಪ, ದಲಿತ ಚಳವಳಿಯ ತಾತ್ವಿಕ ವಿಚಾರಗಳು, ದಲಿತ ಚಳವಳಿಯ ಸಾಧನೆಗಳು, ದಲಿತ ಚಳವಳಿಯ ವಿಫಲತೆಗಳು, ದಲಿತ ಚಳವಳಿ ಏನಾಗುತ್ತಾ ಬಂತು, ದಲಿತ ಚಳವಳಿ ಎಲ್ಲಿ, ಏಕೆ ನಡೆಯುತ್ತದೆ? ಯಾವ ಯಾವ ಕಾರಣಕ್ಕೆ ದಲಿತ ಚಳವಳಿ ನಡೆದಿದೆ? ನಡೆಯುತ್ತಿದೆ? ದಲಿತ ಚಳವಳಿ ಹೇಗೆ ನಡೆಯುತ್ತಿದೆ? ದಲಿತ ಚಳವಳಿಯ ಕರಪತ್ರಗಳಲ್ಲಿನ ಚಿತ್ರಗಳು, ದಲಿತ ಚಳವಳಿಯ ಕರಪತ್ರಗಳಲ್ಲಿನ ಆಯ್ದ ಹೇಳಿಕೆಗಳು, ದಲಿತ ಚಳವಳಿ ಮತ್ತು ಆರ್ಥಿಕತೆ, ದಲಿತ ಸಂಘಟನೆಯ ಕೇಂದ್ರಗಳು, ದಲಿತ ಚಳವಳಿಯ ಬಗ್ಗೆ ದಲಿತರ ಮತ್ತು ಸಾರ್ವಜನಿಕರ ಅಭಿಪ್ರಾಯ, ದಲಿತ ಚಳವಳಿಯ ನಾಯಕರು, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಂವಿಧಾನ ಮುಂತಾದವುಗಳನ್ನು ಕುರಿತು ಸಂಶೋಧನೆಗೊಳಪಡಿಸಿದ್ದಾರೆ.

'ಕನ್ನಡ ದಲಿತ ಸಾಹಿತ್ಯ ಪ್ರಕಾರಗಳ ವೈವಿಧ್ಯತೆ' ಎಂಬ ಅಧ್ಯಾಯದಲ್ಲಿ ಕಾವ್ಯ: ದಲಿತ ಬದುಕಿನ ಹಿನ್ನೆಲೆಯಿಂದ, ಕಥಾ ಸಾಹಿತ್ಯ, ಆತ್ಮಕಥೆಗಳು, ವಿಮರ್ಶೆಗಳು ಮತ್ತು ಇತರ ಬರಹಗಳು, ಕನ್ನಡ ದಲಿತ ನಾಟಕಗಳನ್ನು ಕುರಿತು ಚರ್ಚಿಸಿದ್ದಾರೆ. ದಲಿತರನ್ನು ಕುರಿತ ಕಥನ ಸಾಹಿತ್ಯದಲ್ಲಿ ದೇವನೂರರ ಡಾಂಬರು ಬಂದುದು, ಗ್ರಸ್ಥರು, ಅಮಾಸ, ಮಾರಿಕೊಂಡವರು, ಒಡಲಾಳ, ಮೂಡಲಸೀಮೇಲಿಕೊಲೆಗಿಲೇ ಮುಂತಾಗಿ, ಮನಜ ಅವರ ಸ್ಫೋಟ, ಮೊಗಳ್ಳಿ ಗಣೇಶ್ ಅವರ ಬುಗುರಿ, ಮುಳ್ಳೂರು ನಾಗರಾಜರ ಮರಣಮಂಡಲ ಮಧ್ಯದೊಳಗೆ, ದೇವನೂರರ ಕುಸುಮಬಾಲೆ, ಮ.ನ.ಜ. ಅವರ ಮಾಗಿ, ಶಿವರುದ್ರ ಕಲ್ಲೋಳ್ಕರ್ ಅವರ ಹೊಲಗೇರಿಯ ರಾಜಕುಮಾರ ಮುಂತಾದ ಕಥನ ಸಾಹಿತ್ಯದ ಹಿನ್ನೆಲೆಯಲ್ಲಿ ದಲಿತರ ಬದುಕನ್ನು ಕುರಿತು ಚರ್ಚಿಸಿದ್ದಾರೆ. ಇದೇ ದಲಿತ ಸಮುದಾಯದ ಭಾಗವೇ ಆದ ದಲಿತ

ಮಹಿಳೆಯ ಪ್ರಸ್ತಾಪವನ್ನು ಮಾಡಿಲ್ಲ. ಕಡೆಯದಾಗಿ ದಲಿತ ಚಳವಳಿಯಲ್ಲಿ ಸ್ತ್ರೀಯರು ಭಾಗವಹಿಸುವ ಅಗತ್ಯವಿದೆ ಎಂದಷ್ಟೇ ಹೇಳಿದ್ದಾರೆ. ಆದರೆ ಪ್ರಸ್ತುತ ಸಂಶೋಧನೆಯ ನಡಿಗೆ ಸಂಪೂರ್ಣ ದಲಿತ ಮಹಿಳೆಯ ಕಡೆಗಿದೆ.

ಟಿ.ಪ್ರತಿಮಾ ಅವರ 'ಯು.ಆರ್. ಅನಂತಮೂರ್ತಿಯವರ ಕಾದಂಬರಿಗಳಲ್ಲಿ ಬಂಡಾಯದ ಹೆಜ್ಜೆ' ಎಂಬ ಸಂಶೋಧನಾ ಪ್ರಬಂಧದಲ್ಲಿ ಪ್ರಾಣೇಶಾಚಾರ್ಯರ ಆದರ್ಶ, ಚಂದ್ರಿ ಮತ್ತು ಪ್ರಾಣೇಶಾಚಾರ್ಯರ ಸಂಬಂಧ, ನಾರಣಪ್ಪ ಮತ್ತು ಚಂದ್ರಿಯ ಸಂಬಂಧ ಮುಂತಾದವುಗಳನ್ನು ಮಾತ್ರ ಕುರಿತು ಚರ್ಚಿಸಿದ್ದಾರೆ. ದಲಿತ ಮಹಿಳೆಯಾದ ಬೆಳ್ಳಿಯ ಪ್ರಸ್ತಾಪವಾಗಲೀ ಅವಳ ಮೇಲಿನ ಶೋಷಣೆಯನ್ನಾಗಲೀ ಹೇಳಿಲ್ಲ. ಭಾರತೀಪುರ ಕಾದಂಬರಿಯಲ್ಲೂ ಜಗನ್ನಾಥನ ವಿಚಾರಗಳನ್ನು ಬಿಟ್ಟರೇ ದಲಿತ ಮಹಿಳೆ ಕಾವೇರಿಯನ್ನು ಕುರಿತು ಪ್ರಸ್ತಾಪಿಸಿಲ್ಲ ಆದರೆ ಹೊಲೆಯರ ಕುರಿತ ಅಧ್ಯಯನ ನಡೆದಿದೆ. ಪ್ರಸ್ತುತ ಸಂಶೋಧನೆಯ ವ್ಯಾಪ್ತಿಗೆ ಬರದ ಅವಸ್ಥೆ, ಭವ, ದಿವ್ಯ ಮುಂತಾದ ಕಾದಂಬರಿಗಳ ಚರ್ಚೆಯಿದೆ.

'ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀಪಾತ್ರ' ಎಂಬ ಅಂಬಿಕಾದೇವಿ ಎಸ್. ಅವರ ನಿಬಂಧದಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿನ ದಲಿತಳಾದ ಕುಳವಾಡಿ ಸಣ್ಣನ ಮಗಳು ಪುಟ್ಟಿಯ ಪ್ರಸ್ತಾಪವೇ ಇಲ್ಲ. 'ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಜಾತಿ ಮತ್ತು ಲಿಂಗದ ಪರಿಕಲ್ಪನೆ' ಎಂಬ ಪುಟ್ಟರಾಜು, ಬಿ.ಜಿ. ಅವರ ನಿಬಂಧದಲ್ಲಿ ಕೂಡಾ ದಲಿತ ಮಹಿಳೆಯಾದ ಕುಳವಾಡಿ ಸಣ್ಣನ ಮಗಳು ಪುಟ್ಟಿಯ ಪ್ರಸ್ತಾಪ ಮಾಡಿಲ್ಲ. ಕುವೆಂಪುರವರ ಕಾನೂರು ಹೆಗ್ಗಡಿತಿ ಕಾದಂಬರಿಯ ಎಲ್ಲಾ ಪಾತ್ರಗಳನ್ನು ಜಾತಿ ಆಧಾರಿತವಾಗಿ ನೋಡಲಾಗಿದೆ.

ಪ್ರಸ್ತುತ ಸಂದರ್ಭದ ಸಂಶೋಧನೆಯಲ್ಲಿ ಲಚ್ಮಿ ಮಠದಯ್ಯನ (ಪುರೋಹಿತಶಾಹಿ) ಶೋಷಣೆಗೆ ಗುರಿಯಾಗಲು ಇರುವ ಕಾರಣಗಳನ್ನು ಸೂಕ್ಷ್ಮವಾದ ಸಂಶೋಧನಾ ಓದಿನ ಮುಖಾಂತರ ಕಂಡುಕೊಳ್ಳಲಾಗುವುದು. ಒಟ್ಟಾರೆಯಾಗಿ ಎ.ಎಚ್. ಚಂದ್ರಶೇಖರ್ ಅವರು ತಮ್ಮ ದಲಿತ ಮಹಿಳೆಯನ್ನು ಕುರಿತ ಸಂಶೋಧನೆಯಲ್ಲಿ ಹೆಚ್ಚಾಗಿ ಇತರ ವಿಮರ್ಶಕರ ವಿಮರ್ಶೆಗಳನ್ನು ಉಲ್ಲೇಖಿಸುತ್ತಾರೆ. ಅಲ್ಲದೇ ಸಾರಾಂಶ ಪ್ರಧಾನ ಓದು ಮತ್ತು ಪರಿಚಯಾತ್ಮಕ ಓದಿನ ಹಿನ್ನೆಲೆಯಲ್ಲಿ ಬರವಣಿಗೆಯನ್ನು ಮಾಡಿದ್ದಾರೆ.

'ಕನ್ನಡ ಕಾದಂಬರಿಗಳಲ್ಲಿ ದಲಿತ ಜಗತ್ತು' ಎಂಬ ಡಾ. ಭೂಮಿಗೌಡ ಅವರ ಸಂಶೋಧನಾ ಪ್ರಬಂಧದಲ್ಲಿ 'ನವ್ಯೋತ್ತರ ಕನ್ನಡ ಕಾದಂಬರಿಗಳು: ಪ್ರೇರಣೆಗಳು ಮತ್ತು ಪ್ರವೃತ್ತಿಗಳು' ಎಂಬ ಅಧ್ಯಾಯದಲ್ಲಿ ಸೈದ್ಧಾಂತಿಕ ಪ್ರೇರಣೆಗಳು, ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್‌ವಾದ, ಸಂಘಟನಾತ್ಮಕ ಚಳವಳಿಗಳು, ರಾಜಕೀಯ ಪ್ರೇರಣೆಗಳು, ಸಾಮಾಜಿಕ ಪ್ರೇರಣೆಗಳು, ಸಾಂಸ್ಕೃತಿಕ ಅಂಶಗಳು, ಅನ್ಯಭಾಷಾ ಚಳವಳಿಗಳನ್ನು ಕುರಿತು ಚರ್ಚಿಸಲಾಗಿದೆ. 'ನವೋದಯ, ಪ್ರಗತಿಶೀಲ ಮತ್ತು ನವ್ಯ ಕಾದಂಬರಿಗಳಲ್ಲಿ ಸಂಘಟಿತವಾದ ದಲಿತ ಜಗತ್ತು' ಎಂಬ ಅಧ್ಯಾಯದಲ್ಲಿ ಅಸ್ಪೃಶ್ಯತೆಯ ಸಮಸ್ಯೆ, ಜಾತೀಯತೆಯ ಸಮಸ್ಯೆ, ಮತಾಂತರದ ಸಮಸ್ಯೆ, ಅಂತರ್ ಜಾತೀಯ ವಿವಾಹದ ಸಮಸ್ಯೆ, ಲೈಂಗಿಕ ಶೋಷಣೆಯ ಸ್ವರೂಪ, ಭೂಮಿಯ ಒಡೆತನದ ಪ್ರಶ್ನೆ, ವೃತ್ತಿ ಮತ್ತು ಆರ್ಥಿಕತೆ, ಸರಕಾರಿ ಯೋಜನೆಗಳು, ಗ್ರಾಮೀಣ ನ್ಯಾಯವ್ಯವಸ್ಥೆ, ಆಧುನಿಕ ನ್ಯಾಯವ್ಯವಸ್ಥೆ, ಶಿಕ್ಷಣದ ಸಮಸ್ಯೆ, ಜಾಗೃತಿ ಮತ್ತು ಸಂಘಟನೆ ಮುಂತಾದವುಗಳನ್ನು ಕುರಿತು ಸಂಶೋಧನೆ ಮಾಡಿದ್ದಾರೆ.

'ಬಂಡಾಯ ಕಾದಂಬರಿಗಳಲ್ಲಿ ಸಂಘಟಿತವಾದ ದಲಿತ ಜಗತ್ತು' ಎಂಬ ಅಧ್ಯಾಯದಲ್ಲಿ 'ನವೋದಯ, ಪ್ರಗತಿಶೀಲ ಮತ್ತು ನವ್ಯ ಕಾದಂಬರಿಗಳಲ್ಲಿ ಸಂಘಟಿತವಾದ ದಲಿತ ಜಗತ್ತು' ಎಂಬ ಅಧ್ಯಾಯದಲ್ಲಿ ಚರ್ಚಿಸಿದ ಸಮಸ್ಯೆಗಳನ್ನೇ ಮತ್ತೊಮ್ಮೆ ಚರ್ಚಿಸಿದ್ದಾರೆ. 'ದಲಿತ ಕಾದಂಬರಿಗಳಲ್ಲಿ ಸಂಘಟಿತವಾದ ದಲಿತ ಜಗತ್ತು' ಎಂಬ ಅಧ್ಯಾಯದಲ್ಲಿ ಕೂಡ ಅಸ್ಪೃಶ್ಯತೆಯ ಸಮಸ್ಯೆ, ಜಾತೀಯತೆಯ ಸಮಸ್ಯೆ, ಮತಾಂತರದ ಸಮಸ್ಯೆ, ಲೈಂಗಿಕ ನೀತಿಸಂಹಿತೆ, ಭೂಮಿಯ ಒಡೆತನದ ಪ್ರಶ್ನೆ, ವೃತ್ತಿ ಮತ್ತು ಆರ್ಥಿಕತೆ, ಸರಕಾರಿ ಯೋಜನೆಗಳು, ಗ್ರಾಮೀಣ ನ್ಯಾಯವ್ಯವಸ್ಥೆ, ಆಧುನಿಕ ನ್ಯಾಯ ವ್ಯವಸ್ಥೆ, ಶಿಕ್ಷಣದ ಸಮಸ್ಯೆ, ಜಾಗೃತಿ ಮತ್ತು ಸಂಘಟನಾ ಸ್ವರೂಪ, ದಲಿತರು ಮತ್ತು ಪುರೋಹಿತಶಾಹಿ ಸಂಬಂಧ, ದಲಿತರು ಮತ್ತು ಪ್ರಭುಶಾಹಿ ಸಂಬಂಧ ಮುಂತಾದವುಗಳನ್ನು ಕುರಿತು ಚರ್ಚಿಸಿದ್ದಾರೆ.

ಕನ್ನಡ ಕಾದಂಬರಿಗಳು ಮುಂದಿಡುವ ದಲಿತ ಬಂಡಾಯ ಸಂದರ್ಭದ ಸಾಂಸ್ಕೃತಿಕ ಜಗತ್ತನ್ನು ಈ ಕೆಳಗಿನ ಅಂಶಗಳ ಮೂಲಕ ಅನಾವರಣಗೊಳಿಸಿದ್ದಾರೆ. ನವೋದಯ, ಪ್ರಗತಿಶೀಲ ಮತ್ತು ನವ್ಯ ಕಾದಂಬರಿಗಳಲ್ಲಿ ಸೃಜನಶೀಲತೆ, ಆಹಾರ ಪದ್ಧತಿ, ಜನಪದ ಸಾಹಿತ್ಯ, ಭೌತಿಕ ಸಂಸ್ಕೃತಿ, ಸಾಮಾಜಿಕ ಸಂಪ್ರದಾಯಗಳು, ಪ್ರದರ್ಶನಾತ್ಮಕ ಕಲೆಗಳ ಸ್ವಭಾವ ಮುಂತಾದವುಗಳನ್ನು ಕುರಿತು ಸಂಶೋಧನೆಗೊಳಪಡಿಸಿದ್ದಾರೆ.

'ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ' ಎಂಬ ಕೆ. ಅಂಜನಪ್ಪ ಅವರ ಮಹಾಪ್ರಬಂಧದಲ್ಲಿ ಸಮಾಜ, ವರ್ಣ ವ್ಯವಸ್ಥೆ ಮತ್ತು ಅಸ್ಪೃಶ್ಯತೆ,

ಅಸ್ಪೃಶ್ಯತೆಯ ಪದನಿಷ್ಪತ್ತಿ, ಅಸ್ಪೃಶ್ಯತೆಯ ಸೃಷ್ಟಿಗೆ ಕಾರಣ, ಅಸ್ಪೃಶ್ಯರು ಯಾರು? ಪ್ರಾಚೀನ ಕೃತಿಗಳಲ್ಲಿ ಅಸ್ಪೃಶ್ಯರ ಸ್ಥಾನಮಾನ ಮುಂತಾದವುಗಳನ್ನು ಕುರಿತು ಚರ್ಚಿಸಿದ್ದಾರೆ. 'ಸ್ವಾತಂತ್ರ್ಯಪೂರ್ವ ಕನ್ನಡ ಕಾದಂಬರಿಗಳಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ' ಎಂಬ ಅಧ್ಯಾಯದಲ್ಲಿ 'ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ', 'ಅರುಣೋದಯ ಕಾಲದ ಪ್ರಾತಿನಿಧಿಕ ಕಾದಂಬರಿಗಳು ಹಾಗೂ ಅಸ್ಪೃಶ್ಯತೆ', ನವೋದಯ ಕಾಲದ ಪ್ರಾತಿನಿಧಿಕ ಕಾದಂಬರಿಗಳಲ್ಲಿ ಅಸ್ಪೃಶ್ಯತೆ ಮುಂತಾದವುಗಳನ್ನು ಕುರಿತು ಅಧ್ಯಯನ ನಡೆಸಿದ್ದಾರೆ.

ನವೋದಯ–ಪ್ರಗತಿಶೀಲ ಕಾದಂಬರಿಗಳಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆಯನ್ನು ಆದರ್ಶವಾದಿ ನೆಲೆ ಹಾಗೂ ಪ್ರಗತಿಶೀಲ ನೆಲೆಯಲ್ಲಿ ಪ್ರಾತಿನಿಧಿಕ ಕಾದಂಬರಿಗಳ ಮೂಲಕ ಅಧ್ಯಯನ ಮಾಡಿದ್ದಾರೆ. ಹಾಗೆಯೇ ನವ್ಯ ಕಾದಂಬರಿಗಳಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆಯನ್ನು ಅಸ್ತಿತ್ವವಾದದ ನೆಲೆ, ವ್ಯಕ್ತಿ ನೆಲೆಯಲ್ಲಿ ಪ್ರಾತಿನಿಧಿಕ ಕಾದಂಬರಿಗಳ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡಿದ್ದಾರೆ. ಬಂಡಾಯ–ದಲಿತ ಕಾದಂಬರಿಗಳಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆಯನ್ನು 'ಬಂಡಾಯ ಸಂವೇದನೆ ಮತ್ತು ಅಸ್ಪೃಶ್ಯತೆ', ದಲಿತ ಸಂವೇದನೆ ಮತ್ತು ಅಸ್ಪೃಶ್ಯತೆಗಳನ್ನಾಗಿ ವಿಭಾಗಿಸಿಕೊಂಡು ಪ್ರಾತಿನಿಧಿಕ ಕಾದಂಬರಿಗಳ ಆಧಾರದಲ್ಲಿ ಅಧ್ಯಯನ ನಡೆಸಿದ್ದಾರೆ. ಪ್ರಸ್ತುತ ಈ ಸಂಶೋಧನೆಯಲ್ಲಿ 'ಅಸ್ಪೃಶ್ಯತೆ ಮತ್ತು ದಲಿತ ಮಹಿಳೆ' ಎಂಬ ಉಪ ಅಧ್ಯಾಯವನ್ನಾಗಿ ಮಾತ್ರ ಅಧ್ಯಯನ ನಡೆಸಲಾಗಿದೆ. ಆದರೆ ಆಂಜನಪ್ಪನವರು ಇಡೀ ಸಂಶೋಧನೆಯನ್ನೇ ಅಸ್ಪೃಶ್ಯತೆ ಆಧಾರದಲ್ಲಿ ಕೈಗೊಂಡಿದ್ದಾರೆ.

'ಬಿ.ಟಿ. ಲಲಿತಾ ನಾಯಕ್', 'ಜೀವನ ಮತ್ತು ಸಾಹಿತ್ಯ' ಎಂಬ ರವಿನಾಯ್ಕ ಎಂ. ಅವರ ಮಹಾಪ್ರಬಂಧದಲ್ಲಿ 'ಬಿ.ಟಿ. ಲಲಿತಾ ನಾಯಕ್ : ಕಾದಂಬರಿ – ವಿಭಿನ್ನ ನೆಲೆಗಳು' ಎಂಬ ಅಧ್ಯಾಯದಲ್ಲಿ 'ಸಾಮಾಜಿಕ ನೆಲೆ', 'ಸ್ತ್ರೀವಾದಿ ನೆಲೆ', 'ಪ್ರತಿಭಟನೆಯ ನೆಲೆ', 'ಧಾರ್ಮಿಕ ನೆಲೆಗಳಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಕುರಿತು ಕಾದಂಬರಿಗಳ ಅಡಿಯಲ್ಲಿ ಅಧ್ಯಯನ ಮಾಡಿದ್ದಾರೆ. ಆದರೆ 'ಕನ್ನಡ ಕಾದಂಬರಿಗಳಲ್ಲಿ ದಲಿತ ಮಹಿಳೆಯ ಶೋಧದ ನೆಲೆಗಳು' ಎಂಬ ಪ್ರಸ್ತುತ ಸಂಶೋಧನೆಯ ಸಂದರ್ಭದಲ್ಲಿ 'ಗತಿ' ಕಾದಂಬರಿಯನ್ನು ಮಾತ್ರ ದಲಿತ ಮಹಿಳೆಯ ಶೋಷಣೆಯ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಲಲಿತಾ ನಾಯಕರ ಪರಿಚಯ, ಹಿನ್ನೆಲೆ, ಪ್ರೇರಣೆ – ಪ್ರಭಾವಗಳನ್ನು ಕುರಿತಾಗಲಿ, ಪತ್ರಿಕಾ ವರದಿಗಾರ್ತಿಯಾಗಿ, ರಾಜಕಾರಣಿಯಾಗಿ, ಹೋರಾಟಗಾರ್ತಿಯಾಗಿಯಾಗಲೀ ಅಧ್ಯಯನ ನಡೆಸಿಲ್ಲ.

ವಿಮರ್ಶಾಕೃತಿಗಳ ಆಧಾರದಲ್ಲಿ ಪ್ರಸ್ತುತ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಕಾದಂಬರಿಗಳ ಅಧ್ಯಯನವನ್ನು ಗಮನಿಸುವುದಾದರೆ ಆರ್.ವಿ. ಭಂಡಾರಿ ಅವರು 'ದಲಿತ

ಮಾರ್ಗ' ಪುಸ್ತಕದಲ್ಲಿ ಚೋಮನ ದುಡಿಯ ವಸ್ತು ಮತ್ತು ವಿನ್ಯಾಸದ ಕಡೆಗೆ ಬೆಳಕು ಚೆಲ್ಲಿದ್ದಾರೆ. ಇವರು ತಮ್ಮ ಲೇಖನದಲ್ಲಿ ಕಥಾನಾಯಕ ಚೋಮನ ಮೇಲೆ ಗಮನ ಕೇಂದ್ರೀಕರಿಸಿದ್ದಾರೆ. ಊಳಿಗಮಾನ್ಯ ಅಥವಾ ಜಮೀನ್ದಾರೀ ವ್ಯವಸ್ಥೆ ಮತ್ತು ಬ್ರಾಹ್ಮಣಿಕೆಯ ಸಂಪ್ರದಾಯದಿಂದಾಗಿ ನಲುಗಿ ಹೋದ ಚೋಮನ ಕುಟುಂಬದ, ಕೆಳಜಾತಿಯ ನೋವುಗಳನ್ನು ವಿಶ್ಲೇಷಿಸಿದ್ದಾರೆ. ಚೋಮನ ಧೀರೋದಾತ್ತ ವ್ಯಕ್ತಿತ್ವವನ್ನು ಈ ಮೂಲಕ ಅನಾವರಣಗೊಳಿಸಿದ್ದಾರೆ. ತನ್ನ ಮಾನಸಿಕ ವೇದನೆಗೆ ಆತ ಮೊರೆ ಹೋಗುವುದು ಕಲೆ, ದುಡಿಗೆ, ತಾನು ಸೇಂದಿ ಅಂಗಡಿಗೆ ಹೋದರೂ ತನ್ನ ಮಕ್ಕಳನ್ನು ಒಯ್ಯುವುದಿಲ್ಲ. ತನ್ನ ಆರ್ಥಿಕ ಮಿತಿಯ ಪ್ರಜ್ಞೆ ಅವನಿಗಿದೆ. ಮಗ ಮುಳುಗಿ ಕಣ್ಮುಂದೆ ಸತ್ತರೂ ಅಲ್ಲಿದ್ದವರ ಮೇಲೆ ಹರಿಹಾಯದೆ ಅಥವಾ ಬೊಬ್ಬೆ ಹಾಕದೆ ತನ್ನ ದುಃಖ ತಾನೇ ನುಂಗಿಕೊಳ್ಳುವ ನೀಲಕಂಠನೆಂಬಂತೆ ಚಿತ್ರಿಸಿದ್ದಾರೆ. ಜಾತ್ರೆಯಲ್ಲಿ ಸರೀಕರು ಸಿಕ್ಕಿ ಹೆಂಡದಂಗಡಿಗೆ ಕರೆದರೆ ತನ್ನಲ್ಲಿ ಹಣವಿಲ್ಲದ್ದರಿಂದ ತನಗೆ ಮೊದಲೇ ಆಗಿದೆ ಎಂದು ತಪ್ಪಿಸಿಕೊಳ್ಳುವ ಸಂಯಮಿ. ಮಗಳು ಅನೈತಿಕ ಸಂಬಂಧ ಬೆಳೆಸಿದಳೆಂದು ಸಿಟ್ಟಿಗೆದ್ದರೂ ಪಾಪ ಅವಳದೇನು ತಪ್ಪು, ತನ್ನದೇ ತಪ್ಪಲ್ಲವೇ ಎಂದು ತಳಮಳಗೊಳ್ಳುವ ಪ್ರೇಮದ ಹೃದಯದವನು. ಸಾವಿನ ಸಂಕಟ ಬಂದರೂ ಬೇಸಾಯಗಾರನಾಗುವ ಛಲ ಮರೆಯದ ಧೀಮಂತ.

ಹೀಗೆ ಆರ್.ವಿ. ಭಂಡಾರಿಯವರ ಚೋಮನನ್ನು ಕುರಿತ ವಿಮರ್ಶೆ ಮುಂದುವರೆಯುತ್ತದೆ. ಒಟ್ಟಾರೆಯಾಗಿ ಆರ್.ವಿ. ಭಂಡಾರಿಯವರು ಕಾದಂಬರಿಯ ಪ್ರತಿ ವಿಷಯ, ಸಂದರ್ಭದ ಕಡೆಗೂ ಗಮನ ಹರಿಸುತ್ತಾರೆ. ಬೇರೆ ಬೇರೆ ವಿಮರ್ಶಕರು ಕೂಡಾ ಚೋಮನ ಭೂಮಿಯ ಮೇಲಿನ ಪ್ರೀತಿ, ಅವನ ಮಕ್ಕಳು, ಗುರುವ, ಚನಿಯ ಮುಂತಾದವರ ಕಡೆ ಹೆಚ್ಚು ಗಮನ ಹರಿಸುತ್ತಾರೆ. ಆದರೆ ಪ್ರಸ್ತುತ ಸಂಶೋಧನಾ ಪ್ರಬಂಧವು ದಲಿತ ಮಹಿಳೆಯರನ್ನು ಪ್ರತಿನಿಧಿಸುತ್ತಿರುವುದರಿಂದ ಬೇರೆಲ್ಲಾ ಸಮಸ್ಯೆಗಳಿಗಿಂತ ಇಲ್ಲಿ ಬೆಳ್ಳಿಯೇ ಪ್ರಸ್ತುತ ಎನಿಸುತ್ತಾಳೆ. ಬೇರೆ ವಿಮರ್ಶಕರು ಬೆಳ್ಳಿಯ ಕಡೆ ಗಮನ ಹರಿಸಿದರೂ ಅವರ ಸಂಪೂರ್ಣ ಆದ್ಯತೆ ಬೆಳ್ಳಿಯಲ್ಲ. ಕಾದಂಬರಿಯ ನಾಯಕ ಚೋಮ.

ಮೊಗಳ್ಳಿ ಗಣೇಶ್ ಅವರು ಕಾದಂಬರಿಕಾರ ಕಾರಂತರ ದೃಷ್ಟಿಯಿಂದ ಚೋಮನನ್ನು ವಿಶ್ಲೇಷಿಸುತ್ತಾರೆ. ಕಾರಂತರು ಜಾತಿಯ ಗುಂಗಿನಿಂದ ಹೊರಬರಲು ಸಾಧ್ಯವಾಗಿಲ್ಲ ಎನ್ನುವ ದೃಷ್ಟಿಕೋನದಲ್ಲಿ ಗಣೇಶ್ ಅವರ ವಿಮರ್ಶೆ ಮೂಡಿಬಂದಿದೆ. ಆದ್ದರಿಂದಲೇ ಕಾರಂತರ ಚೋಮ ಸ್ವಾತಂತ್ರ್ಯ ಪಡೆಯದಂತೆ ಕಾರಂತರು ನೋಡಿಕೊಂಡಿದ್ದಾರೆ. ಹೀಗಾಗಿಯೇ ಕಾರಂತರ ಚೋಮ ಸ್ವಾತಂತ್ರ್ಯವನ್ನು ಪಡೆಯಲಾರ. ರಮ್ಯ ರಾಷ್ಟ್ರೀಯವಾದಿ ಕಾರಂತರಿಗೆ ಚೋಮನನ್ನು ಪುನರ್ ರೂಪಿಸಿಕೊಳ್ಳುವುದೆಂದರೆ ಸ್ವಾತಂತ್ರ್ಯ ಭಾರತವನ್ನು ಕಂಡುಕೊಂಡಷ್ಟು ಸುಖ.

ಚೋಮನ ಅನುಭವಗಳನ್ನು ತಮ್ಮ ಧ್ಯಾನದಿಂದ ರೂಪಾಂತರಿಸುವುದರಿಂದ ತಾನೂ ದಲಿತನಾಗಿ ಬಿಡುವೆ ಎಂಬಷ್ಟು ಆದರ್ಶದ ಹೆಮ್ಮೆ.

ಕಾರಂತರು ದಲಿತರ ಅನುಭವದ ಆಳಕ್ಕೇ ಇಳಿಯಲಾರರು. ಅವರದು ಹೊರಗಿನ ಅನುಭವ. ದಲಿತರೇ ಅನುಭವಿಸಿ ಬರೆದ ಬರಹಕ್ಕೂ ಹೊರಗಿನಿಂದ ನೋಡಿ ಬರೆದ ಬರಹಕ್ಕೂ ತುಂಬಾ ಅಂತರವಿರುತ್ತದೆಂದು ಮೊಗಳ್ಳಿ ಗಣೇಶ್‌ರವರು ಚೋಮನದುಡಿ ಕಾದಂಬರಿಯ ಬಗ್ಗೆ ಹೇಳಿದ್ದಾರೆ. ಇವರು ತಮ್ಮ ವಿಮರ್ಶೆಯಲ್ಲಿ ಲೇಖಕರನ್ನು ಕೇಂದ್ರವಾಗಿರಿಸಿಕೊಂಡಿದ್ದಾರೆ. ಬೆಳ್ಳಿಪಾತ್ರದ ಕಡೆಗೆ ಗಮನ ಹರಿಸಿಲ್ಲ. ಅಥವಾ ಬೆಳ್ಳಿ ಪಾತ್ರ ಇಲ್ಲಿ ಗೌಣವಾಗಿದೆ. ಪ್ರಸ್ತುತ ಸಂಶೋಧನಾ ವಿಷಯದ ಕೇಂದ್ರ ದಲಿತ ಮಹಿಳೆಯಾಗಿರುವುದರಿಂದ ಚೋಮನದುಡಿ ಕಾದಂಬರಿಯಲ್ಲಿ ಬೆಳ್ಳಿಯೇ ಕೇಂದ್ರವಾಗಿದ್ದಾಳೆ. ಬೆಳ್ಳಿಯು ಶೋಷಣೆಗೊಳಪಡುತ್ತಿರುವ ಕಾರಣಗಳನ್ನು, ಶೋಷಣೆಯ ಮೂಲಗಳನ್ನು ಸೂಕ್ಷ್ಮವಾದ ಸಂಶೋಧನಾ ಓದಿನಿಂದ ಕಂಡುಕೊಳ್ಳಲಾಗುತ್ತಿದೆ.

ಇದುವರೆಗೂ ಬಂದಂಥ ದಲಿತರನ್ನು ಕುರಿತ ಸಂಶೋಧನೆಗಳಲ್ಲಿ ಒಟ್ಟಾರೆ ದಲಿತರ ನೋವುಗಳನ್ನು ಪರಿಗಣಿಸಲಾಗುತ್ತಿದೆ. ಆ ಸಮಾಜದ ಮುಖ್ಯ ಭಾಗವಾದ ದಲಿತ ಮಹಿಳೆಯನ್ನು ಕುರಿತ ಇಡಿಯಾದ ಸಂಶೋಧನೆ ಇದುವರೆಗೂ ಕಾದಂಬರಿಗಳ ಆಧಾರದ ಅಡಿಯಲ್ಲಿ ನಡೆದಿಲ್ಲ. ಸಮಾಜ ಶಾಸ್ತ್ರೀಯ ಸಂಶೋಧನೆಯಲ್ಲಿ ಅಂಕಿ–ಅಂಶಗಳ ರೀತಿಯಲ್ಲಿ ನಡೆದಿವೆ. ಸಮಗ್ರ ಮಹಿಳಾ ಜಗತ್ತನ್ನು ತೆಗೆದುಕೊಂಡಾಗಲೂ ಅಲ್ಲಿಯೂ ದಲಿತ ಮಹಿಳಾ ಪ್ರಾತಿನಿಧ್ಯ ಕಡಿಮೆಯಿದೆ. ದಲಿತರ ನೋವುಗಳನ್ನು ಕುರಿತ ಕಾದಂಬರಿಗಳನ್ನು ಗಮನಿಸಿದಾಗ ಅಂತಹ ಕಾದಂಬರಿಗಳಲ್ಲಿ ದಲಿತ ಮಹಿಳೆ ಹೆಚ್ಚೆಂದರೆ ಒಂದೊಂದು ಪಾತ್ರವಾಗಿ ಬರಬಹುದು. ಉದಾ: ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ತೆಗೆದುಕೊಂಡಾಗ ಅಲ್ಲಿ ಕುಳವಾಡಿ ಸಣ್ಣನ ಮಗಳು ಪುಟ್ಟಿಯನ್ನು ಮಾತ್ರ ದಲಿತ ಮಹಿಳೆಯಾಗಿ ಪರಿಗಣಿಸಲಾಗಿದೆ. ಭಾರತೀಪುರದಲ್ಲಿ ದಲಿತರ ಬದುಕು ಅನಾವರಣಗೊಂಡಿದ್ದರೂ ದಲಿತ ಹೆಣ್ಣುಗಳನ್ನು ಪರಿಗಣಿಸುವಾಗ ಅನಂತಮೂರ್ತಿಯವರು ಕಾವೇರಿಯನ್ನು ಮಾತ್ರ ಪ್ರಸ್ತಾಪಿಸಿದ್ದಾರೆ. ಉಳಿದಂತೆ ಅವರ ದಲಿತ ಸ್ತ್ರೀಪಾತ್ರ ವಿಶ್ಲೇಷಣೆ ಇಲ್ಲವೆಂದೇ ಹೇಳಬಹುದು.

ಭಾರತೀಪುರದ ಜಗನ್ನಾಥ ಇಂಗ್ಲೆಂಡಿನಿಂದ ಬಂದವ. ಇಂಥ ಜಗನ್ನಾಥನ ಅಪಕ್ವ ಆದರ್ಶಗಳನ್ನು ಕುರಿತು ಸಿದ್ಧಾಶ್ರಮರು ತಮ್ಮ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ. ಭಾರತೀಪುರ ಕಾದಂಬರಿಯಲ್ಲಿ ಹೊಲೆಯರ ಬದುಕು ಅನಾವರಣಗೊಂಡಿದ್ದರೂ ದಲಿತ ಮಹಿಳೆಯಾಗಿ ಕಾವೇರಿ ಪಾತ್ರ ಮಾತ್ರ ಮೂಡಿಬಂದಿದೆ. ಜಗನ್ನಾಥನಿಗೆ ಕಾವೇರಿಯ ಮೇಲೆ ಮನಸ್ಸಾದರೂ

ಅವನ ಆದರ್ಶಗಳ ಕಾರಣದಿಂದ ಹಾಗೆ ಮಾಡುವುದಿಲ್ಲ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕುವೆಂಪುರವರು ಪುಟ್ಟಿಯನ್ನು ಬೀದಿನಾಯಿಗೆ ಹೋಲಿಸಿರುವುದು ಮತ್ತು ತಿಮ್ಮಪ್ಪ ಹೆಗ್ಗಡೆಯನ್ನು ಚೀನೀ ನಾಯಿಗೆ ಹೋಲಿಸಿರುವುದು ಹಲವು ಗೊಂದಲಗಳಿಗೆ ಕಾರಣವಾಗಿದೆ. ಆದರೆ ಪುಟ್ಟಿ ಮೇಲೆ ನಡೆದ ಶೋಷಣೆಯ ಕಡೆಗೆ ಇತರ ವಿಮರ್ಶಕರು ಅಷ್ಟಾಗಿ ಗಮನಹರಿಸಿರುವುದು ಕಾಣಬರುವುದಿಲ್ಲ. ಕೆಲವು ಕಡೆಗಳಲ್ಲಿ ವಿಮರ್ಶಕರು ಪುಟ್ಟಿಯು ತಿಮ್ಮಪ್ಪ ಹೆಗಡೆಯೊಂದಿಗೆ ನಡೆದುಕೊಂಡಿದ್ದನ್ನೇ ವಿಜೃಂಭಿಸಿ ಹೇಳಿದ್ದಾರೆ. ಆದರೆ ಇಂತಹ ಪುಟ್ಟಿಯು ತಾಯಿ ಸತ್ತ ತವರಿಗೆ ತಾಯಿಯಾಗಿ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸಿದ್ದರ ಬಗ್ಗೆ (ಕಡೆಗೆ) ಪ್ರಸ್ತುತ ಸಂಶೋಧನೆಯಲ್ಲಿ ಗಮನ ಹರಿಸಲಾಗುತ್ತಿದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹೊಲೆಯರ ಮೇಲೆ ದೈಹಿಕ ಶೋಷಣೆಯೂ ನಡೆಯುತ್ತದೆ. ಒಡೆಯರಿಗೆ ದಲಿತ ಕೇರಿಯ ಹೆಣ್ಣು ಬೇರೆ ಕೇರಿಯ ಗಂಡನ್ನು ಮದುವೆಯಾಗುವಂತೆ ಇರಲಿಲ್ಲ. ಒಂದು ವೇಳೆ ಅಪ್ಪಿ ತಪ್ಪಿ ಮದುವೆ ಆಗಿದ್ದರೂ ತಾಳಿಯನ್ನು ಕೀಳಿಸಿಯಾದರೂ ತಮ್ಮ ಕೇರಿಯ ಹುಡುಗನಿಗೆ ಮದುವೆ ಮಾಡಿಸುತ್ತಿದ್ದರು. ಜಾತಿಯ ಕಾರಣದಿಂದ ನಡೆಯುವ ದೈಹಿಕ ಶೋಷಣೆಯನ್ನು ಇಲ್ಲಿ ಯಥೇಚ್ಛವಾಗಿ ಕಾಣುತ್ತೇವೆ. ಟಿ.ಪಿ. ಅಶೋಕ ಅವರಿಗೆ ತಿಮ್ಮಪ್ಪ ಹೆಗಡೆ ಮತ್ತು ಹೊಲೆಯ ಕುಳವಾಡಿ ಸಣ್ಣನ ಮಗಳು ಪುಟ್ಟಿಯ ಚೀನೀನಾಯಿ ಮತ್ತು ಬೀದಿನಾಯಿ ಸಮೀಕರಣಗಳಲ್ಲಿ ಆಸಕ್ತಿಯಿಲ್ಲವೆನಿಸುತ್ತದೆ. ಅವರ (ಟಿ.ಪಿ.ಅಶೋಕ) ಕುವೆಂಪು ಕಾದಂಬರಿ ಎರಡು ಅಧ್ಯಯನಗಳು ಎಂಬ ಪುಸ್ತಕದಲ್ಲಿ ಆ ಬಗ್ಗೆ ಪ್ರಸ್ತಾಪಿಸಿಲ್ಲ. ಆದರೆ ಬಿ. ಕೃಷ್ಣಪ್ಪನವರ ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರಣ ಲೇಖನದಲ್ಲಿ ಕುಳವಾಡಿ ಸಣ್ಣನ ಮಗಳು ಪುಟ್ಟಿ ಮತ್ತು ತಿಮ್ಮಪ್ಪ ಹೆಗಡೆಯ ಅಸಹಜ ಕಾಮವನ್ನು ಪ್ರಸ್ತಾಪಿಸಿದ್ದಾರೆ. ಆ ಮೂಲಕ ಬಿ. ಕೃಷ್ಣಪ್ಪನವರು ಹೊಲೆಯ ಹೆಣ್ಣುಗಳ ಮೇಲೆ ನಡೆಯುತ್ತಿರುವ ಶೋಷಣೆಯನ್ನು ಕುರಿತು ಟೀಕಿಸಿದ್ದಾರೆ. ಅವರ ಪ್ರಕಾರ ದಲಿತೇತರರು ಬರೆದ ದಲಿತ ಸಾಹಿತ್ಯ ದಲಿತರೇ ಬರೆದ ದಲಿತ ಸಾಹಿತ್ಯಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿಲ್ಲ ಎಂಬುದು ಅವರ ವಿಮರ್ಶೆಯಿಂದ ವೇದ್ಯವಾಗುತ್ತದೆ.

ಅರವಿಂದ ಮಾಲಗತ್ತಿಯವರು ತಮ್ಮ 'ದಲಿತ ಸಾಹಿತ್ಯ' ಎಂಬ ಪುಸ್ತಕದಲ್ಲಿ 'ಗತಿ' ಕಾದಂಬರಿಯನ್ನು ಕುರಿತ ಲೇಖನವೊಂದನ್ನು ಬರೆದಿದ್ದಾರೆ. ಆದರೆ ಇಲ್ಲಿ ಕುಟುಂಬದ ಒಳಗಡೆ ನಡೆಯುವ ಶೋಷಣೆಯನ್ನು ಮಾತ್ರ ಪ್ರಾಸ್ತಾವಿಕವಾಗಿ ಹೇಳುತ್ತಾರೆ. ಅದನ್ನು ಹೊರತುಪಡಿಸಿ ಲಚ್ಮಿಯ ಮೇಲೆ ನಡೆಯುವ ಅತ್ಯಾಚಾರವನ್ನು ಪ್ರಸ್ತಾಪಿಸಿಲ್ಲ. ಮಠದಯ್ಯನ ಕಾಮತೃಷೆಗೆ ಬಲಿಯಾಗುವ ಲಚ್ಮಿಯ ವಿವರಗಳನ್ನು ಅವರು ಪರಿಗಣಿಸಲಿಲ್ಲ. ಲಚ್ಮಿ ಮತ್ತು ಸೋನಿಯರು

ಕುಟುಂಬದ ಆಧಾರಸ್ತಂಭವಾಗಿದ್ದಾರೆ. ಸೋನಿಯ ಬದುಕುವ ಛಲಗಾರಿಕೆಯು ಅದ್ಭುತವಾದುದು. ಇಂತಹ ದಿಟ್ಟ ಹೆಣ್ಣನ್ನು ದೇವರು ಮತ್ತು ಆಚರಣೆಗಳ ನೆಪದಲ್ಲಿ ಶೋಷಣೆಗೆ ಗುರಿಯಾಗಿರುವ ಸಂದರ್ಭವನ್ನು ಪ್ರಸ್ತುತ ಸಂಶೋಧನೆಯಲ್ಲಿ ಪ್ರಸ್ತಾಪಿಸಲಾಗುತ್ತಿದೆ.

ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯನ್ನು ಕುರಿತು ಡಾ.ಮೀನಾಕ್ಷಿ ಬಾಳಿಯವರು ಈ ರೀತಿ ವಿಮರ್ಶಿಸಿದ್ದಾರೆ. ಈ ಕಾದಂಬರಿ ಸ್ತ್ರೀಯ ಮೇಲಿನ ನಿರಂತರ ಲೈಂಗಿಕ ಶೋಷಣೆಯ ವಸ್ತುವನ್ನೇ ಆಧಾರವಾಗಿಸಿಕೊಂಡಿದೆ. ಅದು ಅತಿರೇಕ ಎನಿಸುವಷ್ಟು ಒಂದೇ ಹೆಣ್ಣಿನ ಮೇಲೆ ಮೇಲಿಂದ ಮೇಲೆ ಶೋಷಣೆ ನಡೆಯುತ್ತಲೇ ಇರುತ್ತದೆ. ಹೆಣ್ಣಿನ ದುರಂತದ ಕಥೆಯೇ ಹಸಿಮಾಂಸ ಮತ್ತು ಹದ್ದುಗಳು.

ದಲಿತ ಹಾಗೂ ದಲಿತೇತರ ಕಾದಂಬರಿಕಾರರು ತಮ್ಮ ಬರಹಗಳಲ್ಲಿ ದಲಿತರ ಒಟ್ಟಾರೆ ಬದುಕನ್ನು ಇಡಿಯಾಗಿ, ಬಿಡಿಯಾಗಿ ದಲಿತ ಲೋಕದ ಅನಾವರಣ ಮಾಡಿದ್ದಾರೆ. ಇದುವರೆಗೂ ಬಂದಂಥ ದಲಿತರನ್ನು ಕುರಿತ ಸಂಶೋಧನೆಗಳಲ್ಲಿ ಒಟ್ಟಾರೆ ದಲಿತರ ನೋವುಗಳನ್ನು ಪರಿಗಣಿಸಲಾಗುತ್ತಿದೆ. ದಲಿತ ಮಹಿಳೆಯನ್ನು ಕುರಿತು ಸಮಾಜ ಶಾಸ್ತ್ರೀಯ ಅಧ್ಯಯನ ನಡೆದಿದೆ. ಇಲ್ಲಿ ಸಾಹಿತ್ಯ ಕೃತಿಗಳನ್ನು ಪರಿಗಣಿಸಿಲ್ಲ. ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ ಸಂಶೋಧನಾ ಪ್ರಬಂಧದಲ್ಲಿ ದಲಿತ ಮತ್ತು ಬಂಡಾಯ ಸಂದರ್ಭದ ದಲಿತ ಮಹಿಳೆಯರನ್ನು ಕುರಿತು ಚರ್ಚಿಸಲಾಗಿದೆ. ದಲಿತ ಮಹಿಳೆಯನ್ನು ಕುರಿತಂತೆ ವಿಶ್ವವಿದ್ಯಾನಿಲಯಗಳು ನಡೆಸುವ ವಿಚಾರಸಂಕಿರಣಗಳಲ್ಲಿ ಚರ್ಚಿಸಲಾಗಿದೆ. ದಲಿತ ಮಹಿಳೆಯನ್ನು ಕ್ವಚಿತ್ತಾಗಿ ಸ್ಪರ್ಶಿಸುವ ಎಂ.ಫಿಲ್. ನಿಬಂಧಗಳೂ ಬಂದಿವೆ. ದಲಿತ ಮಹಿಳೆಯನ್ನು ಕುರಿತ ಕಾದಂಬರಿಗಳನ್ನು ಆಧರಿಸಿದ ವಿಮರ್ಶೆಗಳೂ ನಡೆದಿವೆ. ಆದರೆ ಇಂತಹ ವಿಮರ್ಶಕರು ಒಟ್ಟಾರೆ ದಲಿತ ಲೋಕದ ಕಡೆ ಗಮನ ಹರಿಸಿದ್ದಾರೆ. ದಲಿತ ಮಹಿಳೆಯ ಮೇಲಿನ ಗಮನ ಕೊಂಚ ಸಡಿಲವಾಗಿದೆ ಎನಿಸುತ್ತದೆ. ಆದ್ದರಿಂದ ಕಾದಂಬರಿಗಳನ್ನು ಆಧಾರವಾಗಿಟ್ಟುಕೊಂಡು ದಲಿತ ಮತ್ತು ದಲಿತೇತರ ಕಾದಂಬರಿಗಳಲ್ಲಿ, ಪುರುಷ ಮತ್ತು ಮಹಿಳೆ ಚಿತ್ರಿಸಿರುವ ದಲಿತ ಮಹಿಳೆಯರನ್ನು ಕುರಿತು ಸೂಕ್ಷ್ಮ ಸಂಶೋಧನಾ ಓದಿನ ಮುಖಾಂತರ ದಲಿತ ಮಹಿಳೆಯನ್ನು ಕುರಿತ ಪೂರ್ಣ ಪ್ರಮಾಣದ ನಿರ್ವಚನವನ್ನು ಕೊಡುವುದು ಪ್ರಸ್ತುತ ಸಂಶೋಧನೆಯ ಉದ್ದೇಶವಾಗಿದೆ.

ಅಧ್ಯಾಯ – ೩

ದಲಿತ ಮತ್ತು ದಲಿತೇತರ ಕಾದಂಬರಿಗಳಲ್ಲಿ ದಲಿತ ಮಹಿಳೆ

೩.೧ ದಲಿತ ಪದದ ಅರ್ಥ, ಹುಟ್ಟು, ಬೆಳವಣಿಗೆ

೩.೨ ಯಾವುದು ದಲಿತ ಸಾಹಿತ್ಯ :

೩.೩ ದಲಿತ ಸಾಹಿತ್ಯದ ಲಕ್ಷಣಗಳು

೩.೪ ದಲಿತ ಸಾಹಿತ್ಯದ ಪ್ರೇರಣೆ

೩.೫ ಯಾವುದು ದಲಿತೇತರ ಸಾಹಿತ್ಯ

೩.೬ ದಲಿತ ಕಾದಂಬರಿಗಳಲ್ಲಿ ಚಿತ್ರಣಗೊಂಡ ದಲಿತ ಮಹಿಳೆ

೩.೭ ದಲಿತೇತರ ಕಾದಂಬರಿಗಳಲ್ಲಿ ಚಿತ್ರಣಗೊಂಡ ದಲಿತ ಮಹಿಳೆ

ಅಧ್ಯಾಯ – ೩

೧. ದಲಿತ ಪದದ ಅರ್ಥ, ಹುಟ್ಟು, ಬೆಳವಣಿಗೆ :

'ದಲಿತ' ಪದವನ್ನು ಕುರಿತು ಒಂದೇ ಮಾತಿನಲ್ಲಿ ಸರಳವಾಗಿ ಹೇಳುವುದು ಕಷ್ಟ. 'ದಲಿತ' ಪದವನ್ನು ಕುರಿತಂತೆ ನಿಘಂಟು ಮತ್ತು ಅರ್ಥಕೋಶಗಳಲ್ಲಿ ಸಾಮಾನ್ಯವಾಗಿ ಮುಂದೆ ಕಾಣಿಸಿರುವ ಅರ್ಥಗಳನ್ನು ಗುರುತಿಸಬಹುದು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ

- "ಒಡೆದ
- ಸೀಳಿದ
- ಅರಳಿದ
- ವಿಕಸಿತವಾದ
- ಹಿಂದುಳಿದುದು"

ಯಾವ ವರ್ಗವು ಇಂದಿನ ಪ್ರಚಲಿತ ವ್ಯವಸ್ಥೆಯಿಂದ ಅತ್ಯಂತ ದಲಿತವಾಗಿದೆಯೋ.. ಅದೇ ವರ್ಗವು.. ಜಾಗೃತಿಯನ್ನು ಪಡೆದುಕೊಳ್ಳಬಲ್ಲದು". (ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು:೪ನೆಯ ಸಂಪುಟ:೩೮೨೮) ಎಂಬ ಅರ್ಥವಿದೆ. ಹಾಗೆಯೇ ಪಂಡಿತ ಕವಲಿಯರ ಕಸ್ತೂರಿಕೋಶದಲ್ಲಿ 'ದಲಿತ' ಪದಕ್ಕೆ

- "ಒಡೆದ
- ಅರಳಿದ
- ಬಿರಿದ
- ಮರ್ದಿಸಲ್ಪಟ್ಟ
- ಸೋಲಿಸಲ್ಪಟ್ಟ
- ಹಿಂದುಳಿದ"

(ಪಂಡಿತ ಕವಲಿಯವರ ಕಸ್ತೂರೀ ಕೋಶ:೪೪೮) ಎಂಬ ಅರ್ಥಗಳಿವೆ.

ಶಿವರಾಮ ಕಾರಂತರ ಸಿರಿಗನ್ನಡ ಅರ್ಥಕೋಶದಲ್ಲಿ (೨೨೪) ದಲಿತ ಪದವನ್ನು ಕುರಿತು

- "ಒಡೆದ
- ಅರಳಿದ
- ಪತಿತ"

ಎಂಬ ಅರ್ಥಗಳಿವೆ. ಮೇಲಿನ ಮೂರೂ ಅರ್ಥಕೋಶಗಳಲ್ಲಿ ಅತ್ಯಧಿಕವಾಗಿ ಒಂದೇ ಅರ್ಥವನ್ನು ಕಾಣುತ್ತೇವೆ. ಅಲ್ಲದೆ ಈ ಅರ್ಥಗಳು ಸಾಮಾನ್ಯವಾಗಿ ದಲಿತ ಜನಾಂಗದಲ್ಲಿಲ್ಲದ

ಒಗ್ಗಟ್ಟನ್ನು ತಿಳಿಸಿಕೊಡುತ್ತವೆ. ಹಾಗೆಯೇ ದಲಿತರು ಶತಮಾನಗಳಿಂದಲೂ ಅಭಿವೃದ್ಧಿ ಹೊಂದದೆ ಹಿಂದುಳಿದಿರುವವರು, ಏಳಿಗೆಯಾಗದವರು, ಯಾರಿಂದಲೋ ತುಳಿತಕ್ಕೆ ಒಳಗಾದವರು ಎಂಬುದನ್ನು ಸೂಚಿಸುವಂತಿವೆ.

"೧೯೬೭ರಲ್ಲಿ ಔರಂಗಾಬಾದಿನಲ್ಲಿ ನಡೆದ ಒಂದು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಸಾಹಿತಿಗಳು ಈ ಸಾಹಿತ್ಯವನ್ನು 'ದಲಿತ' 'ಪದ ದಲಿತ' 'ನವಬೌದ್ಧ' ಎಂಬ ಪದಗಳಿಂದ ಕರೆದು ಇನ್ನಷ್ಟು ಚರ್ಚೆಗೆ ಕಾರಣರಾದರು. 'ದಲಿತರು' ಎಂದರೆ ಯಾರು? 'ದಲಿತ' ಈ ಪದ ಜಾತಿಸೂಚಕವೆ? ದಲಿತರ ಬಗೆಗಿನ ಸಂವೇದನಾಶೀಲ ಬರವಣಿಗೆ ಇತರ ಸಾಹಿತಿಗಳಿಂದ ಸಾಧ್ಯವಿಲ್ಲವೇ? ಈ ಸವಾಲುಗಳು ದಲಿತೇತರರಿಂದ ನಿರ್ಮಾಣವಾದವು. ಬಾಬುರಾವ್ ಬಾಗೂಲ, ಡಾ ಮಾನಖಡೆ, ಡಾ. ಸದಾ ಕರ್ಹಾಡೆ ಇವರ ಅಭಿಪ್ರಾಯದಲ್ಲಿ 'ದಲಿತ' ಪದವು ಶೋಷಿತರನ್ನೆಲ್ಲ ಒಳಗೊಳ್ಳುವಂಥದು. ದಲಿತರೆಂದರೆ ಜಾತಿವ್ಯವಸ್ಥೆ ಮತ್ತು ಅದರ ಸಮಗ್ರ ವೈಚಾರಿಕ ವ್ಯವಸ್ಥೆಯನ್ನು ನಾಶ ಮಾಡಬಯಸುವವರು; ದಲಿತರೆಂದರೆ ಈ ಜಗತ್ತು ಮತ್ತು ಜೀವನವನ್ನು ಹೊಸ ದೃಷ್ಟಿಯಿಂದ ಕಟ್ಟಬಯಸುವವರು; ಪ್ರಜ್ಞಾವಂತ ದಲಿತನಿಂದ, ಪ್ರಳಯಕಾರಿ ದಲಿತನಿಂದ, ಇವತ್ತಿನ ಸಮಾಜದ ಪುನರ್ ನಿರ್ಮಾಣದ ಚಿಂತನೆ, ಆತನಿಗಾಗಿ ಹೊಸ 'ಶಸ್ತ್ರಗಳು', 'ಶಾಸ್ತ್ರಗಳು' ಉಪಲಬ್ಧವಾಗಿವೆ. 'ಅಮೇರಿಕೆಯೊಳಗಿನ ಕರಿ, ಕೆಂಪು, ಕಂದು; ಅಫ್ರೋ ಏಶಿಯಾ ದೇಶದೊಳಗಿನ ಕರಿ, ಕೆಂಪು, ಹಳದಿ ಈ ಜನರನ್ನೆಲ್ಲ 'ದಲಿತ ಪದ' ಒಳಗೊಳ್ಳುತ್ತದೆ. ನಮ್ಮ ದೇಶದೊಳಗಿನ ಅಸ್ಪೃಶ್ಯ, ಆದಿವಾಸಿ ಮತ್ತು ಶೋಷಿತ ಜನರೆಲ್ಲ ಈ ಪದದ ವ್ಯಾಪ್ತಿಯಲ್ಲಿ ಸೇರುತ್ತಾರೆ ಎಂದು ಬಾಬುರಾವ್ ಬಾಗೂಲ ೧೭-೧೮ ಜನವರಿ ೧೯೭೬ ರಂದು ನಾಗಪೂರದಲ್ಲಿ ನಡೆದ ದಲಿತ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಾರೆ" (ಸರಜೂ ಕಾಟ್ಕರ್ (ಲೇ) 'ದಲಿತಮಾರ್ಗ':೦೪) ಅರ್ಥಕೋಶ, ನಿಘಂಟುಗಳಲ್ಲಿನ ಅರ್ಥಗಳನ್ನು ಮೀರಿ ಯಾರು ದಲಿತರು ಎಂಬುದನ್ನು ಕುರಿತು ಡಾ. ಅರವಿಂದ ಮಾಲಗತ್ತಿಯವರು ಸಂಕ್ಷಿಪ್ತವಾಗಿ ಮೂರು ವಾದಗಳನ್ನು ಮಂಡಿಸುತ್ತಾರೆ.

ಅ. "ಶೋಷಣೆ ಎಂಬ ಪದಕ್ಕೆ ಜಾತಿ ಭೇದವಿಲ್ಲ; ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲಾ ಶೋಷಣೆಗೆ ಒಳಗಾದ ಎಲ್ಲ ಜನರೂ ದಲಿತರು.

ಆ. ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು.

ಇ. ಅಸ್ಪೃಶ್ಯರೂ ಸೇರಿದಂತೆ (ಆ ವ್ಯಾಖ್ಯಾನದ) ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರೂ ಅಸ್ಪೃಶ್ಯರಂತೆ ಆರ್ಥಿಕ, ಸಾಮಾಜಿಕ, ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾದ ಜನರೂ ಸೇರಿ ದಲಿತರಾಗುತ್ತಾರೆ". (ಅದೇ:ಪು.೦೬)

ಅಸ್ಪೃಶ್ಯರಲ್ಲದಿದ್ದರೂ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಶೋಷಣೆಗೊಳಗಾದವರೆಲ್ಲರೂ ದಲಿತರು ಎಂಬ ಅರ್ಥದಲ್ಲಿ ಪ್ರಸ್ತುತ ಸಂಶೋಧನೆ ಮುಂದುವರೆದಾಗ ವ್ಯಾಪ್ತಿ ಮೀರುವ ಸಾಧ್ಯತೆಯಿರುವುದರಿಂದ ಇಲ್ಲಿ ಕೇವಲ ಜಾತಿಯ ಕಾರಣದಿಂದ ಅಸ್ಪೃಶ್ಯರು, ಬಹಿಷ್ಕೃತರು ಎಂದು ಕರೆಸಿಕೊಂಡು ಶತ–ಶತಮಾನಗಳಿಂದಲೂ ಶೋಷಣೆಗೆ ಒಳಗಾಗುತ್ತಿರುವ ದಲಿತರನ್ನು ಕುರಿತು ಅಧ್ಯಯನ ಮಾಡಲಾಗುತ್ತಿದೆ. ಇತ್ತೀಚೆಗೆ ದಲಿತರ ಹಾಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಶೋಷಣೆಗೆ ಒಳಗಾಗುತ್ತಿರುವ ಮಹಿಳೆಯರನ್ನು 'ದಲಿತ'ರು ಎಂದು ಕರೆಯಲಾಗುತ್ತಿದೆ. ಈ ಕಾರಣದಿಂದ ನೋಡಿದಾಗ ಯಾವುದೇ ಜಾತಿಗೆ ಸೇರಿದ ಮಹಿಳೆಯೆ ಆಗಿದ್ದರೂ ಶೋಷಣೆಗೆ ಒಳಗಾಗುವುದರಿಂದ ಎಲ್ಲಾ ಮಹಿಳೆಯರೂ 'ದಲಿತರು' ಎಂದು ಕರೆಯಲಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಸಂಶೋಧನೆ ಮುಂದುವರೆದರೂ ವಿಷಯ ವಿಸ್ತೃತವಾಗುತ್ತದೆ. ಸಾಮಾನ್ಯ ವರ್ಗದ ಮಹಿಳೆಯ ನೋವನ್ನು ಕಡೆಗಣಿಸದೆ ಅವಳ ನೋವುಗಳನ್ನೂ ಪ್ರಸ್ತಾಪಿಸುತ್ತಾ, ಸಾಮಾನ್ಯ ಮಹಿಳೆಯ ನೋವಿಗಿಂತ ದಲಿತ ಮಹಿಳೆಯ ನೋವುಗಳು ಹೇಗೆ ಭಿನ್ನ, ಹಾಗೂ ಪರಿಣಾಮಕಾರಿ ಎಂದು ನೋಡುವ ಪ್ರಯತ್ನ ಇದಾಗಿದೆ.

ಈ ಹೇಳಿಕೆಗೆ ವ್ಯತಿರಿಕ್ತವಾದ ಅಭಿಪ್ರಾಯವನ್ನು ಸಿ. ವೀರಣ್ಣನವರು ವ್ಯಕ್ತಪಡಿಸುತ್ತಾರೆ. 'ದಲಿತ'ರನ್ನು ಕುರಿತ ಅವರ ಅಭಿಪ್ರಾಯ ಇಂತಿದೆ. "ಎಲ್ಲ ಜಾತಿಗಳಲ್ಲಿಯೂ ತುಳಿತಕ್ಕೊಳಗಾಗಿರುವವರನ್ನೆಲ್ಲ ದಲಿತರು ಎಂದು ಕರೆದು 'ದಲಿತ' ಪದದ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕಿಂತ, ಅದು ಹುಟ್ಟಿ ಬೆಳೆದಿರುವ ಹಿನ್ನೆಲೆಯಲ್ಲಿ ಅದನ್ನು ಅಸ್ಪೃಶ್ಯ ಜನಾಂಗಕ್ಕೆ ಸೀಮಿತಗೊಳಿಸುವುದು ಚಾರಿತ್ರಿಕ ಅಧ್ಯಯನದ ದೃಷ್ಟಿಯಿಂದ ಸೂಕ್ತವೆನಿಸುತ್ತದೆ. ಹೀಗೆ ಮಾಡಿದರೆ ಕಲಸು ಮೇಲೋಗರವಾಗುವುದು ತಪ್ಪುತ್ತದೆ. ಅಲ್ಲದೆ, ಜಾತಿಯ ದೃಷ್ಟಿಯಿಂದಲೇ ಸಾಹಿತ್ಯವನ್ನು ಅಭ್ಯಾಸ ಮಾಡುವ ನೋಟವೊಂದಕ್ಕೆ 'ದಲಿತ ಸಾಹಿತ್ಯ'ವೆನ್ನುವುದು ಸಮೀಪವಾಗುತ್ತದೆ. ಈ ದಲಿತ ಸಾಹಿತ್ಯವೆಂದು ಕರೆಯುವುದನ್ನು 'ಶ್ರಮಜೀವಿಗಳ ಸಾಹಿತ್ಯ'ವೆಂದೋ, 'ಬಡವರ ಸಾಹಿತ್ಯ'ವೆಂದೋ ಕರೆದು ಗೊಂದಲವುಂಟು ಮಾಡುವುದು ತಪ್ಪುತ್ತದೆ. ಏಕೆಂದರೆ, ಸವರ್ಣೀಯರಿಂದ ದೂರವಿಡಲಾದ ಜನಗಳಲ್ಲಿ ತುಳಿತಕ್ಕೊಳಗಾದವರು ಬಹುಪಾಲು ಸಂಖ್ಯೆಯಲ್ಲಿರಬಹುದಾದರೂ ಅವರಲ್ಲಿಯೇ ಅನುಕೂಲಸ್ಥರಾದ, ತಮ್ಮವರನ್ನೇ

ಶೋಷಿಸುವವರೂ ಕೂಡ 'ದಲಿತ' ಪದದ ವ್ಯಾಪ್ತಿಯಲ್ಲಿ ಬರುವುದರಿಂದ, ದಲಿತರು' ಎನ್ನುವುದು ವರ್ಗವಿಭಜನೆಯಲ್ಲ ಎನ್ನುವುದನ್ನು ಮನಗಾಣಬೇಕು. ಇಲ್ಲವೇ ದಲಿತ ಚಳವಳಿ ದಲಿತರಲ್ಲಿಯೇ ಹುಟ್ಟಿ ಬೆಳೆದು ದಲಿತರನ್ನೇ ಶೋಷಿಸುವವರೂ ದಲಿತರಲ್ಲ ಎನ್ನುವುದನ್ನು ಹೇಳಿ ಸ್ಪಷ್ಟಪಡಿಸಬೇಕು". (ಪುರುಷೋತ್ತಮ ಬಿಳಿಮಲೆ (ಲೇ) 'ದಲಿತಜ್ಞ':೭೩) ಎಂಬ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಸೌಲಭ್ಯಗಳಿಂದ ವಂಚಿತರಾಗಿ ಅಥವಾ ತುಳಿತಕ್ಕೆ ಒಳಗಾದವರೆಲ್ಲರನ್ನೂ ದಲಿತರೆಂದು ಕರೆದು ಎಲ್ಲೆಯನ್ನು ವಿಸ್ತರಿಸುವುದರ ಬದಲಿಗೆ ಜಾತಿಯ ಕಾರಣದಿಂದ ನೋವುಂಡವರನ್ನು ದಲಿತರೆಂದು ಕರೆಯಬೇಕೆನ್ನುವ ಅಭಿಪ್ರಾಯಗಳು ಕೇಳಿಬಂದಾಗ ಅಂತಿಮವಾಗಿ ಎಲ್ಲರಿಗೂ ಒಪ್ಪಿಗೆಯಾಗುವಂಥ ಒಂದು ಸಮಂಜಸವಾದ ವ್ಯಾಖ್ಯೆಯನ್ನು ಅರವಿಂದ ಮಾಲಗತ್ತಿಯವರು ಕೊಡುತ್ತಾರೆ. "ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು; ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ, ಊರ ಹೊರಗೆ ವಾಸಿಸಿ ಕೀಳುವೃತ್ತಿಗೆ ಅವಲಂಬಿತರಾಗಿ, ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ" (ಸರಜೂ ಕಾಟ್ಕರ್ (ಲೇ) 'ದಲಿತಮಾರ್ಗ':೦೭) ಎನ್ನುವಂತಹ ವ್ಯಾಖ್ಯೆ ಇದಾಗಿತ್ತು. ಅರವಿಂದ ಮಾಲಗತ್ತಿಯವರ ಈ ವ್ಯಾಖ್ಯಾನವು ಯಾವುದೇ ಭಿನ್ನಾಭಿಪ್ರಾಯಗಳಿಲ್ಲದೆ ಎಲ್ಲಾ ಗೊಂದಲಗಳಿಗೂ ಉತ್ತರ ಕೊಡುವಂತೆ ಇದೆ. ಪ್ರಸ್ತುತ ಯಾವುದೇ ಅಧ್ಯಯನಗಳ ಸಂದರ್ಭವಾಗಲೀ ಮತ್ಯಾವುದೇ ಸಾಹಿತ್ಯಿಕ, ಸಾಮಾಜಿಕ ಸಂದರ್ಭಗಳಲ್ಲಿ ಇದೇ ವ್ಯಾಖ್ಯಾನವು ಚಾಲ್ತಿಯಲ್ಲಿದೆ.

೨. ಯಾವುದು ದಲಿತ ಸಾಹಿತ್ಯ :

'ದಲಿತ' ಪದದ ನಂತರ ನಮ್ಮಲ್ಲಿ ಹುಟ್ಟಿಕೊಳ್ಳುವ ಮತ್ತೊಂದು ಪ್ರಶ್ನೆಯೆಂದರೆ, ಯಾವುದು ದಲಿತ ಸಾಹಿತ್ಯ ಎಂಬುದು. ಇದಕ್ಕೂ ಒಂದೇ ಮಾತಿನಲ್ಲಿ ಎಲ್ಲರಿಗೂ ಸರಿಕಾಗುವ ಅಥವಾ ಒಪ್ಪಿತವಾಗುವ ವ್ಯಾಖ್ಯೆಯನ್ನು ಕೊಡಲು ಕಷ್ಟವಾಗುತ್ತದೆ. ದಲಿತ ಸಾಹಿತ್ಯವನ್ನು ಕುರಿತು ಹಲವರು ಹಲವು ರೀತಿಯಲ್ಲಿ ಅಭಿಪ್ರಾಯಪಡುತ್ತಾರೆ. ಸಾಮಾನ್ಯವಾಗಿ ದಲಿತ ಸಾಹಿತ್ಯದ ಬಗ್ಗೆ ಎರಡು ವಾದಗಳಿವೆ. "ದಲಿತರ ಶೋಷಣೆಯನ್ನು ಚಿತ್ರಿಸುವುದೆಲ್ಲ ದಲಿತ ಸಾಹಿತ್ಯವೆಂದು ವ್ಯಾಪಕವಾಗಿ ಅರ್ಥೈಸುವುದು ಒಂದಾದರೆ ದಲಿತ ವರ್ಗದ ವ್ಯಕ್ತಿ ದಲಿತ ಪ್ರಜ್ಞೆಯಿಂದ ತನ್ನ ಅನುಭವಗಳನ್ನು ಅಭಿವ್ಯಕ್ತಿಗೊಳಿಸಿದ್ದೇ ನಿಜವಾದ ದಲಿತ ಸಾಹಿತ್ಯವೆಂಬುದು ಮತ್ತೊಂದು. 'ಅನ್ಯಾಯದ ವಿರುದ್ಧ ಪ್ರತಿಭಟಿಸುವ, ಶೋಷಣೆಯ ವಿರುದ್ಧದ ಹೋರಾಟದ ನೋವು-

ತಳಮಳಗಳ ಒಂದು ಉದಾತ್ತ ಸ್ವರೂಪವೇ ದಲಿತ ಸಾಹಿತ್ಯ' ಎಂಬುದು ಪು.ಲ. ದೇಶಪಾಂಡೆಯವರ ಅಭಿಪ್ರಾಯ". (ಸರಜೂ ಕಾಟ್ಕರ್ (ಲೇ) 'ದಲಿತಮಾರ್ಗ':೦೮, ೦೯)

ದಲಿತೇರರು ಬರೆದದ್ದು ದಲಿತ ಸಾಹಿತ್ಯವಾಗುವುದಿಲ್ಲ ಎಂಬ ವಾದವು ಕನ್ನಡ ಸಾಹಿತ್ಯ ವಲಯದಲ್ಲಿ ೭೦ರ ದಶಕದಲ್ಲಿ ಬಹು ಚರ್ಚೆಗೆ ಒಳಗಾಗಿತ್ತು. ಉದಾ: ಶಿವರಾಮ ಕಾರಂತರು ಬರೆದ 'ಚೋಮನ ದುಡಿ' ಕಾದಂಬರಿಯು ದಲಿತ ಜೀವನದ ಆಳ-ಅಗಲಗಳನ್ನು ಸಮರ್ಥವಾಗಿ ಕಟ್ಟಿಕೊಟ್ಟಿಲ್ಲ ಎಂಬಂಥ ಚರ್ಚೆಗಳು ಅವಾಗಿದ್ದವು. ಕಾರಣವೇನೆಂದರೆ ಸ್ವತಃ ದಲಿತನೇ ತಾನು ಉಂಡ ನೋವುಗಳನ್ನು ತಾನೇ ಬರೆದಾಗ ಕಾಣುವ ಸೂಕ್ಷ್ಮತೆ ದಲಿತೇತರರು ದಲಿತರನ್ನು ದೂರದಿಂದ ಕಂಡು ಅಥವಾ ಅವರ ನೋವುಗಳನ್ನು ಕೇಳಿ ಬರೆದಾಗ ಅಷ್ಟು ಸಶಕ್ತವಾಗಿರುವುದಿಲ್ಲ ಎಂಬಂಥ ಮಾತುಗಳು ಕೇಳಿಬಂದವು. ಪ್ರಸ್ತುತ ಸಂದರ್ಭದಲ್ಲಿ ದಲಿತರೇ ತಮ್ಮ ನೋವುಗಳ ವಿರುದ್ಧ ಪ್ರತಿಭಟಿಸಿ ಬರೆಯುತ್ತಿರುವ ಹಾಗೂ ದಲಿತೇತರರು ದಲಿತರನ್ನು ಕುರಿತು ಬರೆಯುತ್ತಿರುವ ಎರಡು ರೀತಿಯ ಸಾಹಿತ್ಯವೂ ದಲಿತ ಸಾಹಿತ್ಯವೆಂದೇ ಪರಿಗಣಿತವಾಗಿದೆ.

"ಕನ್ನಡ ಸಾಹಿತ್ಯ ಸಂದರ್ಭದಲ್ಲಿಯೂ ದಲಿತ ಸಾಹಿತ್ಯ ಕುರಿತು ಬೇರೆ-ಬೇರೆ ಅಭಿಪ್ರಾಯ ಕೇಳಿಬರುತ್ತವೆ. 'ದಲಿತ ವರ್ಗದ ವ್ಯಕ್ತಿ ದಲಿತ ಪ್ರಜ್ಞೆಯಿಂದ ದಲಿತ, ದಲಿತೇತರಿಗಾಗಿ ಬರೆದ ಸಾಹಿತ್ಯ ಮಾತ್ರ ದಲಿತ ಸಾಹಿತ್ಯ' ಎಂದು ಕೆಲವರು ವಾದಿಸಿದರೆ, 'ದಲಿತರ ಶೋಷಣೆಯನ್ನು ಚಿತ್ರಿಸುವ ಸಾಹಿತ್ಯ ಯಾರೇ ಬರೆದಿದ್ದರೂ ಅದೆಲ್ಲ ದಲಿತ ಸಾಹಿತ್ಯ' ಎಂಬುದು ಮತ್ತೆ ಕೆಲವರ ವಾದ. ಒಟ್ಟಾರೆ ಮರಾಠಿ ಚಿಂತನೆಯ ಮಾದರಿಯಲ್ಲಿಯೇ ನಮ್ಮ ದಲಿತ ಸಾಹಿತ್ಯ ಚರ್ಚೆ ಬೆಳೆದು ಬಂದಿರುವುದು ಗಮನಿಸುವಂಥದ್ದು. ದಲಿತ ಸಾಹಿತ್ಯ ಕುರಿತ ವ್ಯಾಖ್ಯಾನಗಳಲ್ಲಿ 'ದಲಿತ ಪ್ರಜ್ಞೆ'ಯು ಪ್ರಮುಖ ವಿಚಾರವಾಗುತ್ತದೆ. ಇದು ಹೊಸ ಶಿಕ್ಷಣ, ಅಂಬೇಡ್ಕರ್ ಚಳವಳಿ ಹಾಗೂ ಆಧುನಿಕ ದೃಷ್ಟಿಕೋನಗಳಿಂದಾಗಿ ದಲಿತರಲ್ಲುಂಟಾದ ಜಾಗೃತಿ. ಈ ಪ್ರಜ್ಞೆಯ ಬಗ್ಗೆ ಡಾ. ಅರವಿಂದ ಮಾಲಗತ್ತಿ ಅವರ ವಿವರಣೆ ಹೀಗಿದೆ: 'ದಲಿತ ವಿರೋಧಿ ಅಸ್ತಿತ್ವದ ವಿಚಾರಗಳನ್ನು ಭೂತ-ವರ್ತಮಾನ-ಭವಿಷತ್ಕಾಲಗಳನ್ನು ಒಳಗೊಂಡಂತೆ ಸಾಮಾಜಿಕ, ಆರ್ಥಿಕ, ರಾಜಕೀಯ, ಬೌದ್ಧಿಕ, ಅಧ್ಯಾತ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ-ಹೀಗೆ ಎಲ್ಲ ರಂಗದಲ್ಲಿ ದಲಿತರ ಮೇಲೆ ಹೇರಿರುವ ಮತ್ತು ಶೋಷಿಸುವ ವಸ್ತು ನೆಲೆಯ ಬಗೆಗೆ ಮೂಡುವ ಅರಿವು ಮತ್ತು ಆ ವಸ್ತುಸ್ಥಿತಿಯಿಂದ ವಿಮೋಚನೆ ಹೊಂದಲು ಮಾಡುತ್ತಿರುವ ಪ್ರಯತ್ನ ಹಾಗೂ ಕ್ರಿಯಾತ್ಮಕ ಬೆಳವಣಿಗೆ ಹೊಂದುತ್ತೇವೆ ಎಂಬುದರಲ್ಲಿ ನಂಬಿಕೆ ಇದ್ದು, ಹೊಸ ಚರ್ಚೆಗೆ, ಬೆಳವಣಿಗೆಗೆ ಸಾಗುತ್ತೇವೆ ಎಂಬ ಆಶಯ ಹೊಂದಿರುವುದು-ಇಂತಹುದು 'ದಲಿತ ಪ್ರಜ್ಞೆ'

(ಸರಜೂ ಕಾಟ್ಕರ್ (ಲೇ) 'ದಲಿತಮಾರ್ಗ':೧೪, ೧೫) ಎಂದು ಕರೆಯಿಸಿಕೊಳ್ಳುತ್ತದೆ. ದಲಿತರ ಶೋಷಣೆಯನ್ನು ಕುರಿತು ಯಾರೆ ಬರೆದರೂ ಅವೆಲ್ಲವೂ ದಲಿತ ಸಾಹಿತ್ಯವಾಗುತ್ತದೆ ಎಂಬ ಚರ್ಚೆಯ ನಡುವೆಯೂ ದಲಿತ ಪ್ರಜ್ಞೆಯಿಂದ ಬರೆದದ್ದು ಮಾತ್ರ ದಲಿತ ಸಾಹಿತ್ಯವಾಗುತ್ತದೆ ಎಂಬ ವಾದವೂ ಅಂದಿನ ಸಂದರ್ಭದಲ್ಲಿ ಬಲವಾಗಿ ಕೇಳಿ ಬಂದಿದ್ದಿತು. ಈ ವಾದವನ್ನು ಬಲವಾಗಿ ಪ್ರತಿಪಾದಿಸಿದವರು ಅರವಿಂದ ಮಾಲಗತ್ತಿಯವರು. ಒಬ್ಬ ದಲಿತನಾದವನಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಬೌದ್ಧಿಕ, ಆಧ್ಯಾತ್ಮಿಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹಿಂದೆ, ಇಂದು, ಮುಂದೆ ಶೋಷಣೆಗೊಳಪಡಿಸುತ್ತಿರುವುದರ ಅರಿವು, ಎಚ್ಚರವಿದ್ದು ಅದರಿಂದ ಹೊರ ಬರಬೇಕೆನ್ನುವ ತುಡಿತವಿರುವುದೇ ದಲಿತ ಪ್ರಜ್ಞೆಯಾಗುತ್ತದೆ. ಈ ನಿಟ್ಟಿನಿಂದ ಬರೆದದ್ದು ಪರಿಣಾಮಕಾರಿ ದಲಿತ ಸಾಹಿತ್ಯವಾಗುತ್ತದೆ ಎಂಬ ಅರವಿಂದ ಮಾಲಗತ್ತಿಯವರ ವಾದವನ್ನು ಪುರಸ್ಕರಿಸುವಂತೆಯೇ ೭೦ರ ದಶಕದಲ್ಲಿ ದಲಿತ ಸಾಹಿತ್ಯ ಮೂಡಿಬಂದಿದೆ. ಇದಕ್ಕೆ ಉದಾಹರಣೆಯಾಗಿ ದೇವನೂರ ಮಹಾದೇವರ ಕುಸುಮಬಾಲೆ, ಒಡಲಾಳ, ದ್ಯಾವನೂರು ಕಥಾ ಸಂಕಲನದ ಸಾಹಿತ್ಯ ನಮ್ಮ ಮುಂದಿವೆ.

೩. ದಲಿತ ಸಾಹಿತ್ಯದ ಲಕ್ಷಣಗಳು :

ದಲಿತ ಪ್ರಜ್ಞೆ ಯಾವುದು? ದಲಿತ ಸಾಹಿತ್ಯ ಯಾವುದು? ಎಂಬ ಪ್ರಶ್ನೆಗಳ ನಂತರ ನಮ್ಮಲ್ಲಿ ಉಂಟಾಗುವ ಮತ್ತೊಂದು ಪ್ರಶ್ನೆ ದಲಿತ ಸಾಹಿತ್ಯ ಹೇಗಿರಬೇಕು? ಎಂಬುದೇ ಆಗಿರುತ್ತದೆ. ಸಾಮಾನ್ಯವಾಗಿ "ದಲಿತ ಸಾಹಿತ್ಯ ದಲಿತ ಲೋಕದ ಬದುಕು–ಬವಣೆಗಳನ್ನೊಳಗೊಂಡಿರಬೇಕು. ದಲಿತರ ಬದುಕಿಗೆ ಬಂಧನವಾಗಿರುವ ಅಸ್ಪೃಶ್ಯತೆ, ಅವಮಾನಗಳು, ಅತ್ಯಾಚಾರಗಳು ತಲೆ ತಲೆಮಾರುಗಳಿಂದ ನಡೆದು ಬಂದ ಧಾರ್ಮಿಕ–ಸಾಮಾಜಿಕ ಅಸಹ್ಯಪದ್ಧತಿಗಳು–ಸಾಹಿತ್ಯದಲ್ಲಿ ಚಿತ್ರಿತಗೊಳ್ಳಬೇಕು. ದಲಿತರು ತಾನು ಅನುಭವಿಸಿದ ನೋವುಗಳನ್ನು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ದಾಖಲಿಸುವುದು; ತನ್ಮೂಲಕ ಸಾಮಾಜಿಕ ಸಂಘರ್ಷವೊಂದಕ್ಕೆ ಪ್ರೇರಣೆಯಾಗುವುದು ಈ ಸಾಹಿತ್ಯದ ಮುಖ್ಯ ಲಕ್ಷಣವೆನಿಸುತ್ತದೆ. ದಲಿತ ವರ್ಗದ ಮೇಲಿನ ಅನ್ಯಾಯಗಳಿಗೆ ಮೂಲವಾಗಿರುವ ಸಾಮಾಜಿಕ, ಧಾರ್ಮಿಕ ಮೊದಲಾದ ಪಾರಂಪರಿಕ ಮೌಲ್ಯಗಳನ್ನು ಪ್ರಶ್ನಿಸುತ್ತ ಅವುಗಳ ಟೊಳ್ಳುತನವನ್ನು ಭೇದಿಸುವುದು ದಲಿತ ಸಾಹಿತ್ಯದಲ್ಲಿ ಎದ್ದುಕಾಣುವ ಅಂಶ". (ಸರಜೂ ಕಾಟ್ಕರ್ (ಲೇ) 'ದಲಿತಮಾರ್ಗ':೧೬) ದೇವನೂರ ಮಹಾದೇವ, ಸಿದ್ಧಲಿಂಗಯ್ಯನವರ ಕೃತಿಗಳು ಈ ದೃಷ್ಟಿಯಿಂದ ಮಹತ್ವದ್ದೆನಿಸುತ್ತವೆ. ಇವುಗಳಲ್ಲಿ ಲೇಖಕ ತಾನು ಹುಟ್ಟಿ ಬೆಳೆದು ಬಂದ ಸಮಾಜದಲ್ಲಿರುವ, ಅಥವಾ ತಾನು ಅನುಭವಿಸಿದ್ದ, ತನ್ನ ಅನುಭವಕ್ಕೆ ದಕ್ಕಿದ ಶೋಷಣೆಯ

ವಿವರಗಳನ್ನು ದಲಿತರ ಮುಂದಿಡುತ್ತ ದಲಿತೇತರರಿಗೆ ತಿಳಿಯಪಡಿಸುತ್ತಾನೆ. ಆತನ ಪ್ರತಿಭಟನೆ ಶೋಷಿತ ವರ್ಗದ ವಿರುದ್ಧವಾಗಿರುವುದರಿಂದ ಸಹಜವಾಗಿ ಸಿಟ್ಟು, ಆಕ್ರೋಶ ಅನಿಯಂತ್ರಿತವಾಗಿ ಅಭಿವ್ಯಕ್ತಗೊಳ್ಳುತ್ತದೆ.

"ಇಕ್ರಲಾ ಒದಿರ್ಲಾ,
ಈ ನನ್ ಮಕ್ಕಳ ಚರ್ಮ ಎಬ್ರಲಾ
ದೇವ್ರು ಒಬ್ನೇ ಅಂತಾರೆ
ಓಣಿಗೊಂದೊಂದ್ ತರಾ ಗುಡಿ ಕಟ್ಸವ್ರೆ
ಎಲ್ಲಾರು ದೇವ್ರ ಮಕ್ಕಳು ಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ
ಹೋಟ್ಲು, ಬಾವಿ, ಮನೆ ಯಾವುದಕ್ಕೂ ಸೇರ್ಸಲ್ವಲ್ರೊ" ॥ (ಸಿದ್ದಲಿಂಗಯ್ಯ: "ಒಂದು ಪದ":ಮೆರವಣಿಗೆ':೫೯) ಎಪ್ಪತ್ತರ ಸಂದರ್ಭದಲ್ಲಿ ತಮ್ಮ ನೋವುಗಳನ್ನು, ಅವಮಾನಗಳನ್ನು ಕುರಿತು ತಾವೇ ಬರೆದಂಥ ದಲಿತರ ಭಾಷೆ ಆಡುನುಡಿಯಾಗಿತ್ತು. ಇದು ಜಾನಪದಕ್ಕೆ ಹತ್ತಿರವಾಗಿದ್ದ ಭಾಷೆಯಾಗಿದ್ದರಿಂದ ಜನರಿಗೆ ಬಹುಬೇಗ ತಲುಪಿತು. ಇಂತಹ ಕವನಗಳು ಶತ-ಶತಮಾನಗಳಿಂದ ದೌರ್ಜನ್ಯ ದಬ್ಬಾಳಿಕೆಗಳಿಗೆ ಒಳಗಾಗಿದ್ದ ದಲಿತರ ನರನಾಡಿಗಳಲ್ಲಿ ಬಿಸಿರಕ್ತ ಹರಿಯುವಂತೆ ಮಾಡಿದವು. ಇಂತಹ ಕವನಗಳು ದಲಿತರಲ್ಲಿ ಎಚ್ಚರ ಹಾಗೂ ಅರಿವನ್ನು ಮೂಡಿಸಿದವು. ತಾವಿರುವ ಸ್ಥಿತಿಯ ವಾಸ್ತವವನ್ನು ಕಣ್ಣಿಗೆ ಕಟ್ಟುವಂತೆ ಅರ್ಥ ಮಾಡಿಸಿದವು. ಆ ಮೂಲಕ ಮುಂದಿನ ಉತ್ತಮ ಭವಿಷ್ಯಕ್ಕೆ ಬುನಾದಿಯನ್ನು ಹಾಕಿಕೊಟ್ಟವು.

ಸಾಮಾನ್ಯವಾಗಿ ೭೦ರ ದಶಕದ ಹೋರಾಟದ ಹಾಡುಗಳಲ್ಲಿಯೂ ದಲಿತರ ಆಡುಭಾಷೆಯೇ ಪರಿಣಾಮಕಾರಿಯಾಗಿ ಬಳಕೆಯಾಯಿತು. ಸಿದ್ಧಲಿಂಗಯ್ಯನವರ ಪದ್ಯದಲ್ಲಿ ಬಳಕೆಯಾಗಿರುವ ಒಂದೊಂದು ಪದವು ಕಿಡಿಯನ್ನು ಉಗುಳುವ ಬೆಂಕಿಯುಂಡೆಯಂತೆ ಇದೆ. ಇದಕ್ಕೆ ಕಾರಣ ಅಂದಿನ ಸಮಾಜದಲ್ಲಿ ದಲಿತರು ಸ್ವತಃ ತಾವುಂಡ ನೋವಿನ ತೀವ್ರತೆಯಾಗಿತ್ತು. ಇಂಥ ಅಪಮಾನಕ್ಕೆ, ನೋವುಗಳಿಗೆ ಒಳಗಾದ ದಲಿತರಿಗೆ ಮೊಟ್ಟ ಮೊದಲ ಬಾರಿಗೆ ಬರೆಯುವ ಅವಕಾಶ ಸಿಕ್ಕಾಗ ತಮ್ಮನ್ನು ಶೋಷಿಸುವವರ ವಿರುದ್ಧದ ಆಕ್ರೋಶವು ಪದಗಳಲ್ಲಿ ವ್ಯಕ್ತವಾಗುತ್ತದೆ. ಒಟ್ಟಾರೆ ಈ ಸಂದರ್ಭದ ದಲಿತ ಸಾಹಿತ್ಯವು ಅಲ್ಲಿಯವರೆಗೂ ಸಿದ್ಧ ಮಾದರಿಯಲ್ಲಿ ಪ್ರಚಲಿತದಲ್ಲಿದ್ದ ನವೋದಯ ಮತ್ತಿತರ ಸಾಹಿತ್ಯದ ಭಾಷೆಗಿಂತ ಭಿನ್ನವಾಗಿತ್ತು.

"ಗೇಯತೆಯನ್ನು ಕಳೆದುಕೊಂಡಿದ್ದ ಕನ್ನಡ ಕಾವ್ಯಕ್ಕೆ ಗೇಯತೆಯ ಮೂಲಕ ಹೊಸ ಚೈತನ್ಯವನ್ನು ದಲಿತ ಸಾಹಿತ್ಯ ತಂದುಕೊಟ್ಟಿತು. ಈ ಗೇಯತೆಯ ಧ್ವನಿ-ಆಲಾಪಗಳು ನವೋದಯದ ಭಾವಕ್ಕಿಂತ ಭಿನ್ನವಾದವು. ಅಲ್ಲಿಯ ಲಯದ ನಾಜೂಕಿನ ನಡಿಗೆ ಇಲ್ಲಿ ಇಲ್ಲದೆ ಹೋದರೂ ಕೇಳುಗರ ರೋಮಗಳನ್ನು ಕ್ರಿಯಾಶೀಲವಾಗಿಸುವ ಸತ್ವವುಳ್ಳದ್ದು. ಇಂಥ ಗೇಯತೆ ಪ್ರಗತಿಶೀಲರಿಗೆ ದಕ್ಕದಿರುವುದರಿಂದಲೇ ಅಲ್ಲಿಯ ಕಾವ್ಯ ಕಳಪೆ, ಪೇಲವವೆನಿಸುತ್ತದೆ. ದಲಿತ ಕಾವ್ಯ ಜಾನಪದ ವಸ್ತು ಲಯಗಾರಿಕೆಯನ್ನು ಬಳಸಿಕೊಂಡಿದ್ದೇ ಈ ಯಶಸ್ಸಿಗೆ ಕಾರಣವಾಗಿದೆ. ಸಾಂಸ್ಕೃತಿಕ ಬದುಕಿನ ಸ್ಥಿತ್ಯಂತರಗಳನ್ನು ದಲಿತ ಕಾವ್ಯ ತುಂಬ ಸಮರ್ಥವಾಗಿ ಹಿಡಿದಿಟ್ಟಿದೆ. ಇದರ ಜೊತೆಗೆ ಸಾಂಸ್ಕೃತಿಕ ಮೌಲ್ಯಗಳನ್ನು ಗೌರವಿಸುವುದು, ದಾಸ್ಯದ ಭಾವದಿಂದ ಹೊರತರುವುದು ಇಂಥ ಗುಣಗಳೆಲ್ಲ ಪದೇಪದೆಯಾಗಿ ಗೋಚರವಾಗುತ್ತದೆ. ಶಿಕ್ಷಣಕ್ಕೆ ಎಲ್ಲಿಲ್ಲದ ಮಹತ್ವದ ಸ್ಥಾನ ದೊರೆತಿದೆ. ದಲಿತ ಸಾಹಿತ್ಯದ ಕೇಂದ್ರ ಭಾವ, ವರ್ಣ ಮತ್ತು ಜಾತಿ ವ್ಯವಸ್ಥೆಯಿಂದ ಕೂಡಿದ, ಒಬ್ಬರಿನ್ನೊಬ್ಬರ ಮೇಲೆ ನಿಂತ ಗೋಪುರಾಕಾರದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವುದು.

ಹೀಗೆ ಪ್ರಶ್ನಿಸುವಲ್ಲಿಯೇ ಭಿನ್ನ ರೀತಿಯ ಅಭಿವ್ಯಕ್ತಿಗಳಿವೆ. ಆದರೆ ಈ ಎಲ್ಲ ಅಭಿವ್ಯಕ್ತಿಗಳಲ್ಲಿ ಮಾನವೀಯತೆಯೇ ಮನೆಮಾಡಿಕೊಂಡು ನಿಂತಿದೆ. ಆವೇಶ, ಆರ್ದ್ರತೆ, ವಿಡಂಬನ ಸ್ವರೂಪದ ಅಭಿವ್ಯಕ್ತಿಯೇ ಕೇಂದ್ರವಾಗಿದ್ದು, ಪರಂಪರಾಗತ ಮೌಢ್ಯದ ಮೌಲ್ಯಗಳನ್ನು ಅನಾಧರಣೆಯಿಂದ ಕಾಣುವುದು ತಕ್ಷಣವೇ ಗಮನ ಸೆಳೆಯುತ್ತದೆ. ಪ್ರತಿಭಟನೆಗಿಂತ ಅಸಹಾಯಕತೆಯ ಗುಣವೇ ಪ್ರಧಾನವಾಗಿ ಕಂಡು ಬರುತ್ತದೆ. ಅಸ್ಪೃಶ್ಯತೆಯ ನೋವಿನ ವಿವಿಧ ಮಜಲುಗಳನ್ನು ಬಿಚ್ಚಿ ತೋರಿಸುತ್ತ, ಎದುರಾಳಿಯ ಮನಸ್ಸನ್ನು ಕಲಕುವ, ಆತ್ಮವಿಮರ್ಶೆಗೆ ಹಚ್ಚುವ ವಸ್ತುವಿನ ಆಯ್ಕೆ ಮತ್ತು ಬರವಣಿಗೆಯ ಶೈಲಿ ಇಲ್ಲಿ ಪ್ರಧಾನವಾಗಿದೆ. ನೇರ ಪ್ರತಿಭಟನೆ ಎನ್ನುವುದು ಕಾವ್ಯದಲ್ಲಿ ವ್ಯಕ್ತವಾಗಿದೆ. ಆದರೆ ಈ ರೀತಿಯ ಪ್ರತಿಭಟನೆ ಗದ್ಯದ ಬರವಣಿಗೆಯಲ್ಲಿಲ್ಲ. ವರ್ಗ ಸಮಸ್ಯೆ ಮೇಲುನೋಟಕ್ಕೆ ಗೋಚರವಾದರೂ ಮುಂದುವರೆದು ದೇಶಿ ಸಮಸ್ಯೆಗಳಿಗೆ ಸ್ಪಂದಿಸುವ ಗುಣವನ್ನು ಕಾಣುತ್ತೇವೆ. ಜಮೀನ್ದಾರಿ ವರ್ಗ ಪುರೋಹಿತಶಾಹಿ ವರ್ಗಕ್ಕಿಂತ ಮಿಗಿಲಾಗಿ ವರ್ಣ ಮತ್ತು ಜಾತಿ ಸಂಘರ್ಷವೇ ಬರವಣಿಗೆಯಲ್ಲಿ ಪ್ರಧಾನವಾಗಿ ಬದುಕಿನ ಮಜಲುಗಳು ಅನಾವರಣಗೊಳ್ಳುತ್ತವೆ. ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಇದ್ದಾಗಲೂ ಹೆಣ್ಣೇ ಪ್ರಧಾನ ಪಾತ್ರ ವಹಿಸುವುದು, ಮೊದಲ ತಲೆಮಾರಿನ ಅಕ್ಷರಸ್ಥರ ಬಯಕೆ-ಬೇಡಿಕೆಗಳನ್ನು ಅರಸುವುದು, ಪ್ರತಿಭಟನೆಗಿಂತ ಸಾಂಸ್ಕೃತಿಕ ಬದುಕೇ ಕೇಂದ್ರವಾಗಿದ್ದು ಕಂಡು ಬರುತ್ತದೆ. ನಗರದ ಬದುಕಿಗಿಂತ ಗ್ರಾಮೀಣ ಬದುಕೇ ಗದ್ಯದ ಬರವಣಿಗೆಯಲ್ಲಿ ತುಂಬಿಕೊಂಡಿದೆ. ವರ್ಣಸಂಕರಕ್ಕಾಗಿ ಇಲ್ಲಿಯ

ಬರವಣಿಗೆ ಹಾತೊರೆಯುತ್ತದೆ. ಸಾಂಸ್ಕೃತಿಕ ಸಂಘರ್ಷ ಮತ್ತು ಬದಲಾವಣೆಗಳನ್ನು ನಿರೀಕ್ಷಿಸುತ್ತಿದ್ದು, ನಾವು ಶೋಷಣೆಗೆ ಒಳಗಾದವರು ಎಂಬ ಭಾವವನ್ನು ಹೆಜ್ಜೆ-ಹೆಜ್ಜೆಗೂ ಮೂಡಿಸುತ್ತದೆ. ಹಸಿವು, ಕಳ್ಳತನ, ಬಡತನ, ಆಂತರಿಕ ಕಲಹ ಇಂಥವೆಲ್ಲ ಎದ್ದು ಕಂಡರೂ, ಬಡತನದ ದಾರಿದ್ರ್ಯ ಬೆನ್ನುಹತ್ತಿದಾಗ, ಸಮಾಜದಲ್ಲಿ ಅಸಮಾನತೆ ನೆಲೆಯೂರಿದಾಗ, ಕಳ್ಳತನ ಸಹಜವೆಂಬ ಧ್ವನಿಯನ್ನು ಮುಂದಿಡುತ್ತದೆ. ದಲಿತರಲ್ಲಿಯೇ ಇರುವ ನೈತಿಕ ಪರಿಕಲ್ಪನೆಯನ್ನು ಎತ್ತಿಹಿಡಿಯಲಾಗಿದೆ". (ಅರವಿಂದ ಮಾಲಗತ್ತಿ: 'ದಲಿತಮಾರ್ಗ':೨೬, ೨೭)

ದಲಿತರು ತಾವುಂಡ ನೋವು, ಅಪಮಾನಗಳನ್ನು ಸಿಟ್ಟು, ಆವೇಶ, ಆಕ್ರೋಶದಿಂದ ವ್ಯಕ್ತಪಡಿಸಲು ಅವರಿಗೆ ಗದ್ಯದ ಭಾಷೆಗಿಂತ ಪದ್ಯದ ಭಾಷೆ ಸಶಕ್ತವಾಗಿ ಪರಿಣಾಮಕಾರಿಯಾಗಿ ಕಂಡಿತು. ಆದ್ದರಿಂದಲೇ ಈ ಸಂದರ್ಭದಲ್ಲಿ ಪದ್ಯ ಪ್ರಕಾರ ಹುಲುಸಾಗಿ ಬೆಳೆಯಲಾರಂಭಿಸಿತು. ಕನ್ನಡ ದಲಿತ ಸಾಹಿತ್ಯಕ್ಕೆ ಮರಾಠಿ ದಲಿತ ಸಾಹಿತ್ಯವೇ ಪ್ರೇರಣೆಯಾಯಿತು. ಏಕೆಂದರೆ ಮಹಾರಾಷ್ಟ್ರದಲ್ಲಿ ಆಗಲೇ ದಲಿತ ಸಾಹಿತ್ಯದ ಕಾವು ಏರಿತ್ತು. ಮಹಾರಾಷ್ಟ್ರದಲ್ಲಿ ದಲಿತರು ತಾವು ಅನುಭವಿಸಿದ ನೋವುಗಳನ್ನು ಆತ್ಮಕಥೆಗಳಾಗಿ ಬರೆಯಲಾರಂಭಿಸಿದ್ದರು. ಹಸಿವು, ಕಳ್ಳತನ, ಬಡತನ, ಬಲವಂತದ ಲೈಂಗಿಕತೆ ಮುಂತಾದವುಗಳನ್ನು 'ಅಕ್ರಮ ಸಂತಾನ', 'ಉಚಲ್ಯಾ', 'ಕುಣಿಯೇ ಘುಮಾ' ಮೊದಲಾದ ಆತ್ಮಕತೆಗಳ ಮೂಲಕ ಹೊರಹಾಕಿದ್ದರು. ಮರಾಠಿ ದಲಿತ ಸಾಹಿತ್ಯದ ಆರಂಭದ ನಂತರವೇ ಕನ್ನಡದ ದಲಿತ ಸಾಹಿತ್ಯದಲ್ಲಿ ಆತ್ಮಕತೆಗಳ ಫಸಲು ಆರಂಭವಾಯಿತು. 'ಮಣೆಗಾರ', 'ಸಂಬೋಳಿ', ಗೌರ್ಮೆಂಟ್ ಬ್ರಾಹ್ಮಣ ಮುಂತಾದ ಆತ್ಮಕತೆಗಳು ದಲಿತರ ನೋವುಗಳನ್ನು ನಿಧಾನವಾಗಿ ಹೊರಹಾಕಲಾರಂಭಿಸಿದವು.

೪. ದಲಿತ ಸಾಹಿತ್ಯದ ಪ್ರೇರಣೆ :

ಪ್ರತಿಯೊಂದು ಸಾಹಿತ್ಯ ಪರಂಪರೆಯ ಉಗಮಕ್ಕೂ ಒಂದು ಹಿನ್ನೆಲೆ ಹಾಗೂ ಪ್ರೇರಣೆ, ಪ್ರಭಾವವಿರುತ್ತದೆ. ಉದಾಹರಣೆಗೆ ಆಧುನಿಕ ಸಂದರ್ಭದ ಕನ್ನಡ ನವೋದಯ ಸಾಹಿತ್ಯದ ಉಗಮಕ್ಕೆ ಪಾಶ್ಚಿಮಾತ್ಯ ರೋಮ್ಯಾಂಟಿಕ್ ಸಾಹಿತ್ಯ ಪ್ರೇರಣೆಯಾಯಿತು. ಇದು ಬಿ.ಎಂ.ಶ್ರೀಯವರ ಇಂಗ್ಲಿಷ್ ಗೀತಗಳಿಂದ ಆರಂಭವಾಯಿತು. ಇವರು ಇಂಗ್ಲಿಷ್ ಪದ್ಯಗಳನ್ನು ಕನ್ನಡಕ್ಕೆ ಅನುವಾದಿಸಿದರು. 'ಮಧ್ಯಮವರ್ಗದ ಮಹಾಕಾವ್ಯ' ಎಂದು ಕರೆಸಿಕೊಂಡ ಕಾದಂಬರಿ ಪ್ರಕಾರ ಕೂಡ ಇಂಗ್ಲಿಷ್ ಸಾಹಿತ್ಯದ ಬಳುವಳಿಯಾಗಿದೆ.

"ಯಾವುದೇ ಸಾಹಿತ್ಯ ಪರಂಪರೆ ತನ್ನ ಸಾಧ್ಯತೆಗಳನ್ನು ಮುಗಿಸಿಕೊಂಡು ಸ್ಥಗಿತವಾಗುವ ಸಮಯಕ್ಕೆ ಮತ್ತೊಂದು ಸಾಹಿತ್ಯ ಪರಂಪರೆ ಹುಟ್ಟಿಕೊಳ್ಳುವುದಕ್ಕೆ ಬೇಕಾಗಿರುವ ಆಶಯಗಳನ್ನು

ತನ್ನ ಗರ್ಭದಲ್ಲಿಯೇ ಅಳವಡಿಸಿಕೊಂಡಿರುತ್ತದೆ. ಬಹಳ ಮುಖ್ಯವಾದ ಈ ಆಶಯದ ಜೊತೆಗೆ ಬೇರೆ ದೇಶದ ಬೇರೆ ಕಾಲದ ಬೇರೆ ಶಿಸ್ತಿನ ಹಲವು ಸಂಗತಿಗಳು ನೂತನ ಸಾಹಿತ್ಯದ ನಿರ್ಮಾಣಕ್ಕೆ ಕಾರಣವಾಗುತ್ತವೆ. ಈ ಮಾತುಗಳು ಸಾಹಿತ್ಯದ ಶ್ರೇಷ್ಠತೆಯನ್ನು ಪ್ರಶ್ನಿಸುವುದಿಲ್ಲ. ಅದಕ್ಕೆ ಬದಲಾಗಿ ಸಾಹಿತ್ಯದ ಶ್ರೇಷ್ಠತೆಯನ್ನು ಗುರುತಿಸಲು ಬೇಕಾಗುವ ಸೃಜನಶೀಲತೆಯ ನೆಲೆಯನ್ನು ಅರ್ಥಮಾಡಿಸುವುದಕ್ಕೆ ಭದ್ರವಾದ ನೆಲೆಗಟ್ಟನ್ನು ಒದಗಿಸುತ್ತದೆ. ದಲಿತ ಸಾಹಿತ್ಯದ ಹುಟ್ಟಿಗೆ ಇನ್ನೊಂದು ಕಾರಣವೆಂದರೆ ಆಧುನಿಕ ಸಾಹಿತ್ಯದಲ್ಲಿ ಪಾಶ್ಚಾತ್ಯರನ್ನು ಅನುಕರಿಸುವುದೇ ಅತಿಯಾಯಿತು. ಅನುಕರಣೆ ಸಮಕಾಲೀನ ಸಂದರ್ಭಕ್ಕೆ ಪ್ರಸ್ತುತವಾಗಿರಲಿಲ್ಲ. ಪ್ರೀತಿ ಪ್ರಣಯವನ್ನು ವಿಜೃಂಭಿಸಿ ಬರೆದರು. ಧರ್ಮ ಪುರಾಣದ ಸಂಗತಿಗಳನ್ನು ವೈಭವೀಕರಿಸಿ ನೋಡಿದರು. ಹೀಗಾಗಿ ಸಮಾಜದ ಬಹುಸಂಖ್ಯಾತ ಜನರ ಕಡೆಗೆ ಒಲವು ತೋರದೆ ವೈಯಕ್ತಿಕ ನೆಲೆಯಲ್ಲಿಯೇ ತನ್ನ ತೆವಲುಗಳನ್ನು ತೀರಿಸಿಕೊಂಡಿತು. ಆದ್ದರಿಂದ ಹಳ್ಳಿಯಿಂದ ಮತ್ತು ಅಸ್ಪೃಶ್ಯ ನೆಲೆಯಿಂದ ಬಂದವರಿಗೆ ಈ ಸಾಹಿತ್ಯ ಪರಕೀಯವಾಗೇ ಉಳಿಯಿತು. ದೇಶದಲ್ಲಿ ಹಲವಾರು ಕ್ಷೇತ್ರದಲ್ಲಿ ಬದಲಾವಣೆಗಳು ಆಗಿದ್ದರೂ ಸಾಹಿತ್ಯ ಮಾತ್ರ ತನ್ನ ದಿಕ್ಕನ್ನು ಬದಲಾಯಿಸಿರಲಿಲ್ಲ. ದಲಿತ ಸಾಹಿತ್ಯ ಹುಟ್ಟಲು ಈ ಅಧ್ವಾನದ ಬೆಳವಣಿಗೆಗಳೂ ಕಾರಣವಾಗಿದ್ದವು. ದಲಿತ ಪ್ರಜ್ಞೆಯನ್ನು ಮೂಡಿಸಿಕೊಂಡು ಬರೆಯಲು ಹೊರಟ ದಲಿತ ಬರಹಗಾರರಿಗೆ ಮುಖ್ಯವಾಗಿ ಪ್ರೇರಣೆ ದೊರೆತದ್ದು ಮಹಾರಾಷ್ಟ್ರದ ದಲಿತ ಪ್ಯಾಂಥರ್ ಚಳವಳಿಯಿಂದ. ಇದು ಉತ್ತರ ಕರ್ನಾಟಕದ ಲೇಖಕರ ಮೇಲೆ ಮೊದಲು ಪ್ರಭಾವ ಬೀರಿತು. ನಂತರ ಕರ್ನಾಟಕದ ಉಳಿದ ಭಾಗಗಳನ್ನು ಆವರಿಸಿಕೊಂಡಿತು. ಪ್ಯಾಂಥರ್ಸ್ ಚಳವಳಿಯು ಹಿಂದೂಧರ್ಮದ ಅನಿಷ್ಟಗಳಾದ ಚಾತುರ್ವರ್ಣ ಪದ್ಧತಿ, ಜಾತೀಯತೆ, ಅಸ್ಪೃಶ್ಯತೆ, ದೇವರ ಪರಿಕಲ್ಪನೆ, ಡಂಬಾಚಾರ, ಧರ್ಮದ ದುರ್ಬಳಕೆ, ಅಮಾಯಕರ ಮೇಲೆ ದೌರ್ಜನ್ಯ ಮತ್ತು ಬ್ರಾಹ್ಮಣರು ಬ್ರಾಹ್ಮಣೇತರರನ್ನು ವಂಚಿಸುವುದರ ವಿರುದ್ಧ ಪ್ರತಿಭಟಿಸಿ ನಡೆಸಿದ ಚಳವಳಿಯಾಗಿದೆ." (ಶೇಷಗಿರಿರಾವ್ ಎಲ್.ಎಸ್. (ಲೇ) 'ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ':೪೬೧, ೪೬೨, ೪೬೪, ೪೬೫)

ಆಧುನಿಕ ಸಾಹಿತ್ಯದ ಘಟ್ಟಗಳಾದ ನವೋದಯ, ಪ್ರಗತಿಶೀಲ, ನವ್ಯ ಮುಂತಾದವುಗಳು ದಲಿತರ, ಬಡವರ ನೋವುಗಳನ್ನು, ಅಪಮಾನಗಳನ್ನು ತಮ್ಮ ಸಾಹಿತ್ಯಿಕ ಬರವಣಿಗೆಗಳಲ್ಲಿ ಬಳಸಿಕೊಳ್ಳದಿದ್ದಾಗ ಹೊಸದಾಗಿ ಅಕ್ಷರ ಕಲಿತ ದಲಿತರು ಮೊಟ್ಟ ಮೊದಲ ಬಾರಿಗೆ ತಮ್ಮ ನೋವುಗಳನ್ನು ತಾವೇ ಬರೆಯತೊಡಗಿದರು. ಅದೇ ೧೯೭೦ರ ದಶಕದ ದಲಿತ ಸಾಹಿತ್ಯ ಉಗಮಕ್ಕೆ ಪ್ರೇರಣೆ, ಪ್ರಭಾವ ಒದಗಿಸಿತು. ಅಷ್ಟೊತ್ತಿಗಾಗಲೇ ಮಹಾರಾಷ್ಟ್ರದಲ್ಲಿ ಮರಾಠಿ ದಲಿತ

ಸಾಹಿತ್ಯ ಹುಲುಸಾಗಿ ಬೆಳೆದಿದ್ದರಿಂದ ಈ ಎರಡೂ ಕಾರಣಗಳಿಂದ ಕರ್ನಾಟಕದಲ್ಲಿ ದಲಿತ ಸಾಹಿತ್ಯದ ಪ್ರವರ್ಧಮಾನಕ್ಕೆ ದಾರಿಯಾಯಿತು.

ಪ್ರಕೃತಿಯ ಆರಾಧನೆ, ದೇಶಾಭಿಮಾನ, ಪ್ರೀತಿ, ಪ್ರೇಮ, ಪ್ರಣಯ ಮುಂತಾದವುಗಳಲ್ಲೇ ಗಿರಕಿ ಹೊಡೆಯುತ್ತಿದ್ದ ಆಧುನಿಕ ಸಾಹಿತ್ಯ ದಲಿತರನ್ನು ಕಡೆಗಣಿಸಿತ್ತು. ಅವರ ನೋವುಗಳಿಗೆ ಆಧುನಿಕ ಸಾಹಿತ್ಯದಲ್ಲಿ ಯಾವುದೇ ಸ್ಥಾನವಿರಲಿಲ್ಲ. ಈ ಕಾರಣಗಳಿಂದ ನವೋದಯ, ನವ್ಯ, ಪ್ರಗತಿಶೀಲ ಸಾಹಿತ್ಯವೇ ದಲಿತ ಸಾಹಿತ್ಯದ ಆರಂಭಕ್ಕೆ ದಾರಿಯನ್ನು ಮಾಡಿಕೊಟ್ಟವು.

ಹಿಂದೂ ಧರ್ಮದಲ್ಲಿದ್ದ ಅನಿಷ್ಟ ಪದ್ಧತಿಗಳಾದ ಜಾತಿಪದ್ಧತಿ, ದೈವಭಕ್ತಿ, ಕಂದಾಚಾರ, ಮೂಢನಂಬಿಕೆ, ಅಸ್ಪೃಶ್ಯತೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಪಂಚಮ ಎಂಬ ವರ್ಣಾಶ್ರಮ ಪದ್ಧತಿ ಮುಂತಾದವುಗಳಿಂದ ಬೇಸತ್ತ ಅಂಬೇಡ್ಕರ್ ಅವರು ಬೌದ್ಧ ಧರ್ಮವನ್ನು ಸ್ವೀಕರಿಸುತ್ತಾರೆ. "ಅಂಬೇಡ್ಕರ್ ಅವರು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದು ದಲಿತರಿಗೆ ಮನುಷ್ಯತ್ವದ ಅರಿವು ನೀಡಿತು. ಶತ-ಶತಮಾನಗಳಿಂದ ಅನುಭವಿಸುತ್ತ ಬಂದ ನೋವಿನ ಕಾರಣ ತಿಳಿಯುವಂತಾಯಿತು. ದಲಿತರು ಸಮತಾದರ್ಶಿ, ನಾಸ್ತಿಕ ಜೀವನ ಪರಂಪರೆಗಳ ಜೋಡಿಸಿಕೊಂಡರು. ವರ್ಣ, ವರ್ಗ, ಜಾತಿ-ಭೇದಗಳ ವಿರುದ್ಧ, ಅಂಧಶ್ರದ್ಧೆ, ಅನ್ಯಾಯದ ವಿರುದ್ಧ ಹೋರಾಟಕ್ಕಿಳಿದ ಅಂಬೇಡ್ಕರ್‌ರು ದಲಿತ ಲೇಖಕರಿಗೆ ಸ್ಫೂರ್ತಿಯ ಸೆಲೆಯಾದರು. ದಲಿತರಿಗೆ ಆತ್ಮವಿಶ್ವಾಸ, ಆತ್ಮಾವಲಂಬನ ಹಾಗೂ ಆತ್ಮ ಸನ್ಮಾನದ ಬೆಳಕು ಕೊಡುವ ಯುಗಪುರುಷ ಅಂಬೇಡ್ಕರ್‌ರು ಸಮಗ್ರ ದಲಿತ ಜೀವನದ ಪ್ರೇರಣೆಯ ಸ್ಥಾನ, ಮಾನವ ಜಾತಿಯ ಇತಿಹಾಸದಲ್ಲಿ ಅವರಿಗೆ ಸಮಾನರಿಲ್ಲ. ಅವರು ಹುಟ್ಟದಿದ್ದರೆ ದಲಿತರಿಗೆ ಸ್ವಾತಂತ್ರ್ಯದ ಶ್ವಾಸ ತೆಗೆದುಕೊಳ್ಳಲಾಗುತ್ತಿರಲಿಲ್ಲ. ಹಾಗೆಯೇ ಕೈಯಲ್ಲಿ ಪುಸ್ತಕ ಹಿಡಿಯಲೂ ಆಗುತ್ತಿರಲಿಲ್ಲ. ಸ್ವತಂತ್ರವಾಗಿ ವಿಚಾರ ಮಾಡಲು ಆಗುತ್ತಿರಲಿಲ್ಲ. ಸಮೂಹ ಧೈರ್ಯ ಬರುತ್ತಿರಲಿಲ್ಲ. ಪದ-ಪದವಿ-ಪ್ರತಿಷ್ಠೆಗಳನ್ನು ಕಾಯ್ದು ಕೊಳ್ಳಲಾಗುತ್ತಿರಲಿಲ್ಲ. ಮಾನವೀಯ ಮೌಲ್ಯಗಳಿಗಾಗಿ ಸೊರಗಲು, ಕೊರಗಲು ಆಗುತ್ತಿರಲಿಲ್ಲ. ದಲಿತ ಸಾಹಿತ್ಯದ ಹಿನ್ನೆಲೆಗೆ ಆಧುನಿಕ ಸಾಹಿತ್ಯದ ಸಂಪ್ರದಾಯವಾದ, ಗುಂಪುಗಾರಿಕೆಯೂ ಕಾರಣವಾಯಿತೆನ್ನಬೇಕು. ಆಧುನಿಕ ಪಾಶ್ಚಾತ್ಯ ಶೈಲಿಯ ಅನುಕರಣೆ ಸಾಮಾಜಿಕ ಸಂದರ್ಭಕ್ಕೆ ಅನುಕೂಲವಾಗಿರಲಿಲ್ಲ. ಈ ಸಾಹಿತ್ಯದ ಬೆಳವಣಿಗೆಯೆಂದರೆ ಪ್ರೀತಿ-ಪ್ರಣಯದ ಅತಿರಂಜನೆ, ಸಾಮಾಜಿಕ ರಂಗದೊಳಗಿನ ಪ್ರತಿಗಾಮಿ ಶಕ್ತಿಗಳ ಸೋಲಿನ ವರ್ಣನೆ ಮತ್ತು ಅಧ್ಯಾತ್ಮ-ಪುರಾಣ ಇತಿಹಾಸಗಳ ರಂಜನೀಯತೆ, ಇವರು ಬದುಕಿನ ಮುಖಗಳನ್ನು ತೀರಾ ರಮ್ಯವಾಗಿ ಚಿತ್ರಿಸಿದರು. ಬಹುಜನ ಸಮೂಹದ ಹಿತದ ಕಡೆಗೆ ಬೆನ್ನು ಮಾಡಿ, ವ್ಯಕ್ತಿನಿಷ್ಠತೆಯಲ್ಲಿಯೇ ತನ್ಮಯರಾಗಿ ಬರೆದರು. ಇದು ದಲಿತ ಹಾಗೂ ಗ್ರಾಮೀಣ

ಜನರಿಗೆ ಪರಕೀಯವೆನಿಸಿತು. ಸಾಮಾಜಿಕ ಸಂದರ್ಭವು ಸ್ವಾತಂತ್ರ್ಯ-ಸಮತೆ-ದೀನ-ದಲಿತರ ಬದುಕಿನ ಕಡೆಗೆ ಮುಖ ಹೊರಳಿಸಿದರೂ ಸಾಂಪ್ರದಾಯವಾದಿಗಳು ಒಂದೆಡೆಗೆ ವ್ಯಕ್ತಿವಾದ ಮತ್ತೊಂದೆಡೆಗೆ ಪುನರುಜ್ಜೀವನವಾದ ಸಾಹಿತ್ಯವನ್ನು ನಿರ್ಮಾಣ ಮಾಡಿದರು. ಈ ಎಲ್ಲ ಕಾರಣಗಳನ್ನು ಲಕ್ಷಿಸಿದಾಗ ದಲಿತ ಸಾಹಿತ್ಯ ಹುಟ್ಟಿ ಬರುವುದರ ಔಚಿತ್ಯ ಮನವರಿಕೆಯಾಗುತ್ತದೆ." (ಸರಜೂ ಕಾಟ್ಕರ್ 'ಕನ್ನಡ ಮರಾಠಿ ದಲಿತ ಸಾಹಿತ್ಯ:೨೫, ೨೬)

ದಲಿತ ಸಾಹಿತ್ಯದ ಉಗಮಕ್ಕೆ ಆಧುನಿಕ ಕನ್ನಡ ಸಾಹಿತ್ಯವು ದಲಿತರ ನೋವುಗಳನ್ನು ಕಡೆಗಣಿಸಿದುದು ಹಾಗೂ ಮರಾಠಿ ದಲಿತ ಸಾಹಿತ್ಯದ ಪ್ರೇರಣೆ ಪ್ರಭಾವ ಕಾರಣವಾಯಿತೆನ್ನುವುದು ಎಷ್ಟು ಸತ್ಯವೋ ಅದಕ್ಕಿಂತಲೂ ಸತ್ಯವಾದುದು, ಮುಖ್ಯವಾದುದು ಅಂಬೇಡ್ಕರ್ ಅವರ ಉಪಸ್ಥಿತಿ. ಅವರ ಜೀವನದ ಪ್ರಭಾವ ಹಾಗೂ ಅವರು ನಮ್ಮ ಜೊತೆಗಿದ್ದಾರೆ ಎಂಬ ಆತ್ಮಸ್ಥೈರ್ಯ ದಲಿತ ಸಾಹಿತ್ಯದ ಉಗಮಕ್ಕೆ ನಿಜವಾದ ಕಾರಣವಾಯಿತು. ದಲಿತರು ವಿದ್ಯಾವಂತರಾಗಲು, ವಿದ್ಯಾವಂತರಾಗಿ ತಮ್ಮ ಸ್ಥಾನಮಾನವನ್ನು, ಬದುಕಿನ ಹೀನ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಅಂಬೇಡ್ಕರ್ ಅವರೇ ಕಾರಣರಾದರು. ದಲಿತರಿಗೆಲ್ಲಾ ಹೊಸದಾದ ಪ್ರೇರಕ ಶಕ್ತಿಯಾದರು. ದಲಿತ ಸಾಹಿತಿಗಳು ದೇವರ ವಿರುದ್ಧ, ಧರ್ಮದ ವಿರುದ್ಧ, ಶೋಷಿಸುವ ಜಾತಿಯ ವಿರುದ್ಧ ತಿರುಗಿ ಬೀಳಲು ಅಂಬೇಡ್ಕರ್ ಅವರೇ ಕಾರಣರಾದರು. ಒಟ್ಟಾರೆಯಾಗಿ ದಲಿತರು ತಾವಿದ್ದ ಹೀನಸ್ಥಿತಿಯನ್ನು ಅರ್ಥಮಾಡಿಕೊಂಡು ಶೋಷಿಸುವ ದುಷ್ಟ ಶಕ್ತಿಗಳ ವಿರುದ್ಧ ಹೋರಾಡಲು ಅಂಬೇಡ್ಕರ್ ಅವರ ವಿಚಾರಧಾರೆಗಳು ಹಾಗೂ ಅವರ ಬದುಕಿನ ರೀತಿ ಪ್ರೇರಕವಾಯಿತು.

೫. ಯಾವುದು ದಲಿತೇತರ ಸಾಹಿತ್ಯ :

ಯಾವುದು ದಲಿತ ಸಾಹಿತ್ಯ, ಅದರ ಲಕ್ಷಣಗಳೇನು? ಅಥವಾ ದಲಿತ ಸಾಹಿತ್ಯ ಹೇಗಿರಬೇಕು ಎಂಬ ಪ್ರಶ್ನೆಗಳ ನಂತರ ನಮ್ಮಲ್ಲಿ ಮೂಡುವ ಪ್ರಶ್ನೆ ಹಾಗಾದರೆ ಮೇಲ್ಜಾತಿಯವರು ಬರೆದದ್ದು ಕೂಡಾ ದಲಿತ ಸಾಹಿತ್ಯವಾಗುತ್ತದೆಯೇ? ಎಂಬ ಪ್ರಶ್ನೆ. ಅಷ್ಟು ಸುಲಭವಾಗಿ ಸಮಾಜದ ಯಾರೇ ಬರೆದದ್ದು ಅಥವಾ ಮೇಲ್ವರ್ಗದವರು ಬರೆದದ್ದು ದಲಿತ ಸಾಹಿತ್ಯವಾಗುತ್ತದೆ ಎಂಬ ತೀರ್ಮಾನಕ್ಕೆ ಬರಲಿಲ್ಲ. ಇದನ್ನು ಒಪ್ಪಿಕೊಳ್ಳಲು ಹಲವು ಚರ್ಚೆಗಳು ನಡೆಯಬೇಕಾಯಿತು. ಹಾಗೂ ಸಮಯವೂ ಬೇಕಾಯಿತು. ಯಾವುದನ್ನು ದಲಿತೇತರರು ಬರೆದದ್ದನ್ನು ದಲಿತ ಸಾಹಿತ್ಯ ಎಂದು ಪರಿಗಣಿಸಬೇಕು ಎಂಬುದಕ್ಕಾಗಿ ಸಾಕಷ್ಟು ವಾದಗಳು, ಭಿನ್ನಾಭಿಪ್ರಾಯಗಳು ನಡೆದಿವೆ. ದಲಿತೇತರರು ಅಥವಾ ಪ್ರಗತಿಪರರು ಬರೆದದ್ದು ಅನುಕಂಪದಿಂದ ಕೂಡಿರುತ್ತದೆಯೇ ಹೊರತು ವಾಸ್ತವ ಬದುಕನ್ನು ಚಿತ್ರಿಸುವುದಿಲ್ಲ ಎಂಬ

ವಾದಗಳೂ ಕೇಳಿಬಂದವು. ಇಂತಹ ಪ್ರಶ್ನೆಗಳಿಗೆಲ್ಲ ಉತ್ತರವೆಂಬಂತೆ ಅರವಿಂದ ಮಾಲಗತ್ತಿಯವರು ಹೀಗೆ ಹೇಳುತ್ತಾರೆ.

"**ದಲಿತ ಸಾಹಿತ್ಯ** : ದಲಿತರು – ದಲಿತೇತರರು ದಲಿತ ಪ್ರಜ್ಞೆಯಿಂದ ದಲಿತರ ಕುರಿತು ಸೃಷ್ಟಿಸಿದ ಸಾಹಿತ್ಯವೇ ದಲಿತ ಸಾಹಿತ್ಯ. ಇದರಲ್ಲಿ ದಲಿತೀಯ, ದಲಿತೇಯ ಮತ್ತು ಆಂಶಿಕ ಸಾಹಿತ್ಯವೂ ಒಳಗೊಂಡಿರುತ್ತದೆ.

ದಲಿತೀಯ ಸಾಹಿತ್ಯ : ದಲಿತರು ದಲಿತಪ್ರಜ್ಞೆಯಿಂದ ದಲಿತತ್ವದ ಕುರಿತು ಬರೆದ ಸಾಹಿತ್ಯ ದಲಿತೀಯ ಸಾಹಿತ್ಯವಾಗುತ್ತದೆ.

ದಲಿತೇಯ ಸಾಹಿತ್ಯ : ಪ್ರಗತಿಪರ ದಲಿತೇತರರು ದಲಿತ ಪ್ರಜ್ಞೆಯಿಂದ ದಲಿತರನ್ನು ಕುರಿತು ಬರೆದ ಸಾಹಿತ್ಯವೇ ದಲಿತೇಯ (ಅದಲಿತೇಯ) ಸಾಹಿತ್ಯವಾಗುತ್ತದೆ.

ದಲಿತ ಸಾಹಿತ್ಯ ಜಾತಿವಾದಿ ಸಾಹಿತ್ಯವಲ್ಲ. ಇತರ ಸಾಹಿತ್ಯಕ ಪಂಥಗಳಂತೆ ಇದೂ ಕೂಡ ಒಂದು. ಇತರ ಪಂಥಗಳಿಗಿಂತ ಇದು ಹೇಗೆ ಭಿನ್ನ? ದಲಿತ–ದಲಿತೇತರರ ಸಾಹಿತ್ಯದಲ್ಲಿರುವ ಅಂತರ ಹಾಗೂ ಅಂತರ್‌ಸಂಬಂಧ, ತೌಲನಿಕ ಅಧ್ಯಯನ ತಾತ್ವಿಕ ನಿಲುವುಗಳು, ಧೋರಣೆಗಳು, ಪ್ರೇರಣೆಗಳು ಮುಂತಾದುವನ್ನು ಕಂಡುಕೊಳ್ಳಲು ಈ ರೀತಿಯ ವರ್ಗೀಕರಣ ಸಹಕರಿಸುತ್ತದೆ. ದಲಿತರೇ ಬರೆದದ್ದು ದಲಿತ ಸಾಹಿತ್ಯವಾಗುತ್ತದೆಂದು ನಂಬಿ ಹೊರಟಿದ್ದೇ ಆದರೆ, ಸಾಹಿತ್ಯದಲ್ಲಿ ಮತ್ತೊಂದು ಅಸ್ಪೃಶ್ಯರ ಕೇರಿಯನ್ನು ನಿರ್ಮಾಣ ಮಾಡಿದಂತಾಗುತ್ತದೆ. ಆಗ ದಲಿತ ಸಾಹಿತ್ಯ ಒಂದೇ ವಾರ್ಡಿನ ರೋಗಿಗಳು ನರಳಿದ ದನಿಯಾಗುತ್ತದೆ. ದಲಿತರು ಊರ ಹೊರಗಿದ್ದು ಬದುಕಿದ್ದಾರೆ, ಆದರೆ ಊರಿನವರ ಸಂಬಂಧ ಕಳೆದುಕೊಂಡು ಬದುಕಿಲ್ಲ. ಎರಡು ಕೈಗಳು ಸೇರಿದಾಗಲೇ ಚಪ್ಪಾಳೆ, ಧ್ವನಿ. ಆದ್ದರಿಂದ ದಲಿತರು, ದಲಿತೇತರರು ದಲಿತಪ್ರಜ್ಞೆಯಿಂದ ಕುರಿತು ಬರೆದದ್ದು ದಲಿತ ಸಾಹಿತ್ಯವಾಗುತ್ತದೆಂದು ಒಪ್ಪಿಕೊಳ್ಳಬೇಕಾಗಿದೆ. ಈವರೆಗೂ ದಲಿತ ಸಾಹಿತ್ಯದ ಕುರಿತು ವ್ಯಾಖ್ಯಾನ ಮಾಡಿದವರೆಲ್ಲ ದಲಿತೇತರರೇ ಎನ್ನುವುದನ್ನೂ ಲಕ್ಷಿಸಬೇಕು. ದಲಿತೇತರರು ಬರೆಯುವಾಗ ಈ ಸಾಹಿತ್ಯದಲ್ಲಿ ದಲಿತರೇ ಕೇಂದ್ರಬಿಂದುವಾಗಿರಬೇಕೆಂಬ ನಿಯಮವೇನಿಲ್ಲ. ದಲಿತರೊಂದಿಗಿನ ಸಂಬಂಧಗಳನ್ನು ಹಂಚಿಕೊಳ್ಳುವಾಗ ಆತನ ದಲಿತರೊಂದಿಗಿನ ಒಳಗೊಳ್ಳುವಿಕೆಯ ಪ್ರಮಾಣ, ಆತನ ಬರವಣಿಗೆಯ ಸಾಮರ್ಥ್ಯ, ಪಕ್ವತೆ ಇವೆಲ್ಲವೂ ಮುಖ್ಯವಾಗುತ್ತವೆ. ಒಬ್ಬ ಸಮರ್ಥ ಲೇಖಕ ದಲಿತನಷ್ಟೇ ಸತ್ವಯುತ ಕೃತಿಯನ್ನು ಕೊಡಬಲ್ಲನೆನ್ನುವುದನ್ನು ನಾವು ಮನಗಾಣಬೇಕಿದೆ." (ಅರವಿಂದ ಮಾಲಗತ್ತಿ 'ದಲಿತಮಾರ್ಗ':೨೪, ೨೫) ಉದಾ: ಶಿವರಾಮಕಾರಂತರ

ಚೋಮನದುಡಿ. ದಲಿತನ ನೋವಿನ ಅನುಭವವಾಗದಿದ್ದರೂ ಕಾರಂತರು ದಲಿತನ ನೋವುಗಳನ್ನು ಸಹಜ ರೀತಿಯಲ್ಲಿಯೇ ವಾಸ್ತವ ನೆಲೆಯಲ್ಲಿ ಸಮಾಜಕ್ಕೆ ತೋರಿಸಿದ್ದಾರೆ. ಆ ಮೂಲಕ ದಲಿತೇರರು ಬರೆದದ್ದೂ ಕೂಡಾ ದಲಿತ ಸಾಹಿತ್ಯವಾಗುತ್ತದೆ ಎಂಬುದನ್ನು ಕಾರಂತರು ತಮ್ಮ ಕಾದಂಬರಿಯುದ್ದಕ್ಕೂ ತೋರಿಸಿಕೊಟ್ಟಿದ್ದಾರೆ.

ಆದರೆ ಹಲವು ಸಂದರ್ಭಗಳಲ್ಲಿ ದಲಿತೇತರರು ಬರೆದದ್ದು ಪರಿಣಾಮಕಾರಿ ದಲಿತ ಸಾಹಿತ್ಯವಾಗುವುದಿಲ್ಲ. ಏಕೆಂದರೆ ಅವರು ದಲಿತರನ್ನು ಕೇವಲ ಅನುಕಂಪ, ಕರುಣೆಯ ನೆಲೆಯಲ್ಲೇ ನೋಡಿ ಬರೆಯುತ್ತಾರೆ. ಹಲವು ಸಂದರ್ಭಗಳಲ್ಲಿ ದಲಿತ ಹೆಣ್ಣುಮಕ್ಕಳನ್ನು ಕಾಮಕ್ಕೆ ಬಳಕೆಯಾಗುವ ವಸ್ತುವಿನ ನೆಲೆಯಲ್ಲೇ ನಿಲ್ಲಿಸಿ ಬಿಡುತ್ತಾರೆ. ಇದಕ್ಕೆ ಉದಾಹರಣೆಯಾಗಿ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಕೃತಿಗಳಿವೆ. ಅನಂತಮೂರ್ತಿಯವರು ತಮ್ಮ 'ಭಾರತೀಪುರ', ಸಂಸ್ಕಾರ ಕಾದಂಬರಿಗಳಲ್ಲಿನ ದಲಿತ ಹೆಣ್ಣುಮಕ್ಕಳನ್ನು ಕಾಮವನ್ನು ಹೊರತುಪಡಿಸಿ ಕ್ರಿಯಾಶೀಲತೆಯ ನೆಲೆಯಲ್ಲಿ ಗುರುತಿಸಿಲ್ಲ. ಕುವೆಂಪು ಅವರು ಕೂಡಾ ತಮ್ಮ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿನ ದಲಿತಳಾದ ಕುಳವಾಡಿ ಸಣ್ಣನ ಮಗಳು ಪುಟ್ಟಿಯನ್ನು ಕಾಮಕೇಂದ್ರಿತ ನೆಲೆಯಲ್ಲೇ ನಿಲ್ಲಿಸಿದ್ದಾರೆ. ಶಿವರಾಮ ಕಾರಂತರು ಕೂಡಾ ಚೋಮನ ದುಡಿ ಕಾದಂಬರಿಯ ಬೆಳ್ಳಿಯನ್ನು ತನ್ನ ಕುಟುಂಬಕ್ಕಾಗಿ ಎಂತಹ ತ್ಯಾಗಕ್ಕಾದರೂ ಸಿದ್ಧ ಎಂಬಂತೆ ಚಿತ್ರಿಸಿದ್ದಾರೆ.

ಅಂದಿನ ಸಮಾಜದ ವಾಸ್ತವ ಚಿತ್ರಣವೂ ಇದೇ ಆಗಿರಬಹುದು. ಆದರೆ, ಬರವಣಿಗೆಯ ಮುಖಾಂತರ ಋಣಾತ್ಮಕ ವಿಚಾರಗಳನ್ನು ಧನಾತ್ಮಕವಾಗಿ ಬರೆಯುವುದರ ಮುಖಾಂತರ ದಲಿತ ಮಹಿಳೆಯನ್ನು ನೋಡುವ ಕ್ರಮವನ್ನು ಬದಲಾಯಿಸಲು ಸಾಧ್ಯವಿದೆ. ಈ ನಿಟ್ಟಿನ ಪ್ರಯತ್ನವನ್ನು ಕೆಲವು ದಲಿತ ಬರಹಗಾರರು ತಮ್ಮ ಬರವಣಿಗೆಗಳಲ್ಲಿ ಮಾಡಿದ್ದಾರೆ. ಉದಾಹರಣೆಗಾಗಿ ದೇವನೂರರ 'ಒಡಲಾಳ' ಕಾದಂಬರಿ ನಮ್ಮ ಕಣ್ಣ ಮುಂದಿದೆ.

೬. ದಲಿತ ಕಾದಂಬರಿಗಳಲ್ಲಿ ಚಿತ್ರಣಗೊಂಡ ದಲಿತ ಮಹಿಳೆ :

ದಲಿತರಾದ ದೇವನೂರ ಮಹಾದೇವ ಅವರ 'ಒಡಲಾಳ' ಕಾದಂಬರಿಯಲ್ಲಿ ಸಾಕವ್ವ ಇಡೀ ಕುಟುಂಬವನ್ನೇ ಪೋಷಿಸುವವಳಾಗಿ ಕಂಡು ಬರುತ್ತಾಳೆ. ಈ ಕಾದಂಬರಿಯಲ್ಲಿ ಪಾಲನೆಯೇ ಕೇಂದ್ರವಾಗಿದೆ. ಏಕೆಂದರೆ ಸಾಕವ್ವ ಹುಂಜವನ್ನು ತನ್ನ ಕುಟುಂಬವನ್ನೂ ಪಾಲಿಸುವವಳಾಗಿದ್ದಾಳೆ. ಇಲ್ಲಿ ಅಸಹಜ ಕಾಮದ ಪ್ರಸ್ತಾಪವಾಗಲೀ ದಲಿತ ಹೆಣ್ಣುಮಕ್ಕಳು ಮೇಲ್ಜಾತಿಯ ಗಂಡಸರ ಕಾಮಕ್ಕೆ ಬಲಿಯಾಗುವುದಾಗಲೀ ಕಂಡು ಬರುವುದಿಲ್ಲ. 'ಒಡಲಾಳದ' ಸಾಕವ್ವ ಆದಿಮ ಸಮಾಜದ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯ ಪ್ರತಿನಿಧಿಯಂತೆ ಕಂಡು

ಬರುತ್ತಾಳೆ. ಹಾಗೆಯೇ ಸಾಕಷ್ಟು ದಲಿತ ಕುಟುಂಬಗಳಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿದೆ ಎನ್ನುವುದಕ್ಕೆ ಸಾಕವ್ವನೇ ಉದಾಹರಣೆಯಾಗಿದ್ದಾಳೆ. ಈ ಕಾದಂಬರಿಯಲ್ಲಿ ದಲಿತರನ್ನು ಹಿಂದಿನಿಂದ ಕಾಡುತ್ತಾ ಬಂದಿರುವ 'ಹಸಿವು' ಪ್ರಧಾನವಾಗಿದೆ.

ಅದಕ್ಕಾಗಿಯೇ ಕಾಳಣ್ಣ "ಆ ಎತ್ತಪ್ಪನೋರ ದನದ ಹಟ್ಟಿ ಇರ್ಲಿ, ಅಲ್ಲಿರೊ ದನ ಎಮ್ಮ ತಾನೆ ಏನಯ್ಯ.

ಸಣ್ಣಯ್ಯ : ಒಂದೊಂದುವಿ ಆನಥರ ಹಟ್ಟಿದಪ್ಪ ಅವ.

ಸಾಕವ್ವ : ಅಂಥ ಒಂದು ಎಮ್ಮ ಸತ್ರೀಗಪ್ಪ.. ನಮ್ಮ ಕೇರಿ ದರಿದ್ರನಾರು ಒಂಜಿನ ಹಿಂಗ್ತದ". (ದೇವನೂರ ಮಹಾದೇವ 'ದೇವನೂರ ಮಹಾದೇವ ಅವರ ಆಯ್ದ ಕತೆಗಳು:೫೮) ಎನ್ನುವ ಮಾತುಗಳು ಕುಂ. ವೀರಭದ್ರಪ್ಪನವರ 'ದೇವರ ಹೆಣ' ಕಥೆಯನ್ನು ನೆನಪಿಸುತ್ತವೆ. ಠೊಣ್ಣಿಯು ಹಾಗೆ 'ದೇವರು' ದನ ಸಾಯಲಿ ಅಂತ ಬೇಡಿಕೊಳ್ತಾನೆ. ದಲಿತರ ಹಸಿವಿನ ತೀವ್ರತೆಯನ್ನು, ಬಡತನದ ನೋವನ್ನು ಇಂತಹ ಸಾಲುಗಳು ನೆನಪಿಸುತ್ತವೆ. ಸಣ್ಣಪುಟ್ಟ ಮೈಮನಸ್ಸುಗಳಿದ್ದ ಸಾಕವ್ವನ ಕುಟುಂಬವು ಕಡ್ಲೇಕಾಯಿ ನೆಪದಲ್ಲಿ ಒಂದಾಗುತ್ತದೆ. ಪ್ರಾಣಿಗಳಲ್ಲಿ, ಪಕ್ಷಿಗಳಲ್ಲಿ ಮಾತ್ರ ಚಾಲ್ತಿಯಲ್ಲಿರುವ 'ಹಂಚಿ ತಿಂದರೆ ಹಸಿವಿಲ್ಲ' ಎಂಬ ತತ್ವವನ್ನು ಸಾಕವ್ವನ ಕುಟುಂಬ ಪಾಲಿಸುತ್ತದೆ. 'ಬಡವನ ಸಿಟ್ಟು ದವಡೆಗೆ ಮೂಲ' ಎಂಬ ಗಾದೆಯ ಅರ್ಥವನ್ನು ಒಡಲಾಳದ ಪಾತ್ರಗಳ ಸಂದರ್ಭಕ್ಕೆ 'ಬಡವನ ಸಿಟ್ಟು ಕಳ್ಳತನಕ್ಕೂ ಮೂಲ' ಎಂಬಂತೆ ಬದಲಾಗಿದೆ. ಹಸಿವು ಏನನ್ನು ಬೇಕಾದರೂ ಮಾಡಿಸುತ್ತದೆ ಎಂಬುದಕ್ಕೆ ಕಾಳಣ್ಣ ಕಡ್ಲೇಕಾಯಿ ಮೂಟೆ ಕದ್ದುತಂದಿರುವುದೇ ಸಾಕ್ಷಿಯಾಗಿದೆ.

ಬಡವರ ಹಸಿವು ಮತ್ತು ಕಳ್ಳತನವನ್ನು ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲೂ ಕಾಣಬಹುದು. ಲಚ್ಚಿಯ ಸಂಪೂರ್ಣ ಜೀವನ ನಾಶವಾಗುವುದಕ್ಕೆ ತನ್ನದಲ್ಲದ ಕುಂಬಳಕಾಯಿ ಕಳ್ಳತನವೇ ಕಾರಣವಾಗುತ್ತದೆ. ಕಳ್ಳತನದ ಕಾರಣಕ್ಕಾಗಿ ಲಚ್ಚಿ ಜೇಲಿಗೆ ಸೇರಬೇಕಾಗುತ್ತದೆ. ಶೀಲವನ್ನೂ ಕಳೆದುಕೊಳ್ಳಬೇಕಾಗುತ್ತದೆ. ಸ್ತ್ರೀನಿಕೇತನಕ್ಕೂ ಸೇರಬೇಕಾಗುತ್ತದೆ. ಸಣ್ಣ ಕಳ್ಳತನದಿಂದ ಅವಳ ಜೀವನ ಅನಿರೀಕ್ಷಿತ ತಿರುವನ್ನು ಪಡೆದುಕೊಂಡು ದುರಂತವನ್ನಪ್ಪುತ್ತದೆ. ಇಂದಿಗೂ ಹಳ್ಳಿಗಳಲ್ಲಿನ ದಲಿತರನ್ನು ಮೇಲ್ಜಾತಿಯವರ ಹೊಲ-ಗದ್ದೆಗಳಲ್ಲಿ ಕದ್ದಾಗ ವಿಕೃತವಾಗಿ ಹಿಂಸಿಸಲಾಗುತ್ತಿದೆ.

ಸಾಕವ್ವನ ಹುಂಜ ಕಾಣೆಯಾಗಿರುವುದನ್ನು ಹುಡುಕುವುದರೊಂದಿಗೆ 'ಒಡಲಾಳ' ಕಥೆ ಆರಂಭವಾಗುತ್ತದೆ. ಕಳೆದ ಹುಂಜದೊಂದಿಗೆ ಮತ್ತೊಂದು ಹುಂಜವನ್ನು

ಕಳೆದುಕೊಳ್ಳುವುದರೊಂದಿಗೆ ಕಾದಂಬರಿ ಮುಕ್ತಾಯಗೊಳ್ಳುತ್ತದೆ. ಇಲ್ಲಿ 'ಹುಡುಕಾಟ' ಪ್ರಧಾನವಾಗಿ ಕಂಡು ಬರುತ್ತದೆ. ದಲಿತರೇ ಆದ ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿಯಲ್ಲೂ ಸೋನಿಬಾಯಿ ತನ್ನ ಕೋಳಿಯನ್ನು ಕಳೆದುಕೊಂಡು ಹುಡುಕುವುದನ್ನು ಇಲ್ಲಿ ತುಲನಾತ್ಮಕವಾಗಿ ಗಮನಿಸಬಹುದು. 'ಸೋನಿ ಕಣ್ಣೀರು ಒರೆಸಿಕೊಳ್ಳುತ್ತಾ ತನ್ನ ಕೋಳಿಯನ್ನು ಹುಡುಕುತ್ತಾಳೆ. ಸಿಗದಿದ್ದಾಗ ಹತಾಶಳಾಗಿ ಮಾರಮ್ಮಗೆ ಬೇಡ್ಕೊಳ್ತೀನಿ ಎಂದು ಬೆದರಿಕೆ ಹಾಕ್ತಾಳೆ. ಇದನ್ನು ಕೇಳಿಸಿಕೊಂಡ ಕಾಶಪ್ಪ ಪೂಜಾರಿ ಗುಡಿಗೆ ಬಂದು ಬೇಡಿಕೊಂಡರೆ ಕೋಳಿ ಕದ್ದವರ್‍ಯಾರು ಎಂಬುದು ಗೊತ್ತಾಗುತ್ತದೆ ಎಂದು ಹೇಳುತ್ತಾನೆ' ಕಡೆಗೆ ಸೋನಿಯ ಗಂಡ 'ಮಾನ್ಯಾ'ನೇ ಕೋಳಿ ಕದ್ದಿದ್ದ ವಿಚಾರ ತಿಳಿಯುತ್ತದೆ. ಇದೊಂದೆ ಕಾದಂಬರಿಯಲ್ಲಿ ಕಳೆದುಹೋದ ಕೋಳಿಯ ಸುಳಿವು ಸಿಗುವುದು. ದೇವನೂರರ 'ಒಡಲಾಳ'ದಲ್ಲಾಗಲೀ, ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲಾಗಲೀ ಕಳೆದುಕೊಂಡಿದ್ದು ಮತ್ತೆ ಸಿಗುವುದಿಲ್ಲ. ಅದರ ಸುಳಿವೂ ಸಿಗುವುದಿಲ್ಲ.

ದೇವನೂರರ 'ಒಡಲಾಳ' ಕಾದಂಬರಿಯಲ್ಲಿ ಸಾಕವ್ವ ಕಳೆದುಕೊಂಡ ತನ್ನ ಹುಂಜಕ್ಕಾಗಿ ಶೋಧವನ್ನು ನಡೆಸುತ್ತಾಳೆ. ಎಷ್ಟು ಹುಡುಕಿದರೂ ಹುಂಜ ಸಿಗದಾಗ ಸಾಕವ್ವ "ಅಂಗಳದೊಳಗ ಮುಳುಗಿ ತನ್ನ ಸುತ್ತಗೂ ಮಣ್ಣೂ ಧೂಳೂ ಬಾಚುತ್ತಿದ್ದಳು. ಮಣ್ಣು ಬೊಗಸೆಯಾಗಲು ಅದನ್ನು ಹೂಪಟಾಕಿಯಂತೆ ಎರುಚಿ 'ನನ್ನ ಕೋಳಿ ತಿಂದವರ ಮನೆ ಮಣ್ಣಾಗ್ಲೋ.. ನನ್ನ ಮನೆ ದೇವ್ರ ಸತ್ಯ ಇದ್ದುದೇ ಉಂಟಾದ್ರೆ ನನ್ನ ಕೋಳಿ ಮುರ್ದವರ ಮನೆ ಮುರ್ದೋಗಲೋ' ಅನ್ನುತ್ತ ಒಂದು ಬೈಗುಳ ಬಯ್ಯೋದು ಒಂದು ಸಲ ಧೂಳು ಎರಚೋದು ಮಾಡ್ತ ನಾಕದಿಕ್ಕೂ ಧೂಳು ಬಾಣ ಬುಡುತ್ತಿದ್ದಳು. ಕ್ರಮಬದ್ಧವಾಗಿ ಒಂದೊಂದು ಸಲ ಆ ಧೂಳ ಮೇಲ ಬಿದ್ದು ಒರಳಾಡುವವಳು. ಎದ್ದು ನಟುಕೆ ಮುರಿದಳು. ಬಾಚಿ ಧೂಳ ತಗುದು ಎರುಚಿದಳು." (ಒಡಲಾಳ:ಪು.೪೪)

'ಗತಿ', 'ಹಸಿಮಾಂಸ ಮತ್ತು ಹದ್ದುಗಳು', 'ಒಡಲಾಳ' ಮುಂತಾದ ಕಾದಂಬರಿಗಳಲ್ಲಿನ ದಲಿತ ಹೆಣ್ಣುಮಕ್ಕಳು ತಮ್ಮ ಕೋಳಿಗಳನ್ನು ಕಳೆದುಕೊಳ್ಳುವುದು ಮೇಲ್ನೋಟಕ್ಕೆ ಸಾಧಾರಣವಾಗಿ ಕಂಡರೂ ಆಂತರಿಕವಾಗಿ ದಲಿತ ಹೆಣ್ಣುಮಕ್ಕಳು ತಮ್ಮ ಅಸ್ಥಿತ್ವವನ್ನು ಹಾಗೂ ಬದುಕನ್ನು ಕಳೆದುಕೊಳ್ಳುವುದರ ಸಂಕೇತದಂತೆ ಭಾಸವಾಗುತ್ತದೆ, ಎಲ್ಲಾ ಕಾದಂಬರಿಗಳಲ್ಲೂ ದಲಿತ ಹೆಣ್ಣುಮಕ್ಕಳು ಕಳೆದುಕೊಳ್ಳುವುದು ಸಾಮಾನ್ಯವಾಗಿ ಕಂಡುಬರುವುದರಿಂದ ಅವಳ ಹಕ್ಕುಗಳು, ಸ್ಥಾನಮಾನ, ಗೌರವ, ಶೀಲ ಮುಂತಾದವುಗಳನ್ನು ಕಳೆದುಕೊಳ್ಳುತ್ತಿರುವುದರ ಸೂಚಕವಾಗಿಯೂ ಪರಿಗಣಿಸಲು ಸಾಧ್ಯವಿದೆ.

ಗೀತಾ ನಾಗಭೂಷಣರ 'ಹಸಿಮಾಂಸ ಹದ್ದುಗಳು' ಕಾದಂಬರಿಯಲ್ಲೂ ಲಚ್ಚಿ ಕೂಡಾ ತನ್ನ ಕೋಳಿಯನ್ನು ಕಳೆದುಕೊಳ್ಳುವ ಪ್ರಸಂಗವಿದೆ. "ಅಂದು ಸಂಜೆ ಕಪ್ಪಾದರೂ ಲಚ್ಚಿಯ ಸಜ್ಜೆ ಬಣ್ಣದ ತಲಗೋಳಿ ಮನೆಗೆ ಬಂದು ಗೂಡು ಸೇರಲಿಲ್ಲ. ಅದರ ಮಕ್ಕಳು ಬಂದುವು. ಬೇರೆ ಪಡ್ಡಿಗಳು, ಹುಂಜಗಳು ಬಂದು ಗೂಡು ಸೇರಿ ಕಿಚಿಪಿಚಿ ನಡೆಸಿದುವು. ಅವಳು ಅಂಗಳದಲ್ಲಿ ಬಂದು ನಿಂತು ಬಾಯಿಯಿಂದ ವಿಚಿತ್ರ ಸದ್ದು ತೂರಿಸಿ ತನ್ನ ನೆಚ್ಚಿನ ಕೋಳಿಯನ್ನು ಕರೆದೇ ಕರೆದಳು. ಉಹುಂ ಅವಳ ಕೋಡ್ ನೇಮ್‌ಗೂ ಕೋಳಿ ಓಗೊಡಲಿಲ್ಲ. ಎಲ್ಲಿಯೂ ಆಸುಪಾಸಿನಲ್ಲಿ ಕೋಳಿ ಕಾಣಿಸಲಿಲ್ಲ." (ಗೀತಾ ನಾಗಭೂಷಣ 'ಹಸಿಮಾಂಸ ಮತ್ತು ಹದ್ದುಗಳು':೨೮) ಹೀಗೆ ಕಳೆದುಕೊಳ್ಳುವ ಅಥವಾ ಕಾಣೆಯಾಗುವ ಪ್ರಸಂಗಗಳನ್ನು ದಲಿತರೇ ಬರೆದ ಮೂರೂ ಕಾದಂಬರಿಗಳಲ್ಲಿ ಕಾಣಬಹುದು. ಪ್ರಸ್ತುತದಲ್ಲೂ ಹಳ್ಳಿಗಳಲ್ಲಿ ದಲಿತರು ತಮ್ಮ ಕೋಳಿಗಳನ್ನೊ, ಕುರಿಗಳನ್ನೊ, ಕಳೆದುಕೊಳ್ಳುವುದು ಸರ್ವೇ ಸಾಮಾನ್ಯವಾಗಿ ಕಂಡು ಬರುತ್ತದೆ. ಮೇಲಿನ ಮೂರೂ ದಲಿತ ಕಾದಂಬರಿಗಳಲ್ಲೂ ಕೋಳಿ ಪಾಲನೆಯೊಂದಿಗೆ ಜೀವನದ ಪಾಲನೆಯೂ ಬೆರತುಕೊಂಡಿದೆ. ಸೋನಿಬಾಯಿ ಕೋಳಿಗಳನ್ನು ಮಾರಿ ತನ್ನ ಹೆಣ್ಣುಮಕ್ಕಳಿಗೆ ಬಟ್ಟೆ ತರಬೇಕೆಂದುಕೊಂಡಿರುತ್ತಾಳೆ. ಸಾಕವ್ವ ಮತ್ತು ಲಚ್ಚಿಯರೂ ಕುಟುಂಬದ ಆಸರೆಗಾಗಿಯೇ ಕೋಳಿಗಳನ್ನು ಸಾಕುತ್ತಿರುತ್ತಾರೆ. ಸಾಕವ್ವಳಂತೂ ತನ್ನ ಇಡೀ ಕುಟುಂಬಕ್ಕೆ ಊರುಗೋಲಾಗಿದ್ದಾಳೆ. ಇಳಿವಯಸ್ಸಿನಲ್ಲೂ ಕುಟುಂಬದ ಸದಸ್ಯರೊಂದಿಗೆ ನಿಯಂತ್ರಣವನ್ನು ಸಾಧಿಸಿದ್ದಾಳೆ. ಗಂಡ ಸತ್ತಿದ್ದರೂ ದುಡಿದು ತೊಟ್ಟಿಮನೆ ಕಟ್ಟಿಸಿರುತ್ತಾಳೆ. ಅವಳು ಪಟ್ಟಿರುವ ಕಷ್ಟಗಳಿಗಿಂತ ಸಾವು ದೊಡ್ಡದಲ್ಲ, "ಯಮ ಬಂದು ಕರೆದ್ರ ಅವನಿಗಿಂತ ಮೊದಲು ನಾನೇ ಹೋಗ್ತೀನಿ ಎನ್ನುವಳು. ಯಮ ನಿನ್ನ ಧೈರ್ಯಕ್ಕೆ ಮೆಚ್ಚಿದೆ ಏನು ವರ ಬೇಕು ಅಂತ ಕೇಳಿದರೆ ನನ್ನ ಮೊಮ್ಮಗ ರಾಜ್ಯಭಾರ ಮಾಡುವಂಥ ವರಕೊಡು ಎಂದು ಕೇಳುತ್ತೇನೆ" (ದೇವನೂರ ಮಹಾದೇವ 'ದೇವನೂರ ಮಹಾದೇವ ಅವರ ಆಯ್ದ ಕತೆಗಳು':೫೩, ೫೪) ಎನ್ನುವ ಅವಳ ಮಾತುಗಳಲ್ಲಿ ಮತ್ತೊಮ್ಮೆ ಪಾಲನೆಯೇ ಕಾಣುತ್ತದೆ. ಮತ್ತು ದಲಿತರ ಕೈಗೆ ಅಧಿಕಾರ ಸಿಗಬೇಕೆಂಬ ಆಶಯವೂ ಇದ್ದಂತೆ ಕಾಣುತ್ತದೆ. ದಲಿತರ ಕೈಗೆ ಅಧಿಕಾರ ಸಿಕ್ಕಾಗಲಾದರೂ ದಲಿತರ ಸಮಸ್ಯೆಗಳಿಗೆ ಪರಿಹಾರ ಸಿಗಬಹುದೆಂಬ ಆಶಾವಾದವೂ ಅವಳ ಆಂತರ್ಯದಲ್ಲಿರಬಹುದೇನೋ ಎನ್ನುವುದನ್ನು ಸೂಚಿಸುವಂತಿದೆ.

ಸೋನಿ ಮತ್ತು ಲಚ್ಮಿ :

'ಬಿ.ಟಿ. ಲಲಿತಾನಾಯಕರ 'ಗತಿ' ಕಾದಂಬರಿಯಲ್ಲಿನ ಎರಡು ದಲಿತ ಮಹಿಳೆಯರು ಛಲವುಳ್ಳ ಹೆಣ್ಣುಮಕ್ಕಳಾಗಿದ್ದಾರೆ. ಜೀವನದಲ್ಲಿ ಎಂಥವೇ ಕಷ್ಟಗಳು ಬಂದರೂ ಕುಗ್ಗದೇ

ನೋವಿನಲ್ಲೂ ನಗುವವರಂತೆ ಕಾಣುತ್ತಾರೆ. ಮಾನ್ಯಾ'ನ ಹೆಂಡತಿ ಸೋನಿ ತನ್ನ ಕುಡುಕು ಗಂಡನ ಹೊಡೆತ-ಬಡಿತ ಕೌಟುಂಬಿಕ ಹಿಂಸೆಗಳಲ್ಲೇ ಬೇಯುತ್ತಿರುತ್ತಾಳೆ. ಒಂದು ಬಾರಿ ತಲೆಯನ್ನು ಹೊಡೆದು ರಕ್ತವನ್ನು ಚಿಮ್ಮಿಸಿರುತ್ತಾನೆ. ಅಂತಹ ಸಮಯದಲ್ಲಿ ಗಂಡ ಹೆಂಡತಿಯನ್ನು ಆಸ್ಪತ್ರೆಗೆ ಕರೆದೊಯ್ಯುವುದಿಲ್ಲ. ಹೆಣ್ಣಿಗೆ ಹೆಣ್ಣೇ ರಕ್ಷಣೆ ನೀಡಬೇಕು ಎನ್ನುವ ಮಾತಿನಂತೆ ಲಚ್ಮಿ ಆಸ್ಪತ್ರೆಯಲ್ಲಾದ ಖರ್ಚುವೆಚ್ಚವನ್ನೆಲ್ಲಾ ಬರಿಸಿ ಸೋನಿಯನ್ನು ಕರೆತರುತ್ತಾಳೆ. ಸೋನಿ ಮಾವ ಹರಸಿಂಗ್'ನ ಸುಳ್ಳು ಹೇಳಿಕೆಯಿಂದಾಗಿ ಲಚ್ಮಿಗೆ ಪಂಚಾಯ್ತಿಯವರಿಂದ ಇಪ್ಪತ್ತೈದು ರೂಪಾಯಿ ದಂಡ ಮತ್ತು ಛಡಿ ಏಟುಗಳ ಶಿಕ್ಷೆಯಾಗುತ್ತದೆ. ಸೋನಿಗೆ ಗಂಡ ಮತ್ತು ಮಾವನಿಂದ ಸಾಕಷ್ಟು ಕೌಟುಂಬಿಕ ಹಿಂಸೆಯಾಗುತ್ತಿರುತ್ತದೆ. ಒಮ್ಮೆ ಸೋನಿ ಸಾಯ್ತೀನಿ ಅಂತ ಬಾವಿ ಕಡೆ ಓಡಿದಾಗ ಮಾವ ಮತ್ತು ಗಂಡ ನಿಜವಾಗಿಯೇ ಬಾವಿಗೆ ಇಳಿಸುತ್ತಾರೆ. "ಗಂಡ ಮತ್ತು ಮಾವ ಸೇದುವ ಹಗ್ಗವೊಂದನ್ನು ಹಿಡಿದು ಹಿಂಬಾಲಿಸಿ ಬಂದರು. ಅವಳನ್ನು ಹಿಡಿದು ಸೊಂಟಕ್ಕೆ ಹಗ್ಗ ಬಿಗಿದು 'ಅಷ್ಟು ಧೈರ್ಯ ಇತ್ತಂದ್ರ ಟೊಂಕದ ಕುಣಿಕೆ ಬಿಚ್ಚಾಕಿ ಭಾವ್ಯಾಗ ಜಿಗಿದು ಸತ್ಬಿಡು ! ಊರಾಗ ಹೆಣ್ಣು ಜಗ್ಗಿ ಅದಾವ! ಒಂದ್ ಬಿಟ್ಟು ಎರಡು ಸೈಕಲ್ ಕೊಟ್ಟು ಲಗ್ನ ಮಾಡ್ಕೊಡ ಮಂದಿ ರಗಡ್ ಅದಾರ!" (ಬಿ.ಟಿ. ಲಲಿತಾ ನಾಯಕ್ 'ಗತಿ':೧೯) ಎಂದು ಅಟ್ಟಹಾಸ ಮಾಡುತ್ತಾ ಬಾವಿಯಲ್ಲಿ ತೂಗುಬಿಡುತ್ತಾರೆ.

ಇಂತಹ ಕೌಟುಂಬಿಕ ಹಿಂಸೆಗಳಿಗೆ ರೋಸಿ ಸೋನಿ, ಲಚ್ಮತ್ತೆ ಮತ್ತು ಚಂದೂರ ಸಹಾಯದಿಂದ ಗುಡಿಸಲು ನಿರ್ಮಿಸಿಕೊಂಡು ತನ್ನೆರಡು ಹೆಣ್ಣುಮಕ್ಕಳೊಂದಿಗೆ ಸ್ವತಂತ್ರ ಜೀವನ ನಡೆಸುತ್ತಿರುತ್ತಾಳೆ. ಲಚ್ಮಿ, ತನ್ನ ಗಂಡ ಮಗುವಿನೊಂದಿಗೆ ಮೈಸೂರು ದಸರಾ ನೋಡಲು ಹೋದಾಗ 'ಕಾಲರಾ' ದಿಂದ ತನ್ನ ಗಂಡ ಮತ್ತು ಮಗುವನ್ನು ಕಳೆದುಕೊಳ್ಳುತ್ತಾಳೆ. ಒಬ್ಬ ಮಠದಯ್ಯನ ಮಠದಲ್ಲಿ ದೈಹಿಕ ಶೋಷಣೆಗೆ ಒಳಪಟ್ಟು ತನ್ನೂರಿಗೆ ಮರಳುತ್ತಾಳೆ. ಯಾರಿಗೂ ಹೆದರದೆ ಸ್ವಾಭಿಮಾನದಿಂದ ಬದುಕುತ್ತಿರುವ ಹೆಣ್ಣು ಮಗಳು. ಒಟ್ಟಾರೆ ಲಲಿತಾ ನಾಯಕರ ಎರಡು ದಲಿತ ಮಹಿಳಾ ಪಾತ್ರಗಳು ಅದಮ್ಯ ಜೀವನ ಪ್ರೀತಿಯನ್ನು ಹೊಂದಿವೆ.

ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲಿನ ದಲಿತ ಸ್ತ್ರೀ ಲಚ್ಚಿ ತನ್ನ ತಂದೆ ಫಕೀರಪ್ಪನೊಂದಿಗೆ ಬದುಕುತ್ತಿರುತ್ತಾಳೆ. ಇಂತಹ 'ಲಚ್ಚಿ'ಗೆ ಕಾಶೀನಾಥನ ಜೊತೆಗೆ ಪ್ರೇಮವಾಗುತ್ತದೆ. ಮಾದರ ಕೇರಿಯ ಕಾಸಿನಾಥ ಕುಲಕರ್ಣೀರ ತೋಟದಲ್ಲಿ ಆಳಾಗಿ ದುಡಿಯುತ್ತಿರುತ್ತಾನೆ. ಇವನು ಒಮ್ಮೆ ಹಸಿದುಕೊಂಡಿದ್ದ ಲಚ್ಚಿಗೆ ಕುಲಕರ್ಣೀರು ತೋಟದ ಕುಂಬಳಕಾಯಿಗಳನ್ನು ಕೊಡುತ್ತಾನೆ. ಸಿಕ್ಕಿಬಿದ್ದ ಲಚ್ಚಿಯನ್ನು ಜೈಲಿಗೆ ಹಾಕಿಸುತ್ತಾರೆ. ಅಲ್ಲಿ ಪೊಲೀಸರ ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗುತ್ತಾಳೆ. ನಂತರ ಬಿಡುಗಡೆಯಾಗಿ ಸ್ತ್ರೀ-ನಿಕೇತನ

ಸೇರುತ್ತಾಳೆ. ಅಲ್ಲಿಯೂ ಹಸಿಮಾಂಸಕ್ಕೆ ಬಯಸುವ ಹದ್ದುಗಳ ಕಾಟ ತಪ್ಪುವುದಿಲ್ಲ. ಸ್ತ್ರೀನಿಕೇತನದ ಅಧಿಕಾರಿಣಿ ಒಬ್ಬ ಪೊಲೀಸಿನವನೊಂದಿಗೆ ಲಚ್ಚಿಯನ್ನು ಕಳಿಸುತ್ತಾಳೆ. ಅವನಿಗೆ ವಿರೋಧಿಸಿದ್ದರಿಂದ ಲಚ್ಚಿಗೆ ಸಾಯುವಂತೆ ಬೂಟುಗಾಲಿನಿಂದ ಒದ್ದು ಅವಳನ್ನು ಅನುಭೋಗಿಸುತ್ತಾನೆ. ಹೀಗೆ ಒಬ್ಬರ ನಂತರ ಒಬ್ಬರು ಬಂದು ಎರಡು ಮೂರು ರಣಹದ್ದುಗಳು ಅವಳ ದೇಹವನ್ನು ಕಬಳಿಸುತ್ತವೆ. ಸ್ತ್ರೀನಿಕೇತನಕ್ಕೆ ಬಂದ ಬಸಣ್ಣಿ ಅವಳನ್ನು ಮದುವೆಯಾಗುತ್ತಾನೆ. ಅವನು ಸಹ ಲಚ್ಚಿಯನ್ನು ಹೆಂಡತಿಯಾಗಿ ನೋಡದೆ ಮಾಂಸದ ಮುದ್ದೆಯಂತೆ ಉಪಯೋಗಿಸಿಕೊಳ್ಳುತ್ತಾನೆ. ಒಂದು ರಾತ್ರಿ ಬಂದವನೇ ಬಸಣ್ಣೆ ತುಂಬು ಗರ್ಭಿಣಿಯಾದ ಲಚ್ಚಿಯಿಂದ ತಾಳಿಯನ್ನು ಕಸಿದುಕೊಂಡು ಮನೆಯಿಂದ ಹೊರ ಹಾಕಲು ಪ್ರಯತ್ನಿಸುತ್ತಾನೆ. ಕಾರಣ ಲಚ್ಚಿ ಜೈಲಿನಲ್ಲಿದ್ದು ಬಂದ ವಿಚಾರ ಅವನಿಗೆ ಗೊತ್ತಾಗಿರುತ್ತದೆ. ಕಡೆಗೆ ಇನ್ನೊಬ್ಬ ಹೆಂಗಸನ್ನು ಮನೆಗೆ ಕರೆತಂದು ಲಚ್ಚಿಯನ್ನು ಮನೆಯಿಂದ ಹೊರಹಾಕಿಸುತ್ತಾನೆ. ಮನೆ ಬಾಗಿಲಲ್ಲೇ ಇಡೀ ರಾತ್ರಿಯನ್ನು ಕಳೆದ ಲಚ್ಚಿ ಹೆರಿಗೆ ಬೇನೆಯಿಂದ ಬಳಲುವಾಗ ಅಕ್ಕ-ಪಕ್ಕದವರು ಆಸ್ಪತ್ರೆಗೆ ಸೇರಿಸಿರುತ್ತಾರೆ. ಗಂಡು ಮಗುವಿಗೆ ಜನ್ಮವಿತ್ತ ಲಚ್ಚಿಗೆ ಸಂತಸವಾಗುವುದಿಲ್ಲ. ಮುಂದೆ ಈ ಗಂಡೇ ಸಮಾಜದಲ್ಲಿನ ಹೆಣ್ಣುಗಳನ್ನು ಹಾಳು ಮಾಡುತ್ತಾನೆ. ಸಮಾಜದಲ್ಲಿರುವ ಗಂಡುಗಳೆಲ್ಲ ಸರಿಯಿಲ್ಲವೆನ್ನುವಂತೆ ಭಾವಿಸುತ್ತಾಳೆ. ಮಗುವಿನೊಂದಿಗೆ ಮನೆಗೆ ಬಂದ ಲಚ್ಚಿ ಬಸಣ್ಣೆಯನ್ನು ಎಷ್ಟೇ ಕಾಡಿ ಬೇಡಿದರೂ ಮನೆಗೆ ಸೇರಿಸುವುದಿಲ್ಲ. ನೆಲೆ ಕಳೆದುಕೊಂಡ ಲಚ್ಚಿ ಮಗುವಿನೊಂದಿಗೆ ಬಾವಿಗೆ ಹಾರಿದಾಗ ದಾರಿಹೋಕ ಲಚ್ಚಿಯನ್ನು ಬದುಕಿಸುತ್ತಾನೆ. ಮಗು ಸಾಯುತ್ತದೆ. ಇಂತಹ ಮನಮಿಡಿಯುವ ದುರಂತ ನಾಯಕಿಯನ್ನಾಗಿ ಲಚ್ಚಿಯನ್ನು ಗೀತಾ ನಾಗಭೂಷಣ ಚಿತ್ರಿಸಿದ್ದಾರೆ. ಸಮಾಜದಲ್ಲಿ ದಲಿತ ಮಹಿಳೆಯ ಮೇಲೆ ನಡೆಯುವ ದೌರ್ಜನ್ಯವನ್ನು ಇವರು ಎಳೆ-ಎಳೆಯಾಗಿ ನಮ್ಮ ಮುಂದೆ ತೆರೆದಿಟ್ಟಿದ್ದಾರೆ.

ದೇವನೂರ ಮಹಾದೇವರ 'ಒಡಲಾಳ'ದ ಸಾಕವ್ವ ದೇವರಿಗೆ ಬಿಟ್ಟಿದ್ದ ತನ್ನ ಹುಂಜವನ್ನು ಕಳಕೊಂಡು ಹುಡುಕುವ ಪ್ರಸಂಗದೊಂದಿಗೆ ಕಥೆ ಆರಂಭವಾಗುತ್ತದೆ. ಈ ಸಾಕವ್ವ ಬದುಕಲ್ಲಿ ಸಾಕಷ್ಟು ಕಷ್ಟಗಳನ್ನು ಅನುಭವಿಸಿದವಳೆಂದು ಕಥೆಯ ಸನ್ನಿವೇಶಗಳು ವೇದ್ಯಪಡಿಸುತ್ತವೆ. ಸಾಕವ್ವ ಹುಂಜವನ್ನು ಕದ್ದವರ್ಯಾರು ಎಂದು ಯೋಚಿಸುವಾಗ ತನ್ನ ಸವುತಿ ಕೆಂಪಮ್ಮ ನೆನಪಾಗಲಾಗಿ ಕೆಂಪಮ್ಮನ ತಿಪ್ಪೆಯನ್ನು ಒಂದು ಕಡೆಯಿಂದ ಸ್ವಲ್ಪವೂ ಬಿಡದೆ ಹುಡುಕುತ್ತಾಳೆ. ಹೀಗೆ ಹತ್ತಾರು ತಿಪ್ಪೆಗಳನ್ನು ಹುಡುಕಿದರೂ ತನ್ನ ಹುಂಜ ಸಿಗುವುದಿಲ್ಲ. ಸುಸ್ತಾಗಿ ಬಂದವಳು ಅಂಗಳದಲ್ಲಿ ಶಾಪ ಹಾಕುತ್ತಾ, ಮಣ್ಣು ತೂರುತ್ತಾ ಕೂರುತ್ತಾಳೆ. ಸಣ್ಣಯ್ಯ ಆಸ್ತಿ ಕೇಳಿದಾಗ ಸಾಕವ್ವ ಹೆಣ್ಣೆಂಗ್ಸಾದರೂ ಗಂಡ್ಸ ಮೀರ್‍ಸಿ ಕಚ್ಚೆ ಕಟ್ಟಿಕೊಂಡು ಸಂಪಾದನೆ ಮಾಡಿ

ಸಂಪಾದಿಸಿದ್ದೇನೆ. ಆಸ್ತಿ ನನ್ನ ಸ್ವಂತದ್ದು ಎಂದು ಹೇಳುತ್ತಾಳೆ! ಒಂದು ರೀತಿಯಲ್ಲಿ ತನ್ನ ಇಡೀ ಕುಟುಂಬಕ್ಕೆ ಸಾಕವ್ವನೇ ಆಶ್ರಯದಾತಳಾಗಿದ್ದಾಳೆ. ಯಮನಿಗೂ ಕೇರ್ ಮಾಡದ ಸಾಕವ್ವ ಯಮನಿಗೆ ತಾನೇ ಬರುವುದಾಗಿ ಹೇಳುವಷ್ಟು ಜೀವನ ರೇಜಿಗೆಯೆನಿಸಿದೆ. ಕಡೆಗೆ ಯಮನಲ್ಲಿ ತನ್ನ ಮೊಮ್ಮಗ ರಾಜ್ಯವನ್ನು ಆಳ್ವಿಕೆ ಮಾಡುವಂಥ ವರ ಕೇಳುವಷ್ಟು ಚತುರೆ ಎಂಬುದು ಅವಳಾಡುವ ಮಾತುಗಳಿಂದ ತಿಳಿಯುತ್ತದೆ.

ಕಡ್ಲೇಕಾಯಿ ತಿನ್ನುವ ಸಂದರ್ಭದಲ್ಲಿ ಕಾಳಕ್ಕ ತನ್ನ ಗಂಡ ಹಸಿವಿನಿಂದ ಮಲಗಿರುವುದಾಗಿ ಹೇಳಿದಾಗ ಸೊಸೆ ನಾಲ್ಕು ಬೊಗಸೆ ಕಡ್ಲೇಕಾಯಿ ಸೆರಗಿಗೆ ಹಾಕೊಂಡು ಕೊಡಲು ಹೋದಾಗ ಅದರಲ್ಲಿ ಒಂದು ಬೊಗಸೆಯಷ್ಟನ್ನು ತೆಗೆಸಿ ರಾಶಿಗೆ ಹಾಕಿಸುತ್ತಾಳೆ. ಇದು ಜಿಪುಣತನವಲ್ಲ ಬದಲಿಗೆ ತನ್ನ ಕುಟುಂಬದ ಮೇಲಿರುವ ಪ್ರೀತಿ, ಕಡೆಗೂ ಸಾಕವ್ವನ ಹುಂಜ ಸಿಗುವುದೇ ಇಲ್ಲ. ಪಿ.ಸಿ. ರೇವಣ್ಣ ಕಡ್ಲೇಕಾಯಿ ಕದ್ದವರನ್ನು ಪತ್ತೆ ಮಾಡಲು ಬಂದಾಗ ಅವನಿಗೆ ಇನ್ನೊಂದು ಹುಂಜವನ್ನು ಕೊಟ್ಟುಬಿಡುತ್ತಾಳೆ. ಇದು ಹಳ್ಳಿಯ ಜನರ ಮುಗ್ಧತೆಗೆ ಸಾಕ್ಷಿಯಾಗಿದೆ. ಕಾಲಿನಿಂದ ನವಿಲಿನ ಚಿತ್ರ ಬಿಡಿಸುವ ಪುಟಗೌರಿ ಸ್ವಾತಂತ್ರ್ಯವನ್ನು ಬಯಸುವ ಹೆಣ್ಣಾಗಿ ಕಂಡುಬರುತ್ತಾಳೆ. ಒಡಲಾಳದ ಸಾಕವ್ವ ತನ್ನ ಇಡೀ ಕುಟುಂಬವನ್ನು ಇಳಿವಯಸ್ಸಿನಲ್ಲೂ ಹತೋಟಿಯಲ್ಲಿರಿಸಿಕೊಂಡಿದ್ದಾಳೆ. ಆದರೆ ಇದರ ಹಿಂದಿರುವುದು ದರ್ಪದ ಯಜಮಾನಿ ಪ್ರಜ್ಞೆಯಲ್ಲ. ಎಲ್ಲವೂ ಕುಟುಂಬದ ಒಳಿತಿಗಾಗೇ ಅದರ ಪಾಲನೆಗಾಗಿಯೇ.. 'ಸಾಕು' ಎಂದರೆ 'ಪಾಲಿಸು', 'ಪೋಷಿಸು' ಎಂಬ ಅರ್ಥಗಳಿವೆ. ಈ ಅರ್ಥಗಳಿಗೆ ತಕ್ಕಂತೆ ಅವಳ ಹೆಸರು ಮತ್ತು ಸಾಕವ್ವನ ವ್ಯಕ್ತಿತ್ವವಿದೆ. ಸಾಕಿ, ಸಾಕಿ ಸಾಕಾದವಳೂ ಆಗಿದ್ದಾಳೆ.

೭. ದಲಿತೇತರ ಕಾದಂಬರಿಗಳಲ್ಲಿ ಚಿತ್ರಣಗೊಂಡ ದಲಿತ ಮಹಿಳೆ :

ಬೆಳ್ಳಿಯು ತಾಯಿಯಿಲ್ಲದ ತನ್ನ ಕುಟುಂಬಕ್ಕೆ ಆಸರೆಯಾಗಿದ್ದಾಳೆ. ಮನೆಯಲ್ಲಿ ಅಡುಗೆ ಮಾಡುತ್ತಾಳೆ. ತಮ್ಮಂದಿರ ಆರೈಕೆಯನ್ನು ಮಾಡುತ್ತಾಳೆ. ಕಾಡಿಗೆ ಹೋಗಿ ಧಣಿಗಳ ಮನೆಗೆ ಸೊಪ್ಪನ್ನು ತಂದು ಹಾಕುತ್ತಾಳೆ. ಇಂತಹ ಬೆಳ್ಳಿಯು ತನ್ನಪ್ಪ ಎಂದೋ ಮಾಡಿದ್ದ ೨೦ ರೂಪಾಯಿಗಳ ಸಾಲವನ್ನು ತೀರಿಸಲು ಕಾಫೀ ತೋಟಕ್ಕೆ ಹೋಗಿ ಮಾಲಿಕರಾದ ಮನ್ವೇಲ, ಮಿಂಗೇಲ ದೊರೆಗಳ ಕಾಮದಾಹಕ್ಕೆ ಬಲಿಯಾಗುತ್ತಾಳೆ. "ಬೆಳ್ಳಿಯ ಸರದಿ ಬಂದಿತು. ಅಲ್ಲಿ ಬೆಳ್ಳಿಯ ಬಣ್ಣ ತುಸು ಹೊಡೆದು ಕಾಣುತ್ತಿತ್ತು. ಇತರ ಹೊಲೆಯರಿಗಿಂತ ತುಸು ಬಿಳಿದಾಗಿ ಅವಳು ಕಾಣಿಸುತ್ತಿದ್ದುದರಿಂದಲೂ, ತೀರ ಹೊಸಬಳಾಗಿ ಕಂಡುದರಿಂದಲೂ ಮಿಂಗೇಲ ದೊರೆಗಳು 'ಇವಳು ಯಾರು?' ಎಂದು ವಿಚಾರಿಸಿದರು. ಮನ್ವೇಲನು, ಚೋಮನ ವಿಚಾರವನ್ನೂ, ಅವನ ಮಕ್ಕಳು ಕಳೆದ ವರ್ಷ ಬಂದು ಹೋದುದನ್ನೂ ತಿಳಿಸಿದ" (ಶಿವರಾಮ

ಕಾರಂತ 'ಚೋಮನ ದುಡಿ':೮೪) ಹೀಗೆ ತೋಟಕ್ಕೆ ಹೋಗುವ ಆರಂಭದಲ್ಲೇ ಮಿಂಗೇಲ ದೊರೆಗಳ ಕಣ್ಣು ಬೆಳ್ಳಿಯ ಮೇಲೆ ಬೀಳುತ್ತದೆ. ಅವಳ ತಂದೆಯ ಸಾಲ, ತಮ್ಮನ ಖಾಯಿಲೆಯಿಂದಾಗಿ ಬೇಗ ತೀರದಾದಾಗ ಬೆಳ್ಳಿಗೆ ಮನೆಯ ಕೆಲಸ ಕೊಡುತ್ತಾರೆ.

ಮನ್ವೇಲನ ಮನೆಯಲ್ಲಿ ಬೀಸುವುದು, ಮುಸುರೆ ತಿಕ್ಕುವುದು, ಗುಡಿಸುವುದು ಮಾಡುತ್ತಾ ತಮ್ಮನ ಆರೈಕೆಯನ್ನು ನೋಡಿಕೊಳ್ಳುತ್ತಿರುತ್ತಾಳೆ. "ಅವಳು ಕೆಲಸ ತೊಡಗಿದ ಒಂದು ವಾರದಲ್ಲೇ, ಆಕೆ ತೊಟ್ಟ ಹರಕು ಚಿಂದಿಯನ್ನು ಕಂಡು, ಮನ್ವೇಲ ಒಂದು ಸೀರೆಯನ್ನು ಕೊಡಿಸಿದ. ನೀಲನಿಗಾಗಿ ಒಂದು ಕಂಬಳಿಯನ್ನೂ ಕೊಡಿಸಿದ. ಏಕೊ, ಮನ್ವೇಲನು ಬೆಳ್ಳಿಯ ಜೀವನದಲ್ಲಿ ಆಸಕ್ತಿಯನ್ನು ತೋರಿಸತೊಡಗಿದಂತೆ ಕಾಣಿಸಿತು. ದಿನ ಹೋದಂತೆ, ಮನ್ವೇಲನು ಅವಳೊಡನೆ ಮಾತನಾಡುವುದು, ನಗುವುದು, ಚೇಷ್ಟೆ ಮಾಡುವುದು ಹೆಚ್ಚುತ್ತ ಹೋಯಿತು. ಅವಳಿಗೂ ಅವುಗಳ ಅರ್ಥ ಹೊಳೆಯುತ್ತ ಬಂತು. ಜೀವನದಲ್ಲಿ ಮೊದಲನೆಯ ಬಾರಿಗೆ ಯೌವ್ವನದ ದುಡುಕನ್ನು ಅವಳಾದರೂ ಅನುಭವಿಸತೊಡಗಿದಳು. ಅದರಿಂದಾಗಿ ಮನ್ವೇಲನ ಚೇಷ್ಟೆಗಳನ್ನು ತಿರಸ್ಕರಿಸಲು ಹೋಗಲಿಲ್ಲ. ಮುಂದೆ ಸಮ್ಮತಿಯ ಮುದ್ರೆಯನ್ನು ಕೊಟ್ಟಂತೆ ಕಾಣುತ್ತದೆ. ಅವನ ಕರುಣೆಯಿಂದಾಗಿ ತಂದೆಯ ಸಾಲ ತೀರುವುದಾದರೆ ಏನಾದರೇನೆಂಬ ಉದಾಸೀನ ಭಾವ ತಾಳಿದಳು. ಸರಿ, ಕಾಯದ ದೌರ್ಬಲ್ಯ ಅವಳನ್ನು ಕಾಮದ ದಾಸಿಯನ್ನಾಗಿ ಮಾಡಿತು. ಮನ್ವೇಲನಿಂದ ದೊರಕುತ್ತಿದ್ದ ಆಣೆ, ಎರಡಾಣೆಗಳ ಬಹುಮಾನವನ್ನು ಶೇಖರಿಸುತ್ತ ಬಂದು, ತಂದೆಯ ಋಣವನ್ನು ತೀರಿಸುತ್ತೇನೆಂಬ ವಿಶ್ವಾಸವನ್ನು ಅವಳು ಗಳಿಸಿದಳು" (ಶಿವರಾಮ ಕಾರಂತ 'ಚೋಮನ ದುಡಿ':೮೫)

ಶಿವರಾಮ ಕಾರಂತರು ದಲಿತ ಹೆಣ್ಣುಮಕ್ಕಳು ಹಣದ ಅಸಹಾಯಕತೆಗಾಗಿ ಎಲ್ಲದಕ್ಕೂ ಸಿದ್ಧರಾಗುತ್ತಾರೆ ಎಂಬಂತೆ ಚಿತ್ರಿಸಿದ್ದಾರೆ. ಮನ್ವೇಲನ ಆಸೆಗೆ ಮಾತ್ರವಲ್ಲದೆ ಮಿಂಗೇಲ ದೊರೆಗಳಿಗೂ ಈ ವಿಚಾರದಲ್ಲಿ ಸಮ್ಮತಿ ಸೂಚಿಸುತ್ತಾಳೆ ಎನ್ನುವಂತೆಯೂ ಚಿತ್ರಿಸಿದ್ದಾರೆ. ತೋಟದ ಕಿರು ಹಾದಿಯಲ್ಲಿ ನಡೆದು ಹೋಗುವಾಗ ಬೆಳ್ಳಿಯನ್ನು ಕಂಡ ಮಿಂಗೇಲ ದೊರೆಗಳು "ನೀನು ಚೋಮನ ಮಗಳಲ್ಲವೇ? ಎಂದು ಕೇಳಿದರು. ಬೆಳ್ಳಿಯ ತಲೆ ಬಗ್ಗಿಸಿದಲ್ಲಿಂದಲೇ 'ಅಹುದೆಂದು ಉತ್ತರವಿತ್ತಳು. ದೊರೆಗಳಾಗ ನಿನ್ನ ಅಪ್ಪನ ಸಾಲದಲ್ಲಿ ಎಷ್ಟು ತೀರಿತಂತೆ? ನಿನ್ನ ಲೆಕ್ಕವನ್ನು ನೋಡಬೇಕಾಯಿತು. ಸಂಜೆ ಬಂಗಲೆಗೆ ಬಾ' ಎಂದರು. ಬೆಳ್ಳಿ ಕೆಲಸಕ್ಕಾಗಿ ಮುಂದೆ ಸರಿದಳು. ಅವಳ ಮನಸ್ಸು ಭೀತಿಯಿಂದ ನಡುಗಿತು. ದೊರೆಗಳ ಮಾತಿನ ಅರ್ಥ ಅವಳಿಗೆ ಚೆನ್ನಾಗಿ ತಿಳಿಯಿತು. ಈ ತೋಟದಲ್ಲಿ ತಾನು ಏನಾದೇನು-ಎಂಬುದು ಅವಳಿಗೆ ತಿಳಿಯದಾಯಿತು. ಸಂಜೆ, ಎಲ್ಲ ಕೆಲಸ ಮುಗಿಸಿ ಕೊಠಡಿಗೆ ಹೋದಳು. ಕದವನ್ನಿಕ್ಕಿ ಸುಮ್ಮನೆ

ಮಂಕಳಂತೆ ಕುಳಿತುಕೊಂಡಳು. ಜತೆಯಲ್ಲಿ ನೀಲ ಮಲಗಿದ್ದ. ನೀಲ ಆ ದಿನ ತಿಳಿಸಿದ ಮಾತಿನ ನೆನಪಾಯಿತು. ಇನ್ನೂ ನಾಲ್ಕೂ ದಿವಸ ಕಳೆದರೆ 'ದೊರೆಗಳ ಭಾವ'ನೆಂದು ಜನ ಬಂದು ಹೇಳುವರೆಂದು ಬೆದರಿಕೊಂಡಳು. ಅಷ್ಟರಲ್ಲಿ ಕದವನ್ನು ಯಾರೋ ತಟ್ಟಿದರು. ಮಾತನಾಡಲಿಲ್ಲ; ಬಾಗಿಲನ್ನು ತೆಗೆಯಲೂ ಇಲ್ಲ. ಮನ್ವೇಲ ಹೊರಗಿಂದ 'ಬೆಳ್ಳಿ, ಬಾಗಿಲು ತೆಗೆ' ಎಂದ. ಅವನ ಸ್ವರವನ್ನು ಕೇಳಿ ತುಸು ಧೈರ್ಯಗೊಂಡು ಕದವನ್ನು ತೆರೆದಳು. ಹೊರಕ್ಕೆ ಬರುವಂತೆ ಮನ್ವೇಲ ಕರೆದ. ಹೊರಕ್ಕೂ ಬಂದಳು. ಮನ್ವೇಲನು ಮುಂದುವರಿದ. ಬೆಳ್ಳಿಯ ಕಾಲುಗಳು ತನ್ನಂತೆಯೇ ಅವನನ್ನು ಅನುಸರಿಸಿದವು. ಆದರೆ ಅನುಸರಿಸಿದುದು ಮನ್ವೇಲನ ಮನೆಗಲ್ಲ. ದೊರೆಗಳ ಬಂಗಲೆಗೆ!" (ಶಿವರಾಮ ಕಾರಂತ:ಚೋಮನ ದುಡಿ, ೮೭)

ಬಂಡವಾಳಶಾಹಿ, ಜಮೀನ್ದಾರೀ ವ್ಯವಸ್ಥೆಯ ಕರಾಳತೆಗೆ ಬೆಳ್ಳಿ ಬಲಿಯಾಗುತ್ತಾಳೆ. ಈ ರೀತಿ ದಲಿತ ಹೆಣ್ಣುಗಳು ದೈಹಿಕವಾಗಿ ದುರ್ಬಳಕೆಗೆ ಒಳಗಾಗುತ್ತಿರುವುದಕ್ಕೆ ಅವರ ಬಡತನ, ಅಸಹಾಯಕತೆ, ದಣಿಗಳನ್ನು ಎದುರುಹಾಕಿಕೊಳ್ಳಲಾಗದ ಸ್ಥಿತಿ, ಭಯ, ಕುಟುಂಬದ ರಕ್ಷಣೆಯಿಲ್ಲದಿರುವುದು ಕಾರಣ. ಸಾಮಾನ್ಯವಾಗಿ ದಲಿತ ಕುಟುಂಬಗಳಲ್ಲಿ ಗಂಡಸರು ಕುಡುಕರಾಗಿರುವುದರಿಂದ ಹೆಂಗಸರೇ ಹೊರಗೆ ದುಡಿದು ಸಂಸಾರದ ಚಕ್ರವನ್ನು ನಡೆಸಬೇಕಾಗಿರುತ್ತದೆ. ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿದ ಹೆಣ್ಣುಮಕ್ಕಳು ವ್ಯವಸ್ಥೆಗೆ ಪ್ರತಿರೋಧ ಒಡ್ಡಿ ಬದುಕಲಾಗುವುದಿಲ್ಲ. ಹೀಗೆ ದಲಿತೇತರರಾದ ಕಾರಂತರ ಚೋಮನದುಡಿ ಕಾದಂಬರಿಯಲ್ಲಿ ಕೆಳಜಾತಿಯ ಹೆಣ್ಣು ಕಾಮಕ್ಕೆ ಬಲಿಯಾಗುವಂತೆ ಚಿತ್ರಿಸಿದ್ದಾರೆ. ಹಾಗೆಂದು ಕಾರಂತರು ಬೆಳ್ಳಿಯನ್ನು ಕೇವಲ ಋಣಾತ್ಮಕ ನೆಲೆಯಲ್ಲೇ ನಿಲ್ಲಿಸುವುದಿಲ್ಲ. ಅವಳು ಕುಟುಂಬವನ್ನು ಪ್ರೀತಿಸುವ, ಪೋಷಿಸುವ, ಪಾಲಿಸುವ ನಿಟ್ಟಿನಲ್ಲಿ ತಾಯಿಲ್ಲದ ಕುಟುಂಬಕ್ಕೆ ತಾಯಿಯಾಗುವ ಧನಾತ್ಮಕ ನೆಲೆಯಲ್ಲಿ ಚಿತ್ರಿಸಿದ್ದಾರೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕುಳವಾಡಿ ಸಣ್ಣನ ಮಗಳು ಪುಟ್ಟಿ ಮತ್ತು ತಿಮ್ಮಪ್ಪ ಹೆಗ್ಗಡೆಯ ಪ್ರಸಂಗದಲ್ಲೂ ಕುವೆಂಪುರವರು ದಲಿತ ಹೆಣ್ಣು ಮಗಳನ್ನು ಕೀಳಾಗಿ ಚಿತ್ರಿಸಿದ್ದಾರೆ. "ಚೆನ್ನಾಗಿ ಮೀಯಿಸಿ ಶುಚಿಯಾಗಿಟ್ಟ ಒಳ್ಳೆಯ ಆಹಾರ ತಿನ್ನಿಸಿ ಸಾಕಿದ ಮನೆಯ ಚೀನಿನಾಯಿ, 'ಸಣುಬಿ'ನ ಸಮಯ ಬಂದಾಗ, ದದ್ದು ಹಿಡಿದು ವಿಕಾರವಾಗಿದ್ದರೂ ಲೆಕ್ಕಿಸದೆ ಬೀದಿಯ ನಾಯಿಯ ಸಂಗ ಬಯಸಿ ಸರಪಣಿ ಕಾಂಪೌಂಡುಗಳಿಂದ ನುಣುಚಿಕೊಂಡು ಪೋಲಿ ಬೀಳುವಂತೆ, ತಿಮ್ಮಪ್ಪ ಕೀಳು ಜಾತಿಯವರ ಹಟ್ಟಿ ಬಿಡಾರ ಗುಡಿಸಲು ಚೋಪಡಿಗಳಲ್ಲಿಯೂ ಸುಖವನ್ನರಸಿ ಪಡೆದಿದ್ದನು" (ಮಲೆಗಳಲ್ಲಿ ಮದುಮಗಳು:೪೭೫) ಕುವೆಂಪುರವರು ದಲಿತ ಹೆಣ್ಣುಮಗಳನ್ನು ಬೀದಿ ನಾಯಿಗೆ

ಹೋಲಿಸಿರುವುದು ಬಿ. ಕೃಷ್ಣಪ್ಪನವರಿಗೆ ಮಾತ್ರವಲ್ಲ ಎಂಥವರಿಗೂ ಸಿಟ್ಟು ತರಿಸುತ್ತದೆ. ಪ್ರಾಣಿಗಳ ಸಮೀಕರಣ, ಅದರಲ್ಲೂ 'ದದ್ದು ಹಿಡಿದು ವಿಕಾರಗೊಂಡಿದ್ದರೂ' ಲೆಕ್ಕಿಸದೆ ಎಂದು ವರ್ಣಿಸುವ ಅಗತ್ಯವಿರಲಿಲ್ಲ. ವಾಸ್ತವವಾಗಿ ಆ ಕಾದಂಬರಿಯ ತಿಮ್ಮಪ್ಪ ಹೆಗ್ಗಡೆಯೇ ಕೊಳಕನಾಗಿರುತ್ತಾನೆ. ಕೊಳಕನಾದ ತಿಮ್ಮಪ್ಪ ಹೆಗ್ಗಡೆಯನ್ನು 'ಚೆನ್ನಾಗಿ ಮೀಯಿಸಿ ಶುಚಿಯಾಗಿಟ್ಟು ಒಳ್ಳೆಯ ಆಹಾರ ತಿನ್ನಿಸಿ ಸಾಕಿದ್ದ ಮನೆಯ ಚೀನಿನಾಯಿ'ಗೆ ಹೋಲಿಸಿರುವುದು ತಮ್ಮ ಜಾತಿಯ ಮೇಲಿನ ಅಭಿಮಾನವನ್ನು ಕೀಳುಜಾತಿಯ ಮೇಲಿರುವ ತಾತ್ಸಾರವನ್ನು ಸೂಚಿಸುತ್ತದೆ. ದಲಿತರ ವಾಸ್ತವ ಚಿತ್ರಣವನ್ನು ಕೀಳುಮಟ್ಟದಲ್ಲಿ ಚಿತ್ರಣ ಮಾಡಲಾಗಿದೆ.

ಕೆಳಜಾತಿಯವರನ್ನು ಪ್ರಾಣಿಗಳಿಗಿಂತ ಕಡೆಯಾಗಿ ನೋಡುವ ಪ್ರಸಂಗಗಳು ಕಾದಂಬರಿಯಲ್ಲಿ ಮೇಲಿಂದ-ಮೇಲೆ ಪ್ರಸ್ತಾಪವಾಗುತ್ತಲೇ ಇರುತ್ತವೆ. "ಐತ ಅಪೇಕ್ಷಿಸಿದ್ದನ್ನು ಮುಕುಂದಯ್ಯ ಅಪೇಕ್ಷಿಸಿದ್ದರೆ ಅವಳು 'ಇಲ್ಲ' ಎನ್ನುವ ಸ್ಥಿತಿಯಲ್ಲಿರಲಿಲ್ಲ; ಒಲ್ಲೆ ಎನ್ನುತ್ತಿರಲಿಲ್ಲ. ತನಗಿಂತಲೂ ಮಹತ್ತಾದುದಕ್ಕೆ ತನ್ನನ್ನು ಅರ್ಪಿಸಿಕೊಳ್ಳಲು ಅವಳು ಹಿಂಜರಿಯುತ್ತಿರಲಿಲ್ಲ. ತಾನು ಬಹುಪೂರ್ವದಿಂದಲೂ ಮೆಚ್ಚಿಕೊಂಡೇ ಬಂದಿರುವ ತನ್ನ ಒಡೆಯನಿಗೆ ತೋರುವ ಗೌರವವೆಂದೂ, ವಿಧೇಯತೆಯ ಅಂಗವೆಂದೂ, ಅವಳು ತನ್ನನ್ನು ಸಮರ್ಪಣ ಭಾವದಿಂದಲೇ, ಸಂತೋಷವಾಗಿಯೆ, ಪಾಪಭಯ ಲೇಶವಿಲ್ಲದ ಆತ್ಮ ನೈವೇದ್ಯ ರೂಪದಿಂದಲೇ, ಒಪ್ಪಿಸಿಕೊಂಡುಬಿಡುತ್ತಿದ್ದಳು. ಹಾಗೆ ಒಪ್ಪಿಸಿಕೊಂಡೂ, ಐತನಿಗೆ, ತನ್ನ ಕೈಹಿಡಿದ ಗಂಡನಿಗೆ, ವಂಚನೆ ಮಾಡುತ್ತಿದ್ದೇನೆ ಎಂಬ ಭಾವನೆ ಅವಳಲ್ಲಿ ಇನಿತೂ ಇರಲಿಲ್ಲ. ಆ ಭಾವನೆ ಇದ್ದೂ ಒಂದು ವೇಳೆ ಅವಳು ಒಪ್ಪಿಕೊಂಡಿದ್ದರೆ, ಅವಳು ಮೋಸಗಾರ್ತಿಯಾಗುತ್ತಿದ್ದಳು; ಜಾರೆಯಾಗುತ್ತಿದ್ದಳು; ಕುಟಿಲೆಯಾಗುತ್ತಿದ್ದಳು. ಮುಕುಂದಯ್ಯನನ್ನು ತಾನು ಸುಮ್ಮನೆ ಮುಟ್ಟುವಷ್ಟಾದರೂ ಆಗಿದ್ದರೆ ಅವಳಿಗೆ ಸ್ವರ್ಗವೆ ಪ್ರಾಪ್ತವಾದಷ್ಟು ಆನಂದವಾಗುತ್ತಿತ್ತು. ಅದಕ್ಕೆ ಅವಳಿಗೆ ತಡೆಯಾಗಿದ್ದುದೆಂದರೆ ಜಾತಿ, ಸಮಾಜ, ವರ್ಗತಾರತಮ್ಯ". (ಕುವೆಂಪು ಮಲೆಗಳಲ್ಲಿ ಮದುಮಗಳು:೧೪೩, ೧೪೪) ಈ ಸಾಲುಗಳು ಕೆಳಜಾತಿಯ ಹೆಣ್ಣುಮಕ್ಕಳಿಗೆ ಮದುವೆ-ಯಾಗಿದ್ದರೂ ಶೀಲದ ಕೋಟಲೆ ಅಥವಾ ಬಂಧನ ಅವರಿಗಿರುವುದಿಲ್ಲ. ಗಂಡನಿಗೆ 'ಮೋಸ' ಮಾಡುತ್ತಿದ್ದೇನೆಂಬ ಪಾಪಪ್ರಜ್ಞೆ ಕಾಡುವುದಿಲ್ಲ ಎನ್ನುತ್ತಾರೆ. ಇದಕ್ಕೆ ಅವರು ಕೊಟ್ಟಿರುವ ಹೆಸರು 'ಅರ್ಪಣೆ', ಆತ್ಮನೈವೇದ್ಯ', 'ಸ್ವರ್ಗ ಪ್ರಾಪ್ತಿ', ಮೇಲ್ಜಾತಿಯವರಿಗೆ ಒಪ್ಪಿಸಿಕೊಳ್ಳುವುದೆಂದರೆ, ಅದು ದೇವರಿಗೆ ಅರ್ಪಿಸಿಕೊಂಡಂತೆ, ಅದೇ ದಲಿತ ಹೆಂಗಸರ ಸೌಭಾಗ್ಯ ಎಂಬಂತೆ ಚಿತ್ರಿಸಿದ್ದಾರೆ. ಹಾಗಾದರೆ ಪಾತಿವ್ರತ್ಯ ಪರಿಪಾಲನೆ, ಶೀಲ ಪರಿಪಾಲನೆ ಮಾಡಿಕೊಳ್ಳುತ್ತಿದ್ದ ದಲಿತ ಹೆಣ್ಣುಮಕ್ಕಳೇ ಅಂದಿನ ಸಮಾಜದಲ್ಲಿ ಇರಲಿಲ್ಲವೆ? ಎಂಬ ಪ್ರಶ್ನೆ ಹುಟ್ಟುತ್ತದೆ. ದಲಿತ ಹೆಣ್ಣುಮಕ್ಕಳ ಶೀಲಕ್ಕೆ

ಅಂದಿನ ಸಮಾಜದಲ್ಲಿ ಕವಡೆ ಕಾಸಿನ ಕಿಮ್ಮತ್ತಿರಲಿಲ್ಲವೆ? ಎಲ್ಲಾ ದಲಿತ ಹೆಣ್ಣು ಮಕ್ಕಳೂ ಸಮಾಜದಲ್ಲಿ ನಡೆತೆಗೆಟ್ಟವರಾಗೇ ನಡೆದುಕೊಳ್ಳುತ್ತಿದ್ದರೆ? ಏಕೆಂದರೆ ಸಮಾಜದಲ್ಲಿನ ದಲಿತ ಮಹಿಳೆಯೇ ಕುವೆಂಪುರವರ ಕಾದಂಬರಿಯ ದಲಿತ ಮಹಿಳೆಯಾಗಿದ್ದಾಳೆ. ಕುವೆಂಪು ಅವರ ತಾತ, ಅಪ್ಪಂದಿರ ಕಾಲದಲ್ಲಿ ವಾಸ್ತವವಾಗಿ ನಡೆದದ್ದನ್ನು ಹೇಳಿಸಿಕೊಂಡು 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಬರೆದಿದ್ದಾರೆ ಎಂಬುದನ್ನು ಓದಿ ತಿಳಿದುಕೊಳ್ಳಲಾಗಿದೆ. ಅಥವಾ ದಲಿತ ಮಹಿಳೆಯನ್ನು ಕುರಿತ ಕುವೆಂಪುರವರ ಗ್ರಹಿಕೆಯೇ ಸೀಮಿತವಾಗಿತ್ತೆ ಎನ್ನುವ ಅನುಮಾನ ಈ ಕಾದಂಬರಿಯ ಓದಿನ ಸಂದರ್ಭದಲ್ಲಿ ಕಾಡದೆ ಇರದು.

ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯಲ್ಲೂ ದಲಿತ ಮಹಿಳೆಯಾದ ಪುಟ್ಟಿಯನ್ನು 'ಕಾಮದ ಗೊಂಬೆ'ಯಾಗಿಯೇ ಚಿತ್ರಿಸಲಾಗಿದೆ. ಶ್ರೀಪತಿ ಬೆಳ್ಳಿಯನ್ನು ನೆನಸಿಕೊಂಡು ದೂರ್ವಾಸಪುರಕ್ಕೆ ಹೊರಡುವಾಗ ಅವನಲ್ಲುಂಟಾಗುವ ಭಾವನೆಗಳು ಹೀಗಿವೆ. "ದೂರ್ವಾಸಪುರ ಹತ್ತಿರವಾದಂತೆ ಅವನ ಮೈ ತನಗೆ ಕಾದಿರುವ ಸುಖದ ಕಲ್ಪನೆಯಿಂದ ಬೆಚ್ಚಗಾಯಿತು. ಅವನ ಹೆಂಡತಿ ತೊಡೆಯನ್ನು ಗಂಟು ಹಾಕಿ ಕೌಂಚಿ ಮಲಗಿದರೇನಂತೆ? ಬೆಳ್ಳಿಯಿದ್ದಾಳಲ್ಲ. ಬೆಳ್ಳಿ ಹೊಲತಿಯಾದರೇನಂತೆ? ನಾರಣಪ್ಪ ಹೇಳುವುದಿಲ್ಲವೆ ಕಾಳಿಯಾದರೇನು? ಬೋಳಿಯಾದರೇನು? ಬೆಳ್ಳಿ ಕಾಳಿಯೂ ಅಲ್ಲ, ಬೋಳಿಯೂ ಅಲ್ಲ, ಬಚ್ಚಗಲ್ಲದ, ಬತ್ತಿದ ಮೊಲೆಯ, ಬೇಳೆಹುಳಿ ವಾಸನೆ ಬರುವ ಬಾಯಿಯ ಯಾವ ಬ್ರಾಹ್ಮಣ ಹುಡುಗಿ ಅವಳಿಗೆ ಸಮ? ಕೈಗೆ ತೊಡೆಗೆ ಭರ್ತಿಯಾಗಿ ಸಿಗುವ, ಮರಳಿನಲ್ಲಿ ಮಣ್ಣಿನಲ್ಲಿ ಎಣೆಯಾಡುವ ಹಾವಿನಂತೆ ತನ್ನ ಜೊತೆ ಹೊರಳುವ ಬೆಳ್ಳಿಗೇನು ಕೊರತೆ? ಇಷ್ಟು ಹೊತ್ತಿಗೆ ಅವಳು ಗುಡಿಸಲಿನ ಎದುರು ಮಡಕೆಯಲ್ಲಿ ಕಾಯಿಸಿದ ಬಿಸಿನೀರು ಸ್ನಾನ ಮಾಡಿ, ಅವಳಪ್ಪ ತಂದ ಹುಳಿ ಹೆಂಡವನ್ನಷ್ಟು ಕುಡಿದು ಬೆಚ್ಚಗೆ ಹದವಾಗಿರುತ್ತಾಳೆ: ಶೃತಿ ಮಾಡಿದ ಮೃದಂಗದಂತೆ. ಅಚ್ಚಕಪ್ಪೂ ಅಲ್ಲ, ಬಿಳುಚಿದ ಬಿಳಿಯೂ ಅಲ್ಲ, ಬೀಜಕ್ಕೆ ಫಲವತ್ತಾದ ಎಳೆಬಿಸಿಲಿನಲ್ಲಿ ಕಾದ ಮಣ್ಣಿನ ಬಣ್ಣ ಅವಳ ಮೈ;". (ಸಂಸ್ಕಾರ:೩೨)

ಹೀಗೆ ದಲಿತೇತರ ಕಾದಂಬರಿಕಾರರೆಲ್ಲ ದಲಿತ ಹೆಣ್ಣುಗಳ 'ದೇಹದ' ಗುಣಗಾನ ಮಾಡಿರುವುದು ಕಂಡು ಬರುತ್ತದೆ. ದಲಿತ ಹೆಣ್ಣುಗಳಿರುವುದೇ ಮೇಲ್ಜಾತಿಯವರ ಬಳಕೆಗಾಗಿ ಎಂಬಂತೆ ಅನಂತಮೂರ್ತಿಯವರು ಚಿತ್ರಿಸಿದ್ದಾರೆ. ಮನಸಿನಲ್ಲೇ ಬೆಳ್ಳಿಯ ಬಗ್ಗೆ ಕನಸು ಕಾಣುತ್ತಾ ಹೋಗುವ ಶ್ರೀಪತಿಗೆ ಬೆಳ್ಳಿಯ ದೇಹ ಮುಖ್ಯವೇ ಹೊರತು ಅವಳ ಮನಸ್ಸಲ್ಲ ಅವಳ ನೋವಿಗೂ ಬೆಲೆಕೊಡದೆ, ಮಾತನಾಡಲು ಅವಕಾಶ ಕೊಡದೆ ಅವಳನ್ನು ದುರುಪಯೋಗಪಡಿಸಿಕೊಳ್ಳುತ್ತಾನೆ. "ಪಿಳ್ಳ ಮತ್ತು ಆತನ ಹೊಲತಿ ದೆಯ್ಯ ಸತ್ತವು, ಇವತ್ತು

ಬೇಡ ಅಯ್ಯ ಎಂದರೂ ಕೇಳದೆ ಸಿಟ್ಟಿನಿಂದ ಬೀಳುವ ಮಳೆಗೆ ಬಾಗುವ ಪೈರಿನಂತಿದ್ದವಳು ಇಷ್ಟೇಕೆ ಮಾತನಾಡುತ್ತಾಳೆ ಎಂದು ಅಸಹನೆಯಿಂದ ಬೆಳ್ಳಿ ಮಲಗಲಿಕ್ಕೆ ಸರಿಯೇ ಹೊರ್ತು ಮಾತನಾಡಲಿಕ್ಕಲ್ಲ. ಬಾಯಿ ಬಿಟ್ಟರೆ ಅವಳದ್ದು ಗಣ, ದೆಯ್ಯ." (ಅನಂತಮೂರ್ತಿ ಯು.ಆರ್. 'ಸಂಸ್ಕಾರ':೩೪, ೩೫) ಎಂದು ಸಿಟ್ಟಾಗುತ್ತಾನೆ. ಅನಾದಿ ಕಾಲದಿಂದಲೂ ಕೆಳಜಾತಿ ಮಹಿಳೆಯರು ಮೇಲ್ಜಾತಿ ಪುರುಷರ ಬಳಕೆಯ ವಸ್ತುಗಳಾಗಿದ್ದಾರೆ ಎಂಬುದು ದಲಿತೇತರರು ಬರೆದ ಕಾದಂಬರಿಗಳಲ್ಲಿ ಕಂಡು ಬರುತ್ತದೆ.

ಅನಂತಮೂರ್ತಿಯವರ 'ಭಾರತೀಪುರ' ಕಾದಂಬರಿಯ ಜಗನ್ನಾಥ ವಿದೇಶದಲ್ಲಿದ್ದು ಬಂದವನು. ಹೊಲೆಯರನ್ನು, ಗ್ರಾಮಭಾರತವನ್ನು ಉದ್ಧಾರ ಮಾಡಲು ಹೊರಟ ಆದರ್ಶವಾದಿ. ಇಂತಹ ಜಗನ್ನಾಥನ ರೂಮನ್ನು ಸ್ವಚ್ಛಗೊಳಿಸಲು ಬಂದ ಶೀನಪ್ಪನ ಮಗಳು ಕಾವೇರಿಯನ್ನು ಕುರಿತು ಅವನ ಮನಸ್ಸಿನಲ್ಲಿ ಕೋಲಾಹಲವೇ ನಡೆಯುತ್ತದೆ. "ಮೈಕೈ ತುಂಬಿದ ಹುಡುಗಿ ತೊಡೆಗಳು ಕಾಣುವಂತೆ ತುಂಡುಟ್ಟು ತಲೆಯ ಗಂಟಿನಲ್ಲಿ ಗುಲಾಬಿ ಮುಡಿದಿದ್ದಳು. ವಯ್ಯಾರದಿಂದ ಬಾಗಿ ಮಂಚದ ಬುಡದಲ್ಲಿ ಗುಡಿಸಿದ್ದಳು. ತೋಟದ ಕೆಲಸ ನೋಡುತ್ತಿದ್ದಾಗ ಅದೇ ಬೆಡಗಿನಲ್ಲಿ ಜೊತೆಗಾರ್ತಿಯರ ಹತ್ತಿರ ಮಾತಾಡುತ್ತ ಅನಾವಶ್ಯಕವಾಗಿ ಸೆರಗು ಸರಿಪಡಿಸಿಕೊಂಡಿದ್ದಳು. ಜಗನ್ನಾಥನಿಗೆ ಅವಳ ಬಗ್ಗೆ ಆಸೆಯಾಗಿತ್ತು. ಆದರೆ ತನ್ನ ವರ್ಗದವಳೊಬ್ಬಳ ಬಗ್ಗೆ ಆಸೆಯಾಗಿದ್ದರೆ ಹೇಗೆ ವರ್ತಿಸಬೇಕೆಂದು ಗೊತ್ತಿದ್ದಂತೆ ಈಗ ತಿಳಿದಿರಲಿಲ್ಲ. ಅವಳ ಜೊತೆ ಕ್ಷಣಿಕವಾದ ಮೈಸಂಬಂಧಕ್ಕಿಂತ ಆಚೆನದೇನೂ ಸಾಧ್ಯವಿರಲಿಲ್ಲ. ಆದರೆ ಕಾಮಕ್ಕೆ ಉಪಯೋಗಿಸುವ ಬರಿಯೊಂದು ವಸ್ತುವಿಗಿಂತ ಹೆಚ್ಚಿನ ವಾಸ್ತವತೆ ನಮ್ಮ ನಡುವೆ ಹುಟ್ಟಲಾರದು; ತಾನು ಕಾವೇರಿಯನ್ನು, ಕೂಡಿದರೆ ಅದು ಮಾನವೀಯ ಸಂಬಂಧವಾಗಲಾರದು. ಇಷ್ಟೊಂದು ಆಸೆ ಹುಟ್ಟಿಸಬಲ್ಲ ಮೈ ಹೇಗೆ ತನಗೆ ನಿಜವಾಗಿಯೂ ಅತೀತವಾದದ್ದೆಂಬುದು ವರ್ಗಭೇದದ ದುರಂತವನ್ನು ಅವನಿಗೆ ಮನದಟ್ಟು ಮಾಡಿಸಿತು. ಆದರೂ ಅವಳು ರೂಮಿಗೆ ಕಸಗುಡಿಸಲು ಬಂದಾಗಲೆಲ್ಲ ಮೈ ಬೆಚ್ಚಗಾಗಿ ಹೆದರಿಕೆಯಾಗುತ್ತಿತ್ತು". (ಅನಂತಮೂರ್ತಿ ಯು.ಆರ್.: 'ಭಾರತಿಪುರ':೪೯)

ಹೊಲೆಯರ ಉದ್ಧಾರದ ಕನಸು ಕಾಣುವ ಜಗನ್ನಾಥನಿಗೆ 'ತನ್ನ ವರ್ಗದವಳೊಬ್ಬಳ ಜೊತೆ ಆಸೆಯಾಗಿದ್ದರೆ ಹೇಗೆ ವರ್ತಿಸಬೇಕೆಂದು ಗೊತ್ತಿದ್ದಂತೆ ಈಗ ತಿಳಿದಿರಲಿಲ್ಲ' ಎಂದು ಯೋಚಿಸುವ ಜಗನ್ನಾಥ ತನ್ನ ಜಾತಿಯನ್ನು ಮೀರುವ ಪ್ರಯತ್ನದಲ್ಲೇ ವಿಫಲನಾಗಿದ್ದಾನೆ. ಜಾತಿಯನ್ನು ಮೀರದೆ ಹೊಲೆಯರ ಉದ್ಧಾರ ಸಾಧ್ಯವಿಲ್ಲ. ಉದ್ಧಾರ ಮಾಡಲು ಹೊರಟವರು ಮೊದಲು ತಾವು ಇತರರಿಗೆ ಮಾದರಿಯಾಗಿರಬೇಕಾಗುತ್ತದೆ. ಅಂತರ್ ಜಾತಿಯ ವಿವಾಹವನ್ನು

ಕುರಿತು ಜಗನ್ನಾಥನ ಮನಸ್ಸು ಯೋಚಿಸಲೂ ಭಯಪಡುತ್ತಿತ್ತೇನೊ? ಅನಂತಮೂರ್ತಿಯವರು ಮಾತ್ರವಲ್ಲ ಯಾವ ದಲಿತೇತರ ಕಾದಂಬರಿಕಾರರೂ ತಮ್ಮ ಕಾದಂಬರಿಗಳ ಪಾತ್ರಗಳಿಗೂ ಕೂಡಾ ಅಂತರ್‌ಜಾತಿಯ ವಿವಾಹ ಮಾಡಿಸುವ, ಜಾತಿ ವಿನಾಶದ ಕಲ್ಪನೆಯೂ ಭಯ ಹುಟ್ಟಿಸಿರಬಹುದು. ಇವರೆಲ್ಲಾ ಮೇಲ್ಜಾತಿಯವರು ದಲಿತ ಮಹಿಳೆಯನ್ನು ಕೇವಲ ಉಪಭೋಗಿಸಲೆಂದೇ ಇರುವ ಕಾಮದ ಗೊಂಬೆಯಂತೆಯೇ ಚಿತ್ರಿಸಿದ್ದಾರೆ.

ಆದರೆ ದಲಿತರಾದ ದೇವನೂರರ 'ಒಡಲಾಳ' ಕಾದಂಬರಿಯ ಸಾಕವ್ವ ಜೀವಕೇಂದ್ರಿತ ಪಾಲಕಳಾಗಿದ್ದಾಳೆ. ಅವರ ಕಾದಂಬರಿಯಲ್ಲಿ ದಲಿತ ಹೆಣ್ಣುಗಳನ್ನು ಉಪಯೋಗಿಸಿಕೊಳ್ಳುವ ಮೇಲ್ಜಾತಿಯ ಗಂಡುಗಳ ಪ್ರಸ್ತಾಪವಿಲ್ಲ. ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿಯ ಲಚ್ಮಿ ಮಠದಯ್ಯನ ಕಾಮಕ್ಕೆ ಬಲಿಯಾದರೂ ಅಲ್ಲಿಂದ ಬಂದ ಮೇಲೆ ಗರತಿಯಾಗಿ ಬದುಕುವಂತೆ ಚಿತ್ರಿಸಿದ್ದಾರೆ. ಲಚ್ಚಿ ಸ್ವಇಚ್ಛೆಯಿಂದ ಮಠದಯ್ಯನಿಗೆ ಅರ್ಪಿಸಿಕೊಳ್ಳುವಂತೆ ಲಲಿತಾ ನಾಯಕರು ಅವಳ ಪಾತ್ರವನ್ನು ಕಟ್ಟಿಕೊಟ್ಟಿಲ್ಲ. ಬದಲಿಗೆ ತಮ್ಮದಲ್ಲದ ಪರಿಸ್ಥಿತಿಯ ಒತ್ತಡಕ್ಕೆ, ವ್ಯವಸ್ಥೆಯ ಕ್ರೂರ ಅಟ್ಟಹಾಸಕ್ಕೆ ದಲಿತ ಹೆಣ್ಣುಮಕ್ಕಳು ಹೇಗೆ ಬಲಿಯಾಗುವ ಸಾಧ್ಯತೆಗಳಿರುತ್ತವೆ ಎಂಬ ಎಚ್ಚರವನ್ನು ಮೂಡಿಸಿದ್ದಾರೆ. ಇವರ ಮತ್ತೊಂದು ದಲಿತ ಪಾತ್ರವಾದ ಸೋನಿಬಾಯಿ, ಕಾಶಪ್ಪ ಪೂಜಾರ, ಮೋತಿಪವಾರ ಮುಂತಾದ ಕಾಮ ಪಿಶಾಚಿಗಳಿಂದ ತಪ್ಪಿಸಿಕೊಂಡು ಬದುಕುವ ಛಾತಿ ಉಳ್ಳವಳಾಗಿದ್ದಾಳೆ.

ಗಂಡನಿಂದ ದೂರವಾಗಿ ತಾನೇ ಮನೆ ಕಟ್ಟಿಕೊಂಡು, ಮಕ್ಕಳನ್ನೂ ಸಾಕುತ್ತಾ ಒಂಟಿಯಾಗಿ ಬದುಕುತ್ತಿರುತ್ತಾಳೆ. ಗಂಡನಿರುವವರೆಗೂ ಹೆಂಡತಿಯಾದವಳು ಗಂಡನ ಜೊತೆ ಬದುಕಲೇ ಬೇಕೆಂದಾಗ ಪಂಚಾಯತಿಯವರ ತೀರ್ಮಾನವನ್ನೇ ದಿಕ್ಕರಿಸಿ ಮುತ್ತೈದೆಯ ಚಿಹ್ನೆಯಾಗಿದ್ದ ತನ್ನ ತೋಳಲ್ಲಿ ತೊಟ್ಟಿದ್ದ ಬಳೆ ಮತ್ತು ಮುಂಗೂದಲಲ್ಲಿ ಹೆಣೆದಿದ್ದ ಒಂದು ಜೊತೆ ಓಲೆ ಬೆಳ್ಳಿ ಆಭರಣವನ್ನೇ ಬಿಚ್ಚಿ ಗಂಡನ ಕಾಲ ಬಳಿ ಎಸೆಯುತ್ತಾಳೆ. ಇವತ್ತಿಂದ ನಾ ಅವನ ಹೆಂಡ್ತಿಯಲ್ಲ. ಆತ ನನ್ನ ಗಂಡನಲ್ಲ ಎನ್ನುತ್ತಾಳೆ. ದಲಿತರೇ ಆದ ಲಲಿತಾ ನಾಯಕರು ಚಿತ್ರಿಸಿದ ಸೋನಿ ಪಂಚರ ತೀರ್ಮಾನವನ್ನೇ ಧಿಕ್ಕರಿಸುವಷ್ಟು ದಿಟ್ಟ ಹೆಣ್ಣುಮಗಳಾಗಿದ್ದಾಳೆ. ಇಂತಹ ಪಾತ್ರವನ್ನು ದಲಿತೇತರರು ತಮ್ಮ ಕಾದಂಬರಿಗಳಲ್ಲಿ ತರದಿದ್ದುದು ಕೊರತೆ, ಮಿತಿಯೂ ಆಗಿದೆ.

ದಲಿತರು ಚಿತ್ರಿಸಿದ ದಲಿತ ಮಹಿಳಾ ಪಾತ್ರಗಳು ಜೀವಕೇಂದ್ರಿತವಾದರೆ, ದಲಿತೇತರರು ಚಿತ್ರಿಸಿದ ದಲಿತ ಮಹಿಳಾ ಪಾತ್ರಗಳು ಕಾಮಕೇಂದ್ರಿತವಾಗಿವೆ. ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲಿನ ಲಚ್ಚಿ ಒತ್ತಾಯಪೂರ್ವಕವಾಗಿ

ಗಂಡಸರೆಂಬ ರಣಹದ್ದುಗಳ ಕಾಮಕ್ಕೆ ಬಲಿಯಾಗಿದ್ದಾಳೆ. ಆದರೆ ದಲಿತೇತರರು ಚಿತ್ರಿಸಿರುವ ದಲಿತ ಪಾತ್ರಗಳು ಮೇಲ್ವರ್ಗದ ಗಂಡುಗಳು ಬಯಸಿದ್ದೇ ತಡ ಅದೇ ನಮ್ಮ ಪುಣ್ಯ ಅರ್ಪಿಸಿಕೊಂಡುಬಿಡಬೇಕು ಎಂದು ಕಾದಿರುವಂತೆಯೇ ಚಿತ್ರಿಸಿದ್ದಾರೆ. ಈ ಸಾಲಿನಲ್ಲಿ ಕಾರಂತರ ಬೆಳ್ಳಿ, ಸಂಸ್ಕಾರದ ಬೆಳ್ಳಿ, ಭಾರತೀಪುರದ ಕಾವೇರಿ, ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪುಟ್ಟಿ ಕಂಡು ಬರುತ್ತಾರೆ. ಇಂತಹ ದಲಿತ ಹೆಣ್ಣುಗಳ ಕುರಿತ ದಲಿತೇತರರ ಕನಿಷ್ಟ ಗ್ರಹಿಕೆಯು ದಲಿತ ಹೆಣ್ಣುಗಳನ್ನು ಅವರು ಪರಿಭಾವಿಸಿರುವ ಕ್ರಮವನ್ನು ತಿಳಿಸುತ್ತವೆ.

ದಲಿತೇತರ ಕಾದಂಬರಿಕಾರರಲ್ಲಿನ ದಲಿತರ ಸಾಂಸ್ಕೃತಿಕ ಅಂಶಗಳು ದಲಿತ ಕಾದಂಬರಿಕಾರರಲ್ಲಿ ಕಂಡುಬರುವಷ್ಟು ಢಾಳಾಗಿ ಕಂಡುಬಂದಿಲ್ಲ. ಒಬ್ಬ ದಲಿತನೇ ಬರೆದಾಗ ತನ್ನ ಜನಾಂಗದ ಸಂಸ್ಕೃತಿಯ ವಿವರಗಳು ಬಿಚ್ಚಿಕೊಂಡಷ್ಟು ಸುಲಭವಾಗಿ ದಲಿತೇತರರಿಗೆ ಬಿಚ್ಚಿಕೊಳ್ಳುವುದಿಲ್ಲ. ಈ ಸಂದರ್ಭದಲ್ಲಿ ಕಾರಂತರ ಚೋಮನ ದುಡಿ ಕಾದಂಬರಿಯನ್ನು ಕುರಿತ ಮೊಗಳ್ಳಿ ಗಣೇಶ್ ಅವರ ಅಭಿಪ್ರಾಯ ಒಪ್ಪಿತವಾಗುತ್ತದೆ. ದಲಿತರ ನೋವುಗಳನ್ನು, ಕುರಿತು ಸ್ವತಃ ಅವುಗಳನ್ನು ಅನುಭವಿಸಿದ, ಅವುಗಳ ಭಾಗವೇ ಆದ ದಲಿತನು ಬರೆಯುವುದಕ್ಕೂ ದಲಿತರ ನೋವುಗಳನ್ನು ದೂರದಿಂದ ನಿಂತುನೋಡಿ, ಇಲ್ಲವೇ ಕೇಳಿ ಬರೆಯುವುದಕ್ಕೂ ತುಂಬಾ ವ್ಯತ್ಯಾಸವಿರುತ್ತದೆ. ಆದ್ದರಿಂದಲೇ ಒಬ್ಬ ದಲಿತನು ಬರೆದ ದಲಿತ ಸಾಹಿತ್ಯಕ್ಕಿಂತ ದಲಿತೇತರರು ದಲಿತರನ್ನು ಕುರಿತು ಬರೆದ ಸಾಹಿತ್ಯ ಹೆಚ್ಚು ಪರಿಣಾಮಕಾರಿಯೆನಿಸುವುದಿಲ್ಲ. ಆದರೂ ದಲಿತರ ನೋವುಗಳನ್ನು ಕುರಿತು ದಲಿತೇತರರು ಬರೆಯುತ್ತಿರುವುದು ಸಂತಸದ ವಿಚಾರವಾಗಿದೆ, ಸ್ವಾಗತಾರ್ಹವಾಗಿದೆ.

ದಲಿತ ಮಹಿಳೆಯನ್ನು ಕುರಿತ ಡಾ. ಶೈಲಜಾ ಹಿರೇಮಠ್ ಅವರ ಮಾತುಗಳು ಹೆಚ್ಚು ಅರ್ಥಪೂರ್ಣವಾಗಿದೆ. "ದಲಿತಳಾಗಿ ಹುಟ್ಟಿದ್ದು ಪಾಪವಾಗಿ, ಬಾಳಿನುದ್ದಕ್ಕೂ ನರಕಯಾತನೆಯನ್ನು ಅನುಭವಿಸುತ್ತಿದ್ದರೂ, ತನ್ನ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆಯುತ್ತಿದೆ ಎನ್ನುವುದರ ಪರಿವೆ ಇಲ್ಲದೆ ಅಮಾಯಕಳಾಗಿ ಬದುಕುತ್ತಿದ್ದಾಳೆ. ಜೀವಂತ ಶವವಾಗಿರುವ ದಲಿತ ಮಹಿಳೆಯರ ಅಸಹಾಯಕತೆಯನ್ನು, ನೋವಿನ ಒಳದನಿಗಳನ್ನು ಎಲ್ಲ ಮಹಿಳೆಯರು ಮೊದಲು ಕೇಳಿಸಿಕೊಳ್ಳಬೇಕಿದೆ. ಶೂದ್ರಳಾಗಿ ನಾನು ಅನೇಕ ಬಗೆಯ ಶೋಷಣೆಗಳಿಗೆ ಒಳಗಾಗಿದ್ದೇನೆ, ಒಳಗಾಗುತ್ತಿದ್ದೇನೆ. ನನಗಿಂತಲೂ ಭೀಕರ ಗಾಡಾಂಧಕಾರದಲ್ಲಿ ಕೊಳೆಯುತ್ತಿರುವ ದಲಿತ ಮಹಿಳೆಯ ಅಪಮಾನಗಳನ್ನು ಆಪ್ತವಾಗಿ ಆಲಿಸುವುದು ಮುಖ್ಯವೆನಿಸುತ್ತದೆ. ಎಲ್ಲ ಮಹಿಳೆಯರೂ ದಲಿತರೇ ನಿಜ. ಆದರೆ ಯಾರ ನೋವು ಮೊದಲು, ಯಾರ ಅಪಮಾನ ಮೊದಲು, ಈ ದೇಶದಲ್ಲಿ ಮೊದಲು ಯಾರು ಅಕ್ಷರಲೋಕಕ್ಕೆ ಒಳಗಾದರು ಈ ಪ್ರಶ್ನೆಗಳು

ಇವತ್ತು ಪ್ರಸ್ತುತ ಮಹಿಳೆಯರಾದ ನಾವೆಲ್ಲರೂ ಅಪಮಾನಗಳಿಗೆ, ಹಿಂಸೆಗಳಿಗೆ, ಶೋಷಣೆಗಳಿಗೆ ಒಳಗಾದವರಾದರೂ ನಮ್ಮೊಳಗೆ ಅತ್ಯಂತ ಹಿಂಸೆಗೆ ಒಳಗಾದ ದಲಿತ ಮಹಿಳೆಯರ ಅಪಮಾನಗಳನ್ನು, ನಮ್ಮ ಕಣ್ಣುಗಳಿಂದಲೇ ನಿಚ್ಚಳವಾಗಿ ನೋಡಬೇಕಿದೆ. ನಮ್ಮ ಕಿವಿಗಳಿಂದಲೇ ಪ್ರಾಮಾಣಿಕವಾಗಿ ಆಲಿಸಬೇಕಿದೆ. ನಮ್ಮ ಹೃದಯಾಂತರಾಳದಿಂದಲೇ ಮಾನವೀಯತೆಯ ದೀಪದ ಬೆಳಕಲ್ಲಿ ಅವರ ನೋವುಗಳನ್ನು ಗ್ರಹಿಸಬೇಕಿದೆ. ಅತ್ಯಂತ ಕ್ರೂರವಾದ ಭಾರತೀಯ ಜಾತಿ ವ್ಯವಸ್ಥೆಗಳಲ್ಲಿ ಕೊನೆಯ ಅಂಚಿನಲ್ಲಿರುವ ಮಹಿಳೆಯರು ಜಾತಿಯ ಶಾಪದ ಜೊತೆಗೆ ಲಿಂಗ, ವರ್ಗ ಹಾಗೂ ವರ್ಣದ ಕಾರಣಗಳಿಂದಾಗಿ ಪುರುಷ ವಿಕಾರಗಳನ್ನು ಅಸಹಾಯಕತೆಯಿಂದ ಎದುರಿಸುತ್ತಿದ್ದಾರೆ." (ಶೈಲಜ ಹಿರೇಮಠ್ 'ಸ್ತ್ರೀ ಕಥನ':೩೧)

ದಲಿತೇತರರಾದ ಕಾರಂತ ಮತ್ತು ಅನಂತಮೂರ್ತಿಯವರು ದಲಿತ ಮಹಿಳೆಯರನ್ನು ಚಿತ್ರಿಸುವಾಗ ಅವಳ ದೇಹ, ಅವಳ ಬಣ್ಣದ ಕಡೆ ಗಮನಹರಿಸುತ್ತಾರೆ. ಚೋಮನ ದುಡಿ ಮತ್ತು ಸಂಸ್ಕಾರ ಕಾದಂಬರಿಗಳಲ್ಲಿನ ದಲಿತ ಮಹಿಳೆಯರಾದ ಬೆಳ್ಳಿಯರನ್ನು ಈ ದೃಷ್ಟಿಯಲ್ಲಿ ಗ್ರಹಿಸಿದ್ದಾರೆ. ದಲಿತ ಮಹಿಳೆಯರ ಮೇಲಿನ ದೈಹಿಕ ದುರಪಯೋಗಕ್ಕೆ ಅವರ ಸೌಂದರ್ಯ ಮತ್ತು ಮೈಬಣ್ಣವೇ ಕಾರಣವೆನ್ನುವಂತೆ ಲೇಖಕರು ಗ್ರಹಿಸಿದ್ದಾರೆ. ಸಾಮಾನ್ಯವಾಗಿ ಮೇಲ್ಜಾತಿಯ ಮಹಿಳೆಯರು ಸುಂದರಿಯರಾಗಿರುತ್ತಾರೆ, ಗೌರವ ವರ್ಣವನ್ನು ಹೊಂದಿರುತ್ತಾರೆ. ಹಾಗಾದರೆ ಅಂತಹ ಹೆಣ್ಣುಗಳನ್ನು ಕುರಿತು ದಲಿತ ಮಹಳೆಯನ್ನು ಗ್ರಹಿಸಿದ ನೆಲೆಯಲ್ಲೇ ಚಿಂತಿಸಲು ಸಾಧ್ಯವಿದೆಯೇ? ಇದು ಅತಿರೇಕವೆನಿಸಿದರೂ ದಲಿತೇತರರು ದಲಿತ ಮಹಿಳೆಯರನ್ನು ಗ್ರಹಿಸಿರುವ ರೀತಿಯೇ ಆಗಿದೆ. ಅದು ವಾಸ್ತವವಾದರೆ, ಇದು ಕೂಡಾ ವಾಸ್ತವ ಏಕಾಗಬಾರದು? ವಾಸ್ತವ ಸಮಾಜದಲ್ಲಿ ಇಂತಹ ಒಂದೂ ಉದಾಹರಣೆಗಳು ಸಿಗುವುದೆಂದಲ್ಲ ಸಾಕಷ್ಟು ಇವೆ. ಉದಾ: ಎಸ್.ಎಲ್. ಭೈರಪ್ಪನವರ 'ವಂಶವೃಕ್ಷ' ಕಾದಂಬರಿ ಹಾಗೂ ಅನಂತಮೂರ್ತಿಯವರ 'ಭಾರತೀಪುರ' ಕಾದಂಬರಿಗಳು. ದಲಿತೇತರ ಕಾದಂಬರಿಕಾರರು ದಲಿತ ಮಹಿಳೆಯ ದೇಹಕ್ಕೆ ಆದ್ಯತೆ ಕೊಟ್ಟಿದ್ದರೆ, ದಲಿತ ಕಾದಂಬರಿಕಾರರು ದಲಿತ ಮಹಿಳೆಯ ಮನಸ್ಸಿಗೆ ಅವಳ ಪಾಲಕ ಶಕ್ತಿಗೆ ಆದ್ಯತೆ ಕೊಟ್ಟಿದ್ದಾರೆ.

"ಅರವಿಂದ ಮಾಲಗತ್ತಿಯವರ ದಲಿತ ಸಾಹಿತ್ಯವನ್ನು ಕುರಿತ ಮಾತುಗಳು ಮೇಲಿನ ಸಾರವನ್ನೇ ಪುಷ್ಟೀಕರಿಸುವಂತಿವೆ. ದಲಿತ ಸಾಹಿತ್ಯದಲ್ಲಿ ಮಹಿಳೆಯನ್ನು ಒಂದು ಕ್ರಿಯಾತ್ಮಕ ಶಕ್ತಿಯಾಗಿ ಬಳಸಿಕೊಂಡಿದ್ದಾರೆ. ಇಲ್ಲಿ ಕಾಮದ ಹೊಂಡವನ್ನೇ ತುಂಬಿಕೊಂಡ ಮಾಂಸದ ಮುದ್ದೆಯಾಗಿ ನಿಲ್ಲಿಸುವುದಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ದಲಿತರ ಸ್ಥಾನಮಾನಗಳು ಹತ್ತಿಕ್ಕಲ್ಪಟ್ಟಿವೆ. ಇದಕ್ಕೆ ಮೂಲದ ಹೆಣ್ಣಿನ ಸ್ಥಾನಮಾನದಲ್ಲಾದ ಬದಲಾವಣೆಗಳೇ ಕಾರಣವಾಗಿವೆ.

ಹೀಗಾಗಿ ಆದ ತಪ್ಪನ್ನು ತಿದ್ದಿಕೊಳ್ಳಲು, ದಲಿತರು ಸಮಾಜದಲ್ಲಿ ಮನುಷ್ಯರಾಗಿ ಬದುಕಲು ಹೆಣ್ಣಿನ ಸ್ಥಾನಮಾನಗಳಿಗೆ ಆದ್ಯತೆ ನೀಡುವುದನ್ನು ದಲಿತ ಸಾಹಿತ್ಯ ಮನಗಂಡಿದೆ. ಹೆಣ್ಣನ್ನು ಹೆಣ್ಣಾಗಿ ಪರಿಗಣಿಸಿ ನಮ್ಮೊಂದಿಗೆ ಕರೆದುಕೊಂಡು ಹೋಗದಿದ್ದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಪರಿವರ್ತನೆ ಸಾಧ್ಯವಿಲ್ಲವೆಂದು ತಿಳಿದುಕೊಂಡಿರುವುದರಿಂದ ಜಾತಿ ಕಟ್ಟಳೆಯನ್ನು ಮೀರಿದಂತೆ ಕೊಡುಕೊಳ್ಳುವಿಕೆಯಲ್ಲಿಯೂ ಇಂತಹದ್ದನ್ನು ಕಾಣುತ್ತೇವೆ. 'ಕಾಮ' ಎನ್ನುವುದು ಮನುಷ್ಯನ ಸಹಜ ಪ್ರಕ್ರಿಯೆಗಳಲ್ಲಿ ಒಂದು. ಇದರ ಇತಿಮಿತಿಗಳು ಪ್ರತಿಯೊಂದು ಜನಾಂಗದಲ್ಲಿಯೂ ಸಾಮಾನ್ಯವಾದುವು ಎನ್ನುವುದನ್ನು ದಲಿತ ಕೃತಿಗಳು ಎತ್ತಿ ಹೇಳಲು ಪ್ರಯತ್ನಿಸಿವೆ. ವರ್ತಮಾನದ ಹೆಣ್ಣಿನೊಂದಿಗೆ ಹೆಚ್ಚಿನ ಸ್ಥಿತಿಗತಿಗಳು ದಲಿತ ಸಾಹಿತ್ಯದಲ್ಲಿಯೂ ಇನ್ನು ಪ್ರಖರವಾಗಿ ಮೂಡಿ ಬಂದಿಲ್ಲವೆಂದೇ ಹೇಳಬಹುದು. ಆದರೆ ಬಂದ ಕಾದಂಬರಿಗಳೆಲ್ಲ ಸ್ತ್ರೀಕೇಂದ್ರಿತವಾದವು ಎನ್ನುವುದನ್ನು ಲಕ್ಷಿಸಬೇಕು" (ಅರವಿಂದ ಮಾಲಗತ್ತಿ 'ದಲಿತಮಾರ್ಗ':೨೪)

ದಲಿತೇತರ ಕಾದಂಬರಿಗಳಲ್ಲೂ ಕೂಡಾ ದಲಿತ ಹೆಣ್ಣುಗಳನ್ನು ಕ್ರಿಯಾತ್ಮಕ ಶಕ್ತಿಯುಳ್ಳವರನ್ನಾಗಿ ವಿಭಿನ್ನ ರೀತಿಯಲ್ಲಿ ಚಿತ್ರಿಸುವ ಅಗತ್ಯವಿದೆ. 'ದಲಿತ ಮಹಿಳೆ' ಎಂದಾಕ್ಷಣ ಕಾಮವನ್ನೇ ಮನಸ್ಸಿಗೆ ತಂದುಕೊಳ್ಳುವುದನ್ನು ಬಿಡಬೇಕು. ಕಾಮದಾಚೆಗೂ ದಲಿತ ಮಹಿಳೆಗಿರುವ ಗುರುತನ್ನೂ, ಅವಳ ಅಸ್ಥಿತ್ವವನ್ನು ಗುರುತಿಸುವಂಥ ಬರವಣಿಗೆಗಳು ಇಂದಿಗೆ ಬೇಕು. ಇಂದಿಗೂ ಕಾಮವನ್ನೇ ಕೇಂದ್ರೀಕರಿಸಿ ಹೇಳಿದ್ದನ್ನೇ ಹೇಳುವ ಪುನರಾವರ್ತನೆಗಳು 'ದಲಿತ ಮಹಿಳೆ' ಸಂದರ್ಭದಲ್ಲಿ ಅಗತ್ಯವಿಲ್ಲವೆನಿಸುತ್ತದೆ.

ಒಟ್ಟಿನಲ್ಲಿ ದಲಿತ ಹಾಗೂ ದಲಿತೇತರ ಕಾದಂಬರಿಗಳಲ್ಲಿ ನಿರೂಪಿತವಾದ ಮಹಿಳೆಯ ಚಿತ್ರಣಗಳಲ್ಲಿ ಅಂತರವನ್ನು ಗುರುತಿಸಲು ಸಾಧ್ಯವಿದೆ. ಮಹಿಳೆಯೆಂದಾಕ್ಷಣ ಗಂಡಿನ ಮನಸ್ಸಿನಲ್ಲಿ ಮೂಡುವ ಭಾವವೆಂದರೆ ಕಾಮ. ಈ ಕಾಮದ ದೃಷ್ಟಿಕೋನದಲ್ಲಿ ಇಬ್ಬರಲ್ಲಿಯೂ ವ್ಯತ್ಯಾಸವನ್ನು ಗುರುತಿಸಬಹುದು.

ಪ್ರಸ್ತುತ ಅಧ್ಯಾಯದಲ್ಲಿ ದಲಿತ ಪದದ ಹುಟ್ಟು, ಬೆಳವಣಿಗೆ, ಯಾವುದು ದಲಿತ ಸಾಹಿತ್ಯ, ದಲಿತ ಸಾಹಿತ್ಯದ ಲಕ್ಷಣಗಳು, ದಲಿತ ಸಾಹಿತ್ಯದ ಪ್ರೇರಣೆಗಳು, ಯಾವುದು ದಲಿತ ಸಾಹಿತ್ಯ? ಯಾವುದು ದಲಿತೇತರ ಸಾಹಿತ್ಯ ಮುಂತಾದ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ. ದಲಿತ ಮತ್ತು ದಲಿತೇತರ ಕಾದಂಬರಿಕಾರರು ದಲಿತ ಮಹಿಳೆಯನ್ನು ಯಾವ ರೀತಿ ಚಿತ್ರಿಸಿದ್ದಾರೆ ಮತ್ತು ಆ ರೀತಿ ಚಿತ್ರಿಸಲು ಇದ್ದಂತಹ ಮಾನಸಿಕ ಒತ್ತಡಗಳು ಯಾವುವು? ಮುಂತಾದ ವಿಚಾರಗಳನ್ನು ಕುರಿತು ಗಮನಹರಿಸಲಾಗಿದೆ.

ಮುಂದಿನ ಅಧ್ಯಾಯದಲ್ಲಿ ಅಸ್ಪೃಶ್ಯತೆಯೆಂಬುದು ದಲಿತ ಮಹಿಳೆಯ ವಿಚಾರದಲ್ಲಿ ಶಾಪದಂತಿರುವ ಬಗ್ಗೆ, ದುಡಿಮೆಯು ದಲಿತ ಮಹಿಳೆಗೆ ಅನಿವಾರ್ಯವಾಗಿರುವುದರ ಬಗ್ಗೆ, ದುಡಿಯುವ ಜಾಗದಲ್ಲಿ ದಲಿತ ಮಹಿಳೆ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿರುವುದರ ಕಾರಣಗಳನ್ನು ಹಾಗೂ ಮಹಿಳೆ ಮತ್ತು ಪುರುಷ ಚಿತ್ರಿಸಿರುವ ದಲಿತ ಮಹಿಳೆಯ ಭಿನ್ನತೆಗಳನ್ನು ಅದಕ್ಕೆ ಕಾರಣಗಳನ್ನು ಕುರಿತು ಕಾದಂಬರಿಗಳ ಅಡಿಯಲ್ಲಿ ಚರ್ಚೆಗೊಳಪಡಿಸಲಾಗುವುದು.

ಅಧ್ಯಾಯ – ೪

ಕಾದಂಬರಿಗಳಲ್ಲಿ ದಲಿತ ಮಹಿಳೆಯರ ಶೋಷಣೆಯ ಶೋಧದ ವಿಭಿನ್ನ ನೆಲೆಗಳು

೪.೧ ಮೇಲ್ಜಾತಿ ಮಹಿಳೆ : ಶೋಷಣೆಯ ನೆಲೆ

೪.೨ ದಲಿತ ಮಹಿಳೆ : ಅಸ್ಪೃಶ್ಯತೆಯ ನೆಲೆ

೪.೩ ದಲಿತ ಮಹಿಳೆ : ದುಡಿಮೆಯ ನೆಲೆ

೪.೪ ದಲಿತ ಮಹಿಳೆ : ಮಹಿಳೆ ಮತ್ತು ಪುರುಷ ಚಿತ್ರಿಸಿರುವ ನೆಲೆ

ಅಧ್ಯಾಯ – ೪

ದಲಿತ ಮಹಿಳೆಯರ ಶೋಷಣೆಯ ಶೋಧದ ವಿಭಿನ್ನ ನೆಲೆಗಳು

ಕಾದಂಬರಿಗಳಲ್ಲಿ ದಲಿತ ಮಹಿಳೆಯರ ಶೋಷಣೆಯ ಶೋಧದ ವಿಭಿನ್ನ ನೆಲೆಗಳು ಎಂಬ ಅಧ್ಯಾಯದಲ್ಲಿ ಮಹಿಳೆ ಶೋಷಣೆಗೆ ಒಳಗಾಗುತ್ತಿರುವ ವಿವಿಧ ರೀತಿಯ ನೆಲೆಗಳನ್ನು ಕುರಿತು ಕಾದಂಬರಿಗಳ ಅಡಿಯಲ್ಲಿ ಅಧ್ಯಯನ ನಡೆಸಲಾಗಿದೆ. ಅವುಗಳು ಇಂತಿವೆ:

೧. ಮೇಲ್ಜಾತಿ ಮಹಿಳೆ : ಶೋಷಣೆಯ ನೆಲೆ

೨. ದಲಿತ ಮಹಿಳೆ : ಅಸ್ಪೃಶ್ಯತೆಯ ನೆಲೆ

೩. ದಲಿತ ಮಹಿಳೆ : ದುಡಿಮೆಯ ನೆಲೆ

೪. ದಲಿತ ಮಹಿಳೆ : ಮಹಿಳೆ ಮತ್ತು ಪುರುಷ ಚಿತ್ರಿಸಿರುವ ನೆಲೆ

ಮೊದಲನೆಯದಾಗಿ ಮೇಲ್ಜಾತಿ ಮಹಿಳೆ ಮತ್ತು ಶೋಷಣೆಯ ನೆಲೆಯನ್ನು ಕುರಿತು ಪ್ರಸ್ತಾಪಿಸಲಾಗುತ್ತಿದೆ.

೧. ಮೇಲ್ಜಾತಿ ಮಹಿಳೆ : ಶೋಷಣೆಯ ನೆಲೆ

'ಮಹಿಳೆ' ಯಾವುದೇ ಜಾತಿಗೆ ಸೇರಿದ್ದರೂ ಕೂಡಾ ಎಲ್ಲಾ ಮಹಿಳೆಯರನ್ನು ಒಟ್ಟಾರೆಯಾಗಿ 'ದಲಿತರು' ಎಂದು ಆಧುನಿಕ ಸಾಹಿತ್ಯ ಸಂದರ್ಭದಲ್ಲಿ ಪರಿಗಣಿಸುತ್ತಿ–ರುವುದರಿಂದ ಜಾತಿಯಿಂದ ಕೆಳಗಿರುವ ದಲಿತ ಮಹಿಳೆಯ ಮೇಲಿನ ಶೋಷಣೆಯನ್ನು ಅಧ್ಯಯನಕ್ಕೊಳಪಡಿಸುವುದರ ಜೊತೆ–ಜೊತೆಗೆ ಸಾಮಾನ್ಯ ವರ್ಗದ ಮಹಿಳೆಯನ್ನು ಕುರಿತು ಶೋಧ ನಡೆಸಲಾಯಿತು. ಪ್ರಸ್ತುತ ಸಂಶೋಧನೆಗೆ ಆಯ್ಕೆ ಮಾಡಿಕೊಂಡಿರುವ ಕಾದಂಬರಿಗಳನ್ನು ಅಧ್ಯಯನ ಮಾಡಿದಾಗ 'ಮೇಲ್ಜಾತಿ'ಗೆ ಸೇರಿದ ಮಹಿಳೆಯ ಮೇಲೆ ಎಲ್ಲಿಯೂ ದಲಿತ ಪುರುಷ ಪಾತ್ರಗಳಾಗಲೀ ದಲಿತ ಸ್ತ್ರೀ ಪಾತ್ರಗಳಾಗಲೀ ಶೋಷಣೆ ನಡೆಸಿರುವುದು ಕಂಡುಬರಲಿಲ್ಲ. ಬದಲಿಗೆ ಮೇಲ್ವರ್ಗಕ್ಕೆ ಸೇರಿದ ಪುರುಷನೇ ತನ್ನ ಕುಟುಂಬದೊಳಗೆ ಮಹಿಳೆಯನ್ನು ದೌರ್ಜನ್ಯಕ್ಕೆ ಒಳಪಡಿಸುವ ಸಂದರ್ಭಗಳು ಕೆಲವೊಂದು ಕಾದಂಬರಿಗಳಲ್ಲಿ ಕಂಡುಬಂದಿವೆ.

ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯಲ್ಲಿ ರತ್ನಳ ಗಂಡನ ದರ್ಪ, ದೌರ್ಜನ್ಯವನ್ನು ರತ್ನಳ ತಾಯಿಯೇ ಒಪ್ಪಿಕೊಳ್ಳುತ್ತಾಳೆ. ಅಲ್ಲದೇ ಅದೇ ಮನೆಯಲ್ಲಿರುವ ರತ್ನಳ ಅತ್ತೆ ಪಾರ್ತಕ್ಕ ಕೂಡಾ ಇದನ್ನು ಪುರಸ್ಕರಿಸಿ ಹೀಗೆ ಮಾತನಾಡುತ್ತಾಳೆ. "ಹೇಗೆ ಹೆಂಡತಿಯನ್ನು

ಮುಷ್ಠಿಯೊಳಗೆ ಇರಿಸಿಕೊಂಡಿದ್ದಾನೆ! ಹೆಣ್ಣುಮಕ್ಕಳು ಹಾಗೆ ಗಂಡನ ಮುಷ್ಠಿಯೊಳಗೆ ಇದ್ದರೇನೇ ಒಂದು ಮನೆ. ಅಲ್ಲವಾದರೆ ಅದು ಮನೆಯ? ಹೋಟೇಲು ಆಗುತ್ತದೆ". (ಅಸ್ಪೃಶ್ಯರು:೪೬) ಪಾರ್ತಕ್ಕನ ಪ್ರಕಾರ ಪುರುಷತ್ವ ಎನ್ನುವುದೇನಾದರೂ ಇದ್ದರೆ ಅದು ರತ್ನಳ ಗಂಡನಿಗೆ ಮಾತ್ರ. ಯಾವುದೇ ಸಂಸಾರ ಸುಖಕರವಾಗಿರಬೇಕಾದರೆ ಹೆಂಡತಿಯಾದವಳು ಗಂಡ ಏನೇ ಬೈದರೂ ಹೊಡೆದರೂ ಬಾಯಿಮುಚ್ಚಿಕೊಂಡು ಗಂಡನಿಗೆ ಎದುರಾದಡೆ ಬದುಕಬೇಕೆಂಬ ನಿಲುವು ಸ್ಪಷ್ಟವಾಗುತ್ತದೆ.

ಒಮ್ಮೆ ರತ್ನ ಚಪಾತಿಗೆ ಪಲ್ಯ ಮಾಡದೆ ಚಟ್ನಿ ಮಾಡಿದ್ದಕ್ಕೆ ತಿನ್ನುವ ಪ್ಲೇಟನ್ನೇ ದೂಡಿ "ಫಲ್ಯ ಮಾಡಲಿಲ್ಲ ಯಾಕೆ? ತರಕಾರಿ ತಂದದ್ದು ನಿನ್ನ ತಲೆಗೆ ತಟ್ಟಿಕೊಳ್ಳಲಿಕ್ಕ" (ಅಸ್ಪೃಶ್ಯರು:೪೭) ಎಂದು ಕೆಲಸಕ್ಕೆ ಹೋಗುವವರೆಗೂ ಪದೇ ಪದೇ ಅದನ್ನೇ ಬೈಯ್ಯುತ್ತಿರುತ್ತಾನೆ. ಆಗ ರತ್ನಳ ಪ್ರತಿಕ್ರಿಯೆ ಗಂಟಲಿನ ಆಚೆಗೆ ಬಂದರೂ ಅವಳ ಗಂಡನ ಕಿವಿಗೆ ಕೂಡ ಮುಟ್ಟುವುದಿಲ್ಲ. ಈ ಸಂದರ್ಭವನ್ನು ಕಣ್ಣಾರೆ ಕಂಡಿದ್ದ ರತ್ನಳ ತಂಗಿ ಸರೋಜ ಅಕ್ಕನಿಗೆ ಈ ರೀತಿ ಹೇಳುತ್ತಾಳೆ. ನಾನಾಗಿದ್ದರೆ ಊಟವೇ ಹಾಕುತ್ತಿರಲಿಲ್ಲ ಎನ್ನುತ್ತಾಳೆ. ತಂಗಿಯ ಈ ಮಾತು ರತ್ನಳಿಗೆ ಸರಿಕಾಣುವುದಿಲ್ಲ. ಹೆಂಡತಿಗೆ ಕಷ್ಟಬಂದಾಗ ನೋಡುವವನು ಅವನೇ. ಕೋಪಬಂದಾಗ ಎರಡು ಮಾತನಾಡುವುದು ಅಪರಾಧವಲ್ಲ ಎಂದು ತಂಗಿಯ ಮೇಲೆಯೇ ಅಸಮಧಾನಗೊಳ್ಳುತ್ತಾಳೆ. ರತ್ನಳು ಗಂಡನನ್ನು ದೇವರಿಗೆ ಸಮಾನವಾಗಿ ಕಾಣುವ ಮನಃಸ್ಥಿತಿ ಹೊಂದಿದ್ದಾಳೆ. ಎಲ್ಲಿಯವರೆಗೂ ಹೆಣ್ಣುಮಕ್ಕಳಿಗೆ ಗಂಡನ ದೌರ್ಜನ್ಯ ದೌರ್ಜನ್ಯವಾಗಿ ಕಾಣದೆ ಅವನು ಅವಳ ದೃಷ್ಟಿಯಲ್ಲಿ ದೇವರಾಗಿ ಕಾಣುತ್ತಾನೋ ಅಲ್ಲಿಯವರೆಗೆ ಅವಳ ಬದುಕಿನಲ್ಲಿ ಬದಲಾವಣೆಯ ಅಗತ್ಯವಿರುವುದಿಲ್ಲ. ಸ್ವತಃ ರತ್ನಳೇ ಇಂತಹ ವ್ಯವಸ್ಥೆಯನ್ನು ಒಪ್ಪಿಕೊಂಡು ಬದುಕುತ್ತಾಳೆ.

ರತ್ನಳ ತಾಯಿ ಗೌರಮ್ಮಳಿಗೆ ರತ್ನಳ ಗೆಳತಿಯಾದ ಕಮಲಮ್ಮನ ಮಗಳು ಸರಳ ನೆನಪಿಗೆ ಬರುತ್ತಾಳೆ. ಅವರ ಪ್ರಕಾರ ಅವಳು ಮದುವೆಯಾದ ಆರಂಭದಿಂದ ದೆವ್ವದಂತಾಗಿದ್ದಾಳೆ. ಅವಳ ಅತ್ತೆಯೂ ಬಜಾರಿಯಾಗಿದ್ದಾಳೆ. ಇಂಥ ಕೆಟ್ಟ ಪರಿಸ್ಥಿತಿಯಲ್ಲಿ ಸರಳ ಎರಡು ಮಕ್ಕಳನ್ನು ಹೆರುವುದರೊಳಗೆ ಏನಕ್ಕೂ ಪ್ರಯೋಜನವಿಲ್ಲದಂತಾಗಿದ್ದಾಳೆ. ಹೀಗಿರುವಾಗಲೂ ಯಾರಾದರೂ 'ಏನಾಗಿದೆ ನಿಂಗೆ' ಅಂತ ಕೇಳಿದರೆ ತನಗೆ ಏನೂ ಆಗಿಲ್ಲವೆಂಬಂತೆ ಮರ್ಯಾದೆಯಿಂದ ಬದುಕುತ್ತಿದ್ದಾಳೆ. ರತ್ನನ ಕ್ಲಾಸಿನ ಪದ್ಮ ಮದುವೆಗೆ ಮುಂಚೆ ಇಡೀ ಜಗತ್ತಿನಲ್ಲಿ ಪ್ರಾಯ ಬಂದಿದ್ದು ತನಗೊಬ್ಬಳಿಗೇ ಎಂಬಂತೆ ಅಹಂಕಾರದಿಂದ ನಡೆದುಕೊಳ್ಳುತ್ತಿದ್ದವಳು ನಾಯಿ ಕೂಡ ನೀರು ಕುಡಿಯಲಾಗದೆ ಹೇಸುವಂಥವನನ್ನು ಮದುವೆಯಾಗಿದ್ದಾಳೆ. ಮದುವೆಯಾಗಿ ಎರಡು ವರ್ಷವಾದರೂ ಮಕ್ಕಳಿಲ್ಲ. ಹೀಗೆ ರತ್ನಳ ಸಹಪಾಠಿಗಳೊಂದಿಗೆ ರತ್ನಳ ಬದುಕನ್ನು ಹೋಲಿಸಿ

ನೋಡಿಕೊಳ್ಳುವ ಗೌರಮ್ಮನಿಗೆ ತನ್ನ ಮಗಳಿಗೆ ಸಿಕ್ಕಿರುವ ಗಂಡೇ ಎಷ್ಟೋ ವಾಸಿ ಎಂದುಕೊಳ್ಳುತ್ತಾಳೆ. ಏಕೆಂದರೆ ಬೇಕಾದ್ದು ಮಾತ್ರ ತಂದು ಹಾಕಿ ಹೆಂಡತಿ ಮಕ್ಕಳನ್ನು ಶಿಸ್ತಾಗಿ ಇಟ್ಟುಕೊಂಡಿದ್ದಾನೆ ಎಂಬುದಾಗಿದೆ. ಒಟ್ಟಾರೆ ಗೌರಮ್ಮನವರ ಎಲ್ಲಾ ಯೋಚನೆಗಳಿಂದ ತಿಳಿಯುವುದೇನೆಂದರೆ ಗಂಡನಾದವನು ಸಣ್ಣ ಪುಟ್ಟದಕ್ಕೆಲ್ಲ ಹೊಡೆದರೂ ಪರವಾಗಿಲ್ಲ ಹೆಂಡತಿ ಮಕ್ಕಳಿಗೆ ಅಗತ್ಯವಾದದ್ದನ್ನು ತಂದುಕೊಟ್ಟರೆ ಸಾಕು. ಹೆಂಡತಿಯನ್ನು ಹೊಡೆಯುವ, ಬೈಯ್ಯುವ ವಿಚಾರಗಳು 'ಕೆಳಜಾತಿ' ಎಂದು ಕರೆಸಿಕೊಳ್ಳುವ ಹೆಣ್ಣು ಮಕ್ಕಳ ಮನೆಯಲ್ಲಿ ಮಾತ್ರ ನಡೆಯುತ್ತಿಲ್ಲ ಬದಲಿಗೆ ಎಲ್ಲಾ ಸಮುದಾಯಗಳಲ್ಲೂ ಇದು ಸಾರ್ವತ್ರಿಕ ಎಂಬುದ ಅರಿವಾಗುತ್ತದೆ. ಹೆಣ್ಣಿನ ಮೇಲಿನ ಶೋಷಣೆಯು 'ಮೇಲ್ಜಾತಿ', 'ಸುಶಿಕ್ಷಿತ' ಎಂದು ಕರೆಸಿಕೊಂಡವರ ಮನೆಗಳಲ್ಲೂ ಸಹಜ/ಮಾಮೂಲಾಗಿದೆ. ಒಟ್ಟಾರೆ ಶೋಷಣೆಗೊಳಪಡಿಸಲು 'ಜಾತಿಯಾಗಲೀ, ಓದಾಗಲೀ ಅಡ್ಡಿ ಬರುವುದಿಲ್ಲ. ಅವಳು 'ಹೆಣ್ಣು' ಎಂಬುದೊಂದೇ ಮಾನದಂಡವೆ ಸಾಕಾಗಿದೆ. ಸಮಾಜದ ಯಾವುದೇ ಸಮುದಾಯದ ಹೆಣ್ಣು ಕೂಡ ನೆಮ್ಮದಿಯಾಗಿಲ್ಲ ಎನ್ನುವುದಕ್ಕೆ 'ಬ್ರಾಹ್ಮಣ' ಸಮುದಾಯಕ್ಕೆ ಸೇರಿದ ರತ್ನ ಮತ್ತು ಅವಳ ಜೊತೆಗಾತಿಯರ ಬದುಕು ನಿದರ್ಶನವಾಗಿದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲೂ ಹೆಣ್ಣಿನ ಮೇಲೆ ನಡೆಯುವ ಶೋಷಣೆಯ ನೆಲೆಗಳನ್ನು ಗುರುತಿಸಬಹುದು. 'ಬ್ರಾಹ್ಮಣ'ರಲ್ಲಿ ಗಂಡ ಸತ್ತವರಿಗೆ ತಲೆ ಬೋಳಿಸುವುದು ಕಂಡುಬರುತ್ತದೆ. ತಲೆ ಬೋಳಿಸಿಕೊಂಡ ಬ್ರಾಹ್ಮಣ ವಿಧವೆಯನ್ನು ನೋಡಿ ತಿಮ್ಮು ಇದು ಹೆಂಗಸೋ ಅಥವಾ ಗಂಡಸೋ ಎಂಬ ಗೊಂದಲಕ್ಕೆ ಗುರಿಯಾಗುತ್ತಾನೆ. ತನ್ನ ಅಪ್ಪಯ್ಯ ಸತ್ತರೆ ತನ್ನ ತಾಯಿಯೂ ಹೀಗೆ ತಲೆ ಬೋಳಿಸಿಕೊಳ್ಳಬೇಕಾಗುತ್ತದೆಂದು ದಿಗಿಲುಗೊಳ್ಳುತ್ತಾನೆ. ತಿಮ್ಮು 'ಹಾರುವ' ಹೆಂಗಸರು ಸೀರೆ ಉಡುವ ಪದ್ಧತಿಯನ್ನು ಕಂಡು ಬೆರಗಾಗುತ್ತಾನೆ. ನಗು ತಡೆಯಲಾಗದೆ ಕಾಡಣ್ಣಯ್ಯನಲ್ಲಿ 'ಗಂಡಸರ ಹಾಗೆ ಕಚ್ಚೆ ಹಾಕಿದ್ದಾರಲ್ಲೋ' ಎಂದು ಪ್ರಶ್ನಿಸುತ್ತಾನೆ. 'ತಲೆ ಬೋಳಿಸಿಕೊಳ್ಳುವ' ಪದ್ಧತಿಯು 'ಬ್ರಾಹ್ಮಣ' ಸಮುದಾಯದಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿರುವ ಶೋಷಣೆಯನ್ನು ತಿಳಿಸುತ್ತದೆ. ಹಾಗೆಯೇ 'ತಲೆಬೋಳಿಸಿಕೊಳ್ಳುವ' ಪದ್ಧತಿ ಕೆಳಜಾತಿಗಳಲ್ಲಿ ಇಲ್ಲ, ಆದರೆ ಕೆಲವೊಂದು ಅನಿಷ್ಟ ಪದ್ಧತಿಗಳು 'ಮೇಲ್ಜಾತಿ'ಯೊಳಗೆ ಹೆಚ್ಚು ಬಿಗಿಯಾಗಿರುವುದನ್ನು ತಿಳಿಸಿಕೊಡುತ್ತವೆ. 'ಬ್ರಾಹ್ಮಣ' ಸಮುದಾಯದ ಹೆಂಗಸರು ತನ್ನ ಜಾತಿಯೊಳಗಿನ ಪುರುಷ ಸಮುದಾಯದಿಂದ ಶೋಷಣೆಗೆ ಒಳಗಾಗುತ್ತಿರುವುದನ್ನು ಮೇಲಿನ ಅಂಶ ಸಾಬೀತುಪಡಿಸಿದೆ.

ಜಾತಿವ್ಯವಸ್ಥೆಯಲ್ಲಿ ಸ್ವಲ್ಪ ಮೇಲು ಸ್ಥರದಲ್ಲಿರುವ ಚಿನ್ನಮ್ಮನಿಗೂ 'ಶೋಷಣೆ' ತಪ್ಪಿದ್ದಲ್ಲ. ಅವಳು ತನಗೆ ಇಷ್ಟವಿರುವ ಮುಕುಂದಯ್ಯನನ್ನು ಮದುವೆಯಾಗಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ಪಿತೃ ಪ್ರಧಾನ ವ್ಯವಸ್ಥೆಯಾಗಿದೆ. ಅವಳ ಮನದಾಸೆಗೆ ಅವಳ ತಂದೆ ವೆಂಕಟಪ್ಪಗೌಡನಾಗಲೀ ಮದುವೆಯಾಗಬೇಕಿದ್ದ ಭರಮೈ ಹೆಗ್ಗಡೆಯಾಗಲೀ? ಬೆಲೆ ಕೊಡುವುದೇ ಇಲ್ಲ. ಭರಮೈ ಹೆಗ್ಗಡೆಯ ಮಗಳಿನ ವಯಸ್ಸಿನ ಚಿನ್ನಮ್ಮನನ್ನು ಭರಮೈ ಹೆಗ್ಗಡೆಗೆ ಮದುವೆ ಮಾಡಿಕೊಡಲು ಪ್ರಯತ್ನಿಸುವ ವೆಂಕಟಪ್ಪಗೌಡನಾಗಲೀ, ಭರಮೈ ಹೆಗ್ಗಡೆಯ ಮೊದಲ ಹೆಂಡತಿ ಜಟ್ಟಮ್ಮನಾಗಲೀ ಇದಕ್ಕೆ ಒಪ್ಪುವುದು ಹೇಸಿಗೆ ಎನಿಸುತ್ತದೆ. 'ಹೆಣ್ಣು' ಯಾವುದೇ ಸಮುದಾಯಕ್ಕೆ ಸೇರಿದ್ದರೂ ಅವಳಿಗೆ ವಾಕ್ ಸ್ವಾತಂತ್ರ್ಯವಿಲ್ಲದಿರುವುದು ಕಂಡು ಬರುತ್ತದೆ. ಚಿನ್ನಮ್ಮಳ ಅಭಿಪ್ರಾಯಗಳಿಗೆ ಇಲ್ಲಿ ಬೆಲೆಯೇ ಸಿಗದಿರುವುದು ಭಾರತೀಯ ಸಮಾಜದಲ್ಲಿ ಹೆಣ್ಣಿನ ಶೋಚನೀಯ ಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ಅವಳ ಅಭಿಪ್ರಾಯಕ್ಕೆ ಬೆಲೆ ಕೊಡುವುದೇ ಅವಮಾನಕರ ಎಂದು ಪರಿಗಣಿಸಿದಂತೆ ತಿಳಿಯುತ್ತದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಹೆಂಗಸರಿಗೆ ಶಿಕ್ಷಣ ನಿಷಿದ್ಧವಾಗಿದೆ ಎನ್ನುವುದರ ಕುರಿತು ಮನವರಿಕೆ ಮಾಡಿಕೊಡುತ್ತದೆ. ಹೆಂಗಸರು ಕಲಿತ, ಓದಿದ ಪ್ರಸ್ತಾಪಗಳು ಕಾದಂಬರಿಯಲ್ಲಿ ಎಲ್ಲೂ ಕಂಡು ಬರುವುದಿಲ್ಲ. ಇದಕ್ಕೆ ನಿದರ್ಶನವೆಂಬಂತೆ ಈ ಸಾಲುಗಳನ್ನು ಗಮನಿಸಬಹುದು. "ಗಂಡು ಮಕ್ಕಳಿಗೇ ಅಪೂರ್ವವೂ ಅಸಾಧ್ಯವೂ ಅತಿ ವಿರಳವೂ ಆಗಿದ್ದ ಓದು ಬರಹವನ್ನು 'ಹೆಣ್ಣು ಹೆಂಗಸರಿಗೆ' ಕಲಿಸಲು ಯಾರೂ ಒಪ್ಪುತ್ತಿರಲಿಲ್ಲ. ಹೆಂಗಸರು ಓದುವುದನ್ನು ಕಂಡೂ ಇರಲಿಲ್ಲ, ಕೇಳಿಯೂ ಇರಲಿಲ್ಲ. ಹೆಂಗಸರು ಓದು ಕಲಿಯುವುದು ಗಂಡಸರು ಸೀರೆಯುಡುವುದಕ್ಕಿಂತಲೂ ಹಾಸ್ಯಾಸ್ಪದವಾಗಿತ್ತು. ಒಮ್ಮೆ ಕೋಣೂರಿನ ಹುಡುಗ ಮುಕುಂದಯ್ಯ 'ವೆಂಕ್ಟಮಾವ'ನಿಗೆ 'ಚಿನ್ನೀನ ನಮ್ಮ ಮನೆಗೆ ಬರೆಯೋಕೆ ಕಳ್ಸಿ' ಎಂದು ಯಾವುದೋ ಮಾತಿನ ಸಂದರ್ಭದಲ್ಲಿ ಹೇಳಿದಾಗ, ಹೂವಳ್ಳಿ ವೆಂಕಟಣ್ಣ ನಕ್ಕು 'ಹೌದು ಕಣ್ರೋ ಅವಳಿನ್ನು ಬರಾವು ಕಲ್ತು ಮಣೆಗಾರಿಕೆ ಮಾಡೋದೊಂದು ಬಾಕಿ!? ಎಂದು ಲೇವಡಿ ಮಾಡಿದ್ದನು". (ಮಲೆಗಳಲ್ಲಿ ಮದುಮಗಳು:20)

ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡುವ ವಿಚಾರದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಧೋರಣೆ ಇಂದು ನಿನ್ನೆಯದಲ್ಲ. ಇದಕ್ಕೆ ಮಲೆಗಳಲ್ಲಿ ಮದುಮಗಳು ಕಾದಂಬರಿ ಒಂದು ಉದಾಹರಣೆಯಷ್ಟೇ. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಹೀನ ವ್ಯವಸ್ಥೆಯಾಗಿದೆ. ಹೆಣ್ಣಿನ ಶಿಕ್ಷಣ ಕಲಿಸುವ ವಿಚಾರದಲ್ಲಿ ಎಲ್ಲಾ ಜಾತಿಗಳ ಮನಸ್ಥಿತಿಗಳೂ ಸಮಾನವಾಗಿ ಯೋಚಿಸುತ್ತವೆ. ಆದ್ದರಿಂದಲೇ ಶಿಕ್ಷಣದಿಂದ ವಂಚಿತರಾಗುವ ವಿಚಾರದಲ್ಲಿ ಎಲ್ಲಾ

ಜಾತಿ, ಸಮುದಾಯಗಳ ಮಹಿಳೆಯರೂ ಸಮಾನರಾಗಿದ್ದಾರೆ. ವಚನ ಮತ್ತು ವೇದಗಳ ಸಂದರ್ಭದಲ್ಲಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಕೊಂಚ ಸಡಿಲಿಕೆಯಿದ್ದದ್ದು ಬಿಟ್ಟರೆ ಉಳಿದೆಲ್ಲ ಸಂದರ್ಭಗಳಲ್ಲೂ ಒಂದೇ. ಎಲ್ಲಿಯವರೆಗೆ ಹೆಣ್ಣಿಗೆ ಶಿಕ್ಷಣ ಸಿಗುವುದಿಲ್ಲವೋ ಅಲ್ಲಿಯವರೆಗೆ ಅವಳ ಹೀನ ಸ್ಥಿತಿಯ ಅರಿವಾಗಲೀ ಶೋಷಣೆಯೇ ವಿರುದ್ಧದ ದನಿಯಾಗಲೀ ಅವಳಿಂದ ಸಾಧ್ಯವಿಲ್ಲ. ಕುವೆಂಪು ಅವರು ಅಂದಿನ ಸಾಮಾಜಿಕ ಸ್ಥಿತಿಯನ್ನು ತಣ್ಣಗೆ ಅದು ಇದ್ದಂತೆ ಕಟ್ಟಿಕೊಡುತ್ತಾ ಒಂದು ರೀತಿಯಲ್ಲಿ ಪರೋಕ್ಷವಾಗಿ ಬದಲಾವಣೆ ಬಯಸುತ್ತಿದ್ದ ಹಾಗೆ ಕಾಣಿಸುತ್ತದೆ.

ಹೆಣ್ಣೇ ಮತ್ತೊಂದು ಹೆಣ್ಣಿನ ಮೇಲೆ ನಡೆಸುವ ಶೋಷಣೆಗೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿನ 'ನಾಗತ್ತೆ' ಸಾಕ್ಷಿಯಾಗಿದ್ದಾಳೆ. ಈ ನಾಗತ್ತೆ ತನ್ನ ಸೊಸೆ ನಾಗಕ್ಕನನ್ನು ಸಿಂಬಾವಿ ಭರಮೈ ಹೆಗ್ಗಡೆಗೆ 'ಸೀರುಡಿಕೆ' ಮಾಡಿಕೊಡಲು ಸಂಚು ಹೂಡುತ್ತಾಳೆ. ಇದು ಸಾಧ್ಯವಾಗದಿದ್ದಾಗ ಹೂವಳ್ಳಿ ವೆಂಕಟಣ್ಣನಿಗೆ 'ಸೀರುಡಿಕೆ' ಮಾಡಿಕೊಡಲು ಮುಂದಾಗುತ್ತಾಳೆ. ಆದರೆ ತಾನೇ ರಚಿಸಿದ ವ್ಯೂಹದಲ್ಲಿ ತಾನೇ ಸಿಕ್ಕಿಹಾಕಿಕೊಳ್ಳುವುದು ದುರಂತವಾಗಿದೆ.

ಗಂಡ ಸತ್ತ ವಿಧವೆಯನ್ನು ಹೆಂಡತಿ ಸತ್ತ ವಿಧುರನಿಗೆ 'ಸೀರುಡಿಕೆ' ಮಾಡಿಕೊಡುವಂಥ ಪದ್ಧತಿ 'ಮೇಲ್ಜಾತಿ' ಎಂದು ಕರೆಸಿಕೊಂಡವರಲ್ಲಿ ಸಾಮಾನ್ಯವಾಗಿದೆ. ನಾಗತ್ತೆ ನಾಗಕ್ಕನನ್ನು ಹೀನಾಯ ಮಾತುಗಳಿಂದ ಕೆರಳಿಸಿಯಾದರೂ ಅವಳನ್ನು ತನ್ನ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳಲು ಪ್ರಯತ್ನಿಸುವುದು ಅಸಹ್ಯವೆನಿಸುತ್ತದೆ. ತನ್ನ ಸೊಸೆ ನಾಗಕ್ಕನನ್ನು ವೆಂಕಟಪ್ಪಗೌಡನಿಗೆ 'ಸೀರುಡಿಕೆ' ಮಾಡಿಕೊಡುವ ಮೂಲಕ ತನ್ನ ಸಾಲಗಳನ್ನೆಲ್ಲ ತೀರಿಸಿಕೊಳ್ಳಲು ಪ್ರಯತ್ನಿಸುವುದು ಅವಳ ಹೀನ ಮನಸ್ಸಿಗೆ ಹಿಡಿದ ಕನ್ನಡಿಯಾಗಿದೆ. ಅಲ್ಲದೆ ಸ್ವತಃ ಹೆಣ್ಣಾದ ನಾಗತ್ತೆಯೇ ತನ್ನ ಸೊಸೆಯೇ ಆದ ಮತ್ತೊಂದು ಹೆಣ್ಣಿನ ಮೇಲೆ ನಡೆಸುವ ಶೋಷಣೆ ಇದಾಗಿದೆ.

ಅನಂತಮೂರ್ತಿಯವರ 'ಭಾರತೀಪುರ' ಕಾದಂಬರಿಯಲ್ಲಿ ನಾಗರಾಜ ಜೋಯಿಸರು ಹೆಂಡತಿ ಸತ್ತ ನಂತರ ಸೊಸೆಯನ್ನು ಇಟ್ಟುಕೊಂಡಿದ್ದಾರೆ ಎಂಬ ಪ್ರಸ್ತಾಪವಿದೆ. ಅಲ್ಲದೆ ಜೋಯಿಸರ ಕಾಟ ತಡೆಯಲಾರದೆ ಹೆಂಡತಿ ಸತ್ತಳೆಂದು ವಾಸು ಜಗನ್ನಾಥನಿಗೆ ಹೇಳುತ್ತಾನೆ. ಜೋಯಿಸರ ಮಗ ಶಿವಮೊಗ್ಗದಲ್ಲಿ ಕೆಲಸ ಮಾಡುತ್ತಿದ್ದರೂ ಸೊಸೆಯನ್ನು ಮಗನೊಂದಿಗೆ ಇರಲು ಬಿಡುತ್ತಿಲ್ಲ. ಇದರ ಬಗ್ಗೆ ಅವರು ಕೊಡುವ ಸಮಜಾಯಿಷಿ ಏನೆಂದರೆ 'ಮನೇಲಿ ಬರೋವ್ರಿಗೆ ಹೋಗೋವ್ರಿಗೆ ಮಾಡಿ ಹಾಕಕ್ಕೆ ಯಾರಿದಾರೆ' ಎನ್ನುವುದು. ನಾಗಮಣಿ ಅಡುಗೆ

ಮಾಡುತ್ತಾ ಬಡಿಸುತ್ತಾ ಅವಳ ಯೌವ್ವನವೇ ನಾಶವಾಗಿದೆ. ಈ ರೀತಿ ಕಷ್ಟಗಳಲ್ಲಿ ಬೇಯುತ್ತಲೇ ನಾಗಮಣಿ ಒಂದು ದಿನ ನೇಣು ಹಾಕಿಕೊಂಡು ಸಾಯುವುದು ಮೇಲ್ಜಾತಿಯ ಕುಟುಂಬದೊಳಗೆ ಹೆಣ್ಣುಮಕ್ಕಳ ಮೇಲೆ ನಡೆಯುವ ಶೋಷಣೆಯನ್ನು ತಿಳಿಸುತ್ತದೆ. ಹೆಣ್ಣು ಯಾವುದೇ ಸಮುದಾಯಕ್ಕೆ ಸೇರಿದ್ದರೂ ಅವಳಿಗೆ ಬಿಡುಗಡೆಯೆಂಬುದಾಗಲೀ ನೆಮ್ಮದಿಯಾಗಲೀ ಇಲ್ಲವೆಂಬುದು ತಿಳಿಯುತ್ತದೆ.

ಇದೇ ಕಾದಂಬರಿಯಲ್ಲಿ ಸುಬ್ರಾಯ ಅಡಿಗರ ಬಾಲ ವಿಧವೆಯಾಗಿದ್ದ ತಂಗಿ ಬೇರೆಯವರಿಗೆ ಬಸುರಾದಾಗ ಜಾತಿಯಿಂದ ಹೊರಹಾಕುತ್ತಾರೆ. "ಆದರೆ ಮನೆಯಲ್ಲಿ ಅವಳನ್ನು ಇಟ್ಟುಕೊಂಡರು. ಚಾವಡಿಯಲ್ಲಿ ಮಲಗುತ್ತಾಳೆ; ಚಾವಡಿಯಲ್ಲಿ ಊಟ ಮಾಡುತ್ತಾಳೆ; ಬಾಳೆಲೆ ಕೊಯ್ದು ತರುತ್ತಾಳೆ; ತಲೆ ಬೋಳಿಸಿಕೊಂಡೇ ಇದ್ದಾಳೆ" (ಅನಂತಮೂರ್ತಿ ಯು.ಆರ್. 'ಭಾರತೀಪುರ', ೯೨) 'ಮೇಲ್ಜಾತಿ'ಗೆ ಸೇರಿದ ಹೆಣ್ಣು ಕೂಡ ಅನುಭವಿಸುತ್ತಿರುವ ನೋವುಗಳನ್ನು ಮೇಲಿನ ಸಾಲುಗಳು ವೇದ್ಯವಾಗಿಸಿವೆ. 'ತಲೆ ಬೋಳಿಸಿಕೊಂಡು ಮನೆಯಿಂದ ಹೊರಗೆ ಚಾವಡಿಯಲ್ಲಿ ಮಲಗುವುದು ಮನಕಲಕುತ್ತದೆ. ಯಾವುದೇ ಸಮುದಾಯದಲ್ಲೂ ಹೆಣ್ಣಿನ ವಿಚಾರದಲ್ಲಿ ನಿಯಮಗಳು ಬಿಗಿಯಾಗಿರುವುದು ಕಂಡುಬರುತ್ತದೆ.

ತುಂಬಾ ಹಿಂದೆಯೇ ಸಾಕಷ್ಟು ಸಮಾಜ ಸುಧಾರಕರು ಹಿಂದೂ ಧರ್ಮದೊಳಗೆ ನಡೆಯುತ್ತಿರುವ ಇಂಥ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಹೋರಾಟ ಮಾಡಿದ್ದಾರೆ. ಆದರೂ ಕೂಡ 'ಬ್ರಾಹ್ಮಣ' ಸಮುದಾಯದ ವಿಧವೆಯರ ಬದುಕು ಸುಧಾರಿಸಿಲ್ಲ. ಆದರೆ 'ಕೆಳಜಾತಿ' ಹೆಣ್ಣುಮಕ್ಕಳ ಮನೆಗಳಲ್ಲಿ ಇಂತಹ ಕೌಟುಂಬಿಕ ಶೋಷಣೆಗಳು ಅಷ್ಟಾಗಿ ಕಂಡುಬರುವುದಿಲ್ಲ. ಆಕೆ ಕುಟುಂಬದ ಹೊರಗೆ ಹೆಚ್ಚಾಗಿ ಬೇರೆ ವರ್ಗದವರಿಂದ ಶೋಷಣೆಗೆ ಒಳಗಾಗುವುದು ಕಂಡು ಬರುತ್ತದೆ. ಒಟ್ಟಾರೆ ಹೆಣ್ಣು ಯಾವುದೇ ಸಮುದಾಯಕ್ಕೆ ಸೇರಿದ್ದರೂ ಅವಳು ಸುಖಕರವಾಗಿ, ನೆಮ್ಮದಿಯಾಗಿರುವುದು ಕಂಡು ಬರುವುದಿಲ್ಲ. ಅವಳು ಹೆಣ್ಣಾಗಿರುವುದೇ ಎಲ್ಲಾ ಶೋಷಣೆಗಳಿಗೆ ಮೂಲವಾಗಿದೆ. ಆದರೆ 'ಮೇಲ್ಜಾತಿ' ಹೆಣ್ಣಿನ ಮೇಲೆ ನಡೆಯುವ ಶೋಷಣೆ ಹಾಗೂ 'ಕೆಳಜಾತಿ' ಹೆಣ್ಣಿನ ಮೇಲೆ ನಡೆಯುವ ಶೋಷಣೆ ಒಂದೇ ತೆರನಾಗಿಲ್ಲ. ದಲಿತ ಮಹಿಳೆ ಜಾತಿಯ ಕಾರಣಕ್ಕೆ ಹೆಚ್ಚು ಲೈಂಗಿಕ ಶೋಷಣೆಗೆ ಗುರಿಯಾಗುತ್ತಿರುವುದು ಕಂಡುಬರುತ್ತದೆ.

ಶ್ರೀಪತಿರಾಯರು ತಮ್ಮ ಮಗಳು ಸಾವಿತ್ರಿ ಮದುವೆ ವಯಸ್ಸಿಗೆ ಬಂದಿದ್ದರೂ ಮದುವೆ ಮಾಡಿಲ್ಲ ಎಂಬ ಆರೋಪ ಅವರ ಹೆಂಡತಿ ಭಾಗ್ಯಮ್ಮಳದು. ಕಾರಣ ಬಡ ಕುಟುಂಬ, ಗಂಡಿನ ದುಡಿಮೆ ಸರಿಯಾಗಿಲ್ಲದ ಕುಟುಂಬ. ಶ್ರೀಪತಿರಾಯರ ಇದೇ ಸಂದರ್ಭವನ್ನು ಮಲೆಗಳಲ್ಲಿ

ಮದುಮಗಳು, ಚೋಮನ ದುಡಿ, ಸಂಸ್ಕಾರಗಳಲ್ಲೂ ಕಾಣಬಹುದು. ಬಡತನ ಎಂಬುದು ಸಾರ್ವತ್ರಿಕವಾದುದು. ಅದು ಕೆಲವು ಜಾತಿಗಳಿಗೆ ಸೀಮಿತವಾಗಿಲ್ಲ ಎಂಬುದು ತಿಳಿಯುತ್ತದೆ. ಹೆಣ್ಣು ಯಾವುದೇ ಜಾತಿಗೆ ಸೇರಿದ್ದರೂ ಸ್ವಾಭಿಮಾನದಿಂದ ದುಡಿದು ಬದುಕುವುದು, ಕುಟುಂಬದವರಿಗೂ ಆಸರೆಯಾಗಿರುವುದು ಕಂಡುಬರುತ್ತದೆ.

ಸಮಾಜದಲ್ಲಿ ಮೇಲ್ಜಾತಿ ಹೆಣ್ಣು ಎಲ್ಲಾ ರೀತಿಯಿಂದಲೂ ಸುಖವಾಗಿಲ್ಲ ಎಂಬ ಅಂಶಗಳನ್ನು ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ. ಆದರೆ ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೆ ಮೇಲ್ಜಾತಿಯ ಹೆಣ್ಣು ಕೌಟುಂಬಿಕವಾಗಿ ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ಶಿಕ್ಷಣದಿಂದಲೂ ವಂಚಿತಳಾಗಿದ್ದಾಳೆ. ಕೆಲವೊಂದು ಸಂಪ್ರದಾಯಗಳನ್ನು ಪಾಲಿಸಬೇಕಾಗಿದೆ. ಅಪರೂಪಕ್ಕೆ 'ಸೀರುಡಿಕೆ'ಯಂಥ ಪದ್ಧತಿಗೆ ಗುರಿಯಾಗುತ್ತಿರುವುದು ಕಂಡುಬರುತ್ತದೆ. ಆದರೆ ಬಹು ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶವೆಂದರೆ ಮೇಲ್ಜಾತಿಯ ಹೆಂಗಸರು ಎಲ್ಲೂ ಲೈಂಗಿಕವಾಗಿ ಶೋಷಣೆಗೊಳಗಾಗುವುದು ಕಂಡುಬರುವುದಿಲ್ಲ. ದಲಿತ ಹೆಣ್ಣು ಮಕ್ಕಳು ಹೆಚ್ಚಾಗಿ ಶೋಷಣೆಗೆ ಒಳಗಾಗುತ್ತಿರುವುದೇ ದೇಹದ ವಿಚಾರದಲ್ಲಿ. ಆದ್ದರಿಂದ 'ಮೇಲ್ಜಾತಿ' ಹೆಣ್ಣಿನ ಮೇಲೆ ನಡೆಯುತ್ತಿರುವ ಶೋಷಣೆಗಳಿಗಿಂತ 'ಕೆಳಜಾತಿ' ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಶೋಷಣೆಯ ನೆಲೆಗಳೇ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಮುಖ್ಯವಾಗುತ್ತವೆ. ಅಲ್ಲದೇ 'ಕೆಳಜಾತಿ' ಮಹಿಳೆಯು ಮೇಲ್ಜಾತಿ ಮಹಿಳೆಯರ ಶೋಷಣೆಯ ನೆಲೆಗಳಾದ ಕುಟುಂಬ ಹಾಗೂ ಶಿಕ್ಷಣದ ವಿಚಾರದಲ್ಲೂ ವಂಚಿತರಾಗುತ್ತಿದ್ದಾರೆ.

'ಮೇಲ್ಜಾತಿ' ಎಂದು ಕರೆಸಿಕೊಳ್ಳುವ ಹೆಣ್ಣು ಮಕ್ಕಳಿಗೆ ಕುಟುಂಬದ ಒಳಗಿನ ಶೋಷಣೆಯೇ ಅತ್ಯಧಿಕವಾಗಿರುತ್ತದೆ. ಏಕೆಂದರೆ ಇವರು ಹೊರಗೆ ಹೋಗಿ ದುಡಿದು ಹೊಟ್ಟೆ ಹೊರೆಯಬೇಕಾದ ಸಂದರ್ಭಗಳು ಕಡಿಮೆ. ಆದರೆ 'ಕೆಳಜಾತಿ'ಯ ಮಹಿಳೆ ಹೊರಗೆ ದುಡಿದರೆ ಮಾತ್ರ ಹೊಟ್ಟೆ ತುಂಬಿಸಿಕೊಳ್ಳುವ ಪರಿಸ್ಥಿತಿ ಇದೆ. ಆದ್ದರಿಂದ ಇವರು ದುಡಿಯುವ ಜಾಗಗಳಲ್ಲೇ ಹೆಚ್ಚಾಗಿ ಶೋಷಣೆಗೆ ಒಳಗಾಗುತ್ತಾರೆ. ಅಲ್ಲದೇ ಕುಟುಂಬದ ಒಳಗೂ ಶೋಷಣೆಗೆ ಗುರಿಯಾಗುತ್ತಾರೆ. ಒಟ್ಟಾರೆ ಕುಟುಂಬದ ಒಳಗೆ ಮತ್ತು ಹೊರಗೆ ಏಕ ಕಾಲದಲ್ಲಿ ಎರಡೂ ಸಂದರ್ಭಗಳಲ್ಲಿ ಹೆಚ್ಚು ಶೋಷಣೆಗೆ ಒಳಗಾಗುತ್ತಿರುವ 'ದಲಿತ' ಮಹಿಳೆಯನ್ನು ಕುರಿತ ಅಧ್ಯಯನ ಇವತ್ತಿನ ಜರೂರಾಗಿದೆ.

೨. ದಲಿತ ಮಹಿಳೆ : ಅಸ್ಪೃಶ್ಯತೆಯ ನೆಲೆ

'ವರ್ಣ' ವ್ಯವಸ್ಥೆ ಎಂದು ಕರೆಯಲ್ಪಡುವ ಪದ್ಧತಿಯ ಪ್ರಕಾರ ಅಂದಿನ ಸಮಾಜದಲ್ಲಿದ್ದಂತಹ ನಾಲ್ಕು ವರ್ಣಗಳಲ್ಲಿ

೧. ಬ್ರಾಹ್ಮಣ

೨. ಕ್ಷತ್ರಿಯ

೩. ವೈಶ್ಯ

೪. ಶೂದ್ರ

೫. ಪಂಚಮ ಅಥವಾ ಚಾಂಡಾಲರು

ಮೇಲಿನ ಐದನೇ ವರ್ಗೀಕರಣಕ್ಕೊಳಪಟ್ಟವರನ್ನು ಇಂದು 'ಅಸ್ಪೃಶ್ಯ', 'ದಲಿತ' ಎಂದು ಕರೆಯುವ ವಾಡಿಕೆಯೂ ಇದೆ. ಆದರೆ ಅಸ್ಪೃಶ್ಯತೆಯೆಂಬ ಅಮಾನವೀಯ ಪದ್ಧತಿಗೆ ಬಲಿಯಾಗುತ್ತಿರುವವರು 'ಹೊಲೆಯ' ಮತ್ತು 'ಮಾದಿಗ' ಜಾತಿಗಳವರು ಮಾತ್ರ. ಜಾತಿ ವ್ಯವಸ್ಥೆಯ ಕರಾಳ ಮುಖದ ಅನಾವರಣ ಪ್ರಾಚೀನ ಕಾಲದಲ್ಲಿತ್ತು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಒಬ್ಬ ಅಸ್ಪೃಶ್ಯನಾದವನು ಮುಂಜಾನೆ ಸಮಯದಲ್ಲಿ ಬೀದಿಗಳಲ್ಲಿ ನಡೆಯುವ ಹಾಗೆ ಇರಲಿಲ್ಲ. ಅವರು ನಡೆಯಲೆಂದೇ ಪ್ರತ್ಯೇಕವಾದ ಸಮಯ ನಿಗದಿಯಾಗಿತ್ತು. ಮಧ್ಯಾಹ್ನ ಹನ್ನೆರಡು ಗಂಟೆ ಸಮಯದಲ್ಲಿ ಮಾತ್ರ ಒಬ್ಬ 'ಚಾಂಡಾಲ'ನು ಬೀದಿಗಳಲ್ಲಿ ನಡೆಯಬೇಕಾಗಿತ್ತಂತೆ. ಏಕೆಂದರೆ ಹನ್ನೆರಡು ಗಂಟೆ ಸಮಯದಲ್ಲಿ 'ನೆರಳು' ಚಿಕ್ಕದಾಗಿರುವುದರಿಂದ ಬೀದಿಯಲ್ಲಿ ನಡೆಯುವ ಮೇಲ್ಜಾತಿಯವರ ಮೇಲೆ ಬೀಳುತ್ತಿರಲಿಲ್ಲವಂತೆ. ಅಸ್ಪೃಶ್ಯನ ನೆರಳು ಸೋಂಕಿದರೂ ಮೇಲ್ಜಾತಿಯವರಿಗೆ ಮೈಲಿಗೆಯಾಗುತ್ತಿತ್ತಂತೆ. ಚಾಂಡಾಲರು ತಮ್ಮ ಉಗುಳನ್ನು ಸಹ ಬೀದಿಗಳಲ್ಲಿ ಉಗಿಯುವಂತಿರಲಿಲ್ಲ. ಅದಕ್ಕಾಗಿ ತಮ್ಮ ಬಾಯಿಗಳಿಗೆ ಗಡಿಗೆಗಳನ್ನು ಕಟ್ಟಿಕೊಳ್ಳಬೇಕಾಗಿತ್ತು. ತಮಗೆ ಉಗುಳು ಬಂದಾಗ ಆ ಸಣ್ಣ ಗಡಿಗೆ ಅಥವಾ ಮಡಿಕೆಯಲ್ಲೇ ಉಗಿಯಬೇಕಾಗಿತ್ತಂತೆ. ಹಾಗೆಯೇ ದಲಿತರು ನಡೆದ ಹೆಜ್ಜೆ ಗುರುತುಗಳ ಮೇಲೆ ಮೇಲ್ಜಾತಿಯವರು ನಡೆಯುತ್ತಿರಲಿಲ್ಲವಂತೆ. ಅದಕ್ಕಾಗಿ ದಲಿತರು ತಾವು ಬೀದಿಗಳಲ್ಲಿ ನಡೆಯುವಾಗ ತಮ್ಮ ಸೊಂಟಗಳಿಗೆ ಉದ್ದದ ಪೊರಕೆಯನ್ನು ಕಟ್ಟಿಕೊಳ್ಳಬೇಕಾಗಿತ್ತಂತೆ. ತಾವು ನಡೆದಾಗ ಮೂಡಿದ ಹೆಜ್ಜೆ ಗುರುತುಗಳನ್ನು ತಾವೇ ಗುಡಿಸಿಕೊಂಡು ಹೋಗಬೇಕಾಗಿತ್ತು. ಏಕೆಂದರೆ ಒಬ್ಬ 'ಚಾಂಡಾಲ'ನೆಂದು ಕರೆಸಿಕೊಂಡವನ ಹೆಜ್ಜೆ ಗುರುತುಗಳ ಮೇಲೆ ಮೇಲ್ಜಾತಿಯವರು ನಡೆದರೆ ಮೈಲಿಗೆಯಾಗುತ್ತದೆಂಬ ಭಾವ. ವೇದಗಳನ್ನು ಕದ್ದು ಕೇಳಿದ್ದೇ

ಆದರೆ ಕಿವಿಗೆ ಕಾದ ಸೀಸವನ್ನು ಸುರಿಯಲಾಗುತ್ತಿತ್ತಂತೆ. ವೇದಗಳನ್ನು ಕದ್ದು ಓದಿದರೆ ನಾಲಿಗೆಯನ್ನು ಕತ್ತರಿಸಲಾಗುತ್ತಿಂತೆ.

ಇಂತಹ ವಿಚಾರಗಳನ್ನು ನಾವೆಲ್ಲಾ ಸಾಕಷ್ಟು ತಿಳಿದುಕೊಂಡಿದ್ದೇವೆ. ಪ್ರಾಚೀನ ಕಾಲದಲ್ಲಿದ್ದಂತಹ ಕ್ರೂರ ಜಾತಿಪದ್ಧತಿ ಇಂದು ಚಾಲ್ತಿಯಲ್ಲಿಲ್ಲದಿದ್ದರೂ ಒಟ್ಟಾರೆ ಜಾತಿಪದ್ಧತಿಯಂತೂ ಸಮಾಜದಿಂದ ಸಂಪೂರ್ಣವಾಗಿ ಅಳಿಸಿಹೋಗಿಲ್ಲ. ಇಂದಿನ ಸಮಾಜದಲ್ಲಿ ಜಾತಿಪದ್ಧತಿ ಬೇರೆ ಬೇರೆ ರೂಪಗಳನ್ನು ಪಡೆದುಕೊಂಡಿದೆ. ಇವತ್ತು ದೈಹಿಕ ಹಿಂಸೆಗಿಂತ ಮಾನಸಿಕ ಹಿಂಸೆ ರೂಪದಲ್ಲಿ ಕಾಣಿಸಿಕೊಳ್ಳುತ್ತಿದೆ.

ಇವತ್ತಿಗೂ ಭಾರತದಲ್ಲಿ ಅಸ್ಪೃಶ್ಯತೆ ಚಾಲ್ತಿಯಲ್ಲಿದೆ. ಇದು ನಗರಗಳಿಗಿಂತ ಹಳ್ಳಿಗಳಲ್ಲೇ ಹೆಚ್ಚು ಜೀವಂತವಾಗಿದೆ. 'ಕೆರೆ, ಕಟ್ಟೆ, ಬಾವಿ, ಕುಡಿಯುವ ನೀರು, ದೇವಾಲಯ ಪ್ರವೇಶ, ಮೆರವಣಿಗೆ, ಸಮಾರಂಭ ಇಂತಹ ಜಾಗಗಳಲ್ಲಿ ಇಂದಿಗೂ ಅಸ್ಪೃಶ್ಯತೆ ಜೀವಂತವಾಗಿದೆ. ದಲಿತ ಮಹಿಳೆ ಹೆಚ್ಚು ಅಸ್ಪೃಶ್ಯತೆಗೆ ಒಳಗಾಗುವುದು ಕೆರೆ, ಕಟ್ಟೆ, ಬಾವಿ, ಕುಡಿಯುವ ನೀರು, ಕೆಲಸ ಮಾಡುವ ಹೊಲಗದ್ದೆಗಳಲ್ಲಿ, ಅಸ್ಪೃಶ್ಯತೆ ವಿಚಾರ ಬಂದಾಗ ದಲಿತ ಪುರುಷರನ್ನು ಅಥವಾ ದಲಿತ ಜನಾಂಗವನ್ನು ಬಿಟ್ಟು ಕೇವಲ ದಲಿತ ಮಹಿಳೆಯನ್ನು ಮಾತ್ರ ಪರಿಗಣಿಸಲು ಸಾಧ್ಯವಿಲ್ಲ. ದಲಿತ ಮಹಿಳೆ ದಲಿತ ಜನಾಂಗದ ಮುಖ್ಯ ಭಾಗವಾಗಿದ್ದರೂ ಅವಳ ಸಂಬಂಧಗಳು ಅವಳ ಕುಟುಂಬದೊಂದಿಗೆ, ದಲಿತ ಸಮಾಜದೊಂದಿಗೆ ಬೆಸೆದುಕೊಂಡಿರುತ್ತವೆ. ಇಂತಹ ಸಂದರ್ಭದಲ್ಲಿ ದಲಿತ ಮಹಿಳೆಯನ್ನು ಮಾತ್ರ ಅಸ್ಪೃಶ್ಯತೆ ವಿಚಾರದಲ್ಲಿ ಪ್ರತ್ಯೇಕಿಸಿ ನೋಡುವುದು ಕಷ್ಟವಾಗುತ್ತದೆ. ಆದ್ದರಿಂದ ಅಸ್ಪೃಶ್ಯತೆಯನ್ನು ಕುರಿತ ಚರ್ಚೆಯ ಸಂದರ್ಭದಲ್ಲಿ ಒಟ್ಟಾರೆ ದಲಿತರ ಮೇಲೆ ನಡೆಯುತ್ತಿರುವ ಅಸ್ಪೃಶ್ಯತೆಯನ್ನು ಹೇಳುತ್ತಾ ಅದರ ಭಾಗವಾದ ದಲಿತ ಮಹಿಳೆ ಯಾವ ಯಾವ ಸ್ಥಳಗಳಲ್ಲಿ, ಯಾವ ಯಾವ ಸಂದರ್ಭಗಳಲ್ಲಿ ಯಾವ ಯಾವ ಕಾರಣಗಳಿಗೆ ಅಸ್ಪೃಶ್ಯತೆಯೆಂಬ ಶೋಷಣೆಗೆ ಒಳಗಾಗುತ್ತಿದ್ದಾಳೆ ಎಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

'ಅಸ್ಪೃಶ್ಯರು ಯಾರು'? ಅಸ್ಪೃಶ್ಯತೆ ಹೇಗೆ ಹುಟ್ಟಿಕೊಂಡಿತು? ಎಂಬ ಬಗ್ಗೆ ಇಂದಿಗೂ ಭಿನ್ನಾಭಿಪ್ರಾಯಗಳಿವೆ. ಆದರೆ ಬೇರೆ ದೇಶಗಳಿಗೆ ಹೋಲಿಸಿ ನೋಡಿದಲ್ಲಿ ವರ್ಗ ವ್ಯವಸ್ಥೆ ಮತ್ತು ವರ್ಣ ವ್ಯವಸ್ಥೆಗಿಂತ ಅಸ್ಪೃಶ್ಯತೆಯೇ ಭೀಕರವಾದುದೆನಿಸುತ್ತದೆ. ಏಕೆಂದರೆ ಹೊರ ದೇಶಗಳಲ್ಲಿರುವುದು ವರ್ಣಪದ್ಧತಿ ಮತ್ತು ವರ್ಗಪದ್ಧತಿ. ಅಮೇರಿಕಾದ ನೀಗ್ರೋ ಜನ ಬಿಳಿಯರಿಂದ ಸಾಕಷ್ಟು ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಅನುಭವಿಸಿದ್ದಾರೆ. ಕರಿಯರನ್ನು ಪ್ರಾಣಿಗಳಂತೆ ಮಾರುತ್ತಿದ್ದರು ಎಂಬುದನ್ನು ಕೇಳಿದ್ದೇವೆ. ಆದರೆ ಭಾರತದ ಮೂಲ

ನಿವಾಸಿಗಳನ್ನು ಮುಟ್ಟಲೂ ಅರ್ಹರಲ್ಲವೆಂದು ಊರಿನಿಂದ ಹೊರಗೆ ಬದುಕುವಂತೆ ಮಾಡಿದ್ದನ್ನು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ'. ಯಾಕೆಂದರೆ 'ಮೇಲ್ಜಾತಿಯವರು' ಎನಿಸಿಕೊಂಡವರು 'ಹೊಲಸು' ತಿನ್ನುವ ನಾಯಿಯನ್ನು ಕೂಡಾ ತಮ್ಮ ಮನೆಗೆ ಬಿಟ್ಟುಕೊಳ್ಳುತ್ತಾರೆ ಆದರೆ ತಮ್ಮದೇ ರೂಪದ ಮನುಷ್ಯರನ್ನು ಮನೆಗೆ ಸೇರಿಸಿಕೊಳ್ಳುವುದಿಲ್ಲ. ದಲಿತರನ್ನು ನಾಯಿಗಿಂತ ಕಡೆಯಾಗಿ ನೋಡುತ್ತಿದ್ದಾರೆ.

ಚಾತುರ್ವರ್ಣ ವ್ಯವಸ್ಥೆ ಹೊರಗಿರುವವರೇ ಚಂಡಾಲರು. "ಯಜುರ್ವೇದದಲ್ಲಿ 'ಚಂಡಾಲರ'ರ ಉಲ್ಲೇಖವಿದೆ. ಛಾಂದೋಗ್ಯೋಪನಿಷತ್ತಿನಲ್ಲಿ ಚಂಡಾಲರ ಸಂತತಿಯು ನಾಯಿ ಹಂದಿಗಳಂತೆ ತುಚ್ಛವಾದುದು ಎಂದಿದೆ. ಇವರು ತೀರ ನಿಕೃಷ್ಟರಾದ ಜನ.

ಮೂಲತಃ ಇವರು ಯಾರು, ಈ ಜಾತಿಯ ಹುಟ್ಟು ಹೇಗೆ, ಅಸ್ಪೃಶ್ಯತೆ ಹೇಗೆ ಪ್ರಾರಂಭವಾಯಿತು ಎನ್ನುವುದರ ಬಗ್ಗೆ ಏಕಾಭಿಪ್ರಾಯವಿಲ್ಲದಿದ್ದರೂ ಸಹ ಡಾ. ಬಿ.ಆರ್. ಅಂಬೇಡ್ಕರ್ ಅವರು. ಭಾರತಕ್ಕೆ ಹೊರಗಿನಿಂದ ಬಂದ ವಿದೇಶಿಯರು ದಮನ ಮಾಡಿದ ದೇಶೀಯ ಜನರೇ ಈಗಿನ ಅಸ್ಪೃಶ್ಯರೆಂದೂ, ಅವರನ್ನು ಗೆದ್ದವರು ತಮ್ಮ ಕಾವಲುಗಾರರನ್ನಾಗಿ ಮಾಡಿಕೊಂಡಿದ್ದರ ಪರಿಣಾಮವೇ ಅಸ್ಪೃಶ್ಯತೆಗೆ ಕಾರಣವಾಯಿತು ಎಂದು ಅಭಿಪ್ರಾಯ ಪಡುತ್ತಾರೆ. ಅಂದು ಅವರ ಮನೆಯ ಹೊರಗಿನ ಕಾವಲುಗಾರರಾಗಿದ್ದಂತಹ ಜನತೆಯೇ ನಂತರದಲ್ಲಿ ಅಸ್ಪೃಶ್ಯರಾಗಿ, ಊರ ಕಾವಲುಗಾರರಾಗಿ ಊರ ಹೊರಗೆ ಇರಬೇಕಾಗಿತ್ತು. ಆ ಕಾರಣ ಅವರನ್ನು 'ಅಂತ್ಯಜ' (ಊರ ಹೊರಗಿನವರು) ಎಂದು ಕರೆದರೆಂದೂ ಅವರು ವಾದಿಸುತ್ತಾರೆ. ಈ ವಾದಕ್ಕೆ ಪೂರಕವಾಗಿಯೇ ನಮ್ಮ ದೇಶದ ಚರಿತ್ರೆಕಾರರು ಬಹುಪಾಲು ಅಸ್ಪೃಶ್ಯರು ಭಾರತದ ಮೂಲನಿವಾಸಿಗಳೆಂಬುದಕ್ಕೆ ಒಪ್ಪಿಗೆ ನೀಡಿದ್ದಾರೆ. ಹೊರಗಿನಿಂದ ಬಂದ ಆರ್ಯರು ಈ ಕಾಡು ಜನರಂತಿದ್ದ ಮೂಲನಿವಾಸಿಗಳನ್ನು ತಿರಸ್ಕಾರದಿಂದ ಕಂಡಿರಬೇಕು. ಅವರ ಅನಾಗರಿಕ ವರ್ತನೆಯನ್ನು ನೋಡಿ ಅವರ ಜೊತೆ ಯಾವುದೇ ಸಂಪರ್ಕವನ್ನಿರಿಸಿಕೊಳ್ಳುವುದು ಮೈಲಿಗೆ ಉಂಟು ಮಾಡುತ್ತದೆ ಎಂದು ಭಾವಿಸಿರಬೇಕು. ಇದು ಬಹುಶಃ ಅಸ್ಪೃಶ್ಯತೆಗೆ ಕಾರಣವಾಗಿರಬೇಕು ಎಂಬುದು ಸಾಮಾನ್ಯವಾದ ಅಭಿಪ್ರಾಯವಾಗಿದೆ". (ಚಿನ್ನಸ್ವಾಮಿ ಸೋಸಲೆ 'ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ – ಪ್ರಶ್ನೆಗಳು', ೧೯)

'ಅಸ್ಪೃಶ್ಯತೆ'ಯೆಂಬುದು 'ಜಾತಿವ್ಯವಸ್ಥೆ' ಒಳಗಿರುವ ಒಂದು ಪ್ರಮುಖ ಭಾಗ. ಇಂದು ಸಮಾಜದಲ್ಲಿರುವ ಶೂದ್ರರೂ ಸಹ ಬ್ರಾಹ್ಮಣರನ್ನು ಅನುಕರಿಸುತ್ತಾ ತನಗಿಂತ ಕೆಳಗಿರುವ ದಲಿತರನ್ನು ಶೋಷಣೆ ಮಾಡುತ್ತಾರೆ. 'ಅಸ್ಪೃಶ್ಯತೆಯೆಂಬುದು ಮೇಲಿನಿಂದ', ಕೆಳಮುಖವಾಗಿ ಚಲಿಸುತ್ತದೆ. ಉದಾ:

ಬ್ರಾಹ್ಮಣ

↓

ವೈಶ್ಯ

↓

ಶೂದ್ರ

↓

ದಲಿತ

ಚಾತುರ್ವರ್ಣ ಕಲ್ಪನೆಯಿಂದ ಪರಿಗಣಿಸುವಾಗ ಮೇಲಿನ ಪಟ್ಟಿಯಲ್ಲಿ ಕ್ಷತ್ರಿಯರು ಬಿಟ್ಟು ಹೋಗಿದ್ದಾರೆ. ಈಗ ರಾಜಮನೆತನಗಳು ಆಳ್ವಿಕೆ ನಡೆಸದೇ ಪ್ರಜಾಪ್ರಭುತ್ವ ವ್ಯವಸ್ಥೆಯಿರುವುದರಿಂದ 'ಕ್ಷತ್ರಿಯರು' ಹೊರಗಿದ್ದಾರೆ. ಹಾಗೆಂದು ಅವರು 'ತಮಗಿಂತ ಕೆಳಗಿರುವವರನ್ನು ಶೋಷಿಸುವುದಿಲ್ಲ ಎಂದರ್ಥವಲ್ಲ. ಅವರೂ ತಮ್ಮ ಆಸು-ಪಾಸಿನ ದಲಿತರನ್ನು ಸಾಧ್ಯವಾದಷ್ಟು ಮಟ್ಟಿಗೆ ಶೋಷಿಸುವವರೇ ಆಗಿರುತ್ತಾರೆ. ಬ್ರಾಹ್ಮಣರು ತಮಗಿಂತ ಕೆಳಗಿರುವ ಕ್ಷತ್ರಿಯ, ವೈಶ್ಯ, ಶೂದ್ರ, ಪಂಚಮರೊಂದಿಗೆ ಅಸ್ಪೃಶ್ಯತೆಯನ್ನು ಆಚರಿಸಿದರೆ ವೈಶ್ಯರು ತಮಗಿಂತ ಕೆಳಗಿರುವ ಶೂದ್ರರೊಂದಿಗೆ ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ. ಶೂದ್ರರು ತಮಗಿಂತ ಕೆಳಗಿರುವ ಪಂಚಮರು ಅಥವಾ ದಲಿತರ ಮೇಲೆ ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ. ದಲಿತರು ಕೇವಲ ಶೂದ್ರರಿಂದ ಮಾತ್ರವಲ್ಲ ತಮಗಿಂತ ಮೇಲಿನ ಸ್ಥರದವರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣಗಳವರಿಂದಲೂ ನಿರಂತರ ಅಸ್ಪೃಶ್ಯತೆಗೆ ಒಳಗಾಗುತ್ತಾರೆ. ಒಮ್ಮೊಮ್ಮೆ ಜಾತಿಯ ಒಳಗೆ ಕೂಡಾ ಅಸ್ಪೃಶ್ಯತೆ ಆಚರಿಸುವುದುಂಟು. ಇಂತಹ ಅಸ್ಪೃಶ್ಯತೆ ಅಥವಾ ಮೈಲಿಗೆಯನ್ನು ಹುಟ್ಟು, ಋತುಸ್ರಾವ, ಗರ್ಭಧಾರಣೆ, ಸಾವು ಮುಂತಾದ ಸಂದರ್ಭಗಳಲ್ಲಿ ಆಚರಿಸಲಾಗುತ್ತಿದೆ. ಈ ಸಂದರ್ಭದ ಸೂತಕಗಳನ್ನು ಬ್ರಾಹ್ಮಣರಿಂದ ಆರಂಭಿಸಿ ಎಲ್ಲಾ ಜಾತಿಯವರೂ ಆಚರಿಸುವುದುಂಟು.

ಉದಾ: ಬ್ರಾಹ್ಮಣ ಸಮುದಾಯದಲ್ಲಿನ ಜನನದ ಸಂದರ್ಭದಲ್ಲಿನ ಸೂತಕದ ಆಚರಣೆಗಳು ದಿಗ್ಭ್ರಮೆಯನ್ನುಂಟು ಮಾಡುತ್ತವೆ. ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯಲ್ಲಿ ಬ್ರಾಹ್ಮಣ ಜಾತಿಯೊಳಗಿನ ಅಸ್ಪೃಶ್ಯತೆಗೆ ಸಾಕಷ್ಟು ಉದಾಹರಣೆಗಳಿವೆ. "ಹತ್ತು ದಿನವಿಡೀ ರತ್ನನ ಕೋಣೆಗೆ ಯಾರೂ ಹೋಗುವಂತಿಲ್ಲ. ರತ್ನನನ್ನು ಮುಟ್ಟುವಂತೆಯೂ ಇಲ್ಲ. ಗಾಳಿ ಬೆಳಕೂ ಕೂಡ, ರತ್ನನಾದರೂ ಹೊರಗೆ ಬರುವಂತಿದೆಯೇ? ಸ್ನಾನ, ಕೈ-ಕಾಲು ತೊಳೆಯುವುದಕ್ಕೆಲ್ಲ ಒಂದು 'ಅಮೆ ಹೊಂಡ' ಇದೆ. ಹೆರಿಗೆ ಕೋಣೆಯ ಹಿಂದೆಯೇ ಅದನ್ನು ನಿರ್ಮಿಸಿದ್ದಾರೆ. ಒಂದು ಹೊಂಡ ತೋಡಿ ಅದರ ಮೇಲೆ ಹಲಗೆಯನ್ನಿಟ್ಟಿದ್ದಾರೆ. ಸುತ್ತ ಮಡಲಿನ ಮರೆ

ಕಟ್ಟಿದ್ದಾರೆ. ಹೆತ್ತ ಕಸ ರಕ್ತ ಇತ್ಯಾದಿಗಳನ್ನೆಲ್ಲ ಬಾಚಿ ಆ ಅಮೆಹೊಂಡದಲ್ಲಿಯೇ ಹುಗಿದಿದ್ದಾರೆ. ಆ ಕೆಲಸವನ್ನೆಲ್ಲ ಅಪ್ಪಿ ಎಂಬಾಕೆ ಮಾಡುವವಳು". (ವೈದೇಹಿ : 'ಅಸ್ಪೃಶ್ಯರು', ೧೩) ಬ್ರಾಹ್ಮಣ ಸಮುದಾಯದಲ್ಲಿ ಬಾಣಂತಿಯನ್ನು ಮನೆಯಿಂದ ಹೊರಗೆ ಬಾಣಂತಿಗಾಗಿಯೇ ಹೆರಿಗೆ ಕೋಣೆಯನ್ನು ನಿರ್ಮಿಸಿದ್ದಾರೆ. ಹುಟ್ಟಿದ ಮಗುವನ್ನು ಮುಟ್ಟಲು ಮಕ್ಕಳಿಗೂ ಕೊಡುವುದಿಲ್ಲ. ಹೊಕ್ಕಳು ತೊಟ್ಟು ಬೀಳುವವರಿಗೆ ಮುಟ್ಟಬಾರದೆಂಬ ನಿಯಮ. ಬಾಣಂತಿ ಕೋಣೆಯೊಳಗೆ ಮಕ್ಕಳಿಗೆ ಪ್ರವೇಶವಿಲ್ಲ.

ಕಾಡುಗೊಲ್ಲ ಜನಾಂಗದಲ್ಲಿ ಬಾಣಂತಿಯನ್ನು ಹೆರಿಗೆಯ ಸಂದರ್ಭದಲ್ಲಿ ಒಂದು ತಿಂಗಳು ಮನೆಯಿಂದ ದೂರ ಗುಡಿಸಲಿನಲ್ಲಿಟ್ಟಿರುತ್ತಾರಂತೆ. ಅಲ್ಲದೆ ಬಾಣಂತಿಯು ಒಂದು ತಿಂಗಳವರೆಗೆ ಮುಂಜಾನೆ ತಣ್ಣೀರು ಸ್ನಾನ ಮಾಡಬೇಕೆಂಬ ನಿಯಮವಿದೆಯೆಂಬುದನ್ನು ತಿಳಿದಿದ್ದೇವೆ. ಇದೇ ಗೊಲ್ಲ ಸಮುದಾಯದಲ್ಲಿ ಹೆಣ್ಣುಮಕ್ಕಳು ಮುಟ್ಟಾದ ಸಂದರ್ಭದಲ್ಲಿ ಊರಿನಿಂದ ಹೊರಗೆ ಎರಡು-ಮೂರು ರೆಂಬೆಗಳನ್ನು ಬಳಸಿ ನಿರ್ಮಿಸಿದ ಗುಡಿಸಲಿನಲ್ಲಿ ಮೂರ್ನಾಲ್ಕು ದಿನಗಳನ್ನು ಕಳೆಯಬೇಕಿದ್ದ ಅಮಾನವೀಯ ಪದ್ಧತಿಯನ್ನು ಕುರಿತು ನಾವೆಲ್ಲರೂ ಪತ್ರಿಕೆಗಳಿಂದ, ಮಾಧ್ಯಮಗಳಿಂದ ತಿಳಿದಿದ್ದೇವೆ. ದುರದೃಷ್ಟವೆಂದರೆ ಕಾಲೇಜಿನಲ್ಲಿ ಓದುತ್ತಿದ್ದವರು, ಪದವಿಯನ್ನು ಮಾಡುತ್ತಿದ್ದವರು ಕೂಡ ಈ ಪದ್ಧತಿಯನ್ನು ಅನುಸರಿಸುತ್ತಿದ್ದುದು. ರಾತ್ರಿ-ಹಗಲು ಹೊರಗೆ ಚಳಿ, ಗಾಳಿ, ಬಿಸಿಲು, ಮಳೆಗಳಲ್ಲಿ ಹೊರಗೆ ಕಳೆಯುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತದ್ದು. ಈ ರೀತಿ ಹೊರಗೆ ಇದ್ದಾಗ ಹಾವು, ಚೇಳು, ಹುಳ-ಉಪ್ಪಟೆಗಳಿಂದ ಅಂತಹ ಹೆಣ್ಣುಮಕ್ಕಳಿಗೆ ರಕ್ಷಣೆ ಎಲ್ಲಿದೆ? ನಾವಿನ್ನು ಯಾವ ಕಾಲದಲ್ಲಿದ್ದೇವೆ? ಎನ್ನುವ ಅನುಮಾನಗಳು ಹುಟ್ಟುತ್ತವೆ. ಹೀಗೆ ಜನನ ಸಂದರ್ಭದಲ್ಲಿ ನಡೆಯುವ ಸೂತಕಗಳು 'ಕೆಳಜಾತಿ', 'ಮೇಲ್ಜಾತಿ' ಎನ್ನದೆ ಎಲ್ಲಾ ಜಾತಿಗಳ ಒಳಗೂ ನಡೆಯುತ್ತಿವೆ.

ಕೆಳಜಾತಿಗಳೊಳಗೆ ನಡೆಯುವ ಅಸ್ಪೃಶ್ಯತೆಯನ್ನು 'ಚೋಮನ ದುಡಿ' ಕಾದಂಬರಿಯಲ್ಲಿ ಕಾಣುತ್ತೇವೆ. ಕಾಫೀ ತೋಟದಲ್ಲಿ ಕೆಲಸ ಮಾಡುವಾಗ ಗುರುವ ತಮ್ಮ ಪಕ್ಕದ ಗುಡಿಸಲಿನ 'ಮಾರಿ'ಯ ಜೊತೆ ಪ್ರೀತಿಯನ್ನು ಬೆಳೆಸುತ್ತಾನೆ. ಈ ಮಾರಿ ಮೂಲತಃ 'ಮೇರಿ' ಎನ್ನುವ ಹೆಸರಿನವಳು. ಈ ವಿಚಾರ ಚನಿಯನಿಗೆ ಗೊತ್ತಾಗಿ "ನೀನು ಅವರ ಗುಡಿಸಲಿಗೆ ಹೋಗಬಾರದು ಎಂದು ಅಪ್ಪಣೆಯಿತ್ತ. ಗುರುವ ಮಾತನಾಡಲಿಲ್ಲ. ಹೋಗುವುದನ್ನು ಮಾತ್ರ ಬಿಡಲಿಲ್ಲ. ಅಣ್ಣನ ಸಿಟ್ಟು ಸಹಿಸದಾಯಿತು. 'ಏನು, ಮಾರಿಯನ್ನು ನೀನು ತಂದುಕೊಳ್ಳುತ್ತೀಯಾ?' ಎಂದು ಕೇಳಿದ, ಗುರುವ ದುಡುಕಿ 'ಅಹುದು, ನೀನೇನು ಮಾಡುತ್ತೀ?' ಎಂದ. ಚನಿಯ ತೀರ ನೊಂದುಕೊಂಡ. ಸಿಟ್ಟೇರುವ ಬದಲು, 'ಅವರ್ಯಾವ ಜಾತಿಯೆಂದು ಗೊತ್ತೇ? ನಮ್ಮವರಾದರೂ ಈಗ

ಇಗರ್ಜಿಯವರಾಗಿದ್ದಾರೆ. ಸುಮ್ಮನೆ ಅವಳ ಹುಚ್ಚನ್ನು ಕಟ್ಟಿಕೊಳ್ಳಬಾರದು. ಅಪ್ಪನಿಗೆ ಹೇಳಿ ಬೇರೆ ನಂಟಸ್ತಿಕೆ ಮಾಡಿಸುತ್ತೇನೆ." (ಶಿವರಾಮ ಕಾರಂತ 'ಚೋಮನ ದುಡಿ':೫೦) ಎಂದ. ಮಾರಿಯು ಹಿಂದೆ ತಮ್ಮದೇ ಜಾತಿಯಾಗಿದ್ದರೂ ಈಗ ಗುರುವ ಅವಳನ್ನು ಮದುವೆಯಾಗುವುದು ಚನಿಯನಿಗೆ ಸರಿಕಾಣುತ್ತಿಲ್ಲ. ಎಂಥದೇ ಜಾತಿಗೆ ಸೇರಿದ್ದರೂ ತನ್ನದೇ ಶ್ರೇಷ್ಠ 'ಜಾತಿ' ಎಂಬ ಅಭಿಮಾನವಿರುತ್ತದೆ. 'ಕೆಳಜಾತಿ'ಗಳಲ್ಲೇ ಹೆಚ್ಚು ಅಸ್ಪೃಶ್ಯತೆಯನ್ನು ಕಾಣಬಹುದು. ಹೊಲೆಯ ಮತ್ತು ಮಾದಿಗರ ನಡುವೆ ಸಾಕಷ್ಟು ಅಂತರಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಕರ್ನಾಟಕದ ಕೆಲವು ಭಾಗಗಳಲ್ಲಿ ಹೊಲೆಯರು ಮಾದಿಗರನ್ನು ಕೀಳಾಗಿ ಕಾಣುವುದುಂಟು. 'ಹೊಲೆಯರು' ಮತ್ತು 'ಮಾದಿಗರ' ನಡುವೆ ಮದುವೆ ಸಂಬಂಧಗಳು ಏರ್ಪಡುವುದೇ ಇಲ್ಲ. ತೀರಾ ಇಲ್ಲವೇ ಇಲ್ಲವೆನ್ನುಷ್ಟು ವಿರಳ. ಅಂತಹ ಒಂದೇ ಒಂದು ಉದಾಹರಣೆ ಇದುವರೆಗೂ ಗಮನಕ್ಕೆ ಬಂದಿಲ್ಲ. ಬಲಗೈ ಎಂದು ಕರೆಸಿಕೊಳ್ಳುವವರು ಎಡಗೈ ಎಂದು ಕರೆಸಿಕೊಳ್ಳುವವರನ್ನು ತಮ್ಮ ಮನೆಗಳಿಗೂ ಸೇರಿಸುವುದಿಲ್ಲ. ಈ ಎರಡು ಅಸ್ಪೃಶ್ಯ ಜಾತಿಗಳ ನಡುವೆ ಊಟೋಪಚಾರವೂ ನಡೆಯುವುದಿಲ್ಲ. ಹೀಗೆ ಅಸ್ಪೃಶ್ಯರಲ್ಲೇ ಸಾಕಷ್ಟು ಜಾತಿ ತಾರತಮ್ಯ, ಅಸಹಿಷ್ಣುತೆ, ಅಸೂಯೆ ಮುಂತಾದವನ್ನು ಕಾಣಬಹುದು. ಇಂತಹ ಜಾತಿಯೊಳಗಿನ ಅಸ್ಪೃಶ್ಯತೆಯಿಂದಾಗಿಯೇ ದಲಿತರು ಇನ್ನೂ ಉದ್ಧಾರವಾಗಲು ಸಾಧ್ಯವಾಗುತ್ತಿಲ್ಲ. ದಲಿತರಲ್ಲಿ ಹೀಗೆ ಒಗ್ಗಟ್ಟಿನ ಕೊರತೆಯಿದ್ದಾಗ ಮೂರನೆಯವರು ಇದನ್ನು ಲಾಭವಾಗಿ ಉಪಯೋಗಿಸಿಕೊಳ್ಳುತ್ತಾರೆ. ಎಲ್ಲಿಯವರೆಗೂ ದಲಿತರು ಒಂದಾಗುವುದಿಲ್ಲವೋ ಅಲ್ಲಿಯವರೆಗೂ ಅವರನ್ನು ತುಳಿಯುವವರಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದಲೇ ಅಂಬೇಡ್ಕರ್ ಅವರ ಶಿಕ್ಷಣ, ಸಂಘಟನೆ, ಹೋರಾಟ ಈ ಮೂರು ಅಂಶಗಳು ಎಂದಿಗೂ ಪ್ರಸ್ತುತವೆನಿಸುತ್ತವೆ.

ಭಾರತೀಪುರ ಕಾದಂಬರಿಯಲ್ಲಿ ದ್ವಂದ್ವ ರೀತಿಯ ಅಸ್ಪೃಶ್ಯತೆಯನ್ನು ಕಾಣಬಹುದು. ಜಗನ್ನಾಥ ಹೊಲೆಯರನ್ನೆಲ್ಲ ಮಂಜುನಾಥನ ಗುಡಿಗೆ ಪ್ರವೇಶ ಮಾಡಿಸುವ ಕ್ರಾಂತಿಕಾರನಂತೆ ಕನಸು ಕಾಣುತ್ತಿದ್ದರೆ ಚಿಕ್ಕಮ್ಮ ಮನೆಯಲ್ಲಿ ಕೊಟ್ಟಿಗೆ ಗುಡಿಸಲು ಬರುವ ಹೊಲತಿಯೊಂದಿಗೆ ಮೈಲಿಗೆಯಲ್ಲಿದ್ದಾಗ ಮಾತ್ರ ಮಾತುಕತೆ ನಡೆಸುತ್ತಿರುತ್ತಾರೆ. ಹೊರಗಿನ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಪಣತೊಟ್ಟಿರುವ ಜಗನ್ನಾಥನನು ಮನೆಯೊಳಗಿನ ಅಸ್ಪೃಶ್ಯತೆಯನ್ನು ಸರಿಪಡಿಸಲು ವಿಫಲನಾಗುತ್ತಿದ್ದಾನೆ. ಬದಲಾವಣೆಯೆನ್ನುವುದು ಒಳಗಿನಿಂದಲೇ ಆಗುವಂಥದ್ದು. ಅದು ಮೊದಲು ತನ್ನ ಮನೆಯಿಂದಲೇ ಆರಂಭವಾಗಬೇಕು. ಮೇಲ್ಜಾತಿಯವರು ಹೊಲೆಯರಿಗಿರುವ ಹೆಸರುಗಳನ್ನು ಸಂಬೋಧಿಸುವುದು ಕೂಡಾ ಮೈಲಿಗೆಯೆಂದು ಭಾವಿಸುತ್ತಾರೆ. ಜಗನ್ನಾಥನ ಚಿಕ್ಕಮ್ಮ ಹೊಲತಿಯನ್ನು ಏಕವಚನದಿಂದಲೇ ಮಾತನಾಡಿಸುವುದು

"ಎಷ್ಟು ಕುರ್ದೆಗಳೇ ನಿಂಗೆ ಎಂದೋ ಅವಕ್ಕೆ ಹಾಸಕ್ಕೆ ಹೊದೆಯೋಕ್ಕೆ ಬೇಕಾದಷ್ಟು ಇರೋವಾಗ ದೇವಸ್ಥಾನದೊಳಗೆ ಹೋಗಿ ಅವಕ್ಕೇನು ಕಡೀಬೇಕಾಗಿದೆ ಹೇಳಿ" (ಅನಂತಮೂರ್ತಿ ಯು.ಆರ್., 'ಭಾರತೀಪುರ', ೯೯.) ಎಂಬಂಥ ಮಾತುಗಳಲ್ಲಿ ಹೊಲತಿಯರನ್ನು 'ಅವಕ್ಕೆ' ಎಂದು ಪ್ರಾಣಿಗಳಂತೆ ಕರೆಯುತ್ತಿದ್ದಾರೆ. ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯಲ್ಲಿ ಇವಕ್ಕೆ ಸಾಕಷ್ಟು ನಿದರ್ಶನಗಳಿವೆ. ಮಂಗಳೂರಿನ ಭಾಗದಲ್ಲಿ ಹೊಲೆಯರಿಗೆ 'ಕೂಸ' ಎಂದು ಕರೆಯುವ ರೂಢಿಯಂತೆ, ಬ್ರಾಹ್ಮಣರ ಹೆಂಗಸರು ತಮ್ಮ ಮನೆಗೆ ಹುಲ್ಲು ತಂದು ಹಾಕುವ ಹೊಲತಿಯನ್ನು ಅವಳ ಜಾತಿಯೊಂದಿಗೆ ಸೇರಿಸಿ 'ಕೂಸ' 'ಕೂಸಾಳು' ಎಂದೇ ಕರೆಯುತ್ತಾರೆ. ಕೆಳಜಾತಿಯ ಹೆಣ್ಣುಮಕ್ಕಳಿಗೆ ಇರುವ ಹೆಸರುಗಳ ಪ್ರಸ್ತಾಪ ಕೂಡಾ ಕಂಡು ಬರುವುದಿಲ್ಲ. 'ಕೊರಚ' ಹೆಣ್ಣು ಮಗಳನ್ನು 'ಕೊರಾತಿ' ಎಂದು ಕರೆಯುವುದು ಕಂಡು ಬರುತ್ತದೆ. ದಲಿತ ಹೆಣ್ಣು ಮಕ್ಕಳಿಗಿರುವ ಹೆಸರಿನಿಂದ ಅವರನ್ನು ಗುರುತಿಸುವ ಬದಲು ಅವರ ಜಾತಿಯ ಆಧಾರದಿಂದಲೇ ಗುರುತಿಸುವುದು ಕಂಡು ಬರುತ್ತದೆ.

ಆದರೆ ಕೆಳಜಾತಿಯವರೆಂದು ಕರೆಸಿಕೊಳ್ಳುತ್ತಿರುವವರು 'ಮೇಲ್ಜಾತಿ'ಯವರನ್ನು ಬಹುವಚನದಿಂದಲೇ ಕರೆಯುತ್ತಾರೆ. ಆದರೆ ಬ್ರಾಹ್ಮಣ ಅಥವಾ ಮೇಲ್ಜಾತಿಗೆ ಸೇರಿದ ಮಕ್ಕಳು ಸಹ ಕೆಳಜಾತಿಯವರನ್ನು ಜಾತಿಸೂಚಕವಾದ ಹೆಸರುಗಳು ಮತ್ತು ಏಕವಚನದಿಂದಲೇ ಕರೆಯುವುದು. 'ಕೊರಚ' ಹೆಂಗಸನ್ನು ಬ್ರಾಹ್ಮಣ ಜಾತಿಯ ಚಿಕ್ಕ ಹುಡುಗ ಪುಟ್ಟ 'ನರಪಟೆ' ಎಂತಲೇ ಕರೆಯುತ್ತಾನೆ. ಆದರೆ ಕೊರಚರ ಹೆಂಗಸು ಹೌದು 'ಅಯ್ಯ', ಹೌದು 'ಚಣ್ಣಮ್ಮ' ಎಂದು ಚಿಕ್ಕ ಮಕ್ಕಳನ್ನೂ ಬಹುವಚನದಿಂದಲೇ ಕರೆಯುವುದು. ಚಿಕ್ಕವನಾದ ಪುಟ್ಟ ಬಾಯಲ್ಲಿ ಬೆರಳನ್ನು ಊಜುತ್ತಲೇ ಕೆಳಜಾತಿಯ ಮಂಜಣ್ಣನನ್ನು "ಯೇಯ್ ಮಂಜ, ಬಾಮಿಯಲ್ಲಿ ನನ್ನದೊಂದು ಗೋಲಿ ಬಿದ್ದಿತ್ತು. ಉಂಟಾ ಹುಡುಕು ಕಾಂಬ' ಎಂದಾಗ ಹೌದ ಸಣ್ಣಯ್ಯ, ಹುಡುಕುತ್ತೇನೆ ತಡೆಯಿರಿ" (ವೈದೇಹಿ : 'ಅಸ್ಪೃಶ್ಯರು', ೩೭) ಎಂದು ಬಹುವಚನದಿಂದಲೇ ಮಾತನಾಡುತ್ತಾನೆ. ಕೆಳಜಾತಿಯವರು ವಯಸ್ಸಿನಿಂದ ಎಷ್ಟೇ ಹಿರಿಯರಾಗಿದ್ದರೂ ಕೂಡಾ ಮೇಲ್ಜಾತಿಯ ಮಕ್ಕಳೂ ಕೂಡಾ ಹೆಸರು ಹಿಡಿದೇ ಕರೆಯುವುದು ಶತಮಾನಗಳಿಂದಲೂ ರೂಢಿಗೆ ಬಂದಿದೆ.

ಇದನ್ನು ಹಿಂದಿನಿಂದಲೂ ಸಮಾಜ ಪಾಲಿಸಿಕೊಂಡು ಬಂದಿದೆ. ಮೇಲ್ವರ್ಗದವರ ಮನೆ, ಹೊಲ–ಗದ್ದೆಗಳಲ್ಲಿ ದುಡಿಯುವ ದಲಿತರನ್ನು, ದಲಿತ ಹೆಣ್ಣುಮಕ್ಕಳನ್ನು ಇವರು ಏಕವಚನದಿಂದ ಹೆಸರುಗಳನ್ನು ಮೊಟಕುಗೊಳಿಸಿ ಕರೆಯುವುದು ಸಾಮಾನ್ಯವಾಗಿ ಕಂಡು ಬರುತ್ತದೆ. "ಮಾರಪ್ಪನ ಹೆಸರು ಮೇಲ್ಜಾತಿ ಎಂದು ಕರೆದುಕೊಂಡವರಿಂದ ಕೇವಲ 'ಮಾರ'

ಎಂದಾದರೆ ಈರಪ್ಪನನ್ನು 'ಈರ' ಗಿರಿಯಪ್ಪ 'ಗಿರಿಯ' ನಂಜುಂಡಪ್ಪ 'ನಂಜುಂಡ', ಸಿದ್ಧಯ್ಯ 'ಸಿದ್ಧ', ಮಾದಯ್ಯ 'ಮಾದ' ಇತ್ಯಾದಿ. ಮಹಿಳೆಯರ ಹೆಸರುಗಳು ಮಾರಮ್ಮ 'ಮಾರಿ', ಕೆಂಚಮ್ಮ 'ಕೆಂಚಿ', ಮಾದಮ್ಮ 'ಮಾದಿ', ಹೀಗೆ ಹೆಸರುಗಳನ್ನು ಪ್ರಜ್ಞಾಪೂರ್ವಕವಾಗಿ ತಿರುಚಿ ಹೇಳುವುದು ಸರ್ವೇಸಾಮಾನ್ಯವಾಗಿದೆ. ಮುಖ್ಯವಾದ ವಿಷಯವೆಂದರೆ ಈ ಹೆಸರುಗಳ ಶೋಷಣೆ ಎಷ್ಟಾಗಿದೆಯೆಂದರೆ ದಲಿತ ಜನರೂ ಸಹ ತಮಗರಿವಿಲ್ಲದೆ ಈ ಅವಹೇಳನ ಹೆಸರುಗಳಲ್ಲಿಯೇ ತಮ್ಮನ್ನು ತಾವು ಕರೆದುಕೊಳ್ಳುತ್ತಾರೆ. ಸವರ್ಣೀಯರು ದಲಿತ ಹೆಂಗಸರನ್ನು ಕರೆಯುವಾಗ 'ಅಮ್ಮಿ' ಪದವನ್ನು ಹೆಚ್ಚಾಗಿ ಬಳಸುತ್ತಾರೆ. 'ಮಾದಿ ಬಾಮ್ಮಿ' ಎಂದು ಸಂಬೋಧನ ಸೂಚಕ ಪದಗಳು ಸರ್ವೇ ಸಾಮಾನ್ಯವಾಗಿರುತ್ತವೆ. ಸಾಮಾನ್ಯವಾಗಿ ಈ 'ಅಮ್ಮಿ' ಎನ್ನುವ ಸಲಿಗೆಯ ಪದವನ್ನು ಹೆಂಡತಿಗೆ ಗಂಡ ಮಾತ್ರ ಕರೆಯುವುದಾಗಿದೆ". (ಚಿನ್ನಸ್ವಾಮಿ ಸೋಸಲೆ : 'ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ – ಪ್ರಶ್ನೆಗಳು', ೨೦) ಸಾಮಾನ್ಯವಾಗಿ ಕೆಳಜಾತಿಯವರು ಸವರ್ಣೀಯರ ಹೊಲಗಳಲ್ಲಿ ಏನಾದರೂ ತಪ್ಪು ಮಾಡಿ ಸಿಕ್ಕಿಹಾಕಿಕೊಂಡಾಗ ಬಯ್ಯಲೆಂದೇ ಕೆಲವು ಹೀನ ಪದಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲಿ ಲಚ್ಚಿ ಕುಲಕರ್ಣಿಯವರ ಹೊಲದ ಕುಂಬಳಕಾಯಿಯನ್ನು ತೆಗೆದುಕೊಂಡು ಹೋಗುವಾಗ ಕುಲಕರ್ಣಿ ಆಡುವ ಮಾತುಗಳು ಸವರ್ಣೀಯರ ನಿಕೃಷ್ಟ ಮನಃಸ್ಥಿತಿಗೆ ಹಿಡಿದ ಕನ್ನಡಿಯಂತಿವೆ.

"ಏನೇ ಲಚ್ಚಿ.. ಯಕಾಡಿ ಹೊಂಟೀದಿ?'

'ಯಕಾಡಿ ಇಲ್ರಿ ಕುಲಕಣ್ಣೀರೇ..'

'ಅರೆ ಈಟ್ಯಾಕ ಗಾಬರಿ ಆಗ್ತೇ..'

'ಕುಲಕಣ್ಣೀರೇ..ನಿಮ್ ಕುಂಬಳಕಾಯಿ ನನಗ ಬ್ಯಾಡ್ರಿಯಪ್ಪಾ...

ಈಕಾ ತಗೋರಿ, ನಾ ರಾತರಿ ನಿಂಬಲ್ಲಿ ಬರಂಗಿಲ್ಲಾ..'

'ಎ ಭೋಸುಡಿ ಈಟು ಸೊಕ್ಕಾ ನಿನಗ?'

'ನಿನ್ನವ್ವನ ಹಲಕಟ್ ರಂಡೀ..ಈಟು ಸೊಕ್ಕಾ ನಿನಗ.."

(ಗೀತಾ ನಾಗಭೂಷಣ : 'ಹಸಿಮಾಂಸ ಮತ್ತು ಹದ್ದುಗಳು', ೪೮, ೪೯.)

ಎಂಬಂತಹ ಮಾತುಗಳಲ್ಲಿ ಸವರ್ಣೀಯರು ದಲಿತ ಹೆಣ್ಣುಮಗಳನ್ನು ನಡೆಸಿಕೊಳ್ಳುವ ಮತ್ತು ಸಂಬೋಧಿಸುವ ರೀತಿಯನ್ನು ಕಾಣಬಹುದು. ಸಮಾಜದಲ್ಲಿನ ಇಂತಹ ವಾಸ್ತವ ಚಿತ್ರಣಗಳೇ

ಸಾಹಿತ್ಯ ಕೃತಿಗಳಿಗೆ ಪ್ರೇರಣೆಯಾಗಿವೆ. ಆದ್ದರಿಂದ ಸಮಾಜವನ್ನು ಹೊರತುಪಡಿಸಿ ಸಾಹಿತ್ಯವನ್ನು ಮಾತ್ರ ಪರಿಗಣಿಸಲು ಸಾಧ್ಯವಿಲ್ಲ.

ಒಂದೇ ಜಾತಿಯೊಳಗೆ ಅಸ್ಪೃಶ್ಯತೆ ಆಚರಣೆ ಇರುವುದು ಉಂಟು. ಗಮನಕ್ಕೆ ಬರದೆ ಇರುವ ಇವು ಬೆರಗನ್ನುಂಟು ಮಾಡಿಸುತ್ತವೆ. ಜಾತಿಯೊಳಗಿನ ಅಸ್ಪೃಶ್ಯತೆಯೆಂಬುದು ಸಮಾಜದ ಎಲ್ಲಾ ಜಾತಿಗಳಲ್ಲೂ ಕಂಡು ಬರುತ್ತದೆ. "ಮಾತನಾಡುತ್ತ, ಆಡುತ್ತಾ ಆ ಮಾರಿಯಮ್ಮ ಕಿರಿಸ್ತಾನ ಮೇರಿಯಮ್ಮನೆಂಬುದು ತಿಳಿದಾಗ ಅವನ ಎದೆಯೇ ಬಿರಿಯಿತು. 'ಹಿರಿಯರು ಹಿಡಿದು ಬಂದ ರೀತಿ, ರಿವಾಜುಗಳನ್ನು ಬಿಟ್ಟು, ಒಬ್ಬ ಹುಡುಗಿಗಾಗಿ ಅವನು ಜಾತಿ ಬಿಡುವನಾದರೆ ಅವನ ಮೋರೆ ನೋಡುವುದಿಲ್ಲ'ವೆಂದು ಶಪಥ ಮಾಡಿದ. ಬೆಳ್ಳಿಯಲ್ಲಿ ಅಳುವಿನ ಪ್ರಳಯವೇ ಉಂಟಾಯಿತು. ತನ್ನ ಮುದ್ದು ಅಣ್ಣ ಜಾತಿ ಬಿಟ್ಟು, ಬೇರೆ ಹುಡುಗಿಯನ್ನು ಮದುವೆಯಾಗಿ ತನ್ನ ಕುಟುಂಬದ ನೆರಳನ್ನು ಮೆಟ್ಟುವಂತಿಲ್ಲವೆಂಬುದು ಅವಳಿಗೆ ಹೊರಲಾರದ ಹೊರೆಯಾಯಿತು. ಇದು ಇಷ್ಟಾಗುವಂತಿದ್ದರೆ, ನೀನು ಮೊದಲೇ ಊರಿಗೆ ಆ ಸುದ್ಧಿಯನ್ನು ತಿಳಿಸಬಾರದಿತ್ತೇ?" (ಶಿವರಾಮ ಕಾರಂತ : 'ಚೋಮನ ದುಡಿ', ೧೦೧) ಎಂದು ಅಣ್ಣನನ್ನು ಬೈದಳು.

ಚೋಮನಿಗಾದ ಆಘಾತ, ಬೆಳ್ಳಿಗಾದ ನೋವು ಇವುಗಳು ದಲಿತರಲ್ಲೂ ತಮ್ಮ ಜಾತಿಗಳೊಳಗಿರುವ ಅಸ್ಪೃಶ್ಯತೆಯ ಪ್ರಜ್ಞೆಯನ್ನು ಎತ್ತಿ ತೋರಿಸುತ್ತದೆ. ಇದು ಸಮಾಜದಲ್ಲಿನ ಯಾವುದೇ ಜಾತಿಯನ್ನು ಬಿಡದೆ ಆವರಿಸಿಕೊಂಡಿರುವ 'ಜಾತಿ'ಯ ಭೂತವಾಗಿದೆ. ಈ ಅಸ್ಪೃಶ್ಯತೆಗೆ ಮೇಲು-ಕೀಳುಗಳ ಬೇಧ-ಭಾವವೇ ಇಲ್ಲ. ಸಾಮೂಹಿಕವಾಗಿ ಎಲ್ಲ ಸಮುದಾಯಗಳಲ್ಲೂ ಈ ಅಸ್ಪೃಶ್ಯತೆ ಕಂಡುಬರುತ್ತದೆ. ಇದೇ ಅಸ್ಪೃಶ್ಯತೆಯೇ ಚೋಮನ ಮಗ ನೀಲನ ಸಾವಿಗೂ ಕಾರಣವಾಗುತ್ತದೆ. ನೀರಿನಲ್ಲಿ ಮುಳುಗಿ ಸಾಯುತ್ತಿದ್ದರೂ ಯಾರೂ ಅವನು ಹೊಲೆಯನೆಂಬ ಕಾರಣಕ್ಕೆ ನೀಲನನ್ನು ನೀರಿನಿಂದ ಎತ್ತಲು ಮುಂದಾಗುವುದಿಲ್ಲ, ಪ್ರಯತ್ನಪಡುವುದರೊಳಗೆ 'ನೀಲ' ಸತ್ತೇ ಹೋಗಿರುತ್ತಾನೆ. ಒಬ್ಬ ವ್ಯಕ್ತಿಯ ಜೀವಕ್ಕಿಂತ 'ಜಾತಿ'ಗೆ ಅಸ್ಪೃಶ್ಯತೆಗೆ ಹೆಚ್ಚು ಬೆಲೆಯಿದೆ ಎಂಬುದು ಈ ಪ್ರಕರಣದಿಂದ ಸಾಬೀತಾಗುತ್ತದೆ.

ತಾನು ಹೊಲೆಯನಾದುದೇ ಬೇಸಾಯ ಮಾಡಲು ಸಾಧ್ಯವಾಗದಿದ್ದಕ್ಕೆ ಕಾರಣ ಎಂದು ಯೋಚಿಸಿದ ಚೋಮ ಕ್ರಿಶ್ಚಿಯನ್ ಜಾತಿಗೆ ಮತಾಂತರ ಹೊಂದಲು ಮುಂದಾಗುತ್ತಾನೆ. ಏಕೆಂದರೆ ಕ್ರಿಶ್ಚಿಯನ್ ಜಾತಿಗೆ ಸೇರಿದ ಗುರುವ ಬೇಸಾಯಗಾರನಾಗುತ್ತಾನೆ. ಚೋಮನೂ ಸಹ ಕ್ರಿಶ್ಚಿಯನ್ ದೇವರೇ ತನ್ನ ದೇವರೆಂದು ಗುರುವನನ್ನು ಕರೆದುಕೊಂಡು ಬರಲು ಹೊರಡುತ್ತಾನೆ. ಆದರೆ ದಾರಿಯಲ್ಲಿ ಪಂಜುರ್ಲಿ ಗುಡಿ ಸಿಗುತ್ತದೆ. ಆ ಹಾದಿಯಾಗಿ ಹೋಗುವಾಗಲೆಲ್ಲ ಆತ ನಿಂತು, ಅಡ್ಡಬಿದ್ದು ನಮಸ್ಕರಿಸಿ, ಮುಂದೆ ಸರಿಯುವುದು ರೂಢಿ. ಅವನಿಗೂ ಮೊದಲು ಹಾದಿ

ತೋರಿಸುವವರಂತೆ ಓಡುವ ನಾಯಿ ಸಹ ಪಂಜುರ್ಲಿಯ ಗುಡಿ ಬಂದೊಡನೆಯೇ ನಿಂತು ಬಿಡುತ್ತಿತ್ತು. ಚೋಮ ಬಂದು ಅಡ್ಡಬಿದ್ದು, ಎದ್ದು ನಿಂತ ಮೇಲೆಯೇ ಅದು ಮುಂದುವರಿದು ಹೋಗಬೇಕು, ಈ ದಿನವೂ ಗುಡಿ ಬಂದೊಡನೆ ಬಾಡು ನಾಯಿ ನಿಂತಿತ್ತು. ಚೋಮನೂ ತಟಸ್ಥನಾಗಿ ಮೊಣಕಾಲುಗಳನ್ನು ಕೇವಲ ಅಭ್ಯಾಸ ಬಲದಿಂದಲೇ ಊರಿದ. ಎದೆ ಜುಮ್ಮೆಂದಿತು. ತಾನು ಪಾದ್ರಿಮತವನ್ನು ಸೇರಲಿರುವವನು, ಇನ್ನು ಪಂಜುರ್ಲಿಗೆ ಡೊಗ್ಗಾಲು ಹಾಕುವುದೇ ಎಂದು ಅನಿಸಿತು! ಕಾಲನ್ನು ನೀಡಲು ನೋಡಿದ. ಆಗಲಿಲ್ಲ ಪಂಜುರ್ಲಿ ಭೂತ ತನ್ನ ಎದುರಿಗೆ ನಿಂತಂತೆ ಕಾಣಿಸಿತು.

"ಚೋಮ, ಮೀಸೆ ಹಣ್ಣಾಗುವ ತನಕ ನನ್ನನ್ನು ನಂಬಿ ಬಂದು, ಈಗ ಸಾಯುವ ಮೂರು ದಿನಕ್ಕೆ ಮುಂಚೆ, ನನ್ನನ್ನು ಬಿಟ್ಟು ಪಾದ್ರಿಯ ಹಿಂದೆ ಓಡುತ್ತೀಯೋ? ಎಂದು ಕೇಳಿದಂತೆ ಅನಿಸಿತು. ಅವನ ಮೈಯಲ್ಲಿ ರೋಮಾಂಚನವಾಯಿತು. ತಲೆಮಾರುಗಳಿಂದ ನಂಬಿ ಬಂದಿರುವ ದೇವರನ್ನು ಮರೆತು, ತಾನಿಂಥ ಉದ್ಧಟ ಕೆಲಸವನ್ನು ಮಾಡುವುದು ಸರಿಯಲ್ಲವೆನಿಸಿತು. ಪಾದ್ರಿ ಮತದವರು ಸಾಯುವುದಿಲ್ಲವೆ? ಕಷ್ಟ, ಸುಖ ಒಂದಲ್ಲ ಒಂದು ರೀತಿಯಿಂದ ಕ್ರಿಸ್ತೀಯರಿಗೂ ತಪ್ಪಿದ್ದುಂಟೇ?" (ಶಿವರಾಮ ಕಾರಂತ : 'ಚೋಮನ ದುಡಿ', ೧೦೧) ತನ್ನ ಜಾತಿಯ ಅಭಿಮಾನ, ದೇವರ ಮೇಲಿನ ಭಯ. ಇವೆರಡರ ಕಾರಣದಿಂದ ಚೋಮ ಜಾತಿಯನ್ನು, ಧರ್ಮವನ್ನು ಮೀರಲು ಸಾಧ್ಯವಾಗುವುದಿಲ್ಲ. 'ಹೊಲೆಯ'ರಾದವರು ಕ್ರಿಸ್ತಿಯನ್ನರನ್ನು ಎಷ್ಟು ಕೀಳಾಗಿ ಕಾಣುತ್ತಾರೆ, ಮತ್ತು ಆ ಧರ್ಮವನ್ನು ಹೇಗೆ ತುಚ್ಚೀಕರಿಸಿ ಬದುಕುತ್ತಾರೆ ಎಂಬುದಕ್ಕೆ ಚೋಮ ನಿದರ್ಶನವೆಂಬಂತೆ ಇದ್ದಾನೆ. ಜಾತಿಯೊಳಗಿನ ಅಸ್ಪೃಶ್ಯತೆ ಮತ್ತು ತಮ್ಮ ಜಾತಿಯೇ ಶ್ರೇಷ್ಠ ಎಂಬ ಮೇಲರಿಮೆ ಪ್ರತಿಯೊಬ್ಬ ಜಾತಿಯಸ್ತನಲ್ಲೂ ಇರುವುದನ್ನು ಇಂತಹ ಸಾಲುಗಳು ಪುಷ್ಟೀಕರಿಸುತ್ತವೆ.

'ಬ್ರಾಹ್ಮಣ' ಎಂದು ಕರೆದುಕೊಳ್ಳುತ್ತಿರುವ ಜಾತಿಯೂ ತನ್ನೊಳಗೆ ಅಸ್ಪೃಶ್ಯತೆಯನ್ನು ಹುದುಗಿಸಿಕೊಂಡಿದೆ. ಸರೋಜನ ಮದುವೆ ಮಾತುಕತೆಯು ಭಾಸ್ಕರ ಮತ್ತು ಅವನ ಭಾವಯ್ಯ ನಡುವೆ ಈ ರೀತಿ ನಡೆಯುತ್ತದೆ. "ಈಗ ನಿಮ್ಮ ಸರೋಜನಿಗೆ ಶಿವಳ್ಳಿಯ ಸಂಬಂಧ ಬಂದರೆ ಆ ಎಂಚಿನ–ಪಂಚಿನದವರಿಗೆ ನಾನು ಹೆಣ್ಣು ಕೊಡುವವನಲ್ಲ ಎನ್ನುತ್ತೀರಿ..ನೀವು ಹೇಳಲಿಕ್ಕಿಲ್ಲ. ಆದರೆ ಶಿವಳ್ಳಿಯವರಿಗೆ? ತಾವೇ ಊಂಚು, ಎಲ್ಲ ಬ್ರಾಹ್ಮಣ್ಯಕ್ಕಿಂತಲೂ ಎಂಬ ಹಂಕಾರ. ಕೋಟದವರು ಅವರ ಕಣ್ಣಲ್ಲಿ ಕೆಳಗೆಯೇ. 'ಹೊಯ್ಕಂಬ್ರ ಬರ್ಕಂಬ್ರ' ಎಂಬ ಕೋಟದವರ ಸೃಷ್ಟಾಗತಿ ನಮಗೆ ಬೇಡ ಎಂದಾರು. ಹೀಗೆಯೇ ಮನುಷ್ಯನ ಭ್ರಮೆ ಎಲ್ಲಿಯವರೆಗೆ ಹೋಯಿತೆಂದರೆ ಬರೀ ನಮ್ಮ ಕಡೆಯ ಬ್ರಾಹ್ಮಣ ಜಾತಿಯನ್ನೇ ತೆಗೆದುಕೊಳ್ಳಿ. ಕೋಟ, ಶಿವಳ್ಳಿ,

ಹವ್ಯಕ, ಕಂದಾವರ, ಕೋಟೀಶ್ವರ ಮಾಗಣೆ..ಒಬ್ಬರಿಗೊಬ್ಬರು ತಾವು ಮೇಲೆ ಎಂದರು. ಅಷ್ಟೂ ಜನ ಸೇರಿ ಮಾಲೇರು ಕೆಳಜಾತಿ ಎಂದರು". (ವೈದೇಹಿ : 'ಅಸ್ಪೃಶ್ಯರು', ೭೨, ೭೩) ಈ ಮಾತುಗಳಲ್ಲಿ 'ಬ್ರಾಹ್ಮಣ'ನಾಗಿಯೂ 'ಕೊರಚ' ಜಾತಿಯವಳನ್ನು ಮದುವೆಯಾಗಿರುವ ಭಾಸ್ಕರ ಇಂತಹ ಕುರುಡು ಜಾತಿ ವ್ಯವಸ್ಥೆ, ಧರ್ಮ, ಅಸ್ಪೃಶ್ಯತೆಯನ್ನು ವಿರೋಧಿಸುತ್ತಾ ಬರುವುದನ್ನು ಕಾಣುತ್ತೇವೆ. ಇಂತಹ 'ಅಸ್ಪೃಶ್ಯತೆ' ಬ್ರಾಹ್ಮಣರೊಳಗೆ ಮಾತ್ರವಲ್ಲ ಎಲ್ಲ ಸಮುದಾಯಗಳಲ್ಲೂ ಇದೆ ಎಂಬುದು ಭಾಸ್ಕರನ ಮಾತುಗಳಿಂದ ತಿಳಿಯುತ್ತದೆ.

"ಎಲ್ಲ ಜಾತಿಗಳ ಒಳಕೋಣೆಯಲ್ಲಿ ಇಣುಕಿ ನೋಡಿ. ಮೇಲುಕೀಳುಗಳ ಹಾಸು ಸಿಗುತ್ತದೆ. ಯಾಕೆ, ಕೊರಗರನ್ನೇ ತೆಗೆದುಕೊಳ್ಳಿ. 'ಕಪ್ಪಡದ ಕೊರಗ'ರಿಗೆ ತಾವು ಶ್ರೇಷ್ಠ ಅಂತ ಉಂಟು. ಅವರು ಸೊಪ್ಪಿನ ಕೊರಗರು ಮನೆ ಬಾಗಿಲಿಗೆ ಬಂದರೆ ಗೆರಟೆಯಲ್ಲಿಯೇ ನೀರು ಕೊಡುತ್ತಾರೆ. ಅವರ ಬಳಿ ಇರುವುದೇ ಗೆರಟೆ ಅಂತೇನೂ ಅಲ್ಲ. ಸೊಪ್ಪಿನ ಕೊರಗರು ನೀಚರಲ್ಲಿ ನೀಚರು ಎಂದು ಕೊರಗರೇ ಹೇಳುತ್ತಾರೆಯಾದ್ದರಿಂದ". (ವೈದೇಹಿ:'ಅಸ್ಪೃಶ್ಯರು', ೭೩) ಭಾಸ್ಕರ 'ಕೆಳಜಾತಿ'ಗಳೆಂದು ಕರೆಸಿಕೊಂಡವರಲ್ಲೂ ಇರುವಂಥ ಅಸ್ಪೃಶ್ಯತೆಯನ್ನು ಕುರಿತು ಮಾತನಾಡುತ್ತಾರೆ. 'ಅಸ್ಪೃಶ್ಯರು' ಕಾದಂಬರಿಯಲ್ಲಿ ಬ್ರಾಹ್ಮಣರು ಸಮಾಜದ ಎಲ್ಲರಲ್ಲೂ ಅಸ್ಪೃಶ್ಯತೆಯನ್ನು ಆಚರಿಸಿದರೆ ಶೂದ್ರರು ತಮಗಿಂತ ಕೆಳಗಿನವರಾದ 'ಕೂಸಾಳು', 'ಕೊರಚರು' ಮುಂತಾದವರ ಮೇಲೆ ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ. ಶೂದ್ರಳಾದ ರುಕ್ಕು 'ಕೂಸ' ಕುಡಿದ ಕಾಫೀ ಲೋಟವನ್ನು ತೊಳೆಯುವುದಿಲ್ಲವೆಂದು ಹೀಯಾಳಿಸುತ್ತಾಳೆ.

"ರುಕ್ಕೂ, ಇದನ್ನು ತೊಳೆದಿಡಬೇಕಂತೆ ಎಂದಾಗ ಯಾರು? ಆ ಕೂಸ ಕುಡಿದಿದ್ದ? ಅವ ಬಂದದ್ದು ನನಗೂ ಗೊತ್ತೂ ಗೊತ್ತು ಮಾಡದೆ ಅವನ ಎಂಜಲನ್ನು ನನ್ನ ಕೈಯಿಂದ ತೊಳೆಸಬೇಕೆಂತ ಮಾಡಿದಿರ? ನಾ ತೊಳೆಯುವುದಿಲ್ಲ–ಎಂದಾಗ ಗೌರಮ್ಮ ಅಬ್ಬ ನಾವು ನಿನ್ನನ್ನೇ ಸೇರದಿದ್ದರೆ, ನೀನು ಕೂಸನನ್ನೇ ಸೇರುವುದಿಲ್ಲವಲ್ಲ? ಎಂದಾಗ ರುಕ್ಕು ಮತ್ತೆ? ನಾವು ಅದಕ್ಕಿಂತ ಊಂಚಲ್ಲವ? ಬೇಡಿ ತಿಂದರೂ ಅವ ಕುಡಿದ ಲೋಟೆ ನಾನು ತೊಳೆಯಲಿಕ್ಕಿಲ್ಲ. ಇದೀಗ ಕತೆ, ನೀನು ತೊಳೆಯುವುದಿಲ್ಲವೆಂದರೆ ಮತ್ತೆ ಯಾವ ಜನ ಉಂಟು ಇಲ್ಲಿ? 'ಹೇಳಬೇಕಿತ್ತು ಅವನಿಗೇ ಪ್ಯಾಂಟು ಶರಟು ಹಾಕಿದ ಕೂಡಲೆ ಕುಡಿದ ಲೋಟೆ ತೊಳೆದಿಡಬಾರದು ಅಂತಿದೆಯ? ಸಾಯಂಕಾಲ ಬರುತ್ತಾಳಲ್ಲ' ಅವನ ಅಕ್ಕ ಗಾಂಧಾರಿ! ತೊಳೆಯಲಿ". (ವೈದೇಹಿ : 'ಅಸ್ಪೃಶ್ಯರು', ೨೭) ಮೇಲಿನ ಸಾಲುಗಳಲ್ಲಿ ಶೂದ್ರಳಾದ ರುಕ್ಕು 'ಹೊಲೆಯ' ಆಫೀಸರನು ಕಾಫೀ ಕುಡಿದ ಲೋಟವನ್ನು ತೊಳೆಯಲು ಮೀನ–ಮೇಶ ಎಣಿಸುತ್ತಾಳೆ. ಉರಿಕಾರುತ್ತಾಳೆ, ಅದೇ ಊಂಚು ಎನ್ನುತ್ತಾಳೆ. ಇಂತಹ ಭ್ರಮೆಗಳಲ್ಲಿಯೇ ಭಾರತದಲ್ಲಿನ ಮಾನವಕುಲ ಬದುಕುತ್ತಿದೆ.

ದಲಿತರಿಗಂಟಿದ ಇಂತಹ ಅಸ್ಪೃಶ್ಯತೆ ಎಂಬುದು ಇಂದು ನಿನ್ನೆಯದಲ್ಲ. ಅದು ಶತ-ಶತಮಾನಗಳಿಂದಲೂ ನಡೆದುಕೊಂಡು ಬಂದಿದೆ. ಇಂತಹ ಅಸ್ಪೃಶ್ಯತೆಯ ಆಚರಣೆ ಎಂಬುದು ನಗರ ಪ್ರದೇಶಗಳಿಗಿಂತ ಹಳ್ಳಿಗಳಲ್ಲಿಯೇ ಹೆಚ್ಚು. ಅದರಲ್ಲಿಯೂ ಇದನ್ನು ಆಚರಿಸುವ ಮೂಲಕ ಜೀವಂತ ಚಾಲ್ತಿಯಲ್ಲಿಟ್ಟಿರುವವರು ಮಹಿಳೆಯರು. ಪ್ರೀತಿ-ಪ್ರೇಮದ ವಿಚಾರ, ಮದುವೆಯ ವಿಚಾರ ಬಂದಾಗ ಗಂಡಸರು ಹೆಚ್ಚಿನ ಪ್ರಮಾಣದ ಅಸ್ಪೃಶ್ಯತೆಯನ್ನು, ಅದರೊಳಗಿನ ಜಾತಿಯನ್ನು ಪಾಲಿಸುತ್ತಾರೆ. ಇಂತಹ ಹೀನ ಪದ್ಧತಿಯನ್ನು ಅಳಿಸಲು ಮತ್ತೆಷ್ಟು ಜನ ಬಸವ, ಅಂಬೇಡ್ಕರ್, ಪೆರಿಯಾರ್, ಶಾಹುಮಹಾರಾಜ್ ಮುಂತಾದವರ ಆಗಮನದ ಅವಶ್ಯಕತೆ ಇದೆಯೋ ತಿಳಿಯದಾಗಿದೆ.

'ಕೊರಚ'ರ ಹೆಂಗಸು ಮಾರಿದ ಸಿಬ್ಬಲುಗಳನ್ನು ಸಹ ಮನೆಯೊಡತಿ ಗೌರಮ್ಮ ತೆಗೆದುಕೊಳ್ಳುವುದಿಲ್ಲ. ಅದನ್ನು ಮನೆಯ ಕೆಲಸದಾಳು ಚಂದೂ ತೆಗೆದುಕೊಂಡು ಅವುಗಳ ಮೇಲೆ ಬಾವಿಯಿಂದ ನೀರೆತ್ತಿ ಹೊಯ್ದು ಶುದ್ಧ ಮಾಡಿ ಒಳಗೆ ತಂದಿಡುತ್ತಾಳೆ. ಅಲ್ಲಿಯವರೆಗೂ ಯಾರೂ ಅವುಗಳನ್ನು ಮುಟ್ಟುವಂತಿಲ್ಲ. ಆಧುನಿಕತೆ, ತಂತ್ರಜ್ಞಾನ, ವಿಜ್ಞಾನ, ಯಂತ್ರನಾಗರಿಕತೆ, ಬಾಹ್ಯಾಕಾಶಯಾನ ಎಂದು ದೊಡ್ಡ-ದೊಡ್ಡ ಮಾತುಗಳನ್ನಾಡುವ ಕಾಲದಲ್ಲೂ ಅಸ್ಪೃಶ್ಯತೆ ಸದ್ದಿಲ್ಲದೆ ತನ್ನ ಕಬಂಧ ಬಾಹುಗಳನ್ನು ಎಲ್ಲೆಡೆ ಚಾಚಿರುವುದು ಮೇಲ್ನೋಟಕ್ಕೆ ಯಾರಿಗೂ ಗೊತ್ತೇ ಆಗುವುದಿಲ್ಲ. ಬೂದಿ ಮುಚ್ಚಿದ ಕೆಂಡದಂತೆ ಅದು ಅಸ್ಥಿತ್ವದಲ್ಲಿದೆ. ಸಮಯಕ್ಕನುಸಾರ ಹೊರಗಡೆ ಬಂದು ತನ್ನ ನಿಜಸ್ವರೂಪವನ್ನು ತೋರಿಸಿ ಹಂಗಿಸುತ್ತದೆ.

ಶೂದ್ರರು, ಅಸ್ಪೃಶ್ಯರು ಇದ್ದಂತೆಯೇ ಇರಬೇಕು ಬದಲಾಗಬಾರದು ಎಂಬ ಧೋರಣೆಯು ಅಸ್ಪೃಶ್ಯರು ಕಾದಂಬರಿಯಲ್ಲಿ ವ್ಯಕ್ತವಾಗುತ್ತದೆ. "ಈಗೇನು ಮುಂಚಿನಂತೆ ಶೂದ್ರರು ಮನೆ ಬಾಗಿಲಿಗೆ ಬರುತ್ತವೆಯೇ? ಅವಕ್ಕೆ ಇರುವ ದೊಡ್ಡಸ್ತಿಕೆ ತಮಗಿಲ್ಲ. ಈ ಸದಿಯ, ಮೊನ್ನೆ ಮೊನ್ನೆ ಹಿತ್ತಿಲಲ್ಲಿ ಗಿಡದ ಬುಡ ಹರಡುತ್ತಿದ್ದವ, ಈಗ ಎರಡೆರಡು ಬೆರಳಿಗೆ ಉಂಗುರವೇನು?, ತಲೆಗೆ ಎಣ್ಣೆಯೇನು, ಮೇಲು ಕ್ರಾಪೇನು! ಎಷ್ಟು ಮಾಡಿದರೇನು? ಶೂದ್ರ ಶೂದ್ರನೇ. ಅದು ಅವಕ್ಕೆ ಗೊತ್ತಿಲ್ಲ," (ವೈದೇಹಿ : 'ಅಸ್ಪೃಶ್ಯರು', ೨೦) ಎಂಬ ಮಾತುಗಳಲ್ಲಿ ಶೂದ್ರರು, ದಲಿತರು 'ಬಡವ ನೀ ಮಡಗಿದಂತೆ ಇರು' ಎನ್ನೊ ಹಾಗೆ ಯಾವತ್ತಿಗೂ ಬದಲಾಗಲೇ ಬಾರದು ಎನ್ನುವ ಧೋರಣೆ ಎದ್ದುಕಾಣುತ್ತದೆ. 'ಇಂದಿಗೂ ದಲಿತರು ಹಳ್ಳಿಗಳಲ್ಲಿ ಶುಭ್ರವಾದ ಬಟ್ಟೆಗಳನ್ನು ತೊಡುವುದಾಗಲೀ, ಬೆಲೆ ಬಾಳುವ ಚಿನ್ನ, ಬೆಳ್ಳಿ, ಲೋಹಗಳನ್ನು ತೊಡುವುದಾಗಲಿ, ಸೈಕಲ್, ಬೈಕ್ ಮುಂತಾದವುಗಳನ್ನು ಕೊಂಡುಕೊಳ್ಳುವುದಾಗಲೀ,

ಓಡಾಡುವುದಾಗಲೀ, ಕೈಗೆ ಗಡಿಯಾರವನ್ನು ಕಟ್ಟಿಕೊಳ್ಳುವುದಾಗಲೀ ಮಾಡಬಾರದೆಂಬ ನಿಯಮಗಳಿವೆ'.

ಅಸ್ಪೃಶ್ಯರು ಹೇಗೆ ಬದುಕಬೇಕು, ಹೇಗೆ ಬದುಕಬಾರದು ಎಂಬ ಕರಾರುಗಳ ಬಗ್ಗೆ ಚಿನ್ನಸ್ವಾಮಿ ಸೋಸಲೆಯವರು 'ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು' ಎಂಬ ಪುಸ್ತಕದಲ್ಲಿ ವಿವರಿಸಿದ್ದಾರೆ.

೧. "ಹಿಂದೂಗಳ ವಾಸಸ್ಥಾನಗಳಿಂದ ದೂರವಾಗಿ ಪ್ರತ್ಯೇಕ ಜಾಗದಲ್ಲಿ ಅಸ್ಪೃಶ್ಯರು ವಾಸಿಸಬೇಕು. ಈ ಬೇರ್ಪಡಿಸುವಿಕೆಯ ನಿಯಮವನ್ನು ಮುರಿಯುವುದಾಗಲಿ, ಅದರಿಂದ ತಪ್ಪಿಸಿಕೊಳ್ಳುವುದಾಗಲಿ ಕೂಡದು.

೨. ಅಸ್ಪೃಶ್ಯರ ವಾಸ ಪ್ರದೇಶವು ಹಳ್ಳಿಯ ದಕ್ಷಿಣ ದಿಕ್ಕಿನಲ್ಲಿರಬೇಕು; ಏಕೆಂದರೆ ನಾಲ್ಕು ದಿಕ್ಕುಗಳಲ್ಲಿ ದಕ್ಷಿಣ ದಿಕ್ಕು ಅತ್ಯಂತ ಅಮಂಗಲವಾದುದು ಎಂಬುದು ಬ್ರಾಹ್ಮಣರ ಹಾಗೂ ಸ್ಪೃಶ್ಯರ ಅನಿಸಿಕೆ.

೩. ಅಸ್ಪೃಶ್ಯರ ಗುಂಪಿಗೆ ಸೇರಿದವರು ಭೂಮಿ, ಹಣ ಇತ್ಯಾದಿ ರೂಪದ ಸಂಪತ್ತನ್ನು ಪಡೆದುಕೊಳ್ಳುವಂತಿಲ್ಲ.

೪. ಅಸ್ಪೃಶ್ಯರು ಹೆಂಚಿನ ಹೊದಿಕೆ ಹಾಗೂ ಆರ್.ಸಿ.ಸಿ. ಇರುವಂತಹ ಮನೆಗಳನ್ನು ಕಟ್ಟಿಕೊಳ್ಳುವಂತಿಲ್ಲ.

೫. ಅಸ್ಪೃಶ್ಯರು ತಮ್ಮ ಮಕ್ಕಳಿಗೆ ಸೊಗಸಾದ ಹೆಸರುಗಳನ್ನಿಡಕೂಡದು. ಅವನಿಡುವ ಹೆಸರುಗಳು ತಿರಸ್ಕಾರ ಸೂಚಕಗಳಾಗಿರಬೇಕು.

೬. ಒಬ್ಬ ಸ್ಪೃಶ್ಯರ ಸಮ್ಮುಖದಲ್ಲಿ ಕುರ್ಚಿಯ ಮೇಲೆ ಕೂಡಬಾರದು.

೭. ಅಸ್ಪೃಶ್ಯರು ತಮ್ಮ ಗ್ರಾಮಗಳಲ್ಲಿ ಕುದುರೆಯ ಮೇಲೆ ಕುಳಿತು ಹಾದು ಹೋಗುವುದು ಅಥವಾ ಪಲ್ಲಕ್ಕಿಯಲ್ಲಿ ಕುಳಿತು ತೆರಳುವುದು ಕೂಡದು. ಹಿಂದೆ ಬಾಲ್ಯ ವಿವಾಹ ಆಚರಿಸುತ್ತಿದ್ದುದರಿಂದ, ವಿವಾಹವಾಗಿ ಎಷ್ಟೋ ವರ್ಷಗಳ ನಂತರ ಹೆಂಡತಿಯು ಋತುಮತಿಯಾದಾಗ ಪ್ರಸ್ತ ಕಾರ್ಯ ನಡೆಸಲು ಗಂಡನನ್ನು ಕುದುರೆ ಮೇಲೆ ಕುಳ್ಳಿರಿಸಿ ಊರಿನಲ್ಲಿ ಮೆರವಣಿಗೆ ಮಾಡಲಾಗುತ್ತಿತ್ತು. ಇದನ್ನು ವಿರೋಧಿಸಿ ಎಷ್ಟೋ ದೌರ್ಜನ್ಯಗಳು ನಡೆದಿವೆ. ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಇಂತಹ ಘಟನೆಗಳು ನಡೆಯುತ್ತಲೂ ಇವೆ.

೮. ಅಸ್ಪೃಶ್ಯರು ಯಾವುದೇ ಮೆರವಣಿಗೆಯನ್ನು ಹಳ್ಳಿಯ ಮುಖಾಂತರ ಕೊಂಡು ಹೋಗುವಂತಿಲ್ಲ. ಉದಾ: ಇತ್ತೀಚೆಗೆ ಹೆಚ್ಚಾಗಿರುವ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರ ಮೆರವಣಿಗೆ ಹಾಗೂ ಇನ್ನಿತರೆ ಸಾಂಸ್ಕೃತಿಕ ಕಾರ್ಯಕ್ರಮಗಳ ಮೆರವಣಿಗೆಯನ್ನು ಸವರ್ಣೀಯರ ಬೀದಿಯಲ್ಲಿ ಕೊಂಡೊಯ್ಯುವಂತಿಲ್ಲ. ಇವರ ಪ್ರಬಲ ಅಲಿಖಿತ ಕಾನೂನನ್ನು ಅಸ್ಪೃಶ್ಯರು ಉಲ್ಲಂಘಿಸಿದರೆ ದೌರ್ಜನ್ಯದ ಸ್ವರೂಪ ಮಾತ್ರ ಕಂಬಾಲಪಲ್ಲಿ ಅಥವಾ ಬದನವಾಳುಗಳನ್ನು ಮೀರಿಸುವಂತಹು-ಗಳಾಗಿರುತ್ತವೆ.

೯. ಸ್ಪೃಶ್ಯರಿಗೆ ತಲೆಬಾಗಿ ನಮಸ್ಕರಿಸಬೇಕು.

೧೦. ಅಸ್ಪೃಶ್ಯರು ಸ್ಪೃಶ್ಯರ ಯಾವುದಾದರೂ ಉಪವಾಸದ ಪುಣ್ಯದಿನದಂದು ಅಥವಾ ಉಪವಾಸದ ವ್ರತವು ಮುಕ್ತಾಯವಾಗುವ ವೇಳೆಯಲ್ಲಿ ಹಳ್ಳಿಯೊಳಕ್ಕೆ ಬರಕೂಡದು. ಬಂದರೂ ಮಾತನಾಡಕೂಡದು. ಏಕೆಂದರೆ ಉಸಿರಿನಿಂದ ಸ್ಪೃಶ್ಯರು ಸೇವಿಸುವ ಗಾಳಿ ಮತ್ತು ಆಹಾರ ಮಲಿನಗೊಳ್ಳುತ್ತದೆ.

೧೧. ಅಸ್ಪೃಶ್ಯರು ಸ್ಪೃಶ್ಯರಂತೆ ಬಹಿರಂಗ ಗುರುತುಗಳನ್ನು ಧರಿಸಕೂಡದು ಮತ್ತು ಸ್ಪೃಶ್ಯರಂತೆ ಕಾಣಕೂಡದು.

೧೨. 'ಗ್ರಾಮಾಂತರ ಪ್ರದೇಶದಲ್ಲಿ ಇನ್ನೂ ಶೂದ್ರರು, ದಲಿತರು ಕೈ ಕುಲುಕುವ, ಅವರನ್ನು ಅಪ್ಪಿಕೊಳ್ಳುವ ಕ್ರಿಯೆ-ಪ್ರಕ್ರಿಯೆಗಳು ನಡೆಯುವುದಿಲ್ಲ. ಅವರನ್ನು ಮಿತ್ರರಂತೆ ಕಾಣುವ ಬದಲು ಗುಲಾಮರಂತೆಯೇ ಕಾಣುತ್ತಿದ್ದಾರೆ. ಇದು ಕರ್ನಾಟಕದ ಮಟ್ಟಿಗೆ ಪ್ರಬಲ ಜಾತಿಗಳೆಂದು ಸ್ವಘೋಷಿಸಿಕೊಂಡಿರುವ ಒಕ್ಕಲಿಗರು-ಲಿಂಗಾಯತರು-ಕುರುಬರು, ಗಾಣಿಗರು ಹಾಗೂ ಕೆಲವು ಕಡೆ ಪರಿಶಿಷ್ಟ ಪಂಗಡದಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ." (ಚಿನ್ನಸ್ವಾಮಿ ಸೋಸಲೆ : 'ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ – ಪ್ರಶ್ನೆಗಳು', ೩೬, ೩೭)

ಮೇಲ್ಜಾತಿಯವರ ಹೊಲಗದ್ದೆಗಳಲ್ಲಿ ದುಡಿಯಲು ಹೋಗುವ ದಲಿತರು ಸಾಕಷ್ಟು ರೀತಿಯಲ್ಲಿ ಅಸ್ಪೃಶ್ಯತಾ ನೋವನ್ನು ಅನುಭವಿಸಬೇಕಾಗುತ್ತದೆ. ಒಬ್ಬ ದಲಿತ ಅಥವಾ ದಲಿತ ಮಹಿಳೆಗೆ ಬಾಯಾರಿಕೆಯಾದಾಗ ಮೇಲ್ಜಾತಿಯವರು ದಲಿತರ ಕೈಗೆ ತಂಬಿಗೆ ಕೊಡುವುದಿಲ್ಲ. ದಲಿತರು ನಡುಬಗ್ಗಿಸಿ ಮಂಡಿ ಕಾಲಲ್ಲಿ ಕೂತು ಎರಡೂ ಕೈಗಳನ್ನು ಬೊಗಸೆ ಮಾಡಿ ಬಾಯಿ ತುದಿಗೆ ತಂದಾಗ ಶೂದ್ರ ಅಥವಾ ಮೇಲ್ಜಾತಿಯವರು ಮೇಲಿಂದ ನೀರನ್ನು ಸುರಿಯುತ್ತಾರೆ. ದಲಿತರು ದೂರದಿಂದಲೇ ಕುಳಿತು ಮೈಕೈ ಬಟ್ಟೆ-ಬರೆಗಳನ್ನು ಒದ್ದೆ ಮಾಡಿಕೊಂಡು ಒಂದಷ್ಟು

ನೀರನ್ನು ಕುಡಿಯಬೇಕಾಗುತ್ತದೆ. ಇನ್ನು ದಲಿತರಿಗೆ ಕೂಲಿ ಮಾಡುವ ಜಾಗದಲ್ಲಿ ತಟ್ಟೆಗಳಿಂದ ಊಟ ಬಡಿಸುವುದಿಲ್ಲ. ಯಾವುದಾದರೂ ಎಲೆಯಿಂದ ಊಟ ಬಡಿಸುತ್ತಾರೆ.

ನಲ್ವತ್ತು-ಐವತ್ತು ವರ್ಷಗಳ ಹಿಂದೆ ದಲಿತರು ಊರಿನ ಕೆರೆ-ಕುಂಟೆಗಳಲ್ಲಿ ನೀರನ್ನು ತಾವೇ ಸ್ವತಃ ತೆಗೆದುಕೊಳ್ಳುವಂತಿರಲಿಲ್ಲ. ದಲಿತ ಹೆಂಗಸರು ಎಷ್ಟೇ ಬಾಯಾರಿದ್ದರೂ ಮನೆಯಲ್ಲಿ ರಾಶಿ ಕೆಲಸ ಬಿದ್ದಿದ್ದರೂ, ಮನೆಯಲ್ಲಿ ಯಾರಿಗಾದರೂ ಊಟ ಬಡಿಸಿದ್ದರೂ ಕುಡಿಯುವ ನೀರಿಗಾಗಿ ಕೆರೆ, ಕುಂಟೆಗಳಿಗೆ ಹೋಗದೆ ಊರಿನ ಗೌಡತಿಯ ಮುಂದೆ ಮಡಿಕೆಯನ್ನೊಯ್ದು ಇಡಬೇಕಾಗಿತ್ತಂತೆ. ಗೌಡತಿ ಹೇಳಿದ ಕೊಟ್ಟಿಗೆ ಗುಡಿಸುವ, ಗೊಬ್ಬರ ಹರಡುವ, ಬಟ್ಟೆ ತೊಳೆದುಕೊಡುವ, ಮಕ್ಕಳ ಹೊಲಸನ್ನು ತೊಳೆಯುವ ಇನ್ನೂ ಮುಂತಾದ ಕೆಲಸಗಳನ್ನು ಮುಗಿಸಿ ಗೌಡತಿ ಬಿಡುವು ಮಾಡಿಕೊಂಡು ಬಂದು ತನ್ನ ಮಡಿಕೆಯಿಂದ ಕುಂಟೆಯ ನೀರನ್ನು ತೆಗೆದು ಮೇಲಿಂದ ದಲಿತಳ ಮಡಿಕೆಗೆ ಸುರಿಯುತ್ತಿದ್ದಳಂತೆ. ಅಷ್ಟರಲ್ಲಿ ಊಟ ಮಾಡುತ್ತಿದ್ದವರ ಜೀವ ಹೋದರೂ ಸರಿಯೇ. ದಲಿತರ ಗುಡಿಸಲುಗಳಿಗೆ ಬೆಂಕಿಬಿದ್ದಾಗ ಮೇಲ್ಜಾತಿಯವರು ಕೆರೆ-ಕುಂಟೆಗಳಿಂದ ನೀರನ್ನು ತೆಗೆದುಕೊಳ್ಳಲು ಅನುಮತಿ ಕೊಡದೆ ಎಷ್ಟೋ ಗುಡಿಸಲುಗಳು ಉರಿದು ಬೂದಿಯಾಗಿ ಹೋಗಿವೆ. ಇಂಥ ನೂರಾರು ಅಸ್ಪೃಶ್ಯತಾ ಆಚರಣೆಗಳು ಇಂದಿಗೂ ಸಮಾಜದಲ್ಲಿ ನಿರಂತರವಾಗಿ ದಲಿತರ ಮೇಲೆ ನಡೆಯುತ್ತಲೇ ಇವೆ. ಇಂಥ ಪದ್ಧತಿಗಳಿಗೆ ವಿರೋಧಿಸಿದರೆ ಊರಿಂದ ಬಹಿಷ್ಕಾರ ಹಾಕಲಾಗುತ್ತದೆ.

ಮೇಲ್ಜಾತಿಯ ಹೆಣ್ಣಿನ ದೃಷ್ಟಿಯಲ್ಲಿ ದಲಿತ ಮಹಿಳೆ

ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯಲ್ಲಿ ಮೇಲ್ಜಾತಿ ಹೆಣ್ಣಿನ ದೃಷ್ಟಿಯಲ್ಲಿ ದಲಿತ ಮಹಿಳೆ ತೀರಾ ನಿಕೃಷ್ಟ ಗ್ರಹಿಕೆಗೆ ಒಳಗಾಗಿದ್ದಾಳೆ. ಕೆಂಡ ನಡೆಯುವ ಜಾಗದಲ್ಲಿ ಕೆಳಜಾತಿಯವರಿಗೆ ಪ್ರವೇಶವಿಲ್ಲವೆನ್ನುವುದನ್ನು ಶೂದ್ರಳಾದ ಸೀತು ಬ್ರಾಹ್ಮಣರ ಮಕ್ಕಳಿಗೆ ಈ ರೀತಿ ಹೇಳುತ್ತಾಳೆ. "ಊಂಚು ಜಾತಿಯವರನ್ನು ಮೊದಲು ಕರೆಯುತ್ತಾರೆ. ಕಡೆಕಡೆಗೆ ಕೀಳು ಜಾತಿಯವರನ್ನು ಕೊರರು-ಕೂಸಾಳುಗಳಿಗೆ ಗೆಂಡದ ಕಾರ್ಯಕ್ರಮಕ್ಕೆ ಪ್ರವೇಶವೇ ಇಲ್ಲ- ಎಂದಳೂ ಸೀತು, ಪಿಸುಪಿಸುವಾಗಿ. ಮುಟ್ಟಾದವರನ್ನು ಕೊರಕೂಸಾಳುಗಳನ್ನು ಮುಟ್ಟಿಸಿಕೊಳ್ಳಬಾರದು. ಅವರೊಡನೆ ಮಾತೂ ಆಡಬಾರದು. ಅವರ ನೆರಳನ್ನೂ ಮೆಟ್ಟಬಾರದು. ಒಂದು ಚೂರು ನೇಮ ತಪ್ಪಿತೆಂದರೆ ಕಾಲಲ್ಲಿ ಬೊಕ್ಕೆ ಬಂದಿತೆಂದೇ." (ವೈದೇಹಿ : 'ಅಸ್ಪೃಶ್ಯರು', ೭೯) ದೇವರು, ದೇವಸ್ಥಾನ, ಕೊಂಡ ಮುಂತಾದ ಆಚರಣೆಗಳಲ್ಲಿ ದಲಿತರಿಗೆ ಅದರಲ್ಲೂ ದಲಿತ ಹೆಣ್ಣುಮಕ್ಕಳಿಗೆ ಪ್ರವೇಶವಿಲ್ಲದಿರುವುದನ್ನು ಕಾಣಬಹುದು. ಇದು ಕೇವಲ ಅಸ್ಪೃಶ್ಯರು' ಕಾದಂಬರಿಯಲ್ಲಿ ಮಾತ್ರವಲ್ಲ, ಇಡೀ ಸಮಾಜದಲ್ಲೇ ಕಂಡುಬರುತ್ತಿರುವ ವಾಸ್ತವ ಚಿತ್ರಣ.

ವೈದೇಹಿಯವರು ವಾಸ್ತವ ಚಿತ್ರಣವನ್ನು ಕಣ್ಣೆದುರಿಗೆ ಇಡುತ್ತಾ ಬದಲಾವಣೆಯನ್ನು ಓದುಗರಿಗೆ ಬಿಡುತ್ತಿದ್ದಾರೆ.

ಹೆರಿಗೆ ಮಾಡಿಸಲು ಬಂದ ಮಿಡ್‌ಬಾಯಿಯನ್ನು ಕುರಿತು ಪಾರ್ತಕ್ಕ "ನಾನು ಎಷ್ಟು ತೇಲಿಕೊಂಡರೂ ನನ್ನನ್ನು ಮುಟ್ಟುವ ಹಾಗೆ ಇರುತ್ತಿದ್ದಳು. ಇರಪರ ಇಲ್ಲದವಳು'.

'ನಮ್ಮದೊಂದು ಆಚಾರ ಅಷ್ಟೆ. ಈಗ ನಾವಿರುವುದೇ ಮೈಲಿಗೆಯಲ್ಲಿ ಅಲ್ಲವೆ?'–ಎಂದು ಗೌರಮ್ಮ ಹೇಳಿದರೆ

'ಅದು ನಮ್ಮ ಮನೆಯ ಮೈಲಿಗೆ. ಮಿಡ್‌ಬಾಯಿಯದು ನೂರು ಮನೆಯ ಮೈಲಿಗೆ, ಈಗಷ್ಟೇ ಶೇಷು ಪೂಜಾರಿಯ ಮಗಳನ್ನು ಹೆರಿಸಿ ಬಂದೆ ಎಂದಳು ಅವಳು. ಕೇಳಿದೆಯ? ಯಾರ ಯಾರ ಮನೆ ಮೈಲಿಗೆಯನ್ನೆಲ್ಲ ಮುಟ್ಟಿಕೊಳ್ಳಲು ನನಗೇನು ಗರ್ಜು?" (ವೈದೇಹಿ : 'ಅಸ್ಪೃಶ್ಯರು', ೦೯) ಎಂದರು.

ಪಾರ್ತಕ್ಕನ ಮಾತುಗಳಲ್ಲಿ ಕೆಳಜಾತಿಯ ಅಸ್ಪೃಶ್ಯತೆ ಮತ್ತು ಜನನಕ್ಕೆ ಸಂಬಂಧಪಟ್ಟಂಥ ಅಸ್ಪೃಶ್ಯತೆ ಎರಡನ್ನೂ ಒಟ್ಟಿಗೆ ಕಾಣಬಹುದು. ಮಿಡ್‌ಬಾಯಿ ಮಾಡುವ ಕೆಲಸಕ್ಕಿಂತ ಅವಳ ಜಾತಿಯೇ ಮುಖ್ಯವಾಗಿ ಎದ್ದುಕಾಣುತ್ತಿದೆ. ಅಸ್ಪೃಶ್ಯರು ಕಾದಂಬರಿಯಲ್ಲಿ ಸ್ತ್ರೀಪಾತ್ರಗಳು ಮಾತ್ರ ಅಸ್ಪೃಶ್ಯತೆಯನ್ನು ಆಚರಿಸುತ್ತವೆಯೇ ಹೊರತು ಪುರುಷ ಪಾತ್ರಗಳು ಎಲ್ಲೂ 'ಅಸ್ಪೃಶ್ಯತೆ' ಆಚರಿಸುವುದು ಕಂಡು ಬರುವುದಿಲ್ಲ. ಬದಲಿಗೆ ಬ್ರಾಹ್ಮಣ ಪುರುಷ ಪಾತ್ರಗಳಾದ ಭಾಸ್ಕರ 'ಕೊರಾತಿ'ಯನ್ನು ಮದುವೆಯಾಗಿದ್ದಾನೆ. ವಾಸುದೇವರಾಯರು ಕೂಡ 'ಕೊರಚ' ಜಾತಿಗೆ ಸೇರಿದ ಭಾಸ್ಕರನ ಹೆಂಡತಿಯನ್ನು ಮನೆಗೆ ಕರೆದುಕೊಂಡು ಬರುವುದರ ಮೂಲಕ ಜಾತಿಯೆಂಬ ಅಸ್ಪೃಶ್ಯತೆಯನ್ನು ಪ್ರತಿಭಟಿಸುತ್ತಾನೆ. ಕೊರಚರ ಉದ್ಧಾರ ಮತ್ತು ಬದಲಾವಣೆಗಾಗಿಯೇ ಭಾಸ್ಕರ್ ಜೈಲನ್ನು ಸೇರುತ್ತಾನೆ. ಬ್ರಾಹ್ಮಣನಾದ ವಾಸುದೇವರಾಯರ ಮಗ ಶೀನ, ಮಗಳು ಸರೋಜ ಕೂಡ ಜಾತಿಯನ್ನು ತಿರಸ್ಕರಿಸುತ್ತಾರೆ. ಇವರೆಲ್ಲಾ ಬಂಡಾಯ ಮನೋಧರ್ಮದವರಾಗಿ ಕಂಡು ಬರುತ್ತಾರೆ.

ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಅಸ್ಪೃಶ್ಯತೆಗೆ ಸಂಬಂಧಿಸಿದ ಸಾಕಷ್ಟು ನಿದರ್ಶನಗಳಿವೆ. ತಿಮ್ಮಪ್ಪ ಹೆಗ್ಗಡೆಯು ಹೊಲತಿ ಪುಟ್ಟಿಯೊಂದಿಗೆ ಹೊಂದಿದ್ದ ಸಂಬಂಧವನ್ನು ಕುವೆಂಪುರವರು ಹೋಲಿಸಿರುವ ರೀತಿಯಿಂದ ವೇದ್ಯವಾಗುತ್ತದೆ. ಶೂದ್ರನಾದ ತಿಮ್ಮಪ್ಪ ಹೆಗ್ಗಡೆಯನ್ನು ಸ್ನಾನ ಮಾಡಿಸಿ ಶುಚಿಯಾಗಿಟ್ಟ ಚೀನೀ ನಾಯಿಗೂ ಕುಳವಾಡಿ ಸಣ್ಣಬೀರನ ಮಗಳು ಹೊಲತಿ ಪುಟ್ಟಿಯನ್ನು ದದ್ದು ಹಿಡಿದು ವಿಕಾರವಾದ ಬೀದಿ

ನಾಯಿಗೆ ಹೋಲಿಸಿರುವುದರಲ್ಲೇ ಅಸ್ಪೃಶ್ಯತೆ ಎದ್ದು ಕಾಣುತ್ತದೆ. ಇಂತಹ ಸಾಕಷ್ಟು ಉದಾಹರಣೆಗಳು ಈ ಕಾದಂಬರಿಯ ಉದ್ದಕ್ಕೂ ಹಾಸು ಹೊಕ್ಕಾಗಿವೆ.

ಸೇಸನಾಯ್ಕ ತಿಮ್ಮನಾಯ್ಕರಿಬ್ಬರು ಊಟ ಮುಗಿಸಿ ತೇಗಿ ಬರುವವರೆಗೂ ಕಾಯುತ್ತಿದ್ದ ಗುತ್ತಿಗೆ "ಹಿತ್ತಲ ಕಡೆಗೆ ಹೋಗೋ ಅನ್ನ ಹಾಕಿ ಕೊಡ್ತಾರೆ

ತೆಣೇ ಮ್ಯಾಲೆ ಹೋಗುವಾಗ ಜಾರಿಗೀರಿ ಬಿದ್ದೀಯ?" (ಕುವೆಂಪು : 'ಮಲೆಗಳಲ್ಲಿ ಮದುಮಗಳು', ೧೬)

ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯಲ್ಲಿನ 'ಕೂಸ' ಕೂಡಾ ಕಾಡಿಗೆ ಹೋಗಿ ಹುಲ್ಲು ತಂದು 'ಬ್ರಾಹ್ಮಣ' ಜಾತಿಯ ಗೌರಮ್ಮನ ಮನೆಗೆ ಹಾಕಿ ಮಿಕ್ಕ ಊಟಕ್ಕಾಗಿ ಹಿತ್ತಿಲ ಬಳಿ ಕಾದು ತೆಗೆದುಕೊಂಡು ಹೋಗುತ್ತಾಳೆ. 'ಅಸ್ಪೃಶ್ಯರು' ಕಾದಂಬರಿಯಲ್ಲಿ 'ಬ್ರಾಹ್ಮಣರ' ಮನೆಯ ಸಮಾರಂಭಗಳಲ್ಲಿ ಅವರು ಉಂಡು ಬಿಟ್ಟ ಎಂಜಲೆಲೆಗಳಲ್ಲಿ ದಲಿತರು ಆರಿಸಿಕೊಂಡು ತಿನ್ನುವ ಹೇಯ ಸ್ಥಿತಿಯಿದೆ. ಹೀಗೆ ಸಮಾಜದಲ್ಲಿ 'ಮೇಲ್ಜಾತಿ' ಎಂದು ಕರೆಸಿಕೊಂಡವರು ಹಿತ್ತಿಲ ಹಿಂದೆ ಅನ್ನ ಹಾಕುವುದು ದಲಿತರ ಬದುಕಿನಲ್ಲಿ ಅನಾಯಾಸವಾಗಿ, ಅವಿರತವಾಗಿ ಶತಮಾನಗಳಿಂದ ನಡೆದುಕೊಂಡು ಬಂದಿರುವ ಹೀನ ಪದ್ಧತಿ. ಮದುವೆ, ಜಾತ್ರೆ, ಊರಹಬ್ಬ ಮುಂತಾದ ಸಂದರ್ಭಗಳಲ್ಲಿ ಸಮಾಜದಲ್ಲಿದ್ದ 'ಮೇಲ್ಜಾತಿ' ಎಂದು ಕರೆಸಿಕೊಂಡವರು ದಲಿತರಿಗೆ ಮನೆ ಹಿಂದೆಯೋ ಮನೆ ಮುಂದಿನ ಬೀದಿಯಲ್ಲೋ ಕೂರಿಸಿ ಊಟ ಹಾಕುವುದು ಹಿಂದಿನಿಂದ ನಡೆದುಕೊಂಡು ಬಂದ ರೂಢಿಗತ ಅಲಿಖಿತ ಅನಿಷ್ಟ ಪದ್ಧತಿಯಾಗಿದೆ.

ದಲಿತರು ಮೇಲ್ವರ್ಗದವರ ಮನೆಗಳ ಮುಂದೆ ಅಸಹಾಯಕರಾಗಿ, ದೀನರಾಗಿ ನಿಂತು ಬೇಡಿ ಅವರು ಕೊಟ್ಟಾಗ, ಕೊಟ್ಟ ಜಾಗದಲ್ಲಿ ಕೂತೋ ಅಥವಾ ನಿಂತೋ ಊಟ ಮಾಡಲು ಅವರ ಬಡತನವೇ ಕಾರಣ. ಅವರ ಬದುಕನ್ನು ಆವರಿಸಿರುವ ಅಜ್ಞಾನವೇ ಕಾರಣ. ಅವರ ಅಜ್ಞಾನಕ್ಕೆ ಅನಕ್ಷರತೆಯೇ ಕಾರಣ. ಕಡೆಗೆ ಅವರ ಅನಕ್ಷರತೆಗೂ ಬಡತನವೇ ಕಾರಣ. ಇವೆಲ್ಲಕ್ಕೂ ಒಂದಕ್ಕೊಂದು ಬಿಡಿಸಲಾಗದ ನಂಟಿದೆ. ಹಿಂದಿನಿಂದಲೂ, ಇಂದೂ ಕೂಡಾ ಸಾಕು ಪ್ರಾಣಿಗಳಿಗೆ ಈ ರೀತಿ ಊಟ ಹಾಕುವುದಿದೆ. ಇಂದು ಸಾಕು ಪ್ರಾಣಿಗಳಿಗೂ ಹೆಚ್ಚಿನ ಆತಿಥ್ಯ, ಗೌರವ ಸಿಗುತ್ತಿದೆ. ದಲಿತರ ಬದುಕು ಪ್ರಾಣಿಗಳಿಂದ ಕಡೆಯಾಗಿದೆ. ದಲಿತರು ತಮ್ಮ ಹೀನ ಸ್ಥಿತಿಯನ್ನು ಅರ್ಥಮಾಡಿಕೊಂಡು ತಾವೇ ಸ್ವಪ್ರಯತ್ನದಿಂದ ಹೊರಬರದ ಹೊರತು ಅವರ ಸ್ಥಿತಿ ಸುಧಾರಿಸುವುದಿಲ್ಲ. ಬದುಕು ಉತ್ತಮಗೊಳ್ಳುವುದಿಲ್ಲ. ಇವೆಲ್ಲಾ ಸಮಸ್ಯೆಗಳಿಂದ ಹೊರಬರಲು ದಲಿತರಿಗಿರುವ ಏಕೈಕ ಅಸ್ತ್ರ ವಿದ್ಯೆ.

ದನದ ಹಟ್ಟಿಯ, ಕೋಳಿಯೊಡ್ಡಿಯ ಮತ್ತು ಕುರಿಯೊಡ್ಡಿಯ ನಾತವಾವುದೂ ಹೊಲೆಯನ ಮೂಗಿಗೆ ಅರಿವಾಗಲಿಲ್ಲ. ಹಣತೆ ಸೊಡರಿನ ಮಬ್ಬು ಬೆಳಕಿನಲ್ಲಿ "ಇರಿಚಲು ಬೀಸಿ ನಸುವೊದ್ದೆಯಾದಂತಿದ್ದ, ಕರಿಬೆರಸಿ ಸಗಣಿ ಬಳಿದು ಕರ್‍ರಗಿದ್ದ ನೆಲದ ಮೇಲೆ ಕೂತು, ತಾನು ಬಂದಿದ್ದೇನೆ ಎಂಬುದನ್ನು ಸೂಚಿಸುವ ಸಲುವಾಗಿ, ಕೃತಕವಾಗಿ, ಗಟ್ಟಿಯಾಗಿ ಕೆಮ್ಮಿ, ಗಂಟಲು ಸರಿಮಾಡಿಕೊಂಡು, ಕಾಯುತ್ತಿರುವಾಗ ಐದು ನಿಮಿಷ ಕಳೆದಿರಲಿಲ್ಲ. ಕಾಡಿ ಮೊರವೊಂದನ್ನು ಎರಡು ಕೈಯಲ್ಲಿಯೂ ಎತ್ತಿಕೊಂಡು ಬಂದಳು. ಬಾಳೆ ಎಲೆಯ ಮೇಲೆ ಹಾಕಿಟ್ಟಿದ್ದ ಎಡೆಯನ್ನು ಮೊರದಿಂದ ಜಾರಿಸಿ, ಗುತ್ತಿಯ ಮುಂದೆ ನೆಲದ ಮೇಲಿಡುತ್ತಲೇ ಮಾತಾಡತೊಡಗಿದಳು." (ಕುವೆಂಪು : 'ಮಲೆಗಳಲ್ಲಿ ಮದುಮಗಳು', ೧೬, ೧೭)

ಕಾಡಿ ಮೊರವನ್ನು ಮುಟ್ಟಿಸದೆ ಹಿತ್ತಿಲ ಬಾಗಿಲಲ್ಲಿ ಕೂತಿದ್ದ ಗುತ್ತಿಗೆ ಎಲೆಯಲ್ಲಿ ಊಟ ಬಡಿಸುವುದು ಅಸ್ಪೃಶ್ಯತೆಗೆ ಹಿಡಿದ ಕನ್ನಡಿಯಾಗಿದೆ. ಗುತ್ತಿ ಊಟ ಮಾಡಲು ಕೂರುವ ಜಾಗವೇ ಅಸಹ್ಯಕರವಾದ ವಾಸನೆ ಬರುವ ಕೊಟ್ಟಿಗೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿನ 'ಶೂದ್ರರಿಗೆ ತಾವು ಬ್ರಾಹ್ಮಣರಿಂದ ಶೋಷಣೆಗೆ, ಅಸ್ಪೃಶ್ಯತೆಗೆ ಒಳಗಾಗುತ್ತಿದ್ದೇವೆ ಎಂಬ ಕಲ್ಪನೆಯಿದೆಯೇ ಹೊರತು ತಮ್ಮಿಂದ ತಮಗಿಂತ ಕೆಳಗಿನ ಜಾತಿಯವರಿಗೆ ತಾವು ಶೋಷಿಸುತ್ತಿದ್ದೇವೆ. ಅಸ್ಪೃಶ್ಯತೆಯಿಂದ ಕಾಣುತ್ತಿದ್ದೇವೆ ಎಂಬ ಕಲ್ಪನೆಯಿಲ್ಲ. ಬ್ರಾಹ್ಮಣರ ಜೊತೆ ಶೂದ್ರರಿಗೆ ಸಹಪಂಕ್ತಿ ಭೋಜನವಿಲ್ಲ ನಿಜ.' ಹಾಗೆಯೇ ಶೂದ್ರರೊಂದಿಗೆ ದಲಿತರಿಗೆ ಕೂಡ ಸಹಪಂಕ್ತಿ ಬೋಜನವಿಲ್ಲ'. "ಯಾವ ಯಾವ ಜಾತಿಗಳವರಿಗೆ ಎಲ್ಲೆಲ್ಲಿ ಪ್ರವೇಶವಿದೆ, ಯಾರು ಎಲ್ಲಿ ಕೂಡಬೇಕು, ಎಲ್ಲಿ ನಿಲ್ಲಬೇಕು, ಎಲ್ಲಿ ಊಟ ಮಾಡಬೇಕು, ಎಲ್ಲಿ ಮಲಗಬೇಕು, ಯಾರು ಯಾರನ್ನು ಎಷ್ಟು ಮುಟ್ಟಿಸಿಕೊಳ್ಳಬಹುದು ಮುಂತಾದ ಜಾತಿ ಸೂಕ್ಷ್ಮಗಳನ್ನು ಕುವೆಂಪು ಕಾದಂಬರಿಗಳು ದಟ್ಟವಾಗಿ ಚಿತ್ರಿಸಿವೆ" (ಅಶೋಕ ಟಿ.ಪಿ. 'ಕುವೆಂಪು ಕಾದಂಬರಿಗಳು : ಎರಡು ಅಧ್ಯಯನಗಳು', ೪೯)

ಕುವೆಂಪು ಅವರು ಹೀಗೆ ಚಿತ್ರಿಸಿರುವುದರಲ್ಲಿ ಅತಿಶಯೋಕ್ತಿಯೇನಿಲ್ಲ. ಏಕೆಂದರೆ ಇಂತಹ ಪದ್ಧತಿಗಳು ಅಂದಿನ ಸಮಾಜದ ವಾಸ್ತವಕ್ಕೆ ಹಿಡಿದ ಕನ್ನಡಿಯಂತಿದೆ. ಹಾಗೆಂದ ಮಾತ್ರಕ್ಕೆ ವಿಜ್ಞಾನ-ತಂತ್ರಜ್ಞಾನ ಬೆಳೆದ ಆಧುನಿಕ ಸಮಾಜದಲ್ಲಿ ಇಂತಹ ಪದ್ಧತಿ ಇಲ್ಲವೇ ಇಲ್ಲ ಎಂದಲ್ಲ. ಇಂದಿಗೂ ಕೆಲವು ಹಳ್ಳಿಗಳಲ್ಲಿ ಇಂತಹ ನಿಕೃಷ್ಟ ಪದ್ಧತಿ ಎಗ್ಗು-ಸಿಗ್ಗಿಲ್ಲದೆ ಅವ್ಯಾಹತವಾಗಿ ಮುಂದುವರೆದಿದೆ. ಸಮಾಜದಲ್ಲಿ 'ಮೇಲ್ಜಾತಿ' ಎಂದು ಕರೆಸಿಕೊಂಡವರ ಹೊಲ-ಗದ್ದೆಗಳಲ್ಲಿ ದಲಿತ ಹೆಣ್ಣುಮಕ್ಕಳು ದುಡಿಯಲು ಹೋದಾಗ ಅಸ್ಪೃಶ್ಯತೆ ಆಚರಣೆ ಭರದಿಂದ ನಡೆಯುತ್ತದೆ. ದಲಿತ ಹೆಣ್ಣು ಮಕ್ಕಳಿಗೆ ಬಾಯಾರಿಕೆಯಾದಾಗ ನೀರನ್ನು

ಮೇಲಿನಿಂದ ಅವರು ಬಾಯಿ ಹತ್ತಿರ ಒಡ್ಡಿಕೊಂಡಿರುವ ಎರಡೂ ಬೊಗಸೆ ಕೈಗಳೊಳಗೆ ಸುರಿಯಲಾಗುತ್ತದೆ. ಹಾಗೆ ಮೇಲಿಂದ ಸುರಿಯುವ ನೀರಿನಲ್ಲಿ ಅರ್ಧದಷ್ಟು ಕೂಡಾ ದಲಿತರ ಬಾಯೊಳಗೆ ಸೇರುವುದಿಲ್ಲ. ಇನ್ನು ಊಟ ಬಡಿಸುವ ವಿಚಾರ ಹೇಳಲು ಅಸಾಧ್ಯ. ಕೊಳಕುವಾಸನೆ ಬರುವ ಪ್ರಾಣಿ-ಪಕ್ಷಿಗಳನ್ನು ಸಾಕುವ, ಅವುಗಳ ಮಲ-ಮೂತ್ರಗಳ ದುರ್ವಾಸನೆಯ ನಡುವೆ ದಲಿತರ ಹೆಣ್ಣುಮಕ್ಕಳ ಹಾಗೂ ಒಟ್ಟಾರೆ ದಲಿತರ ಊಟ ನಡೆಯುತ್ತದೆ.

"ಜಾತಿ ಇಷ್ಟೆಲ್ಲಾ ಅನ್ಯಾಯ ಮತ್ತು ಕೆಡುಕಿಗೆ ಕಾರಣವಾಗಿದ್ದರೂ, ಭಾರತದ ಮಟ್ಟಿಗೆ ಬಹು ಸಂಖ್ಯಾತರಾದ ಅಸ್ಪೃಶ್ಯರು ಏಕೆ ದಂಗೆ ಎದ್ದಿಲ್ಲ ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಬಹುದು. ಅದಕ್ಕೆ ಉತ್ತರ, ಜಗತ್ತಿನ ಬೇರೆ ಬೇರೆ ಪ್ರದೇಶಗಳಲ್ಲಿ ಸಾಮಾಜಿಕ ಕ್ರಾಂತಿಗಳಾಗಿವೆ. ಭಾರತದಲ್ಲಿ ಸಾಮಾಜಿಕ ಕ್ರಾಂತಿಗಳು ಏಕೆ ನಡೆಯಲಿಲ್ಲ. ಈ ಪ್ರಶ್ನೆಗೆ ಒಂದೇ ಉತ್ತರ, 'ಚಾತುರ್ವರ್ಣ್ಯ ಹಾಗೂ ಊಳಿಗಮಾನ್ಯ ಪದ್ಧತಿಯ ಪರಿಣಾಮವಾಗಿ ಹಿಂದೂ ಸಮಾಜದ ಕೆಳವರ್ಗಗಳು ದಂಗೆ ಏಳಲಾರದಷ್ಟು ದುರ್ಬಲಗೊಳ್ಳಲ್ಪಟ್ಟಿವೆ' ಎಂಬುದು, ಎಲ್ಲಿಯವರೆಗೆ ಜಾತಿ ಮತ್ತು ಸಾಂಪ್ರದಾಯಿಕ ಪದ್ಧತಿಗೆ ಆಧಾರವಾಗಿರುವ ಹಾಗೂ ಇವುಗಳನ್ನು ರಕ್ಷಿಸುವ ಊಳಿಗಮಾನ್ಯ ಪದ್ಧತಿ ಇರುತ್ತದೋ ಅಲ್ಲಿಯವರೆಗೆ ದಲಿತರಿಗೆ ಮುಕ್ತಿ ಇಲ್ಲ ಎನ್ನಬಹುದು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಇಡೀ ದೇಶಕ್ಕೆ ದೇಶವೇ ಬ್ರಿಟೀಷರೇ ತೊಲಗಿ ಅನ್ನುತ್ತಿದ್ದಾಗ ಅಂಬೇಡ್ಕರ್ 'ಅಸ್ಪೃಶ್ಯತೆ ತೊಲಗಲಿ ಅಸ್ಪೃಶ್ಯತೆಯನ್ನಾಚರಿಸುವ ಹಿಂದೂಗಳೇ ತೊಲಗಿ' ಎಂದು ಘರ್ಜಿಸುತ್ತಿದ್ದರು". (ಚಿನ್ನಸ್ವಾಮಿ ಸೋಸಲೆ : 'ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ - ಪ್ರಶ್ನೆಗಳು', ೩೬, ೩೭, ೪೦, ೨೭, ೨೮, ೯) ದಲಿತರಲ್ಲೂ ಕೂಡಾ ಒಳ ಅಸ್ಪೃಶ್ಯತೆಗಳಿವೆ. ಮೇಲ್ಜಾತಿಯವರಿಂದ ದಲಿತರ ಮೇಲೆ ನಡೆಯುವ ಅಸ್ಪೃಶ್ಯತೆ ಒಂದೆಡೆಯಾದರೆ ದಲಿತರೇ ದಲಿತರಲ್ಲೇ ನಡೆಸುವ ಅಸ್ಪೃಶ್ಯತೆಯೂ ಸಮಾಜದಲ್ಲಿದೆ. ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯಲ್ಲಿ ಕೊರಚರ ನಡುವೆ ಇರುವ ಅಸ್ಪೃಶ್ಯತೆಗೆ ಉದಾಹರಣೆಗಳಿವೆ. ಕುಮುದಿನಿ ಬ್ರಾಹ್ಮಣನನ್ನು ಮದುವೆಯಾದಳೆಂದು ಕೊರಚರು, ಅವಳ ಕುಟುಂಬದವರು ಅವಳನ್ನು ಬಹಿಷ್ಕರಿಸಿದ್ದಾರೆ. ಈ ರೀತಿಯ ಜಾತಿಯೊಳಗೆ ನಡೆಯುವ ಅಸ್ಪೃಶ್ಯತೆ ಕೊರಚರಲ್ಲಿ ಮಾತ್ರವಲ್ಲದೆ 'ಹೊಲೆಯ' ರಲ್ಲೂ ಕಾಣಬಹುದು. ಇವರ ನಡುವೆಯೂ ಕೆಲವರಲ್ಲಿ ಕೊಡುವ ತೆಗೆದುಕೊಳ್ಳುವ ಸಂಪ್ರದಾಯಗಳಿಲ್ಲ. ಅವರಲ್ಲೇ ಒಂಭತ್ತು ವಿಧಗಳುಂಟು ಎನ್ನುತ್ತಾರೆ. ಹೀಗೆ ದಲಿತರೇ ತಮ್ಮಲ್ಲಿ ಅಸ್ಪೃಶ್ಯತೆಯನ್ನು ಆಚರಿಸಿಕೊಳ್ಳುತ್ತಿದ್ದರೆ ತಾವೆಲ್ಲಾ ಒಗ್ಗಟ್ಟಾಗಿ ಮೇಲ್ಜಾತಿಯವರಿಂದ ನಡೆಯುತ್ತಿರುವ ಅಸ್ಪೃಶ್ಯತೆಯನ್ನು ಪ್ರತಿಭಟಿಸಿ ಪರಿಹರಿಸಿಕೊಳ್ಳಲು ಹೇಗೆ ಸಾಧ್ಯವಾಗುತ್ತದೆ.

ಮೊದಲು ದಲಿತರು ತಮ್ಮಲ್ಲಿರುವ ಲೋಪ-ದೋಷಗಳನ್ನು ಸರಿಪಡಿಸಿಕೊಂಡಾಗ ಮಾತ್ರ ಇತರರ ವಿರುದ್ಧ ಹೋರಾಡಲು ಸಾಧ್ಯವಾಗುತ್ತದೆ.

ನರ್ಸ್ ಮಿಡ್‌ಬಾಯಿಯನ್ನು ಕರೆಯಲು ಹೋದ ಶ್ಯಾಮಲ ಅವರು ಕೊಡುವ ಹಾಲು ಮತ್ತು ಬ್ರೆಡ್ಡನ್ನು ತೆಗೆದುಕೊಳ್ಳಲು ನಿರಾಕರಿಸುತ್ತಾಳೆ. ಮನೆಯಿಂದ ಬರುವಾಗಲೇ ಪಾರ್ತಕ್ಕ ಹೇಳಿ ಕಳಿಸಿರುತ್ತಾರೆ. "ಅವಳ ಮನೆಯಲ್ಲಿ ಎಂತದಾದರೂ ಕೊಟ್ಟರೆ ತಿನ್ನಬೇಡ. ಮಾಂಸ ತಿನ್ನುವ ಜನ. ಹೇಳಿ ಓಡಿ ಬಂದು ಬಿಡು ಅಂತ". (ವೈದೇಹಿ : 'ಅಸ್ಪೃಶ್ಯರು', ೭೨, ೭೩) ಕ್ರಿಸ್ತಿಯನ್‌ರಾದ ಮಿಡ್‌ವೈಫ್ ಮನೆಗೆ ಹೋಗುವಾಗಲೇ ಪಾರ್ತಕ್ಕ 'ಏನೂ ತೆಗೆದುಕೊಳ್ಳಬೇಡ' ಎಂದು ಹೇಳಿ ಕಳಿಸುವ ಮಾತುಗಳು ಅಸ್ಪೃಶ್ಯತೆಯ ಕರಾಳ ಮುಖವನ್ನು ತೋರಿಸುತ್ತವೆ. ಮಿಡ್‌ವೈಫ್ ಮನೆಗೆ ಬಂದಾಗಲೂ ಶಾಮಿ ಪಕ್ಕ ಕೂತಿದ್ದರೂ ಮಿಡ್‌ವೈಫ್‌ಳನ್ನು ಮುಟ್ಟಿಸಿಕೊಳ್ಳುವುದಿಲ್ಲ. ಪಾರ್ತಕ್ಕ ಮತ್ತು ಗೌರಮ್ಮ ಮಿಡ್‌ವೈಫ್‌ರಿಂದ ಅಂತರವನ್ನು ಕಾಯ್ದುಕೊಳ್ಳುತ್ತಾರೆ. ಮುಟ್ಟಿದರೆ ಮೈಲಿಗೆಯಾಗುತ್ತದೆಂದು ಭಾವಿಸುತ್ತಾರೆ. ಈ ಕಾದಂಬರಿಯಲ್ಲಿ ಶೂದ್ರಳಾದ ಸೀತು ಬ್ರಾಹ್ಮಣರು ಮುಟ್ಟಿದಾಗ ಮೈಲಿಗೆಯೆನ್ನುವುದಿಲ್ಲ. ಆದರೆ 'ಕೊರಗರು' ಮುಟ್ಟಿದರೆ ಮೈಲಿಗೆಯಾಗುತ್ತದೆಂದು ಕೂಗಾಡುತ್ತಾಳೆ. ಸೀತುವಿನ ಅಸ್ಪೃಶ್ಯತೆಯನ್ನು ಜಯ, ಪುಟ್ಟ ಮುಂತಾದ ಮಕ್ಕಳು ಪ್ರಶ್ನೆ ಮಾಡುತ್ತಾರೆ.

ಹೆರಿಗೆ ನೋವಿನಿಂದ ಆಸ್ಪತ್ರೆ ಸೇರುವ 'ಕೂಸ'ಳನ್ನು 'ಪಾರಾಯಣ', 'ಜಪ' ಮಾಡುವ ಡಾಕ್ಟರು ಮುಟ್ಟದೆ ಸತ್ತದ್ದು ಅಸ್ಪೃಶ್ಯತೆಯ ಅಮಾನವೀಯತೆಯ ಅನಾವರಣವಾಗಿದೆ. 'ಅಸ್ಪೃಶ್ಯತೆ' ಸಾವಿಗಿಂತ ದೊಡ್ಡದಾಗಿ ಅಣಕಿಸುತ್ತದೆ. ಒಂದು ಜೀವಕ್ಕಿಂತ ಅಸ್ಪೃಶ್ಯತೆಯ ಬೆಲೆಯೇ ಹಿರಿದಾಗಿ ಕಾಣುತ್ತದೆ. ಇಂತಹ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ದಲಿತ-ದಲಿತೇತರರ ನಡುವೆ ಅಂತರ್‌ಜಾತಿ ವಿವಾಹಗಳು ಏರ್ಪಡುವಂತಾಗಬೇಕು. ಸಾರ್ವಜನಿಕ ಸ್ಥಳಗಳು, ದೇವಸ್ಥಾನಗಳಲ್ಲಿ ದಲಿತರಿಗೂ ಪ್ರವೇಶಾವಕಾಶ ಸಿಗುವಂತೆ ಆಗಬೇಕು. ಮೇಲ್ಜಾತಿಯವರು ಮತ್ತು ಕೆಳಜಾತಿಯವರಲ್ಲಿ ಪರಸ್ಪರ ಪ್ರೀತಿ ಉಂಟಾಗಬೇಕು. ಪ್ರೀತಿಯಿಂದ ಎಲ್ಲವನ್ನೂ ಗೆಲ್ಲಲು ಸಾಧ್ಯ. ಅಸ್ಪೃಶ್ಯರಿಗೆ ಪ್ರತ್ಯೇಕ ವಾಸಸ್ಥಾನಗಳನ್ನು ಮೀಸಲಾಗಿಡುವುದನ್ನು ತಪ್ಪಿಸಬೇಕು. ದಲಿತ ಮತ್ತು ದಲಿತೇತರರ ನಡುವೆ ಸಾರ್ವಜನಿಕ ಸ್ಥಳಗಳಲ್ಲಿ, ಸಭೆ-ಸಮಾರಂಭಗಳಲ್ಲಿ ಸಹಪಂಕ್ತಿ ಭೋಜನವನ್ನು ಏರ್ಪಡಿಸುವಂತಾಗಬೇಕು.

ಮಕ್ಕಳಿಂದ ನಡೆಯುವ ಅಸ್ಪೃಶ್ಯತೆಯ ಆಚರಣೆಗೆ ಮತ್ತೊಂದು ಉದಾಹರಣೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪ್ರಸಂಗಗಳು. ಕಾಡು, ಧರ್ಮು, ತಿಮ್ಮು ಇವರಿಂದ ಹೊಲೆಯರ ಮೇಲೆ 'ಅಸ್ಪೃಶ್ಯತೆ' ನಡೆಯುತ್ತದೆ.

‘ಮಲೆಗಳಲ್ಲಿ ಮದುಮಗಳು’ ಕಾದಂಬರಿಯಲ್ಲಿ ಅಸ್ಪೃಶ್ಯತೆಯನ್ನು ಸೂಚಿಸುವ ಸಂದರ್ಭಗಳು ಅತ್ಯಧಿಕವಾಗಿವೆ. ಅದರಲ್ಲೂ ಮಕ್ಕಳಲ್ಲಿ ಕಂಡು ಬರುವ ಅಸ್ಪೃಶ್ಯತೆ ಬೆರಗು ಮೂಡಿಸುತ್ತದೆ.

“ಕಾಡಣ್ಣಯ್ಯ, ಅವನ್ನ ನೋಡಿದ್ರೆ ಹಳೆಮನೆ ಬೈರನ್ನ ಕಂಡ್ಹಾಂಗ ಕಾಣ್ತದಲ್ಲೇನೊ?

ವಾಲಗದವನೋ ಅವನು ! ಹಳೆಮನೆ ಬೈರನ್ನ ಕೈಲಿ ಮದುವೆ ವಾಲಗ ಊದಿಸ್ತಾರೇ

ನೋ ಯಾರಾದರೂ ? ಎಂದನು ಕಾಡ.

ಅಂವ ನಿಮ್ಮ ಹೊಲೇರ್ ಬೈರನ್ಹಾಂಗೇ ಇಲ್ಲೇನೋ, ಧರಂಬಾವ?

ಧರ್ಮುಗೆ ಆಗಲೆ ಗೊತ್ತಾಗಿತ್ತು, ಅಷ್ಟು ಷೋಕಿಯಾಗಿ ಕುಳಿತು ಅತ್ತಿತ್ತ ತಲೆಯಾಡಿಸಿ ವಾಲಗ ಊದುತ್ತಿದ್ದವರು ತಮ್ಮ ಮನೆಯ ಹೊಲಗೇರಿಯ ಮಂಜ, ತಿಮ್ಮ, ಸಿದ್ಧ, ಬೈರ ಎಂದು.

ಥೂ! ಹೊಲೇರ ಕೈಲಿ ಯಾರಾರೂ ಮದುವೆಮನೆ ವಾಲಗ ಊದಿಸ್ತಾರೇನೊ? ಅಲ್ಲೇನೋ, ಧರ್ಮು? ಕಾಡು ಕೇಳಿದನು ಮತ್ತೆ.

ಅಷ್ಟರಲ್ಲಿ ವಾಲಗ ಊದುತ್ತಿದ್ದವನೆ ಇವರತ್ತ ತಿರುಗಿ, ವಾಲಗ ನಿಲ್ಲಿಸಿ, ನಸುನಗುತ್ತಾ ಕೇಳಿದನು. ನನ್ನ ಗುರುತು ಸಿಕ್ಕಲೇ ಇಲ್ಲಾ ಅಂತಾ ಕಾಣ್ತದೆ ನಮ್ಮ ಕೋಣೂರು ಸಣ್ಣಯ್ಯೋರಿಗೆ?..ನಾನು ಕಣ್ರೋ, ಹಳೆಮನೆ ಬೈರ!” (ಕುವೆಂಪು : ‘ಮಲೆಗಳಲ್ಲಿ ಮದುಮಗಳು’, ೫೩೬)

ಹೊಲೆಯರು ವಾಲಗ ಊದುತ್ತಿರುವುದರಿಂದ ಮತ್ತು ಹೊಲೆಯರು ಊದಿದ ವಾಲಗವನ್ನು ಇಷ್ಟಪಟ್ಟು ಕೇಳಿದ್ದರಿಂದ ತನಗೆ ಭರಿಸಲಾರದ ಅವಮಾನವನ್ನು ಅನುಭವಿಸುತ್ತಾನೆ ತಿಮ್ಮು. ಕೀಳುಜಾತಿಯ ಹೊಲೆಯ, ದನಕಾಯುವವನು, ಗೊಬ್ಬರ ಹರಡುವವನು ಒಟ್ಟಾರೆ ನಾವು ಹೇಳಿದಂತೆ ಕೇಳಿಕೊಂಡಿರುವವ ಕೈಯಲ್ಲಿ ‘ವಾಲಗ’ ಊದಿಸುತ್ತಿರುವುದು ತಿಮ್ಮುಗೆ ಸಾಕಷ್ಟು ನೋವನ್ನುಂಟು ಮಾಡಿದೆ. ಅದರಿಂದಲೇ ಅವನು “ಥೂ, ಬನ್ರೋ! ಈ ಬಡು ತಿನ್ನೋರ ವಾಲಗ ಏನು ಕೇಳಾದು!” (ಕುವೆಂಪು : ‘ಮಲೆಗಳಲ್ಲಿ ಮದುಮಗಳು’, ೫೩೬) ಎಂದು ಧರ್ಮು, ಕಾಡುವನ್ನು ಅಲ್ಲಿಂದ ಎಳೆದುಕೊಂಡು ಹೊರಡುತ್ತಾನೆ. ಈ ಸನ್ನಿವೇಶವು ಶೂದ್ರರ ಮಕ್ಕಳಲ್ಲೂ ಇರಬಹುದಾದ ಅಸ್ಪೃಶ್ಯತೆಯನ್ನು ತೋರಿಸುತ್ತದೆ. ‘ಬೆಳೆಯುವ ಪೈರು ಮೊಳಕೆಯಲ್ಲಿ’ ಎಂಬ ಗಾದೆ ಮಾತಿನಂತೆ ಮುಂದೆ ಬೆಳೆದು ದೊಡ್ಡವರಾದ ಮೇಲೆ ಅಸ್ಪೃಶ್ಯರನ್ನು ಶೋಷಿಸುವ ಒಬ್ಬೊಬ್ಬ ಜಮೀನ್ದಾರನಾಗುವುದು ಕಂಡು ಬರುತ್ತದೆ. ಇದಕ್ಕೆ ಕಾರಣ

ಮಕ್ಕಳು ಬೆಳೆದ ವಾತಾವರಣ. ಸದಾ ಹೊಲೆಯರನ್ನು ಬೈಯುತ್ತಾ, ಅವರನ್ನು ಮನೆಯಿಂದ ಹೊರಗಿಡುತ್ತಾ, ಅವರ ಕೈಯಲ್ಲಿ ಹೊಲಗದ್ದೆಗಳಲ್ಲಿ ಕೆಲಸ ಮಾಡಿಸಿಕೊಳ್ಳುವ ದೊಡ್ಡವರನ್ನು ನೋಡಿಯೇ ಈ ಮಕ್ಕಳು ಕಲಿತಿದ್ದಾರೆ. ಅವರೇ ಇವರಿಗೆ ಪ್ರೇರಣೆಯಾಗಿರುತ್ತಾರೆ. ಚಿಕ್ಕ ಮಕ್ಕಳು ಏಕವಚನದಿಂದ ಮಾತಾಡಿದರೆ ಹೊಲೆಯನಾದ ಬೈರ, 'ನಾನು ಕಣ್ರೋ, ಹಳೆಮನೆ ಬೈರ' ಎಂದು ಚಿಕ್ಕಮಕ್ಕಳಿಗೂ ಮರ್ಯಾದೆ ಕೊಡುತ್ತಾನೆ. ಇದಕ್ಕೆ ಕಾರಣ ಜಾತಿವ್ಯವಸ್ಥೆ.

ದಲಿತರ ಮೇಲೆ ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ಅಸ್ಪೃಶ್ಯತೆಗೆ ಸಮಾಜವೇ ವೇದಿಕೆಯಾಗಿದೆ. ಬಿಸಿಯೂಟ ತಯಾರಿಕೆಯ ಯೋಜನೆಯಲ್ಲಿ ದಲಿತ ಮಹಿಳೆ ಅಡುಗೆ ಸಹಾಯಕಿಯಾಗಿ ಸೇರಿದರೂ ಸವರ್ಣೀಯರ ಮಕ್ಕಳು ಊಟ ಮಾಡದಂತೆ ಅವರನ್ನು ತಡೆಯಲಾಗುತ್ತದೆ. ದಲಿತ ಯುವಕ ಮೇಲ್ಜಾತಿಯ ಯುವತಿಯನ್ನು ಪ್ರೀತಿಸಿದರೆ ಅವನನ್ನು ಹೇಳ ಹೆಸರಿಲ್ಲದಂತೆ ಕೊಂದು ಬಿಡುವ ಸುಳಿವೇ ಇಲ್ಲದಂತೆ ಮಾಡಿಬಿಡುವ ಸಾಕಷ್ಟು ಪ್ರಕರಣಗಳು ಇಂದಿಗೂ ಸಮಾಜದಲ್ಲಿ ನಡೆಯುತ್ತಿವೆ. ದಲಿತ ಮಹಿಳೆಯರು ಕೊಳವೆಬಾವಿ ನೀರಿಗೆ ಹೋದಾಗ ದಲಿತ ಮಹಿಳೆಯನ್ನು ಕೊನೆಯವರೆಗೂ ಕಾಯುವಂತೆ ಮಾಡುವುದು. ಆಕೆ ಬಿಂದಿಗೆ ಇಟ್ಟ ಜಾಗವನ್ನು ತೊಳೆದು ಮತ್ತೆ ನೀರನ್ನು ಹಿಡಿಯುವುದು ಸರ್ವೇಸಾಮಾನ್ಯವಾಗಿ ಇಂದಿಗೂ ನಡೆಯುತ್ತಿವೆ. ಅಲ್ಲದೇ ಸವರ್ಣೀಯರ ದೇವಸ್ಥಾನಗಳಿಗೆ ದಲಿತರ ಪ್ರವೇಶ ನಿಷಿದ್ಧವಾಗಿದೆ. ಮೇಲ್ಜಾತಿಯವರ ಹೊಲ, ಗದ್ದೆ, ತೋಟಗಳಲ್ಲಿ ದಲಿತರು, ದಲಿತ ಹೆಣ್ಣುಮಕ್ಕಳು ಹಣ್ಣು, ತರಕಾರಿ, ಹೂವು, ಸೊಪ್ಪು ಮುಂತಾದವುಗಳನ್ನು ಕದ್ದು ಸಿಕ್ಕಿ ಬಿದ್ದರೆ ಕಂಬ ಅಥವಾ ಮರಕ್ಕೆ ಕಟ್ಟಿಹಾಕಿ ಜೀವ ಹೋಗುವಂತೆ ಹೊಡೆಯಲಾಗುತ್ತದೆ. ಕೆಲವೊಮ್ಮೆ ದಲಿತ ಮಹಿಳೆ ಕಳವು ಮಾಡಿ ಸಿಕ್ಕಿಬಿದ್ದಾಗ ಅವಳನ್ನು ಅತ್ಯಾಚಾರ ಮಾಡಿರುವ ನಿದರ್ಶನಗಳೂ ಇವೆ. ಉದಾಹರಣೆಗೆ ಗೀತಾನಾಗಭೂಷಣ ಅವರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯ ಕಥನ ಕೇಂದ್ರವೇ 'ಲಚ್ಚಿ' ಕಳ್ಳತನ ಮಾಡಿ ಕುಲಕರ್ಣಿ ಕೈಗೆ ಸಿಕ್ಕಿಹಾಕಿಕೊಂಡು ಅವನ ಕಾಮಕ್ಕೆ ಒಪ್ಪದಾಗ ಜೈಲಿಗೆ ಕಳಿಸುತ್ತಾನೆ.

ವಾಸ್ತವ ಸಮಾಜದಲ್ಲಿ ದಲಿತ ಮಹಿಳೆಯ ಮೇಲೆ ನಡೆಯುವ ಘಟನೆಗಳೇ ಕಾದಂಬರಿ ಸಾಹಿತ್ಯಕ್ಕೂ ಪ್ರೇರಣೆಯನ್ನು ಒದಗಿಸಿವೆ. ಅಸ್ಪೃಶ್ಯತೆಯ ಕಬಂಧ ಬಾಹುಗಳಿಂದ ಬಿಡಿಸಿಕೊಳ್ಳಬೇಕಾದರೆ ಅಂಬೇಡ್ಕರ್ ಅವರು ಹೇಳಿರುವ ಪಂಚಸೂತ್ರಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ.

೧. "ಸ್ವಸುಧಾರಣೆ

೨. ಸ್ವಏಳಿಗೆ

೩. ಸ್ವಾವಲಂಬನೆ

೪. ಸ್ವನಂಬಿಕೆ

೫. ಸ್ವಾಭಿಮಾನ"

(ಅರ್ಜುನ ಗೊಳಸಂಗಿ : 'ದಲಿತ ಚಿಂತನ', ೭೫, ೭೬.)

ಇವುಗಳನ್ನು ಅಳವಡಿಸಿಕೊಳ್ಳಲು ಅಸ್ಪೃಶ್ಯರಿಗೆ ಸ್ವಪ್ರಯತ್ನ ಬೇಕಿದೆ.

ದಲಿತ ಹೆಣ್ಣು ಮಕ್ಕಳು ಉದ್ಧಾರವಾಗಬೇಕಾದರೆ ಮೊದಲಿಗೆ ಅವರನ್ನು ಅವರೇ ಸುಧಾರಿಸಿಕೊಳ್ಳಬೇಕು. ಶಿಕ್ಷಣವನ್ನು ಕಲಿಯಬೇಕು. ಶಿಕ್ಷಣವನ್ನು ಕಲಿತರೆ ಉದ್ಯೋಗವನ್ನು ಪಡೆಯಬಹುದು. ಒಬ್ಬ ದಲಿತ ಮಹಿಳೆ ಶಿಕ್ಷಣವನ್ನು ಪಡೆದರೆ ಅವಳ ಇಡೀ ಕುಟುಂಬವೇ ಸುಶಿಕ್ಷಿತವಾಗುವಂತೆ ಮಾಡುತ್ತಾಳೆ. ಸ್ವ–ಸುಧಾರಣೆಯಾಗಬೇಕಾದರೆ ಸ್ವ–ಇಚ್ಛೆ ಇರುವುದು ಬಹಳ ಮುಖ್ಯವಾಗುತ್ತದೆ. ದಲಿತ ಹೆಣ್ಣುಮಕ್ಕಳು ಯಾವಾಗ ಶಿಕ್ಷಣ ಪಡೆದು ಉದ್ಯೋಗವನ್ನು ಹೊಂದುತ್ತಾರೋ ಆಗಲೇ ಅವರ ಸ್ವ–ಏಳಿಗೆ ಆಗುತ್ತದೆ. ಯಾವಾಗ ದಲಿತ ಹೆಣ್ಣುಮಕ್ಕಳು ಸ್ವ–ಏಳಿಗೆ ಹೊಂದುತ್ತಾರೋ ಆಗ ಅವರು ತಮ್ಮ ಸಮಸ್ಯೆಗಳಿಗಾಗಿ ಇತರರನ್ನು ಅವಲಂಬಿಸುವುದಿಲ್ಲ. ಸ್ವಾವಲಂಬಿಗಳಾಗಿ ಬದುಕುತ್ತಾರೆ. ಯಾವಾಗ ಸ್ವಾವಲಂಬನೆಯಿಂದ ಬದುಕುತ್ತಾರೋ ಆವಾಗ ತಮ್ಮ ಮೇಲೆ ತಮಗೆ ಸ್ವ–ನಂಬಿಕೆ ಬರುತ್ತದೆ.

ಯಾವುದೇ ಸಮಸ್ಯೆ ಬಂದರೂ ತಮ್ಮಿಂದ ತಾವೇ ಬಗೆಹರಿಸಿಕೊಳ್ಳುವ ಧೈರ್ಯ ಕೂಡಾ ಬರುತ್ತದೆ. ಯಾವಾಗ ತಮ್ಮ ಮೇಲೆ ತಮಗೆ ಸ್ವನಂಬಿಕೆ ಬರುತ್ತದೋ ಆವಾಗ ದಲಿತ ಹೆಣ್ಣುಮಕ್ಕಳು ಸ್ವಾಭಿಮಾನದಿಂದ ಬದುಕುತ್ತಾರೆ. ಆಗ ದಲಿತ ಹೆಣ್ಣುಮಕ್ಕಳನ್ನು ಯಾವುದೇ ಸಮಸ್ಯೆಗಳು ಕಾಡುವುದಿಲ್ಲ. ಇವೆಲ್ಲವಕ್ಕೂ ಒಂದಕ್ಕೊಂದು ಅಂತರ ಸಂಬಂಧವಿದೆ. ಇವೆಲ್ಲವನ್ನೂ ಜಯಿಸಲು ಮೊದಲು ದಲಿತ ಮಹಿಳೆಯರಿಗೆ ಸ್ವಪ್ರಯತ್ನ ಎಂಬುದು ಬಹಳ ಮುಖ್ಯವಾಗುತ್ತದೆ. ಆಗ ದಲಿತ ಮಹಿಳೆಯನ್ನು ಯಾವ ಅಸ್ಪೃಶ್ಯತೆಯ ಭೂತವು ಕಾಡುವುದಿಲ್ಲ. ಹೇಗೆಂದರೆ ಒಬ್ಬ ದಲಿತ ಮಹಿಳೆ ಉನ್ನತ ಅಧಿಕಾರ, ಸ್ಥಾನಮಾನದಲ್ಲಿದ್ದರೆ ಅವರನ್ನು ಸಮಾಜ ನೋಡುವ ದೃಷ್ಟಿಕೋನವೇ ಬದಲಾಗುತ್ತದೆ. ಅಂತಹವರಿಗೆ ದೇವಸ್ಥಾನವಾಗಲೀ 'ಮೇಲ್ವರ್ಗ'ದವರ ಮನೆಗಳಿಗಾಗಲೀ ಪ್ರವೇಶ ನಿರಾಕರಿಸುವುದಿಲ್ಲ.

"ಅಸ್ಪೃಶ್ಯತೆಯನ್ನು ಕುರಿತು ಭಾರತೀಯ ಸಂವಿಧಾನದ ೧೭ನೇ ವಿಧಿಯು ಹೇಳುವುದೇನೆಂದರೆ 'ಅಸ್ಪೃಶ್ಯತೆ'ಯನ್ನು ನಿರ್ಮೂಲನೆಗೊಳಿಸಲಾಗಿದೆ. ಮತ್ತು ಯಾವುದೇ ರೂಪದಲ್ಲಿ ಅದರ ಆಚರಣೆಯನ್ನು ನಿಷೇಧಿಸಲಾಗಿದೆ. 'ಅಸ್ಪೃಶ್ಯತೆ'ಯಿಂದ ಉದ್ಭವಿಸುವ ಯಾವುದೇ ಅಸಮರ್ಥತೆಯನ್ನು ಆಚರಣೆಗೆ ತರುವುದು ಕಾನೂನಿಗೆ ಅನುಸಾರವಾಗಿ ದಂಡನೀಯವಾದ ಅಪರಾಧವಾಗತಕ್ಕದ್ದು ಎಂದು. ಮೇಲಿನದಕ್ಕೆ ಪೂರ್ವಭಾವಿಯಾಗಿ ಸಮಾನತೆಗೆ ಸಂಬಂಧಪಟ್ಟಂತೆ ೧೫ನೇ ವಿಧಿಯಲ್ಲಿ ಈ ಕೆಳಕಂಡಂತೆ ದೃಢೀಕರಿಸಲಾಗಿದೆ. ೧೫(೧) ರಾಜ್ಯವು (ಸರ್ಕಾರ) ಯಾವುದೇ ನಾಗರಿಕನ ವಿರುದ್ಧ ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಅವುಗಳಲ್ಲಿ ಯಾವುದಾದರೊಂದು ಆಧಾರದ ಮೇಲೆ ಮಾತ್ರವೇ ಯಾವ ತಾರತಮ್ಯವನ್ನು ಮಾಡತಕ್ಕದ್ದಲ್ಲ.

೧೫(೨) ಧರ್ಮ, ಮೂಲವಂಶ, ಜಾತಿ, ಲಿಂಗ, ಜನ್ಮಸ್ಥಳ ಅಥವಾ ಅವುಗಳಲ್ಲಿ ಯಾವುದಾದರೊಂದು ಆಧಾರದ ಮೇಲೆ ಮಾತ್ರ ಯಾವನು ನಾಗರಿಕನೊ, ೨.೧. ಅಂಗಡಿಗಳು, ಸಾರ್ವಜನಿಕ ಉಪಾಹಾರ ಗೃಹಗಳು, ಹೋಟೆಲುಗಳು ಮತ್ತು ಸಾರ್ವಜನಿಕ ಮನೋರಂಜನ ಸ್ಥಳಗಳು ಇವುಗಳಿಗೆ ಪ್ರವೇಶಾವಕಾಶದ ಅಥವಾ ೨.೨ ಪೂರ್ಣವಾಗಿ ಅಥವಾ ಭಾಗಶಃ ರಾಜ್ಯನಿಧಿಗಳಿಂದ ಪೋಷಿತವಾದ ಅಥವಾ ಸಾಮಾನ್ಯ ಸಾರ್ವಜನಿಕ ಉಪಯೋಗಕ್ಕಾಗಿ ಸಮರ್ಪಿತವಾದ ಬಾವಿಗಳನ್ನು, ಕೆರೆಗಳನ್ನು, ಸ್ನಾನಘಟ್ಟಗಳನ್ನು, ರಸ್ತೆಗಳನ್ನು ಮತ್ತು ಸಾರ್ವಜನಿಕರು ಸೇರುವ ಸ್ಥಳಗಳ ಉಪಯೋಗದ ಸಂಬಂಧದಲ್ಲಿ ಒಂದು ಯಾವುದೇ ಅಸಮರ್ಥತೆ, ಹೊಣೆ, ಪರಿಬಂಧ ಅಥವಾ ಷರತ್ತಿಗೆ ಒಳಪಟ್ಟಿರತಕ್ಕದ್ದಲ್ಲ." (ಚಿನ್ನಸ್ವಾಮಿ ಸೋಸಲೆ : 'ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ – ಪ್ರಶ್ನೆಗಳು', ೪೦, ೨೭, ೨೮)

ಸಂವಿಧಾನ ಎಷ್ಟೇ ಕಟ್ಟುನಿಟ್ಟಾಗಿ ನಿಯಮಗಳನ್ನು ಜಾರಿಗೆ ತಂದರೂ ನಿಯಮಗಳು ಪುಸ್ತಕದಲ್ಲಿ ಸೇರಿಹೋಗುತ್ತವೆ. ಆದರೆ ಅಸ್ಪೃಶ್ಯತೆಯ ಆಚರಣೆ ಮಾತ್ರ ಸಮಾಜದಲ್ಲಿ ಅವ್ಯಾಹತವಾಗಿ ಮುಂದುವರೆದೇ ಇರುತ್ತದೆ. ಏಕೆಂದರೆ ಅಸ್ಪೃಶ್ಯತೆ ನಡೆಯುತ್ತಿರುವುದು ದಲಿತ ಮಹಿಳೆಯರು ನಿತ್ಯ ಬದುಕುತ್ತಿರುವ 'ಮೇಲ್ಜಾತಿ' ಎಂದು ಕರೆದುಕೊಂಡವರ ಬದುಕಿನ ನಡುವೆ, 'ಅಸ್ಪೃಶ್ಯತೆ' ಸಂಪೂರ್ಣವಾಗಿ ನಾಶವಾಗಬೇಕೆಂದರೆ ಅಸ್ಪೃಶ್ಯತೆಗೆ ಮೂಲವಾಗಿರುವ 'ಜಾತಿಪದ್ಧತಿ' ಮೊದಲು ಸಮಾಜದಿಂದ, 'ಮೇಲ್ಜಾತಿ' ಜನರ ಮನಸ್ಸುಗಳಿಂದ ಹೊರಹೋಗಬೇಕಿದೆ. ಎಲ್ಲಿಯವರೆಗೆ 'ಜಾತಿಪದ್ಧತಿ' ನಾಶವಾಗುವುದಿಲ್ಲವೋ ಅಲ್ಲಿಯವರೆಗೆ ಅಸ್ಪೃಶ್ಯತೆ ನಾಶವಾಗುವುದಿಲ್ಲ. 'ಮುಕ್ಕೋಟಿ' ದೇವತೆಗಳಿರುವ, ಸಾವಿರಾರು ಜಾತಿಗಳಿರುವ, ಹಲವು

ಧರ್ಮಗಳಿರುವ ಭಾರತದಲ್ಲಿ 'ಅಸ್ಪೃಶ್ಯತೆ' ನಿವಾರಣೆಯೆಂಬುದು ಸುಲಭದ ಮಾತಲ್ಲ. ಆದ್ದರಿಂದ ಮನಸ್ಸುಗಳ ಬದಲಾವಣೆಯಿಂದ ಮಾತ್ರ ಅಸ್ಪೃಶ್ಯತೆಯ ನಾಶ ಸಾಧ್ಯ.

ಅನಂತಮೂರ್ತಿಯವರ 'ಭಾರತೀಪುರ' ಕಾದಂಬರಿಯ ಜಗನ್ನಾಥ ಜಾತಿವ್ಯವಸ್ಥೆಯನ್ನು ಹೋಗಲಾಡಿಸಲು ಅಸ್ಪೃಶ್ಯರನ್ನು ಮಂಜುನಾಥನ ಗರ್ಭಗುಡಿಗೆ ಬಿಡಬೇಕೆಂದು ಕನಸು ಕಾಣುತ್ತಾನೆ. ಹೊಲೆಯರ ಉದ್ಧಾರದ ಮಾತುಗಳನ್ನೇ ಆಡುವ ಜಗನ್ನಾಥ ಸ್ವತಃ ಹೊಲತಿ ಕಾವೇರಿಯೇ ಜಗನ್ನಾಥನನ್ನು ಇಷ್ಟಪಟ್ಟಾಗ ಆಕೆಯನ್ನು ಮದುವೆಯಾಗಬಹುದಿತ್ತು. ಆದರೆ ಅವನ ಮನಸ್ಸಿನಾಳದಲ್ಲಿ 'ಜಾತಿ' ಸುಪ್ತವಾಗಿದ್ದದ್ದೇ ಅವನನ್ನು ತಡೆಯುತ್ತದೆ. "ಜಗನ್ನಾಥನಿಗೆ ಅವಳ ಬಗ್ಗೆ ಆಸೆಯಾಗಿತ್ತು ಆದರೆ ತನ್ನ ವರ್ಗದವಳೊಬ್ಬಳ ಬಗ್ಗೆ ಆಸೆಯಾಗಿದ್ದರೆ ಹೇಗೆ ವರ್ತಿಸಬೇಕೆಂದು ಗೊತ್ತಿದ್ದಂತೆ ಈಗ ತಿಳಿದಿರಲಿಲ್ಲ. ಅವಳ ಜೊತೆ ಕ್ಷಣಿಕವಾದ ಮೈಸಂಬಂಧಕ್ಕಿಂತ ಆಚೆನದೇನೂ ಸಾಧ್ಯವಿರಲಿಲ್ಲ. ಆದರೆ ಕಾಮಕ್ಕೆ ಉಪಯೋಗಿಸುವ ಬರಿಯೊಂದು ವಸ್ತುವಿಗಿಂತ ಹೆಚ್ಚಿನ ವಾಸ್ತವತೆ ನಮ್ಮ ನಡುವೆ ಹುಟ್ಟಲಾರದು; ತಾನು ಕಾವೇರಿಯನ್ನು ಕೂಡಿದರೆ ಅದು ಮಾನವೀಯ ಸಂಬಂಧವಾಗಲಾರದು. ಇಷ್ಟೊಂದು ಆಸೆ ಹುಟ್ಟಿಸಬಲ್ಲ ಮೈ ಹೀಗೆ ತನಗೆ ನಿಜವಾಗಿಯೂ ಅತೀತವಾದ್ದೆಂಬುದು ವರ್ಗಭೇದದ ದುರಂತವನ್ನು ಅವನಿಗೆ ಮನದಟ್ಟು ಮಾಡಿಸಿತು. ಆದರೂ ಅವಳು ರೂಮಿಗೆ ಬಂದಾಗಲೆಲ್ಲ ಮೈ ಬೆಚ್ಚಗಾಗಿ ಹೆದರಿಕೆಯಾಗುತ್ತಿತ್ತು". (ಅನಂತಮೂರ್ತಿ ಯು.ಆರ್., : 'ಭಾರತೀಪುರ', ೪೯) ಜಗನ್ನಾಥನ ಹೊಲೆಯರ ಉದ್ಧಾರ ಕೇವಲ ಮಾತುಗಳಿಗೆ ಮಾತ್ರ ಸೀಮಿತವಾಗಿದೆ. ಇಲ್ಲದಿದ್ದರೆ ಅಸ್ಪೃಶ್ಯಳಾದ ಕಾವೇರಿಯ ಬಗ್ಗೆ ಆಸೆಯಿದ್ದರೂ ಜಾತಿಯ ಕಾರಣಕ್ಕೆ ಸುಮ್ಮನಾಗುತ್ತಿರಲಿಲ್ಲ. ಇದು ವಿಫಲವಾದ ಆದರ್ಶವಾದ. ಮಾತಿಗಿಂತ ಕೃತಿಯೊಳಗಿರಬೇಕಾದದ್ದು ಬದಲಾವಣೆ. ಆದರೆ ಇಲ್ಲಿ ಬದಲಾವಣೆ ಎಂಬುದು ಕೇವಲ ಮಾತಿನ ಮಟ್ಟಕ್ಕೆ ನಿಂತಿದೆ.

ಚೋಮನ ದುಡಿ ಕಾದಂಬರಿಯ ಬೆಳ್ಳಿಯನ್ನಾಗಲೀ, 'ಸಂಸ್ಕಾರ' ಕಾದಂಬರಿಯ ಬೆಳ್ಳಿಯನ್ನಾಗಲಿ, 'ಹಸಿ ಮಾಂಸ ಮತ್ತು ಹದ್ದುಗಳು' ಕಾದಂಬರಿಯ ಲಚ್ಚಿಯನ್ನಾಗಲಿ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಕುಳವಾಡಿ ಸಣ್ಣನ ಮಗಳು ಪುಟ್ಟಿಯನ್ನಾಗಲೀ, ಮೇಲ್ವರ್ಗದ ಯಾವುದೇ ಗಂಡಾಗಲಿ ಅವಕಾಶ ಒದಗಿ ಬಂದಾಗ, ಅಥವಾ ಅವಕಾಶವನ್ನು ತಾವೇ ಮಾಡಿಕೊಂಡಾಗ ದಲಿತ ಹೆಣ್ಣುಮಕ್ಕಳನ್ನು ದೈಹಿಕವಾಗಿ ಉಪಯೋಗಿಸಿಕೊಳ್ಳದೆ ಬಿಟ್ಟಿಲ್ಲ. ವಾಸ್ತವ ಸಮಾಜದಲ್ಲಿ ಬದುಕುತ್ತಿರುವ 'ಮೇಲ್ವರ್ಗದವರು' ಕೂಡಾ ದಲಿತ ಮಹಿಳೆ ದೇಹದ

ವಿಚಾರದಲ್ಲಿ ಹಿಂದಿನಿಂದಲೂ ಹಾಗೂ ಇಂದೂ ಕೂಡಾ ವಿನಾಯಿತಿಯನ್ನು ತೋರಿಲ್ಲ, ತೋರಿಸಿಲ್ಲ.

ಅನಂತಮೂರ್ತಿಯವರ 'ಭಾರತೀಪುರ' ಕಾದಂಬರಿಯ ಜಗನ್ನಾಥ ಮಾತ್ರ ಹೊಲೆಯರ ಉದ್ಧಾರದ ಕನಸು ಕಾಣುತ್ತಿರುವುದರಿಂದ ಕಾವೇರಿಯ ಮೇಲೆ ಮನಸ್ಸಾದರೂ ಹಿಂಜರಿಯುತ್ತಾನೆ. 'ಜಾತಿ ವಿನಾಶ' ಮಾಡಲು ದಲಿತರನ್ನು ಮಂಜುನಾಥನ ಗರ್ಭಗುಡಿಗೆ ಬಿಟ್ಟುಕೊಳ್ಳಲು ಹೊರಡುತ್ತಿರುವ ಜಗನ್ನಾಥನಿಗೆ 'ಜಾತಿ ವಿನಾಶ' ಮಾಡಲು ಇರುವ ಏಕೈಕ ದಾರಿ 'ಅಂತರ ಜಾತಿ ವಿವಾಹ' ಎಂಬ ಅರಿವಾಗುವುದಿಲ್ಲ. ಅಥವಾ ಅರಿವಾದರೂ 'ಅಂತರ್ ಜಾತಿ ವಿವಾಹ'ವಾಗಲು ಅವನ ಒಳ ಮನಸ್ಸು ಹಿಂಜರಿದಿರಬಹುದು. ಯಾವುದೇ ಬದಲಾವಣೆ ಎಂಬುದು ಮೊದಲಿಗೆ ಬದಲಾಯಿಸಲು ಸಿದ್ಧರಿರುವವರಿಂದಲೇ ಸ್ವತಃ ಆರಂಭವಾದರೆ ಒಳಿತು.

೩ ದಲಿತ ಮಹಿಳೆ : ದುಡಿಮೆ ನೆಲೆ

'ದುಡಿಮೆ' ಮತ್ತು ದಲಿತ ಮಹಿಳೆಗೆ ಅವಿನಾಭಾವ ಸಂಬಂಧವಿದೆ. ದುಡಿಮೆಯಿಲ್ಲವೆಂದರೆ ದಲಿತ ಮಹಿಳೆಗೆ ಅಸ್ತಿತ್ವವೇ ಇಲ್ಲ. ಮೇಲ್ವರ್ಗದ ಮಹಿಳೆಯರು ಹೊರಗೆ ಹೋಗಿ ಹೊಲ-ಗದ್ದೆಗಳಲ್ಲಿ ದುಡಿಯುವುದಕ್ಕಿಂತ ಮನೆಯೊಳಗಿನ ಕೆಲಸಗಳಲ್ಲಿ ತೊಡಗಿಸಿಕೊಂಡರೆ, ದಲಿತ ಮಹಿಳೆ ಮನೆಯ ಒಳಗೆ ಮತ್ತು ಹೊರಗೆ ಎರಡೂ ಕಡೆಗಳಲ್ಲಿ ಏಕಕಾಲದಲ್ಲಿ ದುಡಿಯುವ ಅನಿವಾರ್ಯತೆಯಿದೆ. ಸಾಮಾನ್ಯವಾಗಿ ದಲಿತ ಪುರುಷರು ಕುಡುಕನಾಗಿರುವುದರಿಂದ, ಚಟಗಳಿಗೆ ದಾಸರಾಗಿರುವುದರಿಂದ ಮಹಿಳೆಯರು ಹೊರಗೆ ದುಡಿಯದಿದ್ದರೆ ಮನೆಯಲ್ಲಿನ ಮಕ್ಕಳನ್ನು, ಸದಸ್ಯರನ್ನು ಉಪವಾಸ ಕೆಡವಬೇಕಾಗುತ್ತದೆ. ಅಕ್ಷರದಿಂದ ವಂಚಿತಳಾಗಿರುವ ದಲಿತ ಮಹಿಳೆ ಹೊರಗೆ ದುಡಿಯುವುದು ಅನಿವಾರ್ಯ. ಸಾಮಾನ್ಯವಾಗಿ ಹೊಲ, ಗದ್ದೆ, ತೋಟ ಮುಂತಾದವುಗಳನ್ನು ಹೊಂದಿರುವವರು ಸಮಾಜದಲ್ಲಿನ ಮೇಲ್ಜಾತಿಯವರು, ಜಮೀನ್ದಾರರೇ ಆಗಿರುತ್ತಾರೆ. ಇಂಥ ಜಮೀನ್ದಾರರ ಕೈಕೆಳಗೆ ಆಳಾಗಿ ಹೇಳಿದಂತೆ ಕೇಳಿಕೊಂಡು ದಲಿತ ಮಹಿಳೆ ದುಡಿಯುವ ಒತ್ತಡವಿದೆ.

ಶಿಲಾಯುಗಕ್ಕಿಂತ ಹಿಂದೆ ಹೆಣ್ಣು-ಗಂಡೆಂಬ ಭೇದವಿಲ್ಲದೆ ಇಬ್ಬರೂ ಒಟ್ಟಿಗೆ ಬೇಟೆಯಾಡುತ್ತಿದ್ದ ನಿದರ್ಶನಗಳಿವೆ. ಅದರಲ್ಲಿಯೂ ಬಂಡೆಗಳ ಹಿಂದೆ ಅವಿತು ತಂತ್ರಗಳನ್ನು ಉಪಯೋಗಿಸಿ ಪ್ರಾಣಿಗಳನ್ನು ಕೊಲ್ಲುತ್ತಿದ್ದವಳು ಮಹಿಳೆಯೇ ಆಗಿದ್ದಳು. ಆಹಾರ ಸಂಗ್ರಹಣೆ ಮಾಡುವುದರಲ್ಲಿ ಹೆಣ್ಣಿನದೇ ಮೇಲುಗೈಯಾಗಿತ್ತು. ಶಿಲಾಯುಗದ ಆರಂಭದಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿದ್ದುದು ಕಡೆಗೆ ಪುರುಷ ಪ್ರಧಾನತೆಯ ಕಡೆಗೆ ಹೊರಳಿದ್ದಕ್ಕೆ ಸಾಕ್ಷಿಗಳಿವೆ.

ಹಾಗೆಯೇ ದಲಿತರ ಕುಟುಂಬಗಳು ಅತ್ಯಧಿಕವಾಗಿ ಇಂದಿಗೂ ಕೂಡ ಮಾತೃಪ್ರಧಾನತೆಯ ಕುಟುಂಬಗಳಾಗಿವೆ. ಹೊರಗೆ ದುಡಿದು ಬಂದು ಗಂಡ ಮತ್ತು ಮಕ್ಕಳನ್ನು ಸಾಕುವ ಜವಾಬ್ದಾರಿ ಅವಳದೇ ಆಗಿರುವುದರಿಂದ ಮಾತೃಪ್ರಧಾನತೆ ಸ್ಥಿತ್ಯಂತರ, ಸ್ಥಾನಾಂತರಗೊಂಡಿದೆ.

ಮೇಲ್ವರ್ಗದ ಮಹಿಳೆ ಮನೆಯಲ್ಲಿರುವುದರಿಂದ ಕುಟುಂಬದೊಳಗೆ ದೌರ್ಜನ್ಯಕ್ಕೊಳಗಾಗುವ ಸಾಧ್ಯತೆಯಿದೆ. ಆದರೆ ದಲಿತ ಮಹಿಳೆ ಕುಟುಂಬದ ಒಳಗೆ ಮತ್ತು ಹೊರಗೆ ಎರಡೂ ಕಡೆಗಳಲ್ಲಿ ಶೋಷಣೆಗೆ ಒಳಗಾಗುತ್ತಾಳೆ. ಕುಟುಂಬದಲ್ಲಿ ಗಂಡ ಕುಡಿದು ಬಂದು ದೈಹಿಕವಾಗಿ ಹಿಂಸಿಸಿದರೆ, ಕುಟುಂಬದ ಹೊರಗೆ ಆಕೆ ಮೇಲ್ಜಾತಿಯವರ ಕಾಮದ ಕಣ್ಣಿಗೆ ಗುರಿಯಾಗುತ್ತಾಳೆ. ದಲಿತ ಮಹಿಳೆ ದುಡಿಯುವ ಜಾಗಗಳಲ್ಲಿ ದೌರ್ಜನ್ಯಗಳಿಗೆ, ಅತ್ಯಾಚಾರಗಳಿಗೆ ಬಲಿಯಾಗಿರುವುದು ಇತಿಹಾಸದುದ್ದಕ್ಕೂ ಕಂಡು ಬರುತ್ತದೆ. ಕೆಲವೊಮ್ಮೆ ಹೊಟ್ಟೆಪಾಡಿಗಾಗಿ, ನಿರ್ವಾಹವಿಲ್ಲದೆ ಸಹಿಸಿಕೊಂಡು ಬಂದಿದ್ದಾಳೆ. ಕೆಲವೊಮ್ಮೆ ಇಂತಹ ದೌರ್ಜನ್ಯಗಳನ್ನು ಪ್ರತಿಭಟಿಸಿಯೂ ನಿಂತಿದ್ದಾಳೆ. ಪ್ರತಿಭಟಿಸಿ ನಿಂತರೆ ಕೂಲಿಯನ್ನು ಕಳೆದುಕೊಂಡು ಉಪವಾಸವಿರುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅವಳ ಬಡತನ, ಅಸಹಾಯಕತೆ ನಿರ್ವಾಹವಿಲ್ಲದೆ ದೌರ್ಜನ್ಯಗಳನ್ನು ಸಹಿಸಿಕೊಳ್ಳುವಂತೆಯೂ ಮಾಡಿವೆ.

ಸಾಮಾನ್ಯವಾಗಿ ಹೊರಗೆ ದುಡಿದು ಬರುವವರು ಸಂಸಾರದ ಜವಾಬ್ದಾರಿಯನ್ನು ಹೊರುತ್ತಾರೆ. ಈ ಕಾರಣಕ್ಕಾಗಿ ಗಂಡ ಕುಟುಂಬದ ಯಜಮಾನನಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ದಲಿತ ಮಹಿಳೆ ಹೊರಗಡೆ ದುಡಿದು ಸಂಸಾರದ ಜವಾಬ್ದಾರಿ ಹೊರುವುದರಿಂದ ದಲಿತ ಕುಟುಂಬಗಳಲ್ಲಿ ಆಕೆಯೇ ಒಂದು ರೀತಿಯಲ್ಲಿ ಯಜಮಾನಿಯಾಗಿರುತ್ತಾಳೆ. ಆದರೂ ಕುಟುಂಬದಲ್ಲಿ ಕುಡುಕ ಗಂಡನಿಂದ ಹೊಡೆತಗಳನ್ನು ತಿನ್ನಬೇಕಾಗುತ್ತದೆ. ದಲಿತರನ್ನು ಕುರಿತ ಕಾದಂಬರಿಗಳಲ್ಲಿ ದಲಿತ ಮಹಿಳೆಯ ದುಡಿಮೆಯ ಚಿತ್ರಣವನ್ನು ಕಾಣಬಹುದು. ಪುಟ್ಟಿ, ಕೂಸ, ಬೆಳ್ಳಿ, ಸೋನಿ, ಲಚ್ಮಿ, ಕಾವೇರಿ, ಲಚ್ಚಿ, ಸಾಕವ್ವ, ಬೆಳ್ಳಿ ಮುಂತಾದ ದಲಿತ ಮಹಿಳೆಯರು ಹೊರಗೆ ದುಡಿದು ಕುಟುಂಬವನ್ನು ಸರಿದೂಗಿಸಿಕೊಂಡು ಹೋಗುತ್ತಿದ್ದಾರೆ.

'ಚೋಮನ ದುಡಿ' ಕಾದಂಬರಿಯಲ್ಲಿ ಬೆಳ್ಳಿ ತಾಯಿಯಿಲ್ಲದ ಕುಟುಂಬಕ್ಕೆ ತಾಯಿಯಾಗಿ ಇಡೀ ಸಂಸಾರದ ಜವಾಬ್ದಾರಿಯನ್ನು ನಿಭಾಯಿಸುವ ಹೆಣ್ಣಾಗಿದ್ದಾಳೆ. ಕಾಳ, ನೀಲ ಸದಾ ಹಾಸಿಗೆಯಲ್ಲಿರುವವರು, ಬೆಳ್ಳಿಯೇ ಅವರಿಬ್ಬರ ಆರೈಕೆಯನ್ನು ಮಾಡುತ್ತಾಳೆ. ಕಾಡಿಗೆ ಬೆಳಿಗ್ಗೆ ಬೇಗ ಎದ್ದು ಹೋಗಿ ಧಣಿಗಳ ಮನೆಗೆ ಸೊಪ್ಪನ್ನು ತಂದುಹಾಕುತ್ತಾಳೆ. ನಂತರ ಮನೆಯ ಕೆಲಸ ಆರಂಭವಾಗುತ್ತದೆ. ಅಡಿಗೆ, ಮಕ್ಕಳ ಆರೈಕೆ ಮಾಡುತ್ತಾಳೆ. ಮನೆಯವರೆಲ್ಲರ ದುಡಿತದಿಂದ

ಎರಡು ಪಾವು ಅಕ್ಕಿ ಮತ್ತು ಐದು ಪಾವು ಬತ್ತ ದೊರೆಯುತ್ತದೆ. ಅದರಲ್ಲಿ ಎರಡು ಪಾವು ಚೋಮನ ಕುಡಿತಕ್ಕೇ ಹೋಗುತ್ತದೆ. ಉಳಿದಿದ್ದರಲ್ಲಿ ಮನೆಯ ಸದಸ್ಯರೆಲ್ಲರ ಗಂಜಿಯಾಗಬೇಕು. ಬೆಳ್ಳಿ ಸೊಪ್ಪನ್ನು ತಂದು ಹಾಕಿ ಮನೆಯ ಅಡುಗೆ ಕೆಲಸ ಮುಗಿಸಿದ ಮೇಲೆ ಒಂದೆರಡು ಬುಟ್ಟಿಗಳನ್ನು ಹೆಣೆದರೆ ಚೋಮ ಅವನ್ನೂ ಹೆಂಡದಂಗಡಿಗೆ ಕೊಟ್ಟು ಕುಡಿದು ಬರುವುದುಂಟು.

ಹೆಂಡತಿ ಸಾಯುವ ವರ್ಷ ಮಾಡಿದ್ದ ನಾಲ್ಕಾರು ರೂಪಾಯಿಗಳ ಸಾಲ ಇಪ್ಪತ್ತು ರೂಪಾಯಿ ಆಗಿದೆ ಎಂದು ಮನ್ವೇಲ ಹೇಳುತ್ತಾನೆ. ಇಪ್ಪತ್ತು ರೂಪಾಯಿ ಆಗಲು ಸಾಧ್ಯವಿಲ್ಲವೆಂಬುದು ಚೋಮನ ಎಣಿಕೆ. ಆದರೆ ಈಗ ಘಟ್ಟದ ಕಾಫೀ ತೋಟಕ್ಕೆ ಆ ಸಾಲವನ್ನು ತೀರಿಸುವ ಸಲುವಾಗಿ ಮನ್ವೇಲ ಪೀಡಿಸುತ್ತಾನೆ. ಸಾಲ ಕೊಟ್ಟ ಧಣಿಗಳು, ಯಜಮಾನರು ಕಡಿಮೆ ಸಾಲ ಕೊಟ್ಟು ಅಧಿಕವಾಗಿ ತಾವೇ ಬರೆದು ಸೇರಿಸಿಕೊಂಡು ಆ ಕೂಲಿಗಾಗಿ ಒಬ್ಬ ದಲಿತ ಸಾಯುವವರೆಗೂ ಬಿಟ್ಟಿ ಚಾಕರಿ ಮಾಡುತ್ತಲೇ ಇರುವ ಹಾಗೆ ನೋಡಿಕೊಳ್ಳುತ್ತಿದ್ದ ಸಾಕಷ್ಟು ನಿದರ್ಶನಗಳಿದ್ದವು. ಇಂಥದೆ ಬಲೆಗೆ ಈಗ ಚೋಮನು ಸಿಕ್ಕಿ ಒದ್ದಾಡುತ್ತಿದ್ದಾನೆ. ಕಡಿಮೆ ಸಾಲ ಕೊಟ್ಟು ಹೆಚ್ಚು ಬರೆದುಕೊಳ್ಳುವುದು ಹಿಂದೆ ಹಳ್ಳಿಗಳಲ್ಲಿ ಸಾಮಾನ್ಯವಾಗಿತ್ತು. ಉದಾಹರಣೆಗೆ: ೫೦ ರೂಪಾಯಿಗಳ ಪಕ್ಕ ಇನ್ನೊಂದು ಸೊನ್ನೆಯನ್ನು ಸೇರಿಸಿ ೫೦೦ ಮಾಡುವುದು. ಓದು ಬರಹ ಬಾರದ ದಲಿತರಿಗೆ ಇಂತಹ ಮೋಸ, ವಂಚನೆ ಗೊತ್ತಾಗುತ್ತಿರಲಿಲ್ಲ.

ಇಂತಹ ಲಾಭಗಳಿಗಾಗಿಯೇ ದಲಿತರನ್ನು ವಿದ್ಯೆ ಕಲಿಯದ ಹಾಗೇ ವ್ಯವಸ್ಥಿತವಾಗಿ ನೋಡಿಕೊಳ್ಳಲಾಗುತ್ತಿತ್ತು. ದಲಿತರು ವಿದ್ಯೆ ಕಲಿತರೆ ಮೇಲ್ವರ್ಗದವರ ಹೊಲ-ಗದ್ದೆಗಳಲ್ಲಿ ದುಡಿಯಲು ಯಾರು ಬರುತ್ತಾರೆ? ದಲಿತರು ಅವಿದ್ಯಾವಂತರಾಗಿ, ಕುಡುಕರಾಗಿ ಅಜ್ಞಾನಿಗಳಾಗಿರುವಂತೆ ವ್ಯವಸ್ಥಿತ ಸಂಚನ್ನು ರೂಪಿಸುತ್ತಿದ್ದರು. ದಲಿತರು ಅಮಾಯಕರಾಗಿದ್ದರೆ ಧಣಿಗಳಿಗೆ, ಪಟೇಲರಿಗೆ ಲಾಭ. ಆಗ ಮಾತ್ರವೇ ದಲಿತರ ಶ್ರಮವನ್ನು ಕಡಿಮೆ ದುಡ್ಡಿಗೆ ಕೊಳ್ಳಲು ಸಾಧ್ಯ. ದಲಿತರು ತಾವು ಮಾಡಿದ ಕೆಲವು ರೂಪಾಯಿಗಳ ಸಾಲಕ್ಕಾಗಿ ಜೀವಮಾನವಿಡಿ ದುಡಿದೂ ಕೂಡ ತೀರಿಸಲಾಗದೆ ಸತ್ತ ನಿದರ್ಶನಗಳುಂಟು. ಅಪ್ಪನ ಸಾಲವನ್ನು ಮಗ ದುಡಿದು ಕೂಡ ತೀರಿಸಲಾಗದ ಪ್ರಸಂಗಗಳಿವೆ. ದಲಿತರಲ್ಲಿ ಹೆಣ್ಣೇ ಆಗಲಿ ಗಂಡೇ ಆಗಲಿ ಇಂತಹ ಅನ್ಯಾಯದಿಂದ ಹೊರತಾದವರಲ್ಲ. ಇದಕ್ಕೆ ಉದಾಹರಣೆಯಾಗಿ ಚೋಮನು ಮಾಡಿದ ಸಾಲ. ನಮ್ಮ ಕಣ್ಣ ಮುಂದಿದೆ.

"ಹೊಲೆಯನ ಮೈಯ್ಯೆಲುಬನ್ನು ಕಂಡು ಅಷ್ಟು ಹಣ ಮುಂಗಡ ಕೊಟ್ಟಾರೆಯೆ? ಈ ವರ್ಷ ಅಲ್ಲಿ ಕೂಲಿಗಳ ಸಂಖ್ಯೆ ಕಡಿಮೆ ಬಿದ್ದುದರಿಂದ ಅವರು ಅವನನ್ನು ಹುಡುಕಿಕೊಂಡು

ಬಂದಿದ್ದಾರೆ. ಐದು ವರ್ಷಗಳ ಅವಧಿಯಲ್ಲಿ ಸಾಲ ಪಡೆದ ನಾಲ್ಕೈದು ರೂಪಾಯಿಗಳನ್ನು ಗುಣಿಸಿ ಇಪ್ಪತ್ತು ರೂಪಾಯಿಗಳನ್ನಾಗಿ ಮಾಡಿ, ದೊಡ್ಡ ಬೆದರಿಕೆಯನ್ನು ತೋರಿಸಿದರು. ಚೋಮ ಇಪ್ಪತ್ತು ರೂಪಾಯಿ...ಎಂದು ಬಾಯಿ ತೆರೆಯುವಷ್ಟರಲ್ಲಿಯೇ ತೋಟದ ಸೇರೆಗಾರ ಕಣ್ಣು ಕೆಂಪು ಮಾಡಿದ: ಏನು, ಇಪ್ಪತ್ತು ರೂಪಾಯಿಯಲ್ಲವೆ! ಕೊಟ್ಟ ಹಣಕ್ಕೆ ಬಡ್ಡಿಗಿಡ್ಡಿ ಇಲ್ಲವೆಂದು ತಿಳಿದಿಯಾ? ಕೊಂಡದ್ದು ಕೊಡುವ ಯೋಚನೆಯಿಲ್ಲದ ಬರಿ ಫಂಟಿಗರಿಗೆ..! ಹೂಂ ಹೇಳು, ಯಾವಾಗ ತೋಟಕ್ಕೆ ಹೊರಡುತ್ತೀ!" (ಶಿವರಾಮ ಕಾರಂತ : 'ಚೋಮನ ದುಡಿ', ೧೩) ಎಂದರು.

ದಲಿತರು ನೂರಾರು ವರ್ಷಗಳಿಂದ ಇಂತಹ ಅನ್ಯಾಯ, ದಬ್ಬಾಳಿಕೆಯಲ್ಲೇ ಬದುಕಿದ್ದಾರೆ. ಇಂದಿಗೂ ಹಳ್ಳಿಗಳಲ್ಲಿನ ದಲಿತರು ಹೀಗೆಯೇ ಬದುಕುತ್ತಿದ್ದಾರೆ. ಧಣಿಗಳ ಮಾತಿಗೆ ಎದುರಾಡಿದರೆ, ಸತ್ಯವನ್ನು ಹೇಳಲು ಬಾಯ್ತೆರೆದರೆ ಪ್ರಾಣಿಗಳಿಗೆ ಹೊಡೆಯುವಂತೆ ಹೊಡೆಯುತ್ತಾರೆ. ಮುಂದೆಂದೂ ಬಾಯಿ ತೆರೆಯದಂತೆ ಮಾಡುತ್ತಾರೆ. ಒಮ್ಮೊಮ್ಮೆ ಶಾಶ್ವತವಾಗಿಯೇ ಬಾಯಿ ಮುಚ್ಚುವಂತೆ ಮಾಡಿರುವ ಉದಾಹರಣೆಗಳೂ ಉಂಟು. 'ಜೀತ' ದಲಿತರ ಬದುಕಿನ ಅವಿಭಾಜ್ಯ ಅಂಗವೇ ಆಗಿ ಬೆರೆತು ಹೋಗಿದೆ. ಸರ್ಕಾರ ಜೀತಪದ್ಧತಿಯನ್ನು ನಿರ್ಮೂಲನ ಮಾಡಲು 'ಜೀತ ವಿಮುಕ್ತಿ ಕರ್ನಾಟಕ' ಎಂಬ ಸಂಘವನ್ನು ಸ್ಥಾಪಿಸಿದೆ, ಇದರ ಮೂಲಕ ಬೀದಿ ನಾಟಕ, ಜಾಗೃತಿ ಮೂಡಿಸುವ ಹಾಡುಗಳ ಮೂಲಕ ದಲಿತ ಕೇರಿಗಳಿಗೆ ತೆರಳಿ ಮನವೊಲಿಸಲು ಪ್ರಯತ್ನಿಸಲಾಗುತ್ತಿದೆ. ಆದರೆ ಪರಿಣಾಮ ಮಾತ್ರ ಆರಕ್ಕೇರಿಲ್ಲ, ಮೂರಕ್ಕಿಳಿದಿಲ್ಲ.

'ಚೋಮ ಸಾಲ ತೀರಿಸಲು ಕಾಫೀ ತೋಟಕ್ಕೆ ಹೋಗುವೆನೆಂದಾಗ ಬೆಳ್ಳಿ, ತಂದೆಯನ್ನು ಈ ವಯಸ್ಸಿನಲ್ಲಿ ಸಣ್ಣ ಮಕ್ಕಳು ಮತ್ತು ಮನೆಯನ್ನು ಬಿಟ್ಟು ಹೋಗಬಾರದೆಂದು ಹೇಳುತ್ತಾಳೆ. ಚೋಮ ಕುಡಿದು ಬಂದು ದುಡಿಯನ್ನು ಬಾರಿಸುತ್ತಿದ್ದರೆ ದುಡಿಯ ಸದ್ದಿಗೆ ಮಲಗಿದ್ದ ಮಕ್ಕಳು ಎಚ್ಚರಗೊಳ್ಳುವರೆಂದು ಅದನ್ನು ಕಿತ್ತು ಅಪ್ಪನನ್ನು ಬೈದೂ ಬಿಡುತ್ತಾಳೆ. ಈ ರೀತಿಯ ಧೈರ್ಯದಲ್ಲಿ ತಂದೆಯ ಬಗೆಗಿದ್ದ ಪ್ರೀತಿಯೇ ಎದ್ದು ಕಾಣುತ್ತದೆ. ಚೋಮನಿಗೆ ಅವಳ ಧ್ವನಿಯನ್ನು ಕೇಳಿಯೇ ಭಯವಾಗುತ್ತದೆ. ನಾಳೆ ಮೇಸ್ತ್ರಿಗಳು ಬರುತ್ತಿದ್ದಾರೆಂದು ಚೋಮನನ್ನು ಗದರಿಸಿ ಎಳೆದು ತಂದು ಮಲಗಿಸುತ್ತಾಳೆ. ಬೆಳ್ಳಿಯ ಇಂತಹ ಸ್ವಾತಂತ್ರ್ಯಕ್ಕೆ ಅವಳ ದುಡಿಮೆ, ಮನೆಯ ಜವಾಬ್ದಾರಿಯನ್ನು ನಿಭಾಯಿಸುವ ಧೈರ್ಯ, ತಂದೆಯ ಮೇಲಿನ ಮಮತೆ ಕಾರಣವಾಗಿವೆ. 'ಅಪ್ಪನಿಗೆ ಮೀಯಿಸುವುದು, ಅಪ್ಪನು ಬೇಸರದಲ್ಲಿದ್ದಾಗ ಮೈ ಸರಿಯಿಲ್ಲವೆ? ಎಂದು ಅಕ್ಕರೆಯಿಂದ ಕೇಳುವುದು, ಕಡೆಗೆ ಅವನ ಮನಸ್ಸಿನ ಸಂತೋಷಕ್ಕಾಗಿ ದುಡಿಯನ್ನು ಕೊಟ್ಟು ಬಾರಿಸಲು ಹೇಳಿ ತಾನೂ ಹಾಡುವುದು' ಇವೆಲ್ಲವೂ ಬೆಳ್ಳಿ ಚೋಮನ ಕುಟುಂಬಕ್ಕೆ

ತಾಯಿಯಂತೆ ಇರುವುದು ತಿಳಿಯುತ್ತದೆ. ಈ ಕಾರಣಕ್ಕಾಗಿಯೇ ಬೆಳ್ಳಿಯ ಮದುವೆ ಪ್ರಸ್ತಾಪ ಬಂದಾಗ ಚೋಮನಿಗೆ ಗೊಂದಲವುಂಟಾಗುತ್ತದೆ. "ಮದುವೆಯೆನ್ನುವಾಗ, ಬೆಳ್ಳಿಯ ವಿಷಯವೂ ನೆನಪಾಗುತ್ತದೆ. ಅವಳಿಗೂ ಮದುವೆಯ ವಯಸ್ಸು ಮೀರಿದೆಯಲ್ಲ. ಆದರೆ, ಮಗಳನ್ನು ಅಳಿಯನೊಂದಿಗೆ ಕಳುಹಿಸಬೇಕಾದಿತೆಂದು ಹೆದರಿಕೆಯಿಂದ ಅವಳ ಮದುವೆಯ ಪ್ರಸ್ತಾಪವನ್ನು ಚೋಮ ಮಾಡುವುದೇ ಇಲ್ಲ; 'ಇನ್ನೂ ಚಿಕ್ಕವಳು, ಅವಸರವೇನು" (ಶಿವರಾಮ ಕಾರಂತ, ಚೋಮನದುಡಿ, ೧೭) ಎಂಬುದು ಅವನ ಸಮಾಧಾನ.

ಇಡೀ ಚೋಮನ ಕುಟುಂಬಕ್ಕೆ ಆಧಾರಸ್ತಂಭವಾಗಿರುವ ಬೆಳ್ಳಿಯನ್ನು ಮದುವೆ ಮಾಡಿ ಕಳಿಸಿಕೊಡಲು ಚೋಮನಿಗೆ ಇಷ್ಟವಿಲ್ಲ. ಆದ್ದರಿಂದಲೇ ಅವಳಿನ್ನೂ ಚಿಕ್ಕವಳು. ಅವಸರವೇನು? ಎಂಬ ಸಮಾಧಾನವನ್ನು ಮಾಡಿಕೊಳ್ಳುತ್ತಾನೆ. ಇದು ಚೋಮನೊಬ್ಬನ ವಿಚಾರವಲ್ಲ. ಎಲ್ಲಾ ದಲಿತ ಹೆಣ್ಣುಮಕ್ಕಳ ತಂದೆಯರೂ ಹೀಗೆಯೇ ಯೋಚನೆ ಮಾಡುತ್ತಾರೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕುಳವಾಡಿ ಸಣ್ಣನು ಕೂಡ ಹೀಗೆಯೇ ಯೋಚನೆ ಮಾಡುತ್ತಾನೆ. ಇದಕ್ಕೆಲ್ಲಾ ಕಾರಣ ದಲಿತ ಹೆಣ್ಣುಮಕ್ಕಳ ದುಡಿಮೆ ಮತ್ತು ಅವರು ಮನೆಯ ಜವಾಬ್ದಾರಿಯನ್ನು ನಿಭಾಯಿಸುತ್ತಿರುವುದೇ ಕಾರಣವಾಗಿದೆ. ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ 'ಕುಳವಾಡಿ ಸಣ್ಣನ ಮಗಳು ಪುಟ್ಟಿ ಗಂಜಿ ಬೇಯಿಸುವಾಗ ಅವಳ ತಂದೆ ಮಲಗಿ ನರಳುತ್ತಿರುವ ಅವನ ಕಡೆಯ ಮಗ ಗಂಗನಿಗೆ ಸಮಾಧಾನ ಹೇಳುತ್ತಾ ಆಗಾಗ ಆಯ್ತುಲ್ಲೇನೆ ಪುಟ್ಟಿ ಎಂದು ಕೇಳುತ್ತಿರುತ್ತಾನೆ. ಆಯ್ತಪ್ಪಯ್ಯಾ, ಆಗೇ ಬಿಡ್ತು. ಈಗ ಇಳಿಸಿಬಿಡ್ತೀನಿ ಇನ್ನೇನು ಇಳಿಸೇ ಬಿಟ್ಟೆ!' ಎನ್ನುವ ಸಮಾಧಾನದ ಮಾತುಗಳನ್ನಾಡುತ್ತಿದ್ದಳು ಪುಟ್ಟಿ.

ಹೊರಗೆ ಧಣಿಗಳ ಹೊಲಗದ್ದೆಗಳಲ್ಲಿ ದುಡಿದು ಬರುವ ಪುಟ್ಟಿಯೂ ಕೂಡ ಸಂಸಾರದ ಜವಾಬ್ದಾರಿಯನ್ನೆ ಹೊತ್ತಿದ್ದಾಳೆ. "ಅವನ ಹಿರಿಯ ಮಗಳು ಪುಟ್ಟಿಯ, ತನ್ನ ತಾಯಿ ಗಂಗನನ್ನು ಹೆತ್ತು ತೀರಿಕೊಂಡ ಮೇಲೆ, ಅಪ್ಪನ ಆರೈಕೆಯನ್ನೂ, ತಂಗಿ ತಮ್ಮಂದಿರ ಲಾಲನೆ ಪಾಲನೆಯನ್ನೂ ನೋಡಿಕೊಂಡು ಬರುತ್ತಿದ್ದಳು. ಅವಳಿಗೂ ಮದುವೆಯಾಗುವ ವಯಸ್ಸು; ಬೇಗ ಮಾಡಿಬಿಡು ಎಂದು ನಂಟರಿಷ್ಟರು ಸಣ್ಣನಿಗೆ ಸಲಹೆ ಹೇಳುತ್ತಿದ್ದರೂ ಅವನು 'ಅವಳಿನ್ನೂ ನೆರೆದು ಎರಡು ವರ್ಷವೂ ಆಗಿಲ್ಲ. ಅವಳಿಗಿಂತಲೂ ದೊಡ್ಡವರು ಕೇರಿಯಲ್ಲಿ ಮದುವೆಯಾಗದೆ ಇರುವವರು ಇಲ್ಲವೆ? ಇಷ್ಟು ಅವಸರ ಏಕೆ ಅವಳ ಮದುವೆಗೆ?' ಎಂದು ಸಮಾಧಾನ ಹೇಳುತ್ತಿದ್ದನು. ಅಲ್ಲದೆ ಮಗಳು ಮದುವೆಯಾಗಿ ಹೋದರೆ ತನ್ನ ಸಂಸಾರ ಸಾಗುವುದೂ ಕಷ್ಟವಾಗುತ್ತದೆ; ಆದ್ದರಿಂದ ಏನಾದರೂ ಮಾಡಿ ಮದುವೆಯಾದ ಮೇಲೆಯೂ ಮಗಳು

ಮನೆಯಲ್ಲಿಯೇ ಉಳಿಯುವಂತೆ ಒಬ್ಬ ಮನೆ ಅಳಿಯನನ್ನು ಮಾಡಿಕೊಂಡರೆ ತನ್ನ ಇಳಿ ವಯಸ್ಸಿನಲ್ಲಿ ತನಗೂ ಒಂದು ದಿಕ್ಕಾಗುತ್ತದೆ ಎಂಬುದೂ ಅವನ ಒಳಮನಸ್ಸಾಗಿತ್ತು". (ಕುವೆಂಪು: 'ಮಲೆಗಳಲ್ಲಿ ಮದುಮಗಳು', ೯೪, ೯೫) ಮೇಲಿನ ಮಾತುಗಳಲ್ಲಿ ಸಣ್ಣನು ಪುಟ್ಟಿಯ ಬಗ್ಗೆ ಹೊಂದಿರುವ ಪ್ರೀತಿಯನ್ನು ಕಾಣಬಹುದು. ಅಲ್ಲದೇ ತಮ್ಮನ, ತಂದೆಯ ಜವಾಬ್ದಾರಿಯನ್ನು ಪುಟ್ಟಿಯೇ ಹೊತ್ತಿರುವುದರಿಂದ ಅವಳನ್ನು ಮದುವೆ ಮಾಡಿ ಕಳಿಸಿದರೆ ಕುಟುಂಬಕ್ಕೆ ಆಸರೆಯಿರುವುದಿಲ್ಲ ಎಂಬ ಅಸಹಾಯಕತೆಯೂ ಇದೆ.

'ಸಣ್ಣನ ಹೆಂಡತಿ ತೀರಿಹೋಗಿ ನಾಲ್ಕೈದು ವರ್ಷಗಳಾದರೂ ಇನ್ನೊಂದು ಮದುವೆ ಆಗಿಲ್ಲ. ಸೀರುಡಿಕೆಯಾಗಲು ಆಸೆಪಟ್ಟ ಹೆಂಗಸರಿದ್ದರೂ ಸಣ್ಣ ಒಪ್ಪಿರಲಿಲ್ಲ. ಆ ಯೋಚನೆಯನ್ನೇ ಇಟ್ಟುಕೊಂಡಿರಲಿಲ್ಲ. ಕಡೆಗೆ ಗಂಜಿ ಬೇಯಿಸಲಿಕ್ಕಾದರೂ ಒಂದು ಹೆಣ್ಣಿನ ಆಸರೆಯಿರಲಿ ಎಂದರೂ ಅಂತಹ ಮಾತುಗಳನ್ನು ನಯವಾಗೇ ಅಲ್ಲಗೆಳೆದಿದ್ದವನು ಕುಳವಾಡಿ ಸಣ್ಣ. ಬೆಳ್ಳಿಯಾಗಲಿ ಪುಟ್ಟಿಯಾಗಲಿ ಇರಲಿಲ್ಲವೆಂದರೆ ಆ ಕುಟುಂಬಗಳಿಗೆ ಅಸ್ತಿತ್ವವೇ ಇಲ್ಲ. ವಯಸ್ಸಾದ ತಂದೆಯನ್ನು ಕಾಫೀ ತೋಟಕ್ಕೆ ಕಳಿಸದ ಬೆಳ್ಳಿ ತಾನೇ ಕೆಲಸಕ್ಕೆ ಹೋಗಲು ನಿರ್ಧರಿಸುತ್ತಾಳೆ. ಅಣ್ಣಂದಿರು ಸಾಲ ತೀರಿಸದೆ ವಾಪಸ್ಸು ಬಂದಾಗ ತಾನೇ ಗಂಡುಮಕ್ಕಳಿಗೆ ಕಡಿಮೆಯಿಲ್ಲದಂತೆ ಆ ಸಾಲದ ಜವಬ್ದಾರಿಯನ್ನು ಹೊತ್ತುಕೊಳ್ಳುತ್ತಾಳೆ.

"ಇನ್ನು ನಾಲ್ಕಾರು ತಿಂಗಳಲ್ಲಿ ತಾವಿಬ್ಬರೂ ದುಡಿದು ತೋಟದವರ ಸಾಲವನ್ನು ಮುಗಿಸಿ ತಂದೆಯ ಬಳಿಗೆ ಓಡಬೇಕೆಂದು ನಿರ್ಧಾರ ಬೆಳ್ಳಿಯದು. ಆದರೆ, ಬಂದ ಎರಡು ವಾರಗಳಲ್ಲೇ ಅವಳ ಕೈಯೊಂದು ಹಿಡಿಯಿತು. ನೀಲ, ಚಳಿಜ್ವರದಿಂದ ಹಾಸುಗೆ ಹಿಡಿದ. ಅವನ ಆದಾಯ ನಿಂತಿತು. ಅವನ ಆರೈಕೆಯನ್ನೂ ಮಾಡುತ್ತ ಕುಳಿತಿದ್ದು ಬೆಳ್ಳಿಯ ಸಂಪಾದನೆ ಕಡಿಮೆಯಾಯಿತು. ಹೀಗೆಯೇ ಮುಂದುವರೆದರೆ ತನ್ನಿಂದಲೂ ಸಾಲ ತೀರಿಸುವುದಾಗದೆಂದು ಅಂಜಿದಳು. ಮೊದಲಿನ ತಿಂಗಳಲ್ಲಿ ಅವಳ ಕೈಮೇಲೆ ಬರಿಯ ಐದು ರೂಪಾಯಿ ಬಿದ್ದಿತ್ತು. ಅದರಲ್ಲಿ ಉಳಿಸುವುದೆಷ್ಟು, ಬಳಸುವುದೆಷ್ಟು?" (ಶಿವರಾಮ ಕಾರಂತ : 'ಚೋಮನ ದುಡಿ', ೮೪, ೮೫) ಆದಷ್ಟು ಬೇಗ ಧಣಿಗಳ ಸಾಲ ತೀರಿಸಿಬಿಡಬೇಕೆಂದು ನಿಶ್ಚಯಿಸಿಕೊಂಡು ಬಂದಿದ್ದ ಬೆಳ್ಳಿಗೆ ನಿರಾಶೆಯಾಯಿತು. ತಮ್ಮ ನೀಲ ಚಳಿ ಜ್ವರದಿಂದ ಹಾಸಿಗೆ ಹಿಡಿದದ್ದರಿಂದ ಅವಳ ಎಣಿಕೆ ತಲೆಕೆಳಗಾಯಿತು. ಸಂಬಳ ಕಡಿಮೆಯಾದಾಗ ಮನ್ವೇಲನು ಕನಿಕರ ತೋರಿಸಿದನು.

ತಮ್ಮನ ಖಾಯಿಲೆಯ ವಿಚಾರವನ್ನು ಕೇಳಿದ ಮನ್ವೇಲ ನಿನಗೆ ಮನೆಯ ಕೆಲಸವನ್ನು ಕೊಡಿಸುತ್ತೇನೆ ಎನ್ನುತ್ತಾನೆ. ಹೀಗೆ ಮನ್ವೇಲನು ಬೆಳ್ಳಿಯ ಅಸಹಾಯಕತೆಯನ್ನು ದುರಪಯೋಗಪಡಿಸಿಕೊಳ್ಳಲಿಕ್ಕೆ ಆರಂಭಿಸುತ್ತಾನೆ. ಮನ್ವೇಲನು ಅವಳೊಡನೆ ನಗುವುದು, ಚೇಷ್ಟೆ

ಮಾಡುವುದನ್ನು ಹೆಚ್ಚು ಮಾಡುತ್ತಾನೆ. ಇವುಗಳು ಸೂಚಿಸುವ ಅರ್ಥ ಅವಳಿಗೆ ಹೊಳೆಯಿತು. ವಿಧಿಯಿಲ್ಲದೆ ಬೆಳ್ಳಿ ಒಪ್ಪಿಕೊಳ್ಳಬೇಕಾಯಿತು. ಮನ್ವೇಲನ ನಂತರ ಮಿಂಗೇಲ ದೊರೆಗಳೂ ಆಕೆಯನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ.

"ಜೀವನದಲ್ಲಿ ಮೊದಲನೆಯ ಬಾರಿಗೆ ಯೌವ್ವನದ ದುಡುಕನ್ನು ಅವಳಾದರೂ ಅನುಭವಿಸತೊಡಗಿದಳು. ಅದರಿಂದಾಗಿ ಮನ್ವೇಲನ ಚೇಷ್ಟೆಗಳನ್ನು ತಿರಸ್ಕರಿಸಲು ಹೋಗಲಿಲ್ಲ. ಮುಂದೆ ಸಮ್ಮತಿಯ ಮುದ್ರೆಯನ್ನು ಕೊಟ್ಟಂತೆ ಕಾಣುತ್ತದೆ. ಅವನ ಕರುಣೆಯಿಂದಾಗಿ ತಂದೆಯ ಸಾಲ ತೀರುವುದಾದರೆ ಏನಾದರೇನೆಂಬ ಉದಾಸೀನ ಭಾವ ತಾಳಿದಳು" (ಶಿವರಾಮ ಕಾರಂತ: 'ಚೋಮನ ದುಡಿ', ೮೫) ತಂದೆಯ ಸಾಲದ ಒತ್ತಡ ಮತ್ತು ಅಸಹಾಯಕತೆಗಳ ನಡುವೆ ಸಿಕ್ಕಿದ ಬೆಳ್ಳಿ ಎಲ್ಲವನ್ನೂ ಗೊತ್ತಿದ್ದೂ ಒಪ್ಪಿಕೊಂಡಳು. ಒಪ್ಪಿಕೊಳ್ಳುವಂತೆ ಸಂಚನ್ನು ರೂಪಿಸಲಾಗುತ್ತದೆ. ಆದರೆ ಆ ಸಂಚಿಗೆ ಕರುಣೆಯ ಮುಖಮುದ್ರೆ ಹಾಕಿದ್ದಾರೆ ಅಷ್ಟೇ. ಹಣವುಳ್ಳವರು ಒಡ್ಡುವ ಇಂಥ ಬಲೆಗಳಿಗೆ ದಲಿತ ಹೆಣ್ಣುಗಳು ಸಿಕ್ಕು ನರಳಾಡುತ್ತಾರೆ. ಇದರಿಂದ ಹೊರ ಬರಲು ಪ್ರಯತ್ನಿಸಿದರೆ ಒಮ್ಮೊಮ್ಮೆ ಅವಳು ಜೀವನ ಸಾಗಿಸುವುದು ಕಷ್ಟವಾಗಬಹುದು. ಕೆಲವೊಮ್ಮೆ ಮೇಲ್ವರ್ಗದವರು ಜೀವವನ್ನೂ ತೆಗೆಯುತ್ತಾರೆ. ಒಟ್ಟಾರೆ ಇಂತಹ ವ್ಯವಸ್ಥೆಯ ಸಂಚಿಗೆ ದಲಿತ ಹೆಣ್ಣುಮಕ್ಕಳು ಬಲಿಯಾಗಿರುವುದು ಇವತ್ತು ನೆನ್ನೆಯ ವಿಚಾರವಲ್ಲ.

ಹೀಗೆ ದುಡಿಮೆಯನ್ನು ಆಶ್ರಯಿಸಿರುವ ದಲಿತ ಹೆಣ್ಣುಗಳು ಮೇಲ್ವರ್ಗದವರ ಸ್ವಾರ್ಥದ ಆಸೆಗಳಿಗೆ ಬಲಿಯಾಗುತ್ತಾರೆ. ದಲಿತ ಹೆಣ್ಣುಮಕ್ಕಳ ಲೈಂಗಿಕ ಶೋಷಣೆ ನಡೆಯುವುದೇ ದುಡಿಯುವ ಜಾಗಗಳಲ್ಲಿ. ಆದ್ದರಿಂದ ದುಡಿಮೆಯೆಂಬುದು ದಲಿತ ಹೆಣ್ಣುಮಕ್ಕಳ ಪಾಲಿಗೆ ಕುಟುಂಬವನ್ನು ಸಾಕುವ ವಿಚಾರದಲ್ಲಿ ವರವಾಗಿಯೂ ಶೋಷಣೆಗೆ ಒಳಗಾಗುವ ವಿಚಾರದಲ್ಲಿ ಶಾಪವಾಗಿಯೂ ಪರಿಣಮಿಸಿದೆ. ಹಸಿವು, ದುಡಿಮೆ, ಲೈಂಗಿಕ ಶೋಷಣೆ ಒಂದಕ್ಕೊಂದು ಅಂತರ್ ಸಂಬಂಧ ಹೊಂದಿವೆ.

ಹಸಿವಿನಿಂದ ನರಳುವ ದಲಿತರು ತುತ್ತಿನ ಚೀಲ ತುಂಬುವುದಕ್ಕಾಗಿ ದುಡಿಮೆಯನ್ನು ಮಾಡಲೇಬೇಕಾದ ಅನಿವಾರ್ಯತೆ ಇದೆ. ಆದರೆ ದುಡಿಯಲು ಹೋಗುವ ಜಾಗಗಳಲ್ಲಿ ಶೋಷಣೆ ತಪ್ಪಿದ್ದಲ್ಲ. ಕೇವಲ ಹೊಲಗದ್ದೆಗಳಲ್ಲಿ ದುಡಿಯುವ ಮಹಿಳೆಯರು ಮಾತ್ರವಲ್ಲ. ಗಾರ್ಮೆಂಟ್ಸ್ ಗುಡಿಕೈಗಾರಿಕೆ ಮುಂತಾದ ಅಸಂಘಟಿತ ವಲಯಗಳಲ್ಲೂ ದಲಿತ ಮಹಿಳೆಯ ಶೋಷಣೆ ಸದ್ದಿಲ್ಲದೆ ನಡೆಯುತ್ತಿದೆ. ಬಾಯಿಬಿಟ್ಟರೆ ಕೆಲಸ ಕಳೆದುಕೊಳ್ಳುವ ಭಯ. ಆದ್ದರಿಂದ ದಲಿತ ಹೆಣ್ಣುಮಕ್ಕಳು ಬಾಯಿ ಬಿಡದೆ ಮೌನವಾಗಿರುವ ಸಂದರ್ಭಗಳೇ ಹೆಚ್ಚು. ಒಮ್ಮೊಮ್ಮೆ ಬಾಯಿಬಿಟ್ಟರೂ ಹಣವುಳ್ಳವರಿಂದ ನ್ಯಾಯ ಸಿಗುವುದು ಎಂಬ ಭರವಸೆಯಿಲ್ಲ. ಕೋರ್ಟ್,

ಕಾನೂನು ಎಂದು ತಿರುಗಾಡಲು ಅವಳ ಬಳಿ ಹಣವಿರುವುದಿಲ್ಲ. ಅಂತಹ ಉತ್ತಮ ಸ್ಥಿತಿಯಿದ್ದಿದ್ದರೆ ಅವಳು ದುಡಿಯಲು ಹೊರಗೆ ಹೋಗುವಂಥ ಅನಿವಾರ್ಯತೆಯೇ ಬರುತ್ತಿರಲಿಲ್ಲ.

ಅನಕ್ಷರಸ್ಥ ದಲಿತ ಹೆಣ್ಣುಮಕ್ಕಳು ಹೊಲಗದ್ದೆಗಳಲ್ಲಿ ಶೋಷಣೆಗೆ ಒಳಗಾದರೆ, ಅಲ್ಪಸ್ವಲ್ಪ ಕಲಿತ ಹೆಣ್ಣುಮಕ್ಕಳು ಕಾರ್ಖಾನೆ, ಗಾರ್ಮೆಂಟ್ಸ್ ಮುಂತಾದ ಕಡೆಗಳಲ್ಲಿ ಶೋಷಣೆಗೆ ಒಳಗಾದರೆ; ವಿದ್ಯಾವಂತ, ಉದ್ಯೋಗಸ್ಥ ಹೆಣ್ಣುಮಕ್ಕಳು ತಾವು ಕೆಲಸ ಮಾಡುವ ಕಛೇರಿ, ಬ್ಯಾಂಕು, ಕಾಲೇಜು ಮುಂತಾದ ಕಡೆಗಳಲ್ಲೂ ಶೋಷಣೆಗೆ ಬಲಿಯಾಗುತ್ತಾರೆ. ದಲಿತ ಹೆಣ್ಣುಮಕ್ಕಳು ಕಲಿತು ಗಂಡಿನ ಸಮನಾಗಿ ದುಡಿಯುವುದನ್ನು ಮೇಲ್ವರ್ಗದ ಸಹೋದ್ಯೋಗಿಗಳು ಸಹಿಸುವುದಿಲ್ಲ. ಇಂತಹ ಸಂದರ್ಭಗಳಲ್ಲಿ ದಲಿತ ಮಹಿಳೆಯ ತಪ್ಪಿಲ್ಲದಿದ್ದರೂ ವ್ಯವಸ್ಥಿತವಾಗಿ ತಂತ್ರವನ್ನು ರೂಪಿಸಿ ಅದರೊಳಗೆ ಬೀಳಿಸುವುದುಂಟು. ಉದಾ: ದು.ಸರಸ್ವತಿಯವರ 'ಈಗೇನ್ಮಾಡೀರಿ' ಅನುಭವ ಕಥನ ಇಂಥದ್ದೊಂದು ಅನುಭವವನ್ನು ಪಟ್ಟಭದ್ರ ಹಿತಾಸಕ್ತಿಗಳ ತಣ್ಣನೆಯ ಕ್ರೌರ್ಯವನ್ನು ನಮ್ಮ ಮುಂದಿಡುತ್ತದೆ. ದಿಟ್ಟ ಮಹಿಳೆಯರಾದರೆ ಮಾತ್ರ ಕೋರ್ಟ್, ಕಛೇರಿ, ನ್ಯಾಯಾಲಯಗಳನ್ನು ತಿರುಗಿ ತಮಗಾದ ಅನ್ಯಾಯಕ್ಕೆ ನ್ಯಾಯದೊರಕಿಸಿಕೊಳ್ಳುತ್ತಾರೆ. ಅಂತಿಂಥವರಾದರೆ ತಪ್ಪಿಲ್ಲದಿದ್ದರೂ ವಿನಾಕಾರಣ ಬಾಯಿಮುಚ್ಚಿಕೊಂಡು ಒಪ್ಪಿಕೊಳ್ಳುತ್ತಾರೆ. ಸಮಾಜದಲ್ಲಿ ಅವಮಾನಕ್ಕೆ ಅವಹೇಳನಕ್ಕೆ ಗುರಿಯಾಗುತ್ತಾರೆ.

ಕುಳವಾಡಿ ಸಣ್ಣನ ಮಗಳು ಪುಟ್ಟಿ, ತಿಮ್ಮಪ್ಪ ಹೆಗ್ಗಡೆಯ ಕಾಮಕ್ಕೆ ಬಲಿಯಾಗುತ್ತಾಳೆ. 'ದುಡಿಯುವ ಸ್ಥಳಗಳು ದಲಿತ ಹೆಣ್ಣುಮಕ್ಕಳ ಪಾಲಿಗೆ ಯಾವತ್ತೂ ಸುರಕ್ಷಿತವಲ್ಲ' ಎಂಬುದಕ್ಕೆ ಕಾದಂಬರಿಗಳಲ್ಲಿ ಸಾಕಷ್ಟು ನಿದರ್ಶನಗಳಿವೆ. ಆದರೂ ಹೊರಗೆ ದುಡಿದು ಕುಟುಂಬವನ್ನು ಪೋಷಿಸುವ ದಲಿತ ಮಹಿಳೆಯರಿಗೆ ಮದುವೆ ಮಾಡಲು ತಂದೆಯರಿಗೆ ಮನಸ್ಸಾಗುವುದಿಲ್ಲ ಒಂದು ವೇಳೆ ಅನಿವಾರ್ಯವೆಂಬಂತೆ ಮನಸ್ಸಾದರೂ ಹೆಣ್ಣು ಮಕ್ಕಳನ್ನು ಗಂಡಂದಿರ ಮನೆಗೆ ಕಳಿಸಿಕೊಡಲು ಇಷ್ಟವಿರುವುದಿಲ್ಲ. ಮನೆ ಅಳಿಯನನ್ನು ತರಲು ಯೋಚಿಸುತ್ತಾರೆ. ಇಂತಹ ಯೋಚನೆಗಳು ದಲಿತ ಕುಟುಂಬಗಳು ಆ ಹೆಣ್ಣುಮಕ್ಕಳನ್ನು ಅವಲಂಬಿಸಿರುವ ರೀತಿಯನ್ನು ತಿಳಿಸಿಕೊಡುತ್ತವೆ. "ಬೆಳ್ಳಿಗೆ ವರನನ್ನು ನಿಶ್ಚಯಿಸಿ ಮನೆಯ ಅಳಿಯನನ್ನು ನಿಶ್ಚಯ ಮಾಡುವ ಮನಸ್ಸು ! ಇತ್ತ, ಆ ಹರ್ಷದೊಂದಿಗೆ ಒಂದು ಬಗೆಯ ಅಸೂಯೆಯೂ ಹುಟ್ಟಿದೆ. ಅಳಿಯನು ಮನೆಗೆ ಬಂದರೆ, ಮುದುಕನಾದ ತನ್ನ ಮೇಲೆ ಬೆಳ್ಳಿಗೆ ಮೊದಲಿನ ಮಮತೆ ಉಳಿದೀತೇ ಎಂದು. ಅದನ್ನು ಎಣಿಸಿದರೆ ದುಃಖವೂ ಬರುತ್ತಿತ್ತು. ಆದರೂ ಇನ್ನವಳು 'ನನ್ನನ್ನು ಕಾಲಿನಿಂದ ತುಳಿದರೂ ಚಿಂತೆಯಿಲ್ಲ' ಒಮ್ಮೆ ನನ್ನ ಋಣವನ್ನು ತೀರಿಸಿದಳಲ್ಲ. ನನ್ನಿಂದಾಯಿತೇನು?.. ಅಯ್ಯೋ, ನನ್ನ ಬೆಳ್ಳಿಯು ಗಂಡಸಾಗಿ ಹುಟ್ಟಿದ್ದರೆ ನನ್ನ ಮೀಸೆ ಇನ್ನಷ್ಟು ಮೇಲಿತ್ತು !' ಎಂದೆಲ್ಲ

ಯೋಚಿಸಿದ." (ಶಿವರಾಮ ಕಾರಂತ : 'ಚೋಮನ ದುಡಿ', ೮೯) ಮನೆ ಅಳಿಯನನ್ನು ತಂದುಕೊಳ್ಳಬೇಕೆಂಬ ಇಂಗಿತವೇ ಕುಳವಾಡಿ ಸಣ್ಣನಲ್ಲೂ ಕಾಣುತ್ತದೆ. ಅಳಿಯ ಬಂದ ಮೇಲೆ ಮಗಳು ತನ್ನನ್ನು ಕಡೆಗಣಿಸುವಳೇನೋ ಎಂಬ ಹೊಟ್ಟೆಕಿಚ್ಚು ಬಂದರೂ ನನ್ನ ಸಾಲವನ್ನು ತೀರಿಸಿದಳಲ್ಲ ಹೇಗಾದರೂ ಮಾಡಲಿ ಅನ್ನಿಸುತ್ತದೆ. ಮನೆ ಅಳಿಯನನ್ನು ತರಲು ಯೋಚಿಸುವ ವಿಚಾರ ತನ್ನ ಆಂತರ್ಯದಲ್ಲಿ ಪುಟ್ಟಿ ಮತ್ತು ಬೆಳ್ಳಿ ಹಾಗೂ ಒಟ್ಟಾರೆ ದಲಿತ ಮಹಿಳೆಯರು ಒಂದು ರೀತಿಯಲ್ಲಿ ಮನೆಗೆ ಗಂಡು ಮಕ್ಕಳಂತೆ ಕಂಡು ಬರುತ್ತಾರೆ. ಸಾಮಾನ್ಯವಾಗಿ ದಲಿತ ಕುಟುಂಬಗಳಲ್ಲಿ ಹುಟ್ಟಿರುವ ಗಂಡು ಮಕ್ಕಳು ಚಿಕ್ಕವಯಸ್ಸಿಗೆ ಕುಡಿತಕ್ಕೆ ದಾಸರಾಗಿ, ಚಟಗಳಿಗೆ ಬಲಿಯಾಗಿ ಕುಟುಂಬಕ್ಕೆ ನಿಷ್ಪ್ರಯೋಜಕರಾಗುತ್ತಾರೆ. ಇಂತಹ ಸಂದರ್ಭಗಳಲ್ಲಿ ಮನೆಯ ಹೆಣ್ಣುಮಕ್ಕಳೇ ಗಂಡು ಮಕ್ಕಳ ಸ್ಥಾನದಲ್ಲಿ ನಿಂತು, ಜವಾಬ್ದಾರಿಗಳನ್ನು ಪೂರೈಸುತ್ತಾರಾದ್ದರಿಂದ ದಲಿತ ಮಹಿಳೆ ತನ್ನ ಕೆಲಸಗಳಿಂದ 'ಪುರುಷ'ನಾಗುವುದುಂಟು.

ದಲಿತರ ಹಸಿವು ಅವರ ಎಲ್ಲಾ ಸಮಸ್ಯೆಗಳಿಗೂ ಮೂಲವಾಗಿದೆ. 'ಬಡವನ ಸಿಟ್ಟು ದವಡೆಗೆ ಮೂಲ' ಎಂಬ ಗಾದೆ ಮಾತಿನಂತೆ, ಅವರ ಕೆಲಸಗಳೂ, ಜಗಳಗಳು, ಸಣ್ಣತನಗಳು ಇವೆಲ್ಲವೂ 'ಉದರ ನಿಮಿತ್ತಂ ಬಹುಕೃತ ವೇಷಂ' ಎಂಬಂತೆ ಆಗಿದೆ. ಹಸಿವಿಗಾಗಿ ಸತ್ತ ಪ್ರಾಣಿಗಳನ್ನು ತಿನ್ನುವುದನ್ನು 'ಒಡಲಾಳ', 'ಹಸಿಮಾಂಸ ಮತ್ತು ಹದ್ದುಗಳು', 'ಚೋಮನ ದುಡಿ' ಕಾದಂಬರಿಗಳು ಚಿತ್ರಿಸಿವೆ. ಧಣಿಗಳ, ಕುಲಕರ್ಣಿಗಳ ಎಮ್ಮೆ, ದನ, ಕ್ವಾಣ ಸಾಯಲೆಂದೇ ದಲಿತರು ಕಾಯುವುದು ದಲಿತರಲ್ಲಿನ ಹಸಿವಿನ ತೀವ್ರತೆಯನ್ನು ಕಟ್ಟಿಕೊಡುತ್ತವೆ.

"ಕುಲಕಣ್ಣೀರ ಕ್ವಾಣಾ ಸತ್ತಾದೋ ಮುತ್ತ್ಯಾ..ತಗೊಂಡು ಹೋಗ್ರಿ ಅಂದ್ರು. ನಿನಗ ಹೇಳ್ಳಿಕ ಬಂದೇನಿ. ಕೇರ್‍ಯಾಗೆ ಎಲ್ಲೋರಿಗಿನೂ ಕರ್‍ಕೊಂಡು ಹೋಗ್ತೀನಿ'

ಕಾಶಪ್ಪ ಉಸಿರು ಬಿಡದೆ ಉಸುರಿದ.

ಕ್ವಾಣಾ ಸತ್ತದಾ? ಅದುನೂ ಕುಲಕಣ್ಣೀರು.

ತಗಂಬರ್‍ರಿ..ತಗಂಬರ್‍ರಿ..ತಿನ್ರಿ..ತಿನ್ರೋ...ಅವರ ಸತ್ತ ದನಗೋಳ ಖಂಡಾ ತಿಲ್ಲಿಕ್ಕೇ ಹುಟ್ಟಿದವು ನಾವು..ಅಲ್ಲೋ ತಾಯಗ್ಗಂಡ್ರೇ. ಆ ಕುಲಕಣಿ, ಗೋಡಿಗೋಳ ಖಂಡಾನೇ ತಿನ್ರೋ...ಅದು ಹರಕೊಂಡು ತಿಲ್ಲಕ ನಿಮ್ಮ ಹಲ್ಲಗೋಳದಾಗ ಸಗತಿ ಇಲ್ರೋ..ಅವ್ರು ರಂಡಿ ಮಕ್ಳು ತಮ್ಮ ಖಂಡಾತಿನ ಗುಡಸಲಾರ್ದಂಗ ನಿಮ್ಮ ಹಲ್ಲಿನ ಬೇರೆ ಕಿತ್ತ್ಯಾರ..ಬೇರೇ ಕಿತ್ತ್ಯಾರ." (ಗೀತಾ ನಾಗಭೂಷಣ : 'ಹಸಿಮಾಂಸ ಮತ್ತು ಹದ್ದುಗಳು', ೧೧, ೧೨) ಎನ್ನುವ ಮಾತುಗಳಲ್ಲಿ ದಲಿತರ ಹಸಿವಿನ ತೀವ್ರತೆ ಹಾಗೂ 'ಕ್ವಾಣ ಸತ್ತಿದೆ' ಎಂಬ ಸಂತೋಷ

ಕಾಣಿಸುತ್ತದೆ. ಅದರ ಜೊತೆಗೆ ತಲೆತಲಾಂತರದಿಂದ ಮೇಲ್ವರ್ಗದವರು ದಲಿತರನ್ನು ಶೋಷಿಸಿಕೊಂಡು ಬಂದಿದ್ದಾರೆ ಎಂಬುದು ಕಾಶಪ್ಪನ ಮಾತಿನಿಂದ ತಿಳಿಯುತ್ತದೆ. ಆದರೆ ಅಂತಹ ಶೋಷಕ ರಣಹದ್ದುಗಳನ್ನು ಏನೂ ಮಾಡಲಾಗದೆಂಬ ಅಸಹಾಯಕತೆಯೂ ವ್ಯಕ್ತವಾಗುತ್ತದೆ. ಆ ಕುಲಕರ್ಣಿ ಗೌಡರ 'ಮಾಂಸವನ್ನು ಕಿತ್ತು ತಿನ್ನಿರಿ' ಎನ್ನುವ ಮಾತಿನಲ್ಲಿ ಅಂಥವರ ಶೋಷಣೆಯ ತೀವ್ರತೆಯ ನೋವು ಎಷ್ಟಿದೆ ಎಂಬುದು ವ್ಯಕ್ತವಾಗುತ್ತದೆ. ನೂರಾರು ವರ್ಷಗಳಿಂದ ದಲಿತರನ್ನು ಶೋಷಿಸಿಕೊಂಡು ಬಂದಿರುವ ಗೌಡ, ಕುಲಕರ್ಣಿಗಳ ಸೊಕ್ಕನ್ನು ಇಂದಿನ ತಲೆಮಾರಿನವರಾದರೂ ಮುರಿಯಲಿ ಎನ್ನುವ ಸಿಟ್ಟು, ಆಕ್ರೋಶ ಕಾಶಪ್ಪನ ಮಾತುಗಳಲ್ಲಿ ವ್ಯಕ್ತವಾಗಿದೆ. ನಾವು ಮಾಡಲಾಗದ್ದನ್ನು ಇಂದಿನ ಪೀಳಿಗೆಯವರಾದರೂ ಮಾಡಿ ವ್ಯವಸ್ಥೆಯನ್ನು ಸರಿಪಡಿಸಲಿ ಎಂಬ ಆಶಯವೂ ಕಂಡು ಬರುತ್ತದೆ.

'ಆಕಾಶದ ಸೂರ್ಯ ತಲೆಮೇಲೆ ಬಂದಾಗ ಇಡೀ ಮಾದಿಗರ ಕೇರಿಯೇ ಹೆಣ ಹೂಳುವ ಜಾಗದಲ್ಲಿ ಜಮಾಯಿಸುತ್ತದೆ. ಹೀಗೆ ಸೇರಿದವರು ಕುಲಕರ್ಣಿ ಕ್ವಾಣದ ಚರ್ಮ ಸುಲಿದು, ಖಂಡ ಕಡಿದು ರಾಶಿ ಹಾಕುತ್ತಾರೆ. ನಾಯಿ, ಹದ್ದುಗಳ ಚೀರಾಟವೂ ಇವರ ಗಮನಕ್ಕೆ ಬರದಷ್ಟು ಜನಗಳ ಹಾರಾಟವೇ ಮುಗಿಲು ಮುಟ್ಟಿರುತ್ತದೆ. ಜನಗಳ ಚೀರಾಟಕ್ಕೆ ಭಯಗೊಂಡ ರಣಹದ್ದುಗಳ ಮಾಂಸದ ಆಸೆಯಿಂದ ಗೋರಿಗಳ ಮೇಲೆ ಕುಳಿತುಕೊಳ್ಳುತ್ತವೆ. ವಾಸ್ತವವಾಗಿ ಸತ್ತ ಪ್ರಾಣಿಗಳ ದೇಹವನ್ನು ತಿನ್ನಬೇಕಾದ ನಾಯಿ, ರಣಹದ್ದುಗಳಿಗೂ ಸಿಗದ ಹಾಗೆ ದಲಿತರೇ ಖುಷಿಯಿಂದ ಅದನ್ನು ತೆಗೆದುಕೊಂಡು ಹೋಗುತ್ತಾರೆ. ಇವೆಲ್ಲವೂ ದಲಿತರ ಹಸಿವಿನ ತೀವ್ರತೆಯನ್ನು ತೋರಿಸುತ್ತವೆ. ಅಂದು ರಾತ್ರಿ ಇಡೀ ದಲಿತ ಕೇರಿಯ ಎಲ್ಲ ಗುಡಿಸಲು ಒಲೆಗಳ ಮೇಲೆ ಗಡಿಗೆಯಲ್ಲಿ ತಕಪಕನೆ ಕುಣಿಯುವ ಕೋಣದ ಸಾರು. ಒಟ್ಟಾರೆ ಅಂದು ಹೊಲೆ-ಮಾದಿಗರ ಕೇರಿಯಲ್ಲಿ ಹಬ್ಬದ ವಾತಾವರಣ ಮೂಡಿತ್ತು. ಆದರೆ ಗೌಡ-ಕುಲಕರ್ಣಿಯರ ಅನ್ಯಾಯಗಳನ್ನು ಪ್ರತಿಭಟಿಸದ ಹಾಗೆ ಅವರು ದಲಿತರ ಹಲ್ಲನ್ನೆ ಕಿತ್ತಿದ್ದಾರೆ ಎನ್ನುವ ನೋವು, ಅಸಹಾಯಕತೆ ಕಾಶಪ್ಪನಲ್ಲಿ ಮನೆಮಾಡಿದೆ. ಎಲ್ಲರೂ ಬದಲಾವಣೆಗಾಗಿ ಅಪೇಕ್ಷೆ ಪಡುವವರೇ. ಆದರೆ ವಾಸ್ತವವಾಗಿ ಮುಂದೆ ನಿಂತು ಕಾರ್ಯರೂಪಕ್ಕೆ ತರುವವರು ಯಾರು ಇಲ್ಲ. ಇಂಥದೆ ದಲಿತರ ಕೇರಿಯ ಹಸಿವನ್ನು ತಣಿಸುವ ಮತ್ತೊಂದು ಪ್ರಸಂಗವನ್ನು ದೇವನೂರ ಮಹಾದೇವರ 'ಒಡಲಾಳ' ಕಾದಂಬರಿಯಲ್ಲಿ ಕಾಣುತ್ತೇವೆ.

"ಕಾಳಣ್ಣ : ಆ ಎತ್ತಪ್ಪನೋರ ದನದ ಹಟ್ಟಿ ಇರ್ಲಿ. ಅಲ್ಲಿರೊ ದನ ಎಮ್ಮ ತಾನೆ ಏನಯ್ಯ.

ಸಣ್ಣಯ್ಯ : ಒಂದೊಂದುವಿ ಆನಥರ ಹಟ್ಟಿದಪ್ಪ ಅವ.

ಸಾಕವ್ವ : ಅಂಥ ಒಂದು ಎಮ್ಮ ಸತ್ರೀಗಪ್ಪ..ನಮ್ಮ ಕೇರಿ ದರಿದ್ರನಾರು ಬಂಜಿನ ಹಿಂಗ್ತದ." (ದೇವನೂರ ಮಹಾದೇವ : 'ಒಡಲಾಳ', ದೇವನೂರ ಮಹಾದೇವ ಅವರ ಆಯ್ದ ಕಥೆಗಳು, ೫೮) ಎಂದಾಗ ಮಗಳು ಗೌರಮ್ಮ 'ಅವ್ವೆ ಸುಮ್ಕಿರು ವಸಿಯಾ ನೀನು ಮೂರ್ಕಾಸ್ನ ಕೋಳಿ ಹೋದದಕ್ಕೆ ಅಷ್ಟು ಪಾಡುಪಟ್ಟೆ' ಅಂದರೂ ಸಾಕವ್ವನ ಕುಟುಂಬದ ಹಸಿವಿನ ತೀವ್ರತೆಯನ್ನು ಮೇಲಿನ ಸಾಲುಗಳು ತಿಳಿಸುತ್ತವೆ. ಇಡೀ ಒಡಲಾಳ ಕಾದಂಬರಿಯ ಕೇಂದ್ರವಿರುವುದೇ ಹಸಿವಿನ ಮೇಲೆ. ಆ ಕಾರಣಕ್ಕಾಗಿಯೇ ಕಾಳಣ್ಣ ಕಡಲೇಕಾಯಿ ಮೂಟೆಯನ್ನು ಕದ್ದು ತಂದಿದ್ದಾನೆ. 'ಕಾಳಕ್ಕ ಅಸಿಟ್ಟು ಕೇಳುವುದು,' ಆಕೆ ಗಂಡ ಕೆಲಸವಿಲ್ಲದೆ ಹಸಿದುಕೊಂಡು ಮಲಗಿರುವುದು, ಇಂಥ ಪ್ರಕರಣಗಳೂ ಕೂಡ ಒಡಲಾಳದ ಹಸಿವನ್ನು ಪ್ರತಿನಿಧಿಸುತ್ತವೆ. ಕಡಲೇಕಾಯಿ ರಾಶಿ ಸುತ್ತ ಸಾಕವ್ವನ ಕುಟುಂಬವೆಲ್ಲಾ ಒಂದಾಗಿ ಕೂತು ತಿನ್ನುವುದು ಒಂದು ರೀತಿಯಲ್ಲಿ ಹಸಿವಿನ ಯಜ್ಞವನ್ನೇ ನಡೆಸಿದಂತೆ ಕಂಡುಬರುತ್ತದೆ. 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲಿ 'ಹಸಿಮಾಂಸವನ್ನು ತಿನ್ನಲು ಬರುವ ಹದ್ದುಗಳು' ಒಂದು ರೀತಿಯಲ್ಲಿ 'ದಲಿತ ಹೆಣ್ಣುಮಗಳ ಶೀಲವೆಂಬ ಮಾಂಸವನ್ನು ತಿನ್ನಲು ಬರುವ ಕಾಮುಕ ರಣಹದ್ದುಗಳಾಗಿ ಕುಲಕರ್ಣಿ ಕಂಡು ಬರುತ್ತಾನೆ.

ಹಸಿವನ್ನು, ಒಡತನವನ್ನು ಬಿಂಬಿಸುವ ಮತ್ತೊಂದು ಕಾದಂಬರಿ ಕಾರಂತರ ಚೋಮನ ದುಡಿ. ಅದೇ ಊರಿನ ಬೇಸಾಯಗಾರನೊಬ್ಬನ ಮನೆಯಲ್ಲಿ ಎಮ್ಮೆ ಸತ್ತಾಗ ಆತ ಚೋಮನ ಮನೆಗೆ ಬಂದು "ಚೋಮ, ನಮ್ಮ ಮನೆಯ ಎಮ್ಮೆ ಸತ್ತಿದೆ; ಬಂದು ತೆಗೆದುಕೊಂಡು ಹೋಗುತ್ತೀಯ?

ಅವನಿಗೆ ಅಂತರಂಗದಲ್ಲಿ ಬಹಳ ಸಂತೋಷವಾಯಿತು. ಆದರೆ ತೋರಿಸಿಕೊಳ್ಳದೆ 'ಇಂದು ಮನೆಗೆ ತುಂಬ ನಂಟರು ಬಂದಿದ್ದಾರೆ. ಮನೆಯನ್ನು ಹೇಗೆ ಬಿಡುವುದು?' ಎಂದ.

'ನಂಟರು ಬಂದರೆ ಔತಣವೇ ಆಯಿತಲ್ಲ'.

'ಹೌದು, ಔತಣವಾಗುತ್ತದೆ. ಆದರೆ ಬರಿಯ ಮಾಂಸದಿಂದೇನು?

ಅದರ ಮೇಲು ಸಾಮಾನಿಗೆಲ್ಲಿಗೆ ಹೋಗುವುದು? ಕೈಯಲ್ಲಿ ಕಾಸಿಲ್ಲ". (ಶಿವರಾಮ ಕಾರಂತ : 'ಚೋಮನ ದುಡಿ', ೭೯)

ಎಂದಾಗ ರೈತನೇ ನಾಲ್ಕಾಣೆಯನ್ನು ಸಾಮಾನಿಗೆ ಕೊಡುತ್ತಾನೆ. ಎಮ್ಮೆ ಸತ್ತಿದ್ದರಿಂದ ಮನಸಿನಲ್ಲಿ ಆನಂದವಾದರೂ ಅದನ್ನು ತೋರಗೊಡದೆ ಸಾರಿನ ಸಾಮಾನಿಗೂ ಕಾಸನ್ನು ತೆಗೆದುಕೊಳ್ಳುತ್ತಾನೆ. ಇದೂ ಕೂಡ ದಲಿತರಲ್ಲಿನ ಬಡತನ, ಅಸಹಾಯಕತೆಯನ್ನು

ತೋರಿಸುತ್ತದೆ. ಇದರಿಂದ ಚೋಮನಿಗಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಅವನು 'ಆನಂದದಿಂದ ಜಿಗಿದು ಕುಣಿಯುತ್ತಾನೆ. ತನ್ನ ಮನೆಗೆ ಬಂದಿದ್ದ ನೆಂಟರ ಜೊತೆಗೆ ಒಂದೇ ಓಟಕ್ಕೆ ಅವರ ಮನೆಯವರೆಗೂ ಹೋಗಿ ಎಮ್ಮೆಯನ್ನು ಅವರ ಕೊಟ್ಟಿಗೆಯಿಂದ ಎಳೆದು ತರುತ್ತಾನೆ. ಮಾಂಸವನ್ನು ಸುಲಿದು ಗುಡ್ಡೆ ಹಾಕುತ್ತಾನೆ. ಈ ಮಾಂಸದಿಂದ ಎಂಟು ಜನ ನಂಟರಿಗಲ್ಲ ಐವತ್ತು ಜನ ನೆಂಟರು ಬಂದರೂ ಹಾಕಬಹುದೆಂದುಕೊಳ್ಳುತ್ತಾನೆ. 'ಬಾಡು' ನಾಯಿಗಂತು ಅಂದು ಬಾಡಿನ ಸಮಾರಾಧನೆಯೇ ನಡೆದಿತ್ತು. ಹೀಗೆ ಹಸಿವೆಯಿಂದ ನರಳುವ ದಲಿತ ಕುಟುಂಬಗಳಿಗೆ ಗೌಡರ ಮನೆಯ ದನವೋ, ಎಮ್ಮೆಯೋ, ಕೋಣವೋ ಸತ್ತಾಗ ಮಾತ್ರ ಹೊಟ್ಟೆಯ ತುಂಬ ಉಣ್ಣಬಹುದಾಗಿತ್ತು. ಇಂಥ ಬೆಂಕಿಯಂಥ ಹಸಿವನ್ನು ತಾಳಿಕೊಳ್ಳಲಾರದೆ ದುಡಿಯಲು ಹೊರಗೆ ಹೋದರೆ ಅಲ್ಲಿ ಹೆಣ್ಣುಮಕ್ಕಳ ಮಾನ ಹರಾಜಾಗುತ್ತದೆ. ದಲಿತರ ಹಸಿವು ದುಡಿಮೆ ಒಂದಕ್ಕೊಂದು ಬೆಸೆದುಕೊಂಡಿವೆ. ದಲಿತರ ಹಸಿವನ್ನು ತಣಿಸಲೆಂದೆ ದಲಿತ ಮಹಿಳೆಯರು ದುಡಿಯುವ ಅನಿವಾರ್ಯತೆಯಿದೆ.

'ಸಂಸ್ಕಾರ' ಕಾದಂಬರಿಯ ಬೆಳ್ಳಿ ಮತ್ತು ಚಿನ್ನಿ ಇಬ್ಬರು ದಲಿತ ಹೆಣ್ಣುಮಕ್ಕಳು ಬ್ರಾಹ್ಮಣರ ಅಗ್ರಹಾರದಲ್ಲಿ ಕೆಲಸ ಮಾಡುತ್ತಾರೆ. ಬ್ರಾಹ್ಮಣರ ಮನೆಯ ಕೊಟ್ಟಿಗೆಯನ್ನು ಗುಡಿಸುತ್ತಾರೆ. ಗೊಬ್ಬರವನ್ನು ಹರಡುತ್ತಾರೆ. ಹೊಲತಿಯಾದ ಬೆಳ್ಳಿಯನ್ನು ಶ್ರೀಪತಿ ದುರುಪಯೋಗಪಡಿಸಿ–ಕೊಳ್ಳುತ್ತಾನೆ. ಆದರೆ ಬೆಳ್ಳಿ ದುಡಿಯುವ ಜಾಗದಲ್ಲಿ ಶೋಷಣೆಗೆ ಒಳಗಾಗುವುದಿಲ್ಲ. ಒಟ್ಟಾರೆ ದಲಿತ ಹೆಂಗಸರು ದುಡಿಯದೆ ಇರಲು ಸಾಧ್ಯವಿಲ್ಲವೆನ್ನುವಂತೆ ಆಗಿದೆ. 'ಭಾರತೀಪುರ' ಕಾದಂಬರಿಯ ದಲಿತ ಹೆಣ್ಣುಮಗಳು ಕಾವೇರಿ ಕೂಡ ಹೊರಗೆ ಹೊಲಗದ್ದೆಗಳಲ್ಲಿ ದುಡಿಯುತ್ತಾಳೆ. ಜಗನ್ನಾಥನ ತೋಟದ ರೈಟರ್ ಸೆಟ್ಟಿ ಕಾವೇರಿಯ ತಂದೆ ಶೀನಪ್ಪನನ್ನು ಕುರಿತು ಆಡುವ ಮಾತುಗಳು ಶೀನಪ್ಪ ಸ್ವಾರ್ಥಿ, ದುರಾಸೆಯುಳ್ಳವನೆಂಬುದನ್ನು ತೋರಿಸಿಕೊಡುತ್ತವೆ.

"ಎರಡನೇ ಮಗಳಿದಾಳಲ್ಲ ಕಾವೇರಿ–ಅವಳಿಗಿನ್ನೂ ಯಾಕೆ ಶೀನಪ್ಪ ಮದುವೆ ಮಾಡಿಲ್ಲ? ಸೆಟ್ಟಿ ನಕ್ಕು ಹೇಳಿದ್ದ, ಶೀನಪ್ಪನಿಗೆ ಅತಿ ದುರಾಸೆ ಸಾರ್. ಐನೂರು ರೂಪಾಯಿ ತೆರಕೊಡದೆ ಹೆಣ್ಣು ಕೊಡಲ್ಲ ಅಂತಾನೆ. ದುಡೀತಾ ಇರೋ ಮಗಳು. ಅಲ್ಲೆ ಚೆನ್ನಾಗಿದಾಳೆ. ಗರ್ವಸೂಳೇ ಮಗನಿಗೆ–ಅಷ್ಟೆ." (ಅನಂತಮೂರ್ತಿ ಯು.ಆರ್., : 'ಭಾರತೀಪುರ', ೪೮) 'ಭಾರತೀಪುರ' ಕಾದಂಬರಿಯ ಕಾವೇರಿ ಹೊರಗೆ ದುಡಿಯುವವಳು. ಆದ್ದರಿಂದಲೇ ಅವಳ ತಂದೆ ಮದುವೆ ಮಾಡಲು ಹಿಂಜರಿಯುತ್ತಾನೆ ಎನ್ನುವುದು ಒಂದು ರೀತಿಯಲ್ಲಿ ಸರಿಯಾದುದು ಅನಿಸುತ್ತದೆ. ಆದರೆ ಭಾರತೀಪುರದಲ್ಲಿ ಶೀನಪ್ಪನಿಗೆ ಮೂರು ಜನ ಹೆಣ್ಣು ಮಕ್ಕಳಿದ್ದಾರೆ. ಆದರೆ ಮೂರೂ ಜನ ಹೆಣ್ಣುಮಕ್ಕಳು ಹೊರಗೆ ದುಡಿಯುವವರಾಗಿದ್ದಾರೆ. ಆದರೆ ಕಾವೇರಿ

ದುಡಿಯುವ ಜಾಗದಲ್ಲಿ ದೈಹಿಕವಾಗಿ ಶೋಷಣೆಗೊಳಗಾಗುವಂತೆ ಅನಂತಮೂರ್ತಿಯವರು ಚಿತ್ರಿಸಿಲ್ಲ. ಜಗನ್ನಾಥನ ರೂಮಿಗೆ ಹೋದ ಕಾವೇರಿಯೇ ಉದ್ದೇಶಪೂರ್ವಕವಾಗಿ ಜಗನ್ನಾಥನನ್ನು ಕೆರಳಿಸುವಂತೆ ಮಾಡುತ್ತಾಳೆ ಎಂಬಂತೆ ಅನಂತಮೂರ್ತಿಯವರು ಚಿತ್ರಿಸಿದ್ದಾರೆ. ಜಗನ್ನಾಥನಲ್ಲಿ ಕಾವೇರಿ ಬಗ್ಗೆ ಆಸೆ ಉಂಟಾದರೂ ದಲಿತರನ್ನು ಉದ್ಧಾರ ಮಾಡುವ ಪಣತೊಟ್ಟಿರುವ ಆತನಿಗೆ ಇದು ತೊಡಕಾಗಿದೆ. ಅಲ್ಲದೆ ಜಾತಿಯೂ ಅಡ್ಡಬಂದಿದೆ. ಒಟ್ಟಾರೆ ದಲಿತ ಹೆಂಗಸರು ದುಡಿಯದೆ ಮನೆಯೊಳಗೆ ಇರುವುದು ಎಲ್ಲೂ ಕಂಡುಬರುವುದಿಲ್ಲ.

'ಅಸ್ಪೃಶ್ಯರು' ಕಾದಂಬರಿಯಲ್ಲಿ ಹೊಲತಿಯಾದ ಕೂಸ, ಬ್ರಾಹ್ಮಣರ ಮನೆಯ ಕೊಟ್ಟಿಗೆಗೆ ಹುಲ್ಲನ್ನು ತಂದಾಕುತ್ತಾಳೆ. ಅವಳಿಗೆ ಮನೆ ತುಂಬಾ ಮಕ್ಕಳೆ. ಹುಲ್ಲನ್ನು ತಂದು ಹಾಕಿ ಬ್ರಾಹ್ಮಣರ ಮನೆಯಿಂದ ಊಟ ಪಡೆದುಕೊಂಡು ಹೋಗುತ್ತಾಳೆ. ಅವಳು ತುಂಬು ಗರ್ಭಿಣಿಯಾಗಿದ್ದಾಗಲೂ ಹೆರಿಗೆಗೆ ಹಿಂದಿನ ದಿನವೂ ಅವಳು ಬ್ರಾಹ್ಮಣರ ಮನೆಯ ಕೊಟ್ಟಿಗೆಗೆ ಹುಲ್ಲು ತಂದುಕೊಟ್ಟಿರುತ್ತಾಳೆ. ಅದರ ಮಾರನೆಯ ದಿನವೇ ಕೂಸ 'ಹೆರಿಗೆ' ಸಂದರ್ಭದಲ್ಲಿ ಪ್ರಾಣಬಿಡುತ್ತಾಳೆ. ದಲಿತ ಹೆಣ್ಣುಮಕ್ಕಳಿಗೆ ಹೊರಗೂ ಒಳಗೂ ಎರಡೂ ಕಡೆಗಳಲ್ಲೂ ದುಡಿಮೆ. ಬಸುರಿ–ಬಾಣಂತಿಯ ಸಂದರ್ಭದಲ್ಲೂ ಅವರಿಗೆ ಒಳ್ಳೆಯ ಊಟವಾಗಲೀ, ಆರೈಕೆಯಾಗಲಿ ಸಿಗುವುದಿಲ್ಲ. ಇದಕ್ಕೆಲ್ಲಾ ಕಾರಣ ಅವರ ಬಡತನ, ಅಜ್ಞಾನ.

ಇದೇ ಕಾದಂಬರಿಯಲ್ಲಿ 'ಕೊರಚ' ಜನಾಂಗದ ಬೇಡುವ ಹೆಣ್ಣಾದ ನರಪಟೆ ಕೂಡ ಸಿಬ್ಬಲುಗಳನ್ನು ಮಾರಿ ಬದುಕುತ್ತಾಳೆ. ದುಡಿಮೆಯಿಲ್ಲದಾಗ ಬ್ರಾಹ್ಮಣರ ಮನೆಯ ಹಿಂದಿನ ಹಿತ್ತಿಲಲ್ಲಿ ಉಂಡು ಬಿಟ್ಟ ಎಂಜಲೆಲೆಗಳಲ್ಲಿನ ಅನ್ನವನ್ನು ತಿನ್ನುತ್ತಾರೆ. ದಲಿತರ ನೂರಾರು ವರ್ಷಗಳ ಅಜ್ಞಾನ, ಅನಕ್ಷರತೆ, ಬಡತನವೇ ಇದಕ್ಕೆಲ್ಲಾ ಕಾರಣ, ದಲಿತರು ಅಕ್ಷರಸ್ಥರಾಗದ ಹೊರತು ಬದಲಾವಣೆ ಸಾಧ್ಯವಿಲ್ಲ, ಒಟ್ಟಿನಲ್ಲಿ ದಲಿತ ಮಹಿಳೆ ಹೊರಗೆ ದುಡಿಯದೆ ನಿರ್ವಾಹವಿಲ್ಲ.

'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿ ದಲಿತ ಮಹಿಳೆಯಾದ ಲಚ್ಚಿ ಕೂಡ ಕುಟುಂಬದ ಒಳಗೆ ಮತ್ತು ಹೊರಗೆ ದುಡಿಯುವವಳಾಗಿದ್ದಾಳೆ. ಇವಳ ತಂದೆ ಫಕೀರಪ್ಪ ಕುಡುಕನಾಗಿದ್ದಾನೆ. ಲಚ್ಚಿಯ ತಾಯಿಯೂ ತೀರಿಕೊಂಡಿದ್ದಾಳೆ. ಲಚ್ಚಿ ಮೇಲ್ವರ್ಗದವರ ಹೊಲಗದ್ದೆಗಳಲ್ಲಿ ಕೂಲಿ ಕೆಲಸ ಮಾಡುತ್ತ ಬದುಕು ನಡೆಸುತ್ತಾಳೆ. ದಲಿತರ ಬಡತನ ಮತ್ತು ಹಸಿವು ಅವರನ್ನು ಸಾವಿನವರೆಗೂ ಕೊಂಡೊಯ್ಯುತ್ತದೆನ್ನುವುದಕ್ಕೆ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿ ಉದಾಹರಣೆಯಾಗಿದೆ. ಲಚ್ಚಿ ಕೂಲಿ ಮಾಡಿ ಬರುವಾಗ ಬಾಯಾರಿ ಎಲ್ಲೆಡೆಯೂ ನೀರು ಬತ್ತಿ ಬರಗಾಲ ಬಿದ್ದಿದ್ದರಿಂದ ಕುಲಕರ್ಣಿ ತೋಟಕ್ಕೆ ಹೋಗುತ್ತಾಳೆ

“ಗಂಟಲಂಬಾದು ಒಣಗಿ ನಾಲಿಗಿ ಸೇದಲಕತ್ತದೋ ಕಾಸಿ. ಒಂದ ಬಗಸಿ ನೀರ ಕುಡ್ದು-ಹೋಗ್ತೀನಿ, ಬಾ, ಬಾ ...ಜಲ್ದಿ ಕುಡ್ದು ಹೋಗು. ಕುಲಕರ್ಣಿ ಮನಶ್ಯಾರಿಗರೆ ಬಿಡು, ಒಂದು ಹಕ್ಕಿಗಿನೂ ನೀರು ಕುಡ್ಲಿಕ್ ಬಿಡುಗುಡಸಂಗಿಲ್ಲ ಇಲ್ಲಿ...’

ಯಾಕ್ ಲಚ್ಚಿ..ಮಾರಿ ಬಾಡ್ಯಾದಲ್ಲೇ.

ನಿನ್ನಿ ಪಗಾರ ಕೊಟ್ಟಿಲ್ಲ ನಮ್ ಸಾಬ್..ನಾಳಿಗಿ ಕುಡ್ತಾನಂತ.

ಹಂಗಾದ್ರೆ ನಿನ್ನಿಲಿಂದ ಉಪಾಸೆ ಬಿದ್ದಿದೇನು?” (ಗೀತಾ ನಾಗಭೂಷಣ : ‘ಹಸಿಮಾಂಸ ಮತ್ತು ಹದ್ದುಗಳು’, ೪೭, ೪೮) ಎಂದಾಗ ಲಚ್ಚಿ ತಲೆಕೆಳಗೆ ಮಾಡುತ್ತಾಳೆ. ಅವಳು ಉಪವಾಸವಿರುವುದನ್ನು ಅರಿತ ಅವಳ ಗೆಳೆಯ ಕಾಸಿನಾತ ಕುಂಬಳ ಕಾಯಿಯನ್ನು ಕಿತ್ತುಕೊಡುತ್ತಾನೆ. ಲಚ್ಚಿ ತೆಗೆದುಕೊಂಡು ಬರುವಾಗ ಯಜಮಾನ ಕುಲಕರ್ಣಿ ಕೈಗೆ ಸಿಕ್ಕಿಹಾಕಿಕೊಳ್ಳುತ್ತಾಳೆ. ಕುಲಕರ್ಣಿ ಲಚ್ಚಿಗೆ ಕುಂಬಳಕಾಯಿ ಕದ್ದರೂ ಪರವಾಗಿಲ್ಲ ನನ್ನಿಷ್ಟದಂತೆ ನಡೆದುಕೊಂಡರೆ ಬಿಟ್ಟುಬಿಡುತ್ತೇನೆ ಎನ್ನುತ್ತಾನೆ. ಇದಕ್ಕೆ ವಿರೋಧಿಸಿದ ಲಚ್ಚಿಗೆ ಆಳುಗಳಿಂದ ಹೊಡೆಸಿ, ಪೊಲೀಸರಿಗೆ ಒಪ್ಪಿಸುತ್ತಾನೆ. ಜೈಲಿನಲ್ಲಿ ಪೊಲೀಸರು ಅವಳನ್ನು ಮನಬಂದಂತೆ ಉಪಯೋಗಿಸಿಕೊಳ್ಳುತ್ತಾರೆ. ಕಡೆಗೆ ಅವಳ ಬದುಕೇ ದುರಂತವಾಗಿ ಕೊನೆಗೊಳ್ಳುತ್ತದೆ. ದಲಿತರ ‘ಹಸಿವು’ ಮಾಡಿಸಿದ ಸಣ್ಣ ತಪ್ಪಿಗೆ ದಲಿತ ಮಹಿಳೆಯ ಬದುಕೇ ನಾಶವಾಗುತ್ತದೆ. ದಲಿತ ಮಹಿಳೆಗೆ ದುಡಿಮೆಯಿಲ್ಲದಿದ್ದರೆ ಅವಳು ಬದುಕಲು ಸಾಧ್ಯವಿಲ್ಲ. ಹೊರಗೆ ದುಡಿಯುವ ದಲಿತ ಹೆಣ್ಣುಮಕ್ಕಳು ಗೌಡರು, ಕುಲಕರ್ಣಿಗಳು, ಪಟೇಲರ ಕಣ್ಣಿಗೆ ಬಿದ್ದರಂತೂ ಅವರ ಬದುಕು ಮುಗಿದಂತೆಯೇ ಸರಿ.

ಬಿ.ಟಿ. ಲಲಿತಾ ನಾಯಕರ ‘ಗತಿ’ ಕಾದಂಬರಿಯಲ್ಲಿ ಬರುವ ಇಬ್ಬರು ದಲಿತ ಮಹಿಳೆಯರೂ ದುಡಿಯುವರಾಗಿದ್ದಾರೆ. ‘ಸೋನಿ’ಯ ಗಂಡ ಮಾನ್ಯಾ ಕುಡಿದು ಬಂದು ಜಗಳ ತೆಗೆದು ಹೊಡೆಯುತ್ತಿರುತ್ತಾನೆ. ಆರಂಭದಲ್ಲಿ ಇದನ್ನು ಸಹಿಸಿಕೊಂಡಿದ್ದ ಸೋನಿ ನಂತರ ಪ್ರತ್ಯೇಕವಾಗಿ ಚಂದು ಮತ್ತು ಲಚ್ಮತ್ತೆಯರ ಸಹಾಯದಿಂದ ಗುಡಿಸಲನ್ನು ನಿರ್ಮಿಸಿಕೊಂಡು ವಾಸಿಸುತ್ತಾಳೆ. ಗಂಡನಿಂದ ಪ್ರತ್ಯೇಕವಾಗಿ ವಾಸಿಸುತ್ತಿರುವ ಸೋನಿ ದುಡಿಯುವುದು ಅನಿವಾರ್ಯವಾಗುತ್ತದೆ. ದುಡಿಮೆಯ ಮೂಲಕವೇ ತನ್ನಿಬ್ಬರು ಹೆಣ್ಣು ಮಕ್ಕಳನ್ನು ಸಾಕುವ ಜವಾಬ್ದಾರಿ ಸೋನಿಯ ಹೆಗಲಿಗಿರುತ್ತದೆ. ಸೋನಿ ತಾನು ದುಡಿಯುತ್ತಾ ಇಬ್ಬರು ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವಷ್ಟು ದಿಟ್ಟ ಹೆಣ್ಣುಮಗಳು. ಸೋನಿ ಮನೆಯ ಕೆಲಸವನ್ನು ನಿಭಾಯಿಸುತ್ತಾ ಕಾಡಿಗೆ ಹೋಗಿ ಕಟ್ಟಿಗೆಯನ್ನು ತಂದು ಮಾರುತ್ತಾಳೆ, ಕೂಲಿಗೂ ಹೋಗುತ್ತಾಳೆ. ತನ್ನ

ದುಡಿಮೆಯಿಂದಲೇ ಮನೆಗೆ ಕೋಳಿ ಪಿಳ್ಳೆಯನ್ನು ತರುವುದು, ಮಕ್ಕಳಿಗೆ ಬಟ್ಟೆ ತರುವುದು ಮಾಡುತ್ತಾಳೆ.

ಸೋನಿ ತನ್ನ ಗಂಡನ ಜೊತೆ ಬಾಳುವಾಗಲೂ ಆತ ದುಡಿಯುತ್ತಿರಲಿಲ್ಲ. ಸೋನಿಯೇ ಹೊರಗೆ ದುಡಿದು ಬಂದ ಹಣದಿಂದ ಮಾವ ಮತ್ತು ಗಂಡನನ್ನು ಸಾಕುತ್ತಿರುತ್ತಾಳೆ. ಅವಳು ಕಟ್ಟಿಗೆ ಮಾರಿ ಬಂದ ರೊಕ್ಕದಿಂದ ತೆಗೆದುಕೊಂಡ ಕೋಳಿಯನ್ನು ಗಂಡ ಕುಡಿತಕ್ಕಾಗಿ ಮಾರಿಬಿಡುತ್ತಾನೆ. ಸೋನಿ ತಾನು ದುಡಿದು ತಿನ್ನುವ, ಇನ್ನೊಬ್ಬರ ಹಂಗಿಗೆ ಒಳಗಾಗದೆ ಬದುಕುತ್ತಿರುವ ಬಗ್ಗೆ ಹೀಗೆ ಮಾತಾಡುತ್ತಾಳೆ. "ಇಲ್ಲೇತಾನ ದುಡಿದೇ ಉಂಡೀನಿ ಬಿಡು. ಆ ಭಾಡ್ಯಾ ನನಗೆಂದು ಕೂರಿಸಿ ಉಂಬಾಕ ನೀಡ್ಯಾನ! ಸೋನಿ ಆವೇಶದಿಂದ ಮುಂದುವರಿಸಿದಳು– ನನ್ನ ಕೈ ದುಡಿಬೇಕು–ಬಾಯಿ ಉಣ್ಣಬೇಕು, ಅಜ್ಜನಾಗ್ಲಿ, ಅಪ್ಪನಾಗ್ಲಿ ಒಮ್ಮೆಯಾರ ಒಂದ್ ಗೇಣು ಅರವಿ ತಂದು ಮಕ್ಕಳ ಮೈಮ್ಯಾಲ ಹಾಕಿಲ್ಲ. ಮತ್ತ ನೋಡಿದ್ರ ಕದ್ದು ಕನ್ನ ಹಾಕಿ ಗಳಸೇ ಗಳಸ್ತಾರ; ಎಲ್ಲಾದ್ನೂ ಒಯ್ದು ಊರ ಸೂಳೇರ ಸೆರಗಿಗ ಸುರ್ದು, ಬರೇ ಕೈಯಾಗ ಮನೀಗ ಬರ್ತಾರ!" (ಲಲಿತಾ ನಾಯಕ್ ಬಿ.ಟಿ. : 'ಗತಿ', ೫೪) ಸೋನಿಯನ್ನು ಇಲ್ಲಿವರೆಗೂ ಗಂಡನಾಗಲೀ ಮಾವನಾಗಲೀ ದುಡಿದು ಸಾಕಿಲ್ಲ, ಬದಲಿಗೆ ಸೋನಿಯೇ ಅವರಿಬ್ಬರನ್ನು ಸಾಕಿದ್ದಾಳೆ. ಸಾಮಾನ್ಯವಾಗಿ ಎಲ್ಲಾ ದಲಿತ ಮಹಿಳೆಯರು ಹೀಗೆ ದುಡಿದು ಕುಟುಂಬದವರನ್ನು ಸಾಕುತ್ತಾರೆ. 'ಗತಿ' ಕಾದಂಬರಿಯಲ್ಲಿ ಸೋನಿಗೆ ಮದುವೆಯಾಗಿದ್ದರೂ ಗಂಡ ಅವಳನ್ನು ಸಾಕುತ್ತಿಲ್ಲ. ಇಲ್ಲಿವರೆಗೆ ಪ್ರಸ್ತಾಪಿಸಿದ ಕಾದಂಬರಿಗಳಲ್ಲಿ ಮದುವೆಯಾಗದ ಹೆಣ್ಣು ಮಕ್ಕಳೂ ತಮ್ಮ ತಂದೆ ಅಣ್ಣ, ತಮ್ಮಂದಿರನ್ನು ಸಾಕಿದರೆ ಇದಕ್ಕೆ ತದ್ವಿರುದ್ಧವಾಗಿ 'ಸೋನಿ' ಗಂಡ ಮತ್ತು ಮಾವನನ್ನೇ ಸಾಕುತ್ತಾಳೆ. ಒಟ್ಟಾರೆ ದಲಿತ ಮಹಿಳೆಗೆ ಮದುವೆಯಾದರೂ ಮದುವೆಯಾಗದಿದ್ದರೂ ಸುಖವಿಲ್ಲ. ಮದುವೆಗಿಂತ ಮುಂಚೆಯೂ ದುಡಿದೇ ಉಣ್ಣಬೇಕು. ಮದುವೆಯಾದ ನಂತರವೂ ದುಡಿದೇ ಉಣ್ಣಬೇಕು.

ಇದೇ ಕಾದಂಬರಿಯ ಲಚ್ಮಿ ಕೂಡ ಅಂಗಡಿಯನ್ನೂ ಇಟ್ಟುಕೊಂಡಿದ್ದಾಳೆ. ಗಂಡ ಮತ್ತು ಮಗುವನ್ನು 'ಕಾಲರಾ' ರೋಗದಿಂದ ಕಳೆದುಕೊಂಡ ಲಚ್ಮಿ ತನ್ನ ದುಡಿಮೆಯಿಂದಲೇ ಒಂಟಿಯಾಗಿ ಬದುಕುತ್ತಿದ್ದಾಳೆ. ಅನಿವಾರ್ಯವಾದಾಗ ಸೋನಿಗೆ ಸಹಾಯ ಮಾಡುವುದಲ್ಲದೆ ಹೆತ್ತ ತಾಯಿಯಂತೆಯೇ ಲಚ್ಮಿಯನ್ನು ನೋಡಿಕೊಳ್ಳುತ್ತಾಳೆ. ದುಡಿದು ತಮ್ಮ ಪಾಡಿಗೆ ತಾವು ಸ್ವಾಭಿಮಾನದಿಂದ ಬದುಕುತ್ತಿರುವ ದಲಿತ ಮಹಿಳೆಯರನ್ನು ಸಹ ಸಮಾಜ ತಮ್ಮ ಪಾಡಿಗೆ ತಾವು ಬದುಕಲು ಬಿಡುವುದಿಲ್ಲ. ಸೋನಿ ನೀರು ತರಲೆಂದು ಬಾವಿಗೆ ಹೊರಟಿದ್ದಾಗ ಅವಳನ್ನು

ಹಿಂಬಾಲಿಸಿದ ಕಾಶಪ್ಪ ಪೂಜಾರಿ ಸೋನಿಯನ್ನು ಕುರಿತು "ಮೊನ್ನೆ ನೀ ಕಾರೇಕಾಯಿ ಮಾರಲಿಕ್ಕಂತ ಊರೊಳಗೆ ಹೋಗಿದ್ಯಂತಲ್ಲ?

'ಹೌದು. ಮಂದಿ 'ವಲ್ಲೆ ವಲ್ಲೆ' ಅಂದುಬಿಟ್ರು. ಹಗಲೆಲ್ಲಾ ಸುತ್ತಾಡಿದ್ರೂ ಮೂರು ರೂಪೈ ಸುದ್ದ ಜಮಾಸಲಿಲ್ಲ..'

'ನೀ ಪುಟ್ಟಿ ಹೊತಗೊಂಡು ಖಾಲಿ ೨-೩ ರುಪ್ಯಾಗ ಈಟೊಂದು ತ್ರಾಸು ಪಡೋದು ಯದಕ್ಕ ಸೋನಿಬಾಯಿ? ಸುಮ್ನ ನಾ ಹೇಳಿದ್ಹಂಗ ಕೇಳು-ಕುಂತ ಜಗದಾಗ ೨೦-೩೦ ರೂಪ್ಯಾ ಸಿಗತಾವ'!

'ಅದ್ ಹ್ಯಾಂಗ?' ಸೋನಿ ಅಚ್ಚರಿಯಿಂದ ಕೇಳಿದಳು.

'ಊರ ಚೇರ್ಮನ್-ದೊಣ್ಣೆಯವರು ನಿನಗೊತ್ತಲ್ಲ?..' ಆತ ಕೇಳಿದ.

'ನಾನೆಂದು ಕಂಡೀನೋಯಪ್ಪ?'

'ನೀ ಆತನ್ನ ಕಂಡಿಲ್ಲ, ಆದ್ರ ಆತ ನಿನ್ನನ್ನು ಕಂಡು ಭಾಳ ಮೆಚ್ಚಿಕೊಂಡಾನ!

'ಆಕಿ ಬೇಡಿದಷ್ಟು ರೊಕ್ಕ ಕೊಡಲಿಕ್ಕ ತಯಾರದೀನಿ' ಅನ್ನಾಕ್ಹತ್ತಾನ?..' ಕಾಶಪ್ಪ ಹಲ್ಲುಗಿಂಜಿ ಪಿಸುಗುಟ್ಟಿದಾಗ" (ಬಿ.ಟಿ. ಲಲಿತಾ ನಾಯಕ್, 'ಗತಿ', ೩೧) ಸೋನಿಗೆ ಅವನ ಇರಾದೆ ಏನೆಂದು ಸ್ಪಷ್ಟವಾಯಿತು. ಪೂಜಾರಿಯಾಗಿ ಇಂಥ ಕೆಲಸ ಮಾಡಬಾರದೆಂಬ ಎಚ್ಚರಿಕೆಯನ್ನು ಕೊಡುತ್ತಾಳೆ. ನಿನ್ನ ಹೆಂಡ್ತಿನ ಬೇಕಾದರೆ ಕಳಿಸು ಎಂದು ತಿರುಗಿ ಹೇಳುತ್ತಾಳೆ. ದೇವರ ಹೆಸರು ಹೇಳಿಕೊಂಡು, ಪೂಜೆ ಮಾಡಿಕೊಂಡು ಬದುಕುವ ಪೂಜಾರಿಗಳು ಸಮಾಜದಲ್ಲಿ ಎಂಥ ನೀಚ ಕೆಲಸಕ್ಕೆ ಇಳಿದಿದ್ದಾರೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಗಂಡ ಬಿಟ್ಟ ಹೆಣ್ಣುಮಗಳು ಉತ್ತಮ ನಡೆತೆಯವಳಾದರೂ ಸಮಾಜ ಅವಳನ್ನು ಕೆಟ್ಟದಾಗಿಯೇ ನೋಡುತ್ತದೆ ಎಂಬುದಕ್ಕೆ ಇದು ನಿದರ್ಶನವಾಗಿದೆ.

ದಲಿತ ಮಹಿಳೆಯರು ತಮ್ಮ ಸಂಸಾರ ಪಾಲನೆಗಾಗಿ ಪ್ರಾಣಿಗಳನ್ನು, ಪಕ್ಷಿಗಳನ್ನು ಪಾಲನೆ ಮಾಡುವುದು ರೂಢಿಯಾಗಿದೆ. 'ಗತಿ' ಕಾದಂಬರಿಯ 'ಸೋನಿ' ಹಸಿಮಾಂಸ ಮತ್ತು ಹದ್ದುಗಳು ಕಾದಂಬರಿಯ ಲಚ್ಚಿ, ಒಡಲಾಳದ ಸಾಕವ್ವ ಮುಂತಾದ ದಲಿತ ಮಹಿಳೆಯರು ತಮ್ಮ ದುಡಿಮೆಯ ಭಾಗವಾಗಿ ಕೋಳಿಗಳನ್ನು ಸಾಕುತ್ತಾರೆ. ಆದರೆ ಈ ಮೂವರೂ ದಲಿತ ಮಹಿಳೆಯರು ಕೋಳಿಗಳನ್ನು ಕಳೆದುಕೊಳ್ಳುತ್ತಾರೆ ಮತ್ತು ಅದಕ್ಕೆ ಹುಡುಕಾಟ ನಡೆಸುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಜನರು ಕುರಿ, ಕೋಳಿ, ನಾಯಿ, ಹಸು ಮುಂತಾದವುಗಳನ್ನು ತಮ್ಮ ಮಕ್ಕಳಂತೆಯೇ ಪ್ರೀತಿಯಿಂದ ಸಾಕುತ್ತಾರೆ. ಅವನ್ನು ಕಳೆದುಕೊಂಡಾಗ ತಮ್ಮ ಮಕ್ಕಳನ್ನು

ಕಳೆದುಕೊಂಡಂತೆಯೇ ದುಃಖಪಡುತ್ತಾರೆ. ಇದಕ್ಕೆ ಉದಾಹರಣೆಯಾಗಿ ಮೂವರು ದಲಿತ ಮಹಿಳೆಯರಿದ್ದಾರೆ. ಸಾಕವ್ವನ ಕೋಳೀ ಹುಡುಕಾಟವಂತೂ ಓದುಗರೇ ಕಳೆದು ಕೊಂಡಿದ್ದಾರೇನೊ ಎನ್ನುವಷ್ಟು ಸಶಕ್ತವಾಗಿ ಮೂಡಿಬಂದಿದೆ. ಅವಳ ಅನುಮಾನ, ದುಃಖ, ನೋವು, ಶಾಪ ಇವೆಲ್ಲಾ ನಮ್ಮ ನಡುವೆ ನಡೆದಂತೆ ಭಾಸವಾಗುತ್ತವೆ. ಸೋನಿಯ ಕೋಳಿಯನ್ನು ಅವಳ ಗಂಡ ಮಾನ್ಯಾನೇ ಕದ್ದಿರುವುದು ದಲಿತ ಗಂಡುಗಳ ಕುಡುಕುತನ, ಬೇಜವಾಬ್ದಾರಿ ಮುಂತಾದವುಗಳನ್ನು ತೋರಿಸುತ್ತವೆ. ಲಚ್ಚಿಯ ಕೋಳಿಯಂತೂ ಸಿಗುವುದೇ ಇಲ್ಲ. ಕೋಳಿಯ ಹುಡುಕಾಟಕ್ಕೂ ದೇವರನ್ನು ಅಡ್ಡ ಇಟ್ಟುಕೊಳ್ಳುವುದು ಸಮಾಜದಲ್ಲಿರುವ ಮೌಢ್ಯವ್ಯವಸ್ಥೆಯನ್ನು ತೋರಿಸುತ್ತದೆ. ಸಾಕವ್ವ ಮತ್ತು ಇಡೀ ದಲಿತ ಮಹಿಳೆಯರ ಬದುಕಿನ ಚಿತ್ರಣವನ್ನು ಪಿ. ಲಂಕೇಶ್ ಅವರ 'ಅವ್ವ' ಪದ್ಯ ಸಶಕ್ತವಾಗಿ ಪ್ರತಿನಿಧಿಸುತ್ತದೆ.

ದಲಿತ ಮಹಿಳೆ ತನ್ನ ಕುಟುಂಬದ ಯಾರೊಬ್ಬರ ಮೇಲೂ ಅವಲಂಬಿಸದೆ ತನ್ನ ಕಾಲ ಮೇಲೆ ತಾನು ನಿಂತು ಬದುಕುತ್ತಿದ್ದಾಳೆ. ಕುಟುಂಬದೊಳಗಿನ ಕುಡುಕ ಗಂಡ, ತಂದೆ, ತಮ್ಮ, ಅಣ್ಣ ಮುಂತಾದವರನ್ನು ತಾನೇ ಸಾಕುತ್ತಿರುವುದರಿಂದ ಅವಳು ಸ್ವಾವಲಂಬಿ ದಲಿತ ಮಹಿಳೆಯಾಗಿ, ಕುಟುಂಬದ ಆಧಾರ ಸ್ತಂಭವಾಗಿ ಕಂಡು ಬರುತ್ತಾಳೆ. ಇದಕ್ಕೆ ಸಾಕವ್ವ ಉತ್ತಮ ನಿದರ್ಶನವಾಗಿದ್ದಾಳೆ. ಸಾಕವ್ವ ತನ್ನ ಇಳಿವಯಸ್ಸಿನಲ್ಲೂ ತನ್ನ ಕುಟುಂಬದ ಮೇಲೆ ನಿಯಂತ್ರಣವಿಟ್ಟುಕೊಂಡಿದ್ದಾಳೆ. ಕಷ್ಟ ಪಟ್ಟು ದುಡಿದು ತೊಟ್ಟಿ ಮನೆಯನ್ನು ಕಟ್ಟಿಸಿದ್ದಾಳೆ. ಒಂದು ಕೂಡು ಕುಟುಂಬದ ಜವಾಬ್ದಾರಿಯೇ ಅವಳ ಮೇಲಿರುವಂತೆ ಕಾದಂಬರಿಯ ಪಾತ್ರಗಳು ಚಿತ್ರಿಸಿವೆ. ಅವಳು ತೊಟ್ಟಿಮನೆಯನ್ನು ಕಟ್ಟಿ ಆಸರೆಯಾಗಿರುವುದು, ಇಡೀ ಕುಟುಂಬಕ್ಕೆ ಆಸರೆಯಾಗಿರುವುದು ಕಂಡು ಬರುತ್ತದೆ.

ಹೊರಗೆ ದುಡಿಯುವ ದಲಿತ ಮಹಿಳೆ ಸುರಕ್ಷಿತಳಲ್ಲ ಎಂಬುದಕ್ಕೆ ನಿದರ್ಶನವಾಗಿ ಚೋಮನ ದುಡಿಯ ಬೆಳ್ಳಿ, ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪುಟ್ಟಿ, ಹಸಿಮಾಂಸ ಮತ್ತು ಹದ್ದುಗಳು ಕಾದಂಬರಿಯ ಲಚ್ಚಿ ಪಾತ್ರಗಳು ಉದಾಹರಣೆಯಾಗಿವೆ. ಸಮಾಜದಲ್ಲಿ ಬದುಕುತ್ತಿರುವ ದಲಿತ ಮಹಿಳೆಯ ನೋವುಗಳೇ ಸಾಹಿತ್ಯ ಕೃತಿಗಳಿಗೆ ಪ್ರೇರಣೆ–ಯಾಗಿರುವುದರಿಂದ ಪ್ರಸ್ತುತ ಸಮಾಜದಲ್ಲಿ ದಲಿತ ಮಹಿಳೆ ಮೇಲೆ ನಡೆಯುತ್ತಿರುವ ಅತ್ಯಾಚಾರಗಳನ್ನು ಪರಿಗಣಿಸುವ ಅಗತ್ಯವಿದೆ. "ಮಲ್ಲಮ್ಮ ಎಂಬ ದಲಿತ ಮಹಿಳೆ ಮನೆಯಿಂದ ಹೊರಗೆ ಕಾಲುವೆಗೆ ಬಟ್ಟೆ ತೊಳೆಯಲು ಹೋಗಿ ಬರುವಾಗ ಬುರ್ನಾಯಕನ ಹಳ್ಳಿಯ ಮೂವರು ವಾಲ್ಮೀಕಿ ಜನಾಂಗದ ಹುಡುಗರು ಆಕೆಯ ಮೇಲೆ ಅತ್ಯಾಚಾರ ಮಾಡುತ್ತಾರೆ. ಆಕೆ ಹೊರಗೆ ಹೇಳುವಳೆಂಬ ಕಾರಣಕ್ಕೆ ಅವಳ ತಲೆಯ ಮೇಲೆ ಕಲ್ಲನ್ನು ಹಾಕಿ ಸಾಯಿಸುತ್ತಾರೆ".

(ಚಿನ್ನಸ್ವಾಮಿ ಸೋಸಲೆ : 'ದಲಿತರ ಬದುಕು–ಮೆಲುಕು', ೧೧೯) ಇಂಥ ಪ್ರಕರಣಗಳಲ್ಲಿ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕಾದ ಜರೂರಿರುತ್ತದೆ. ಆದರೆ ಈ ಪ್ರಕರಣದ ಆರೋಪಿಗಳನ್ನು ಪೊಲೀಸರು ಬಂಧಿಸಿದರೂ ಕೇವಲ ಮೂರೇ ಮೂರು ತಿಂಗಳಲ್ಲಿ ಹೊರ ಬಂದಿದ್ದರು. ಹೀಗಾದಾಗ, ದಲಿತರ ಮಾನರಕ್ಷಣೆಯ ವಿಷಯದಲ್ಲಿ, ನ್ಯಾಯದ ಬಗ್ಗೆ ನಂಬಿಕೆಯೇ ಇಲ್ಲದಂತಾಗುತ್ತದೆ. ಉಳ್ಳವರ ಪರವಾಗಿಯೇ ನ್ಯಾಯವಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಇಂಥ ನೂರಾರು ಘಟನೆಗಳು ಸಮಾಜದಲ್ಲಿ ಬೆಳಕಿಗೆ ಬರದೆ ಅಡಗಿ ಹೋಗುತ್ತವೆ.

"ದಲಿತ ಮಹಿಳೆಯರು ಮೇಲ್ಜಾತಿಯ ಮಹಿಳೆಯರಿಗಿಂತ ಹೆಚ್ಚು ಮಾನಸಿಕ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ದೈಹಿಕ ಶೋಷಣೆಗೆ ಒಳಗಾಗಿದ್ದಾರೆ. ಹೊಟ್ಟೆಯ ಹಸಿವು ಮತ್ತು ಅಸ್ಥಿತ್ವದ ಉಳಿವಿಗೆ ದಲಿತ ಮಹಿಳೆ ನಿರಂತರವಾಗಿ ಹೋರಾಡುವ ಪ್ರಸಂಗಗಳಿವೆ. ಕುಟುಂಬದಲ್ಲಿನ ಸರಿಯಾದ ಸ್ಥಾನಮಾನದ ಬಗ್ಗೆ ಯೋಚಿಸಲು ಪುರುಸೊತ್ತಿಲ್ಲದ ದಲಿತ ಮಹಿಳೆಗೆ ಸಮಾಜದಲ್ಲಿನ ತನ್ನ ಸ್ಥಾನದ ಬಗ್ಗೆ ಆಕೆಗೆ ಕಲ್ಪನೆಯೇ ಮೂಡುವುದಿಲ್ಲ. ದುಡಿಮೆಯ ಚಕ್ರದಲ್ಲಿ ಸುತ್ತುತ್ತಾ ಸಾಗುವ ಅವಳಿಗೆ ಕುಟುಂಬದ ಸೌಖ್ಯವಲ್ಲದೆ ಬೇರೆ ಯಾವುದೂ ಮುಖ್ಯವಾಗುವುದಿಲ್ಲ. ದಲಿತ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇದಕ್ಕೆ ಬಡತನ ಮತ್ತು ತಂದೆ–ತಾಯಿಗಳ ಅಜ್ಞಾನ ಕಾರಣ. ಮೊದಲಿಗೆ ಬಡತನ ಅವರನ್ನು ಶಿಕ್ಷಣದಿಂದ ದೂರವಿಡುತ್ತದೆ. ಹೊಟ್ಟೆ ತುಂಬಿಸಿಕೊಳ್ಳುವುದೇ ದಿನನಿತ್ಯದ ಸಮಸ್ಯೆಯಾಗುವಾಗ, ತಂದೆ ತಾಯಿ ಮಕ್ಕಳ ಓದಿನ ಬಗ್ಗೆ ಯೋಚಿಸುವುದು ಕಷ್ಟ. ಅಲ್ಪ ಸ್ವಲ್ಪ ಅನುಕೂಲವಿದ್ದರೆ ಸ್ವಾಭಾವಿಕವಾಗಿ ಹೆಣ್ಣು ಮದುವೆಯಾಗಿ ಇನ್ನೊಬ್ಬರ ಮನೆ ಸೇರುವವಳಾದ್ದರಿಂದ ಅವಳಿಗೆ ಮಾಡುವುದೆಲ್ಲ ದಂಡ ಎಂಬ ಭಾವನೆ ಬಲವಾಗಿದೆ. ಇಂಥ ಭಾವನೆಯನ್ನು ತೊರೆದು ಸಮಾನತೆಯನ್ನು ತಂದೆ–ತಾಯಿಗಳು ಮನೆಯಲ್ಲೇ ಮೊದಲು ಸೃಷ್ಟಿಸಬೇಕು". (ಭಾರತೀ ರಾಜಣ್ಣ ಆರ್. (ಲೇ), 'ವಿಚಾರ ಸಾಹಿತ್ಯ ಮತ್ತು ಹೆಣ್ಣು', ೨೧೭, ೨೧೮, ೨೧೯) ಗಂಡ ಬಿಟ್ಟರೆ, ಗಂಡ ಮತ್ತೊಂದು ಮದುವೆಯಾದರೆ, ಗಂಡ ಕುಡಿದು ಬಂದು ಹೊಡೆದರೆ, ಆಕೆಗೆ ಕಾನೂನಿನ ಅರಿವು ಪಡೆಯುವ ಬಗ್ಗೆ ಆಕೆಗೆ ಮಾಹಿತಿ ಇಲ್ಲ. ಇದಕ್ಕೆ ಕಾರಣ ದಲಿತ ಮಹಿಳೆಯರ ಅಜ್ಞಾನ ಮತ್ತು ಅನಕ್ಷರತೆ. ಮೊದಲು ಇವನ್ನು ಪಡೆಯುವವರೆಗೂ ಆಕೆಯ ಏಳಿಗೆ ಸಾಧ್ಯವಿಲ್ಲ. ದಲಿತ ಮಹಿಳಾ ಚಳವಳಿಗಳು, ದಲಿತ ಮಹಿಳಾ ಸಂಘಟನೆಗಳು ದಲಿತ ಮಹಿಳೆಯ ನೋವುಗಳಿಗೆ ಸರಿಯಾದ ರೀತಿಯಲ್ಲಿ ಸ್ಪಂದಿಸಬೇಕು. ಇದುವರೆಗೂ ದಲಿತ ಚಳವಳಿಗಳಲ್ಲಿ ದಲಿತ ಮಹಿಳೆಯನ್ನು ಸರಿಯಾಗಿ ಪರಿಗಣಿಸಿಲ್ಲ. ಅದಕ್ಕೆ ಕಾರಣ ದಲಿತ ಮಹಿಳೆ ಹೊಟ್ಟೆ ತುಂಬಿಸಿಕೊಳ್ಳಲು

ಬೆಳಿಗ್ಗೆಯಿಂದ ಸಂಜೆಯವರೆಗೆ ದುಡಿಯಬೇಕಾಗಿರುವುದು. ದುಡಿಯುವುದನ್ನು ಬಿಟ್ಟು ಚಳವಳಿ, ಸಂಘಟನೆ ಎಂದು ಹೊರಗೆ ಹೋದರೆ ಮನೆಮಂದಿ ಉಪವಾಸವಿರಬೇಕಾಗುತ್ತದೆ. ಅಲ್ಲದೇ ದಲಿತ ಮಹಿಳೆ ಚಳವಳಿಗಳಲ್ಲಿ ಭಾಗಿಯಾದಾಗ ಚಳವಳಿಗಳಲ್ಲಿರುವ ಸದಸ್ಯರೇ ಮಹಿಳೆಯರನ್ನು ಅನ್ಯರೀತಿಯಲ್ಲಿ ನಡೆಸಿಕೊಳ್ಳಲು ಯತ್ನಿಸಿದ್ದು ಅವಳು ಚಳವಳಿಯಿಂದ ದೂರ ಉಳಿಯುವಂತೆ ಮಾಡಿವೆ.

ಒಟ್ಟಾರೆ ದಲಿತ ಮಹಿಳೆಯ ಬದುಕು ಹಸನಾಗಬೇಕೆಂದರೆ ಮೊದಲು ಆಕೆ ಶಿಕ್ಷಣ ಪಡೆಯುವುದು, ಆ ಮೂಲಕ ಜ್ಞಾನವನ್ನು ಪಡೆಯುವ ಜರೂರಿದೆ.

೪. ದಲಿತ ಮಹಿಳೆ : ಮಹಿಳೆ ಮತ್ತು ಪುರುಷ ಚಿತ್ರಿಸಿರುವ ನೆಲೆ

ಸಾಮಾನ್ಯವಾಗಿ ಸಾಹಿತ್ಯವಲಯದಲ್ಲಿ ಬಹು ಚರ್ಚೆಗೊಳಗಾಗುತ್ತಿರುವ ವಿಷಯವೆಂದರೆ ದಲಿತೇತರರು ತಮ್ಮ ಸಾಹಿತ್ಯಕೃತಿಗಳಲ್ಲಿ ದಲಿತರ ನೋವುಗಳನ್ನು ಆಳಕ್ಕೆ ಇಳಿದು ಚಿತ್ರಿಸಲು ಸಾಧ್ಯವಿಲ್ಲ ಎಂಬುದಾಗಿದೆ. ಈ ಹಿನ್ನೆಲೆಯಲ್ಲಿ ಬಹುಚರ್ಚೆಗೊಳಗಾಗಿರುವ ಎರಡು ಮುಖ್ಯ ಕೃತಿಗಳೆಂದರೆ, ಶಿವರಾಮ ಕಾರಂತರ 'ಚೋಮನ ದುಡಿ' ಮತ್ತು ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ. ಶಿವರಾಮ ಕಾರಂತರು ದಲಿತನಾದ ಚೋಮನನ್ನು ಕುರಿತು ಬರೆಯುವಾಗ ಪರಕಾಯ ಪ್ರವೇಶ ಮಾಡಿಲ್ಲ ಎಂಬ ವಾದವಿದೆ. ಆದರೂ ದಲಿತೇತರರು ದಲಿತಪ್ರಜ್ಞೆಯಿಂದ ಬರೆದದ್ದು ದಲಿತ ಸಾಹಿತ್ಯವಾಗುತ್ತದೆ ಎಂದು ಅರವಿಂದ ಮಾಲಗತ್ತಿಯವರು ತಮ್ಮ ದಲಿತ ಮಾರ್ಗ ಪುಸ್ತಕದಲ್ಲಿ ಚರ್ಚಿಸಿದ್ದಾರೆ. ಏಕೆ ಚರ್ಚೆ ಪ್ರಧಾನವಾಗುತ್ತದೆಂದರೆ ಕಾರಂತರ ಚೋಮನಿಗೆ ತುಂಡು ನೆಲವನ್ನು ಕೊಡಿಸದೆ ಅನ್ಯಾಯ ಮಾಡಿದ್ದಾರೆ ಎಂಬ ಅಳಲಿನ ಕಾರಣಕ್ಕೆ ಕಾರಂತರು ಚೋಮನಿಗೆ ತುಂಡು ನೆಲವನ್ನು ಕೊಡಿಸುವುದು ಅಸಾಧ್ಯದ ಕೆಲಸವಲ್ಲ. ಆದರೆ ಅಂದಿನ ಸಮಾಜದಲ್ಲಿದ್ದ ವಾಸ್ತವ ಚಿತ್ರಣವನ್ನು ನಮ್ಮ ಕಣ್ಣೆದುರಿಗೆ ಇಡುತ್ತಾ ನಮ್ಮಲ್ಲಿ ಬದಲಾವಣೆಯನ್ನು ಬಯಸುತ್ತಿದ್ದಾರೆ ಎಂದು ಯೋಚಿಸಲೂ ಸಾಧ್ಯವಿದೆ. ಚೋಮನಿಗೆ ನೆಲವನ್ನು ಕೊಡಿಸಿದ್ದರೆ ಚೋಮನ ಬಗ್ಗೆ ಕರುಣೆಯಾಗಲೀ ಅವನ ಪಾತ್ರ ನಮ್ಮ ಮನಸ್ಸಿನಲ್ಲಿ ಗೊಂದಲಗಳನ್ನಾಗಲಿ ಹುಟ್ಟು ಹಾಕುತ್ತಿರಲಿಲ್ಲ. ಕಾರಂತರು ಕೃತಿಯಲ್ಲಿ ಮಾಡದ್ದನ್ನು ನಾವು ವಾಸ್ತವ ಸಮಾಜದಲ್ಲಿ ಮಾಡಬೇಕು ಎನಿಸುವಂತೆ ಅವರ ಚೋಮ ನಮ್ಮನ್ನು ಪ್ರೇರೇಪಿಸಿದ್ದಾನೆಂದು ಯೋಚಿಸಲು ಸಾಧ್ಯವಿದೆ.

ಸಾಹಿತ್ಯವಲಯದಲ್ಲಿ ಚರ್ಚೆಗೊಳಪಡುತ್ತಿರುವ ಮತ್ತೊಂದು ವಿಚಾರ ಪುರುಷರು ಚಿತ್ರಿಸಿದ ಸಾಹಿತ್ಯದಲ್ಲಿ ಮಹಿಳೆಯನ್ನು ಧನಾತ್ಮಕವಾಗಿ ಚಿತ್ರಿಸುತ್ತಾರೆಯೆ? ಎಂಬುದು.

ಯಾಕೆಂದರೆ ಒಬ್ಬ ದಲಿತನಾದವನು ಮಾತ್ರ ರಚಿಸಿದ್ದು ಪರಿಣಾಮಕಾರಿ ದಲಿತ ಸಾಹಿತ್ಯವಾಗುತ್ತದೆ, ದಲಿತೇತರರು ಬರೆದ ದಲಿತ ಸಾಹಿತ್ಯ ಪರಿಣಾಮಕಾರಿಯಾಗಿರಲು ಸಾಧ್ಯವಿಲ್ಲ ಎನ್ನುವ ಹಾಗೆಯೇ 'ನೊಂದವರ ನೋವ ನೋಯದವರೆತ್ತ ಬಲ್ಲರು' ಎನ್ನುವ ಪ್ರಶ್ನೆಯಂತೆಯೇ ಒಬ್ಬ ಮಹಿಳೆಯ ನೋವುಗಳನ್ನು ಮಹಿಳೆ ಮಾತ್ರವೇ ಸಶಕ್ತವಾಗಿ ಪರಿಣಾಮಕಾರಿಯಾಗಿ ಚಿತ್ರಿಸಬಲ್ಲಳು ಎಂಬ ವಾದವಿದೆ. ಕುವೆಂಪುರವರು 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ 'ಪುಟ್ಟಿ' ತಿಮ್ಮಪ್ಪ ಹೆಗ್ಗಡೆಯ ಕಾಮದಾಸೆಗೆ ಪ್ರತಿರೋಧ ಒಡ್ಡದ ಹಾಗೆ ಚಿತ್ರಿಸಿದ್ದಾರೆ. ಪೀಂಚಲು ಕೂಡ ಮುಕುಂದಯ್ಯ ಬಯಸಿದ್ದರೆ ಅದೇ ತನ್ನ ಪುಣ್ಯ ಎಂದು ಧನ್ಯತಾ ಭಾವದಿಂದ ಅರ್ಪಿಸಿಕೊಂಡು ಬಿಡುತ್ತಿದ್ದಳು ಎನ್ನುವಂತೆ ಚಿತ್ರಿಸಿದ್ದಾರೆ. ಈ ರೀತಿ ಚಿತ್ರಿಸಲು ಕಾರಣ ಅಂದಿನ ಸಮಾಜದಲ್ಲಿ ದಲಿತ ಮಹಿಳೆಯರು ಸಾಮಾನ್ಯವಾಗಿ ಹಾಗೆಯೇ ವರ್ತಿಸುತ್ತಿರಬಹುದು. ಅಥವಾ ಮೇಲ್ವರ್ಗದವರಾದ ಪುರುಷ ಲೇಖಕರು ಒಬ್ಬ ದಲಿತ ಮಹಿಳೆಯನ್ನು ನೋಡುವ ದೃಷ್ಟಿಕೋನವೂ ಕನಿಷ್ಠ ಮಟ್ಟದ್ದಾಗಿರಬಹುದು. ಭಾರತೀಪುರದ ಕಾವೇರಿ ಒಬ್ಬ ದಲಿತ ಹೆಣ್ಣುಮಗಳು. ಬ್ರಾಹ್ಮಣನಾದ ಜಗನ್ನಾಥನನ್ನು ಆಕೆ ಮೆಚ್ಚಿಕೊಂಡಂತೆ, ಪ್ರಚೋದಿಸುವಂತೆ ತೀರಾ ಕನಿಷ್ಠ ಮಟ್ಟದಲ್ಲಿ ಅನಂತಮೂರ್ತಿಯವರು ಚಿತ್ರಿಸಿದ್ದಾರೆ. ದಲಿತ ಮಹಿಳೆಯಾದರೆ ಅವಳಿಗೆ ಶೀಲದ ಕಲ್ಪನೆಯೇ ಇರುವುದಿಲ್ಲ. ಎಲ್ಲವನ್ನೂ ಸರಳವಾಗಿ ಮೀರಿಬಿಡುತ್ತಾರೆ ಎನ್ನುವಂತೆಯೇ ಅನಂತಮೂರ್ತಿಯವರು ಕಾವೇರಿಯನ್ನು ಚಿತ್ರಿಸಿದ್ದಾರೆ. ಪುರುಷ ಬರಹಗಾರರಾದಂಥ ಕಾರಂತರು ಕೂಡ 'ಚೋಮನದುಡಿ'ಯ ಬೆಳ್ಳಿಯನ್ನು ಸಹ ಯಾವ ಅಳುಕಿಲ್ಲದೆ ಕಾಫೀ ತೋಟದ ಮನ್ವೇಲ–ಮಿಂಗೇಲ ದೊರೆಗಳಿಗೆ ಅರ್ಪಿಸಿಕೊಳ್ಳುವಂತೆ ಆಕೆಯ ಪಾತ್ರವನ್ನು ಸೃಷ್ಟಿಸಿದ್ದಾರೆ. "ಸರಿ, ಕಾಯದ ದೌರ್ಬಲ್ಯ ಅವಳನ್ನು ಕಾಮದ ದಾಸಿಯನ್ನಾಗಿ ಮಾಡಿತು. ಮನ್ವೇಲನಿಂದ ದೊರಕುತ್ತಿದ್ದ ಆಣೆ, ಎರಡಾಣೆಗಳ ಬಹುಮಾನವನ್ನು ಶೇಖರಿಸುತ್ತ ಬಂದು, ತಂದೆಯ ಋಣವನ್ನು ತೀರಿಸುತ್ತೇನೆಂಬ ವಿಶ್ವಾಸವನ್ನು ಅವಳು ಗಳಿಸಿದಳು" (ಶಿವರಾಮ ಕಾರಂತ : 'ಚೋಮನ ದುಡಿ', ೮೫) ಬೆಳ್ಳಿಪ್ರತಿರೋಧವನ್ನು ತೋರಿಸುವುದು ಇಲ್ಲಿ ಕಂಡು ಬರುವುದಿಲ್ಲ. ಆದರೆ ಇದೇ ಕಾರಂತರು ತಮ್ಮ 'ಮೈಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿ ವೇಶ್ಯೆಯರ ಪರವಾಗಿರುವುದನ್ನು ಕಾಣುತ್ತೇವೆ. ಇಲ್ಲಿ 'ಬೆಳ್ಳಿ' ದಲಿತ ಮಹಿಳೆ ಎಂಬುದು ಮುಖ್ಯವಾಗುತ್ತದೆ.

ಅನಂತಮೂರ್ತಿಯವರು ತಮ್ಮ 'ಸಂಸ್ಕಾರ' ಕಾದಂಬರಿಯಲ್ಲಿ ದಲಿತ ಮಹಿಳೆಯಾದ 'ಬೆಳ್ಳಿ'ಯನ್ನು ಸಹ ಶ್ರೀಪತಿಯ ಕಾಮದಾಸೆಗೆ ಪ್ರತಿರೋಧವಿಲ್ಲದೆ ಒಡ್ಡಿಕೊಳ್ಳುವಂತೆ ಚಿತ್ರಿಸಿದ್ದಾರೆ. ಹೀಗೆ ಪುರುಷರು ಚಿತ್ರಿಸಿರುವ ದಲಿತ ಮಹಿಳೆಯರೆಲ್ಲ ಮೇಲ್ವರ್ಗದ ಗಂಡುಗಳಿಗೆ ತಮ್ಮನ್ನು

ಅರ್ಪಿಸಿಕೊಳ್ಳುವಂತೆಯೇ ಚಿತ್ರಿಸಿದ್ದಾರೆ. ಇದಕ್ಕೆ ತದ್ವಿರುದ್ಧವೆನ್ನುವಂತೆ ದೇವನೂರ ಮಹಾದೇವ ಅವರು ದಲಿತ ಮಹಿಳೆಯಾದ ಸಾಕವ್ವನನ್ನು ಸೃಜನಾತ್ಮಕ ನೆಲೆಯಲ್ಲಿ ನೋಡುತ್ತಾರೆ. ಅಲ್ಲಿ ಯಾವುದೇ ರೀತಿಯ ಅಸಹಜ ಕಾಮದ ಹಳವಂಡವಿಲ್ಲ. ಬದಲಿಗೆ ಸಾಕವ್ವ ಕುಟುಂಬದ ಆಧಾರಸ್ತಂಭವಾಗಿದ್ದಾಳೆ. ಅವಳಾಡುವ ಮಾತುಗಳಿಂದ ಅವಳು ಸ್ವಾವಲಂಬಿ ಮಹಿಳೆ ಎಂಬುದು ವೇದ್ಯವಾಗುತ್ತದೆ. ಅವಳ ಹುಂಜ ಕಳೆದು ಹೋಗುವುದು, ಅದನ್ನು ಅವಳು ಹುಡುಕುವುದು, ಇವೆಲ್ಲಾ ಹಳ್ಳಿಗಳಲ್ಲಿ ಬದುಕುವ ದಲಿತರ ಬದುಕಲ್ಲಿ ಸಹಜವಾಗಿ ಹಾಸುಹೊಕ್ಕಾಗಿರುತ್ತವೆ. ಆದರೆ ಒಂದು ಹುಂಜದ ನೆಪದಲ್ಲಿ ಮತ್ತೊಂದು ಹುಂಜವನ್ನು ಕಳೆದುಕೊಳ್ಳುವುದು ದಲಿತರಿಗೆ ಸಿಗದಿರುವ ನ್ಯಾಯವ್ಯವಸ್ಥೆಯನ್ನು ತೋರಿಸುತ್ತದೆ. ಹಿಂದಿನಿಂದಲೂ ದಲಿತರಿಗೆ ನ್ಯಾಯವೆಂಬುದು ಮರೀಚಿಕೆಯಾಗಿಯೇ ಉಳಿದಿರುವುದಕ್ಕೆ ಇದು ಉದಾಹರಣೆಯಾಗಿದೆ. ಒಟ್ಟಾರೆ ಪುರುಷರೇ ಆದ ದೇವನೂರ ಮಹಾದೇವ ದಲಿತ ಮಹಿಳೆಯ ಪಾತ್ರವನ್ನು ಸಶಕ್ತವಾಗಿ ಚಿತ್ರಿಸಿದ್ದಾರೆ. ಇತರ ಪುರುಷ ಕಾದಂಬರಿಕಾರರಲ್ಲೂ ದಲಿತ ಮಹಿಳೆ ಕುಟುಂಬದ ಆಧಾರಸ್ತಂಭವಾಗಿರುವಂತೆ, ಸ್ವಾವಲಂಬಿಯಾಗಿರುವಂತೆ ಚಿತ್ರಿಸಿದ್ದಾರೆ. ಆದರೆ ಕಾಮದ ವಿಚಾರದಲ್ಲಿ ದಲಿತ ಮಹಿಳೆಗೆ ಶೀಲದ ಕಲ್ಪನೆಯಿರುವುದಿಲ್ಲ ಎಂಬಂತೆ ಪುರುಷ ಕಾದಂಬರಿಕಾರರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ.

ಮಹಿಳೆ ಚಿತ್ರಿಸಿರುವ ದಲಿತ ಮಹಿಳೆ ಕ್ರಿಯಾತ್ಮಕವಾಗಿ ಮೂಡಿಬಂದಿದ್ದಾಳೆ. ಬಿ.ಟಿ.ಲಲಿತಾ ನಾಯಕರ 'ಗತಿ' ಕಾದಂಬರಿಯಲ್ಲಿನ ಸೋನಿ ಕುಡಿದು ಹಿಂಸಿರುವ ಗಂಡನಿಂದ ಪ್ರತ್ಯೇಕವಾಗಿ ಗುಡಿಸಲನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾಳೆ. ಕಟ್ಟಿಗೆಯನ್ನು ಮಾರಿ ಎರಡು ಹೆಣ್ಣುಮಕ್ಕಳನ್ನು ಸಾಕುತ್ತಿದ್ದಾಳೆ. ಕೆಳಜಾತಿಯವನೇ ಆದ ಕಾಶಪ್ಪ ಪೂಜಾರಿ ಅವಳನ್ನು ಊರಿನ ಚೇರ್‌ಮನ್‌ರಿಗೆ ಆಕೆಯನ್ನು ಒಪ್ಪಿಸಲು ನೋಡಿದಾಗ ಆಕೆ ನಿನ್ನ ಹೆಂಡತಿಯನ್ನು ಕಳಿಸು ಎಂದು ಹೇಳುವ ಮೂಲಕ ಪೂಜಾರಿಗೆ ತಕ್ಕ ಪಾಠ ಕಲಿಸುತ್ತಾಳೆ. ಸಮಾಜದಲ್ಲಿ ಗಂಡು ರಣಹದ್ದುಗಳು ಅವಳನ್ನು ಕಿತ್ತು ತಿನ್ನಲು ಪ್ರಯತ್ನಿಸಿದರೂ ಆಕೆ ಅವುಗಳಿಂದ ತನ್ನನ್ನು ರಕ್ಷಿಸಿಕೊಳ್ಳುವಷ್ಟು ಸಮರ್ಥಳಾಗಿದ್ದಾಳೆ. ಸೋನಿ ಆಧುನಿಕತೆಗೆ ತೆರೆದುಕೊಳ್ಳುವ ಹೆಣ್ಣುಮಗಳಾಗಿದ್ದಾಳೆ. ಮೊದಲಿಗೆ ಹಳ್ಳಿಯಲ್ಲಿ ಸೀರೆಯುಡಲು ಆರಂಭಿಸುತ್ತಾಳೆ. ರಾತ್ರಿ ಶಾಲೆಗೆ ಹೋಗಿ ಶಿಕ್ಷಣವನ್ನು ಕಲಿಯುವುದರ ಬಗ್ಗೆಯೂ ಆಸಕ್ತಿಯನ್ನು ಹೊಂದಿದ್ದಾಳೆ. ಪಂಚಾಯತಿಯವರು ಸೋನಿಗೆ ನಿನ್ನ ಗಂಡ ಬದುಕಿರುವವರೆಗೂ ಅವನ ಜೊತೆಯಲ್ಲಿಯೇ ಬದುಕಬೇಕು ನೀನು ಅವನ ಸ್ವತ್ತು ಎಂದಾಗ ಮುತ್ತೈದೆಯ ಲಕ್ಷಣವಾಗಿದ್ದ ಮುಂಗೂದಲಿನ ಎರಡು ಬೆಳ್ಳಿಯ ಆಭರಣಗಳನ್ನು ಕೈಯಲ್ಲಿದ್ದ ಬಳೆಗಳನ್ನು ತೆಗೆದು ಬಿಸಾಕುತ್ತಾಳೆ. ಪುರುಷ ಪರವಾದ ನ್ಯಾಯವ್ಯವಸ್ಥೆಯನ್ನು

ಪ್ರಶ್ನಿಸುತ್ತಾಳೆ. 'ಗತಿ' ಕಾದಂಬರಿಯಲ್ಲಿನ ಮತ್ತೊಂದು ದಲಿತ ಮಹಿಳಾ ಪಾತ್ರವಾದ ಲಚ್ಮಿ ಕೂಡ ಒಬ್ಬ ದಿಟ್ಟ ಮಹಿಳೆಯಾಗಿದ್ದಾಳೆ. ಇವಳು ತನ್ನ ಗಂಡ ಮಗುವಿನೊಂದಿಗೆ ದಸರಾ ನೋಡಲೆಂದು ಮೈಸೂರಿಗೆ ಹೋಗಿದ್ದಾಗ 'ಕಾಲರಾ'ದಿಂದ ತನ್ನ ಗಂಡ ಮತ್ತು ಮಗುವನ್ನು ಕಳೆದುಕೊಳ್ಳುತ್ತಾಳೆ. ಅವಳಿಗೆ ಎಚ್ಚರವಾದಾಗ ಒಬ್ಬ ಮಠದಯ್ಯನ ಮಠದಲ್ಲಿರುತ್ತಾಳೆ. ಆತ ಈಕೆಯನ್ನು ಒತ್ತಾಯಪೂರ್ವಕವಾಗಿ ಬಳಸಿಕೊಳ್ಳುತ್ತಾನೆ. ದಲಿತ ಮಹಿಳೆಯಾದ ಲಚ್ಮಿ ತನ್ನನ್ನು ಬಯಸುವ ಕಾಮುಕರಿಗೆ ಸಹಜವಾಗಿ ಒಪ್ಪಿಸಿಕೊಂಡು ಬಿಡುವಂತೆ ಬಿ.ಟಿ. ಲಲಿತಾ ನಾಯಕ್ ಅವರು ಚಿತ್ರಿಸಿಲ್ಲ. ಅಲ್ಲದೇ ಇವರು ದೇವರು ಧರ್ಮದ ಹೆಸರಲ್ಲಿ ಸಮಾಜದಲ್ಲಿನ ಮಠಮಾನ್ಯದವರು ನಡೆಸುತ್ತಿರುವ ಹೀನಕೃತ್ಯಗಳನ್ನು ಬಯಲಿಗೆಳೆದಿದ್ದಾರೆ. ಲಚ್ಮಿ ಮಠದಿಂದ ವಾಪಸ್ಸಾದ ನಂತರ ಅಂಗಡಿಯನ್ನು ನಡೆಸುತ್ತಾ ಸ್ವಾವಲಂಬಿಯಾಗಿ ಬದುಕುವಂತೆ ಬಿ.ಟಿ.ಲಲಿತಾ ನಾಯಕರು ಚಿತ್ರಿಸಿದ್ದಾರೆ.

ಗೀತಾ ನಾಗಭೂಷಣರು ತಮ್ಮ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲಿ ದಲಿತ ಮಹಿಳೆಯಾದ ಲಚ್ಚಿ ಸಮಾಜದಲ್ಲಿನ ಮೇಲ್ವರ್ಗದ ಕಾಮುಕರಿಗೆ ಬಲಿಯಾಗುವಂತೆಯೇ ಚಿತ್ರಿಸಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಲಚ್ಚಿ ಪ್ರತಿರೋಧವನ್ನು ಒಡ್ಡದೆ ಸ್ವಯಂ ಒಪ್ಪಿತವಾಗಿ ನಡೆದುಕೊಂಡಿಲ್ಲ ಎಂಬುದು ಮುಖ್ಯವಾದದ್ದು. ಕುಲಕರ್ಣಿಗಾಗಲೀ, ಜೈಲಿನಲ್ಲಿ ಅತ್ಯಾಚಾರಗಯ್ಯುವ ಪೊಲೀಸರಿಗಾಗಲೀ, ಸ್ತ್ರೀನಿಕೇತನದಿಂದ ಕರೆದೊಯ್ಯುವ ಅಧಿಕಾರಿಗಳಿಗಾಗಲೀ ಯಾರಿಗೂ ಅವಳು ಸ್ವ ಇಚ್ಛೆಯಿಂದ ಅರ್ಪಿಸಿಕೊಳ್ಳುವುದಿಲ್ಲ, ವೈದೇಹಿಯವರು ಬರೆದಿರುವ 'ಅಸ್ಪೃಶ್ಯರು' ಕಾದಂಬರಿಯಲ್ಲಿ ದಲಿತ ಮಹಿಳೆಯ ಶೋಷಣೆ ಕಾಮದವರೆಗೂ ಇಳಿಯುವುದೇ ಇಲ್ಲ. ಇದೊಂದು ಧನಾತ್ಮಕ ಅಂಶ. ಹಾಗೆಯೇ ವೈದೇಹಿಯವರು ದಲಿತ ಮಹಿಳೆಯಾದ ಕುಮುದಿನಿಯನ್ನು ಬ್ರಾಹ್ಮಣನಾದ ಭಾಸ್ಕರನೊಂದಿಗೆ ಮದುವೆ ಮಾಡಿಸುವುದು ನಿಜಕ್ಕೂ ಬದಲಾವಣೆಯ ಹೊಸಗಾಳಿಯನ್ನು ಸೂಚಿಸುತ್ತದೆ. ಇಂದಿನ ಸಮಾಜಕ್ಕೆ ಇದೊಂದು ಉತ್ತಮ ಸಂದೇಶವಾಗಿದೆ. ಇದೇ ಕಾದಂಬರಿಯ ವಾಸುದೇವರಾಯರು ಪ್ರಗತಿಪರರಾಗಿ ಕಂಡು ಬರುತ್ತಾರೆ. ಕೊರಚ ಜಾತಿಯ ಕುಮುದಿನಿಯನ್ನು ಮನೆಯವರ ವಿರೋಧದ ನಡುವೆಯೂ ಹೆರಿಗೆಗೆ ಕರೆತರುತ್ತಾರೆ. ವೈದೇಹಿಯವರು ದಲಿತ ಮಹಿಳೆಯರಾದ 'ನರಪಟೆ' 'ಕೂಸ' ಮುಂತಾದವರನ್ನು 'ಜಾತಿ'ಯ ನೆಲೆಗಟ್ಟಿನೊಳಗೆ ಪ್ರಸ್ತಾಪಿಸುತ್ತಾರೆ. ಆದರೆ ದಲಿತ ಮಹಿಳೆಯರು ಮೇಲ್ವರ್ಗದವರ ಕಾಮದಾಸೆಗೆ ಬಲಿಯಾಗುವಂತೆ ಚಿತ್ರಿಸಿಲ್ಲ.

ಪುರುಷರು ತಮ್ಮ ಕಾದಂಬರಿಗಳಲ್ಲಿ ದಲಿತ ಮಹಿಳೆಯನ್ನು ಮೇಲ್ವರ್ಗದವರ ಕಾಮುಕತೆಗೆ ಅರ್ಪಿಸಿಕೊಳ್ಳುವಂತೆ ಚಿತ್ರಿಸಿದ್ದಾರೆ. ಮಹಿಳೆಯರು ತಮ್ಮ ಕಾದಂಬರಿಗಳಲ್ಲಿನ ದಲಿತ ಮಹಿಳೆಯರನ್ನು ಕುಟುಂಬದ ಆಧಾರಸ್ತಂಭವಾಗಿ, ಸ್ವಾವಲಂಬಿಗಳಾಗಿ, ದಿಟ್ಟ ಹೆಣ್ಣುಮಕ್ಕಳಂತೆ ಚಿತ್ರಿಸಿದ್ದಾರೆ. ಇವರೆಲ್ಲಾ ಪುರುಷರ ದೌರ್ಜನ್ಯ, ದಬ್ಬಾಳಿಕೆಯನ್ನು ಪ್ರಶ್ನಿಸುವಂತೆ ಕಂಡು ಬರುತ್ತಾರೆ.

ಒಟ್ಟಿನಲ್ಲಿ ಈ ಮೇಲಿನ ಮೂರು ಅಂಶಗಳಿಂದ ತಿಳಿದು ಬರುವುದೇನೆಂದರೆ ಅಸ್ಪೃಶ್ಯತೆ ಮತ್ತು ದುಡಿಮೆ ದಲಿತ ಮಹಿಳೆಯ ಮೇಲಿನ ಶೋಷಣೆ, ದೌರ್ಜನ್ಯ ಮತ್ತು ಅತ್ಯಾಚಾರಕ್ಕೆ ಅವಕಾಶ ಮಾಡಿಕೊಟ್ಟಿರುವುದು.

ಪ್ರಸ್ತುತ ಅಧ್ಯಾಯದಲ್ಲಿ ಅಸ್ಪೃಶ್ಯತೆಯ ಕಾರಣದಿಂದ ದಲಿತ ಮಹಿಳೆ ಸಮಾಜದಲ್ಲಿ ಅನುಭವಿಸುತ್ತಿರುವ ನೋವು-ಅಪಮಾನಗಳು ಮತ್ತು ಪರಿಹಾರಗಳನ್ನು ಕುರಿತ ಪಕ್ಷಿನೋಟವಾಗಿದೆ. ಹಾಗೆಯೇ ದಲಿತ ಮಹಿಳೆ ದುಡಿಮೆಯೊಂದಿಗೆ ಅವಿನಾಭಾವ ಸಂಬಂಧವನ್ನು, ಹೊಟ್ಟೆಪಾಡಿಗಾಗಿ ಹೊಲ-ಗದ್ದೆಗಳಲ್ಲಿ ದುಡಿಯುವ ಸಂದರ್ಭಗಳಲ್ಲಿ ಲೈಂಗಿಕ ಶೋಷಣೆಗೆ ಗುರಿಯಾಗುವುದು, ಅದರಿಂದ ಆಕೆ ಪಾರಾಗಲು ಇರುವ ಅವಕಾಶಗಳ ಸಾಧ್ಯತೆಗಳ ಕುರಿತು ಕಿರುನೋಟ ಬೀರಲಾಗಿದೆ. ಇದೇ ಅಧ್ಯಾಯದಲ್ಲಿ ಮಹಿಳೆ ಮತ್ತು ಪುರುಷ ಚಿತ್ರಿಸಿರುವ ದಲಿತ ಮಹಿಳೆಯ ಭಿನ್ನತೆ ಮತ್ತು ಸಾಮ್ಯತೆಗಳು, ಆ ರೀತಿ ಚಿತ್ರಿಸಲು ಅವರ ಮನಸ್ಸುಗಳ ಹಿಂದಿದ್ದ ಆಲೋಚನೆ ಕ್ರಮ ಮುಂತಾದವುಗಳ ಕಡೆ ಗಮನ ಹರಿಸಲಾಗಿದೆ.

ಮುಂದಿನ ಅಧ್ಯಾಯದಲ್ಲಿ ಸಾಮಾಜಿಕ ಪಿಡುಗಾದ ದೇವದಾಸಿ / ಜೋಗಣಿ ಪದ್ಧತಿ ಮತ್ತು ದಲಿತ ಮಹಿಳೆಯನ್ನು ಕುರಿತು ಚರ್ಚಿಸಲಾಗುವುದು. ಹಾಗೆಯೇ ದಲಿತ ಮಹಿಳೆ ಕುಟುಂಬದೊಳಗೆ ಮತ್ತು ಹೊರಗೆ ದೌರ್ಜನ್ಯಕ್ಕೊಳಗಾಗುತ್ತಿರುವುದನ್ನು ಕುರಿತು ಗಮನ ಹರಿಸಲಾಗುತ್ತಿದೆ. ದಲಿತ ಮಹಿಳೆಯನ್ನು ಕಾಡುತ್ತಿರುವ ಆಚರಣೆಗಳ ಕುರಿತ ಅಧ್ಯಯನವನ್ನು ಮುಂದುವರೆಸಲಾಗುತ್ತಿದೆ. ಒಟ್ಟಾರೆ ದಲಿತ ಮಹಿಳೆಯನ್ನು ಕುರಿತು ಶೋಷಣೆಯ ಭಿನ್ನ ರೂಪಗಳನ್ನು ಕಾದಂಬರಿಗಳ ಆಧಾರದಲ್ಲಿ ಗುರುತಿಸುವ ಕಡೆ ಗಮನ ಹರಿಸಲಾಗುವುದು.

ಅಧ್ಯಾಯ – ೫

ಕಾದಂಬರಿಗಳಲ್ಲಿ ದಲಿತ ಮಹಿಳೆ

೫.೧ ಆಚರಣೆ ನೆಲೆ : ದೇವದಾಸಿ / ಜೋಗಣಿ ಪದ್ಧತಿ

೫.೨ ದೌರ್ಜನ್ಯಗಳ ನೆಲೆ : ಕುಟುಂಬ ಹಾಗೂ ದುಡಿಯುವ ಸ್ಥಳಗಳಲ್ಲಿ

ಅಧ್ಯಾಯ – ೫

ಕಾದಂಬರಿಗಳಲ್ಲಿ ದಲಿತ ಮಹಿಳೆ

೫.೧ ಆಚರಣೆ ನೆಲೆ : ದೇವದಾಸಿ / ಜೋಗಣಿ ಪದ್ಧತಿ

ನಿಮ್ಮ ಭಾರತದಲ್ಲಿ ಇಂಡಿಯಾ

ಇನ್ನೂ ಹುಟ್ಟೇ ಇಲ್ಲ ಭಾಗವತರೇ...

"ನಿಮ್ಮ ಭಾರತದಲ್ಲಿ
ಚಂದ್ರಗುತ್ತಿಗಳಿವೆ, ಅಲ್ಲಿ ಹೆಣ್ಣುಮಕ್ಕಳು ಬೆತ್ತಲಾಗುತ್ತಾರೆ
ದೇವದಾಸಿಯರು ಮುಡಿದ ಹೂವು
ನಿಮ್ಮ ಮಂಚಗಳ ಮೇಲೆ ನಲುಗಿ ಹೋಗುತ್ತವೆ
ದೇವರ ಹೆಸರಲ್ಲಿ ರತಿಕ್ರೀಡೆ ಶಾಸ್ತ್ರ ಸಮ್ಮತ,

ನಿಮ್ಮ ಭಾರತದಲ್ಲಿ
ಗಂಡನೆಂಬುವನು ಸತ್ತ ಕಾರಣಕ್ಕೆ
ಪೂಜ್ಯ ನಾರಿಯರ ಮಂಡೆ ಬೋಳಿಸಲಾಗಿದೆ
ಹರಿಶಿನ ಕುಂಕುಮಗಳು ಅಗ್ರಹಾರಗಳ ಮೋರಿಯಲ್ಲಿ
ದಿಕ್ಕಾಪಾಲಾಗಿ ಹರಿದುಹೋಗಿವೆ;
ಒಡೆದ ಬಳೆಯ ಗಾಜುಗಳಿಗೆ
ಅಂಟಿದ ರಕ್ತ ಮೋರಿಯಲ್ಲಿ ತೊಳೆಯಲಾಗುತ್ತಿದೆ.

ನಿಮ್ಮ ಭಾರತದಲ್ಲಿ
ಮುಟ್ಟಾದ ದೇವೀ ಸ್ವರೂಪಿಣಿ ಸ್ತ್ರೀಯರು
ಇನ್ನೂ ಗಡಗಡ ಚಳಿಯಲ್ಲಿ ನಡುಗುತ್ತ ಬೀದಿಯಲ್ಲಿ, ಕೊಟ್ಟಿಗೆಯಲ್ಲಿ ಬಿದ್ದಿದ್ದಾರೆ
ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ

ಕೊಟ್ಟಿಗೆಯ ಕಸದಲ್ಲಿ ನಾರಿಯರನ್ನು ಪೂಜಿಸಲಾಗುತ್ತದೆ
ಅಲ್ಲೇ ದೇವತೆಯರು ಹೋಲ್ ಸೇಲಾಗಿ ವಾಸ ಮಾಡುತ್ತಾರೆ.

ನಿಮ್ಮ ಭಾರತದಲ್ಲಿ
ಮನು, ಶಂಕರಾಚಾರ್ಯರು ಉಂಡೆದ್ದ ಎಂಜಲೆಗಳ ಮೇಲೆ
ದೇಶದ ಆತ್ಮಸಾಕ್ಷಿಯನ್ನೇ ಉರುಳಿಬಿಡಲಾಗಿದೆ.
ಇಂಡಿಯಾ ಇನ್ನೂ ಹುಟ್ಟೇ ಇಲ್ಲ ಭಾಗವತರೆ
ಹುಟ್ಟಲು ನಿಮ್ಮ ಭಾರತ ಬಿಡುತ್ತಲೇ ಇಲ್ಲ" (ಉತ್ತಮ ಕಾಂಬಳೆ (ಮೂ) ಸಿದ್ರಾಮಕಾರಣಿಕ (ಕ) : 'ದೇವದಾಸಿ ಮತ್ತು ಬೆತ್ತಲೆ ಸೇವೆ' ೧೦, ೧೧)

ಉತ್ತಮ ಕಾಂಬಳೆಯವರು ಬರೆದಿರುವ ಪದ್ಯದಲ್ಲಿ ಭಾರತದಲ್ಲಿ ಇನ್ನೂ ಸಾಕಷ್ಟು ಅನಿಷ್ಟ ಪದ್ಧತಿಗಳು ಜೀವಂತವಿರುವುದು ಗೊತ್ತಾಗುತ್ತದೆ. ಭಾರತವಿನ್ನೂ ಭಾರತವಾಗಿಯೇ ಉಳಿದಿದೆ. ಇಂಡಿಯಾ ಆಗಲು ಮುಂದಾಗುತ್ತಿಲ್ಲ ಎಂಬ ಆತಂಕವಿದೆ. ಏಕೆಂದರೆ ಹೊರದೇಶಗಳಲ್ಲಿ ಜಾತಿಯ ಕಾರಣಕ್ಕಾಗಿ ಹೆಣ್ಣು ಮಕ್ಕಳನ್ನು ವಿವಿಧ ಆಚರಣೆಗಳ ಹೆಸರಿನಲ್ಲಿ ಶೋಷಣೆಗೆ ಒಳಪಡಿಸುತ್ತಿಲ್ಲ ಎಂಬ ಸತ್ಯಾಂಶವಿದೆ. ದೇವರನ್ನು ಅಡ್ಡವಾಗಿಟ್ಟುಕೊಂಡು 'ಮೇಲ್ಜಾತಿ' ಪುರುಷರು ದೇವದಾಸಿಯಂಥ ಕ್ರೂರ ಪದ್ಧತಿಗಳ ಮೂಲಕ ದಲಿತ ಹೆಣ್ಣು ಮಕ್ಕಳ ಶೀಲಹರಣ ಮಾಡುತ್ತಿದ್ದಾರೆ.

ಈ ಪದ್ಯದಲ್ಲಿ ಕೇವಲ ದಲಿತ ಮಹಿಳೆಯರು ಮಾತ್ರವಲ್ಲದೆ ಸಾಮಾನ್ಯವಾಗಿ ಎಲ್ಲಾ ಮಹಿಳೆಯರೂ ಕೂಡಾ ಶೋಷಣೆಗೊಳಗಾಗುತ್ತಿರುವ ನಾನಾ ಮುಖಗಳಿವೆ. ಹಿಂದೆ ಗಂಡ ಸತ್ತನೆಂಬ ಕಾರಣದಿಂದ ಹೆಂಡತಿಯ ತಲೆ ಬೋಳಿಸಿ, ಅರಿಶಿನ, ಕುಂಕುಮಗಳನ್ನು ಅಳಿಸಿ, ಬಳೆಗಳನ್ನು ಹೊಡೆಸಿ ದೈಹಿಕ, ಮಾನಸಿಕ ಹಿಂಸೆ ಕೊಟ್ಟಿದ್ದರ ಅಣಕವಿದೆ. 'ಎಲ್ಲಿ ನಾರಿಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ' ಎಂದು ಹೆಣ್ಣನ್ನು ಅಟ್ಟದ ಮೇಲೆ ಕೂರಿಸಿ ಅವಳು ಮುಟ್ಟಾದಾಗ ಚಳಿ-ಗಾಳಿ, ಮಳೆ-ಬಿಸಿಲನ್ನೂ ಲೆಕ್ಕಿಸದೆ ಹೊರಗೆ ಕೂಡಿಸುತ್ತಾರೆ. ಇಲ್ಲಿ ಇನ್ನೂ 'ಮಡೆಸ್ನಾನ' ಮುಂತಾದ ಆಚರಣೆಗಳು ಅವ್ಯಾಹತವಾಗಿ ನಡೆಯುತ್ತಿವೆ ಎಂದು ವ್ಯಂಗ್ಯವಾಗಿ ಕುಟುಕುತ್ತಾರೆ.

ಒಟ್ಟಾರೆಯಾಗಿ ನಮ್ಮ ಭಾರತದಲ್ಲಿ 'ದಲಿತ ಮಹಿಳೆ' ಮಾತ್ರವಲ್ಲದೆ ಸಮಾಜದಲ್ಲಿನ ಯಾವುದೇ ಮಹಿಳೆ ನೆಮ್ಮದಿಯಾಗಿಲ್ಲ ಎಂಬುದು ವೇದ್ಯವಾಗುತ್ತದೆ. ಅವಳು 'ಹೆಣ್ಣು' ಎಂಬ

ಕಾರಣಕ್ಕಾಗಿ ವಿವಿಧ ರೀತಿಯ ಆಚರಣೆಗಳನ್ನು ಅವಳ ಮೇಲೆ ಹೇರಲಾಗಿದೆ. ಇಂಥ ಅಮಾನವೀಯ 'ಆಚರಣೆ'ಗಳನ್ನು ಹೋಗಲಾಡಿಸಲು ಹಿಂದಿನಿಂದಲೂ ಸಾಕಷ್ಟು ಸುಧಾರಕರು ಹೋರಾಡಿದ್ದಾರೆ. ಆದರೆ ಇವು ಸಂಪೂರ್ಣವಾಗಿ ನಾಶವಾಗದೆ ಇನ್ನೂ ಬೂದಿ ಮುಚ್ಚಿದ ಕೆಂಡದ ರೀತಿಯಲ್ಲಿ ಅಸ್ಥಿತ್ವದಲ್ಲಿರುವುದು ದುರಂತವಾಗಿದೆ.

ದಲಿತ ಮಹಿಳೆಯ ಮೇಲೆ ಹೇರಲ್ಪಟ್ಟಿರುವ ಅಮಾನವೀಯ ಆಚರಣೆಗಳು ಕೂಡ ದೌರ್ಜನ್ಯಗಳ ಸಾಲಿಗೆ ಸೇರುತ್ತವೆ. ದೇವರು, ಜಾತಿ, ಸಂಸ್ಕೃತಿ ಮುಂತಾದ ಕಾರಣಗಳನ್ನು ನೆಪ ಮಾಡಿಕೊಂಡು ಹಿಂದಿನಿಂದಲೂ ದಲಿತ ಮಹಿಳೆಯನ್ನು ಆಚರಣೆಗಳ ಅಡಿಯಲ್ಲಿ ಶೋಷಿಸುತ್ತಾ ಬಂದಿದ್ದಾರೆ. ಇಂಥ ಹೀನ ಆಚರಣೆಗಳು ಸಾಮಾನ್ಯವಾಗಿ ಕೆಳಜಾತಿಯವರಲ್ಲೇ ಹೆಚ್ಚಾಗಿ ಕಂಡುಬರುತ್ತವೆ. ಇದಕ್ಕೆ ಕಾರಣ ದಲಿತರ ಅಜ್ಞಾನ, ಅನಕ್ಷರತೆ, ಮೂಢನಂಬಿಕೆಗಳಾಗಿವೆ.

ಭಾರತೀಯರ ಶಾಸ್ತ್ರಗ್ರಂಥಗಳು 'ಎಲ್ಲಿ ನಾರಿಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ' ಎಂದು ಹೇಳಿ ಮಹಿಳೆಯರನ್ನು ಅಟ್ಟದ ಮೇಲೆ ಕೂರಿಸಿ, ಅವಳು ತನ್ನ ನೋವುಗಳ ವಿರುದ್ಧ ದನಿ ಎತ್ತದಂತೆ ಮಾಡಿದ್ದಾರೆ. ಆದರೆ ದಲಿತ ಮಹಿಳೆಗೆ ದೇವರ ಭಯವನ್ನು ಇರಿಸಿ ಬಾಯಿ ಬಿಡದಂತೆ ಮಾಡಿದ್ದಾರೆ.

ಕಾದಂಬರಿಗಳಲ್ಲಿನ ದಲಿತ ಮಹಿಳೆಯರು ಹಾಗೂ ವಾಸ್ತವ ಸಮಾಜದಲ್ಲಿನ ದಲಿತ ಮಹಿಳೆಯರು ಇಂದಿಗೂ ಹಸಿವು, ಬಡತನ, ಅಜ್ಞಾನ, ಅನಕ್ಷರತೆ, ಮೂಢನಂಬಿಕೆಗಳು, ಗೊಡ್ಡು ಸಂಪ್ರದಾಯಗಳು, ಜೀವ ವಿರೋಧಿ ಆಚರಣೆಗಳು, ದೇವರು ಮುಂತಾದ ಸಾಮಾಜಿಕ ಪಿಡುಗುಗಳಿಂದ ನಲುಗಿ ಹೋಗಿದ್ದಾರೆ. ದಲಿತ ಮಹಿಳೆಯ ಮೇಲಿನ ದೌರ್ಜನ್ಯಗಳು ಕೇವಲ ಅವಳ ಕುಟುಂಬದೊಳಗೆ ಮಾತ್ರ ನಡೆಯುತ್ತಿಲ್ಲ. ಕುಟುಂಬದಾಚೆಗೆ ಅಂದರೆ ದುಡಿಯುವ ಜಾಗಗಳಲ್ಲಿ ಅವಳ ಮೇಲಿನ ದೌರ್ಜನ್ಯಗಳು ಹೆಚ್ಚು ನಡೆಯುತ್ತಿವೆ. ದಲಿತ ಮಹಿಳೆಯರು ಕುಟುಂಬದ ಒಳಗೆ ಮತ್ತು ಹೊರಗೆ ಎರಡೂ ಜಾಗಗಳಲ್ಲಿ ಏಕಕಾಲದಲ್ಲಿ ಶೋಷಣೆಗೆ ಗುರಿಯಾಗುತ್ತಿದ್ದಾರೆ. ದಲಿತ ಮಹಿಳೆಯ ಮೇಲೆ ಹಲವು ಕಾರಣಗಳಿಗಾಗಿ ನಿರಂತರವಾಗಿ ಶೋಷಣೆ, ದೌರ್ಜನ್ಯ ನಡೆಯುತ್ತಿದೆ. ಜಾತಿ, ದೇವರು, ವರ್ಣ, ಲಿಂಗ ಮುಂತಾದವುಗಳ ಹಿನ್ನೆಲೆಯಲ್ಲಿ ಆಕೆಯನ್ನು ಶೋಷಣೆಗೊಳಪಡಿಸುತ್ತಿದ್ದಾರೆ. ಅಂತಹ ಶೋಷಣೆಗಳಲ್ಲಿ ತುಂಬಾ ಅಮಾನವೀಯವಾದುದು ದೇವದಾಸಿ, ಜೋಗಣಿ ಪದ್ಧತಿಯಾಗಿದೆ. ಈ ಅನಿಷ್ಟ ಪದ್ಧತಿಯಿಂದಾಗಿ ಸಾಕಷ್ಟು ಜನ ಮುಗ್ಧ ದಲಿತ ಹೆಣ್ಣುಗಳು ಬಲಿಯಾಗಿದ್ದಾರೆ.

ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ನಾಲ್ಕು ರೀತಿಗಳಲ್ಲಿ ತಮ್ಮ ಎಲ್ಲೆಯನ್ನು ವಿಸ್ತರಿಸಿಕೊಂಡಿವೆ.

- ಬೌದ್ಧಿಕ
- ಮಾನಸಿಕ
- ಭಾವನಾತ್ಮಕ
- ದೈಹಿಕ
- ಲೈಂಗಿಕ

ಈ ಮೇಲಿನ ಕಾರಣಗಳಿಂದ ದಲಿತ ಮಹಿಳೆಯ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ.

'ಜಾತಿ' :

'ಜಾತಿ' ಎಂಬುದು ಮನುಸ್ಮೃತಿಯಿಂದ ಆರಂಭವಾಗಿ ನಡೆದುಕೊಂಡು ಬಂದಿದೆ. ನಾಲ್ಕು ವರ್ಣಗಳ ಮುಂದುವರೆದ ಭಾಗವಾದ 'ಜಾತಿ'ಯೆಂಬುದು ಹೀಗೆ ವಿಂಗಡಣೆಗೊಂಡಿದೆ.

೧. ಬ್ರಾಹ್ಮಣ

೨. ಕ್ಷತ್ರಿಯ

೩. ವೈಶ್ಯ

೪. ಶೂದ್ರ

ಬ್ರಾಹ್ಮಣನು ಜ್ಞಾನದ ಒಡೆಯ. ಜ್ಞಾನದ ಮೂಲಕ ಸಮಾಜದ ಎಲ್ಲಾ ವರ್ಗದವರನ್ನು ಅಧೀನದಲ್ಲಿಟ್ಟುಕೊಳ್ಳುತ್ತಾನೆ. ಕ್ಷತ್ರಿಯ ಆಯುಧವನ್ನು ಹಿಡಿದು ಎಲ್ಲಾ ಜನರ ದೇಹಗಳನ್ನು ರಕ್ಷಿಸುವವನು. 'ಬ್ರಾಹ್ಮಣ' ಎಲ್ಲಾ ಆತ್ಮಗಳ ಒಡೆಯನಾದರೆ, ಕ್ಷತ್ರಿಯ ಎಲ್ಲಾ ದೇಹಗಳ ಒಡೆಯ. ವೈಶ್ಯ ಬುದ್ಧಿಯ ಮೂಲಕ ವ್ಯಾಪಾರ ಮಾಡುವವನು. ಶೂದ್ರರು ಮೇಲಿನ ವರ್ಗಗಳ ಸೇವೆ ಮಾಡುವವರು. ಐದನೇ ಸ್ಥಾನದಲ್ಲಿರುವವರು ಹೀನಾತಿ ಹೀನ ಕೃತ್ಯಗಳನ್ನು ಮಾಡಿಕೊಂಡಿರಬೇಕು. 'ಅಸ್ಪೃಶ್ಯ' ಮತ್ತು 'ಸ್ತ್ರೀ' ಒಂದೇ ಸ್ಥಾನದಲ್ಲಿ ನಿಲ್ಲುತ್ತಾರೆ.

ಈ ಜಾತಿ ಶ್ರೇಣೀಕರಣದಲ್ಲಿ ಐದನೇಯ ಸ್ಥಾನದಲ್ಲಿ ಸೇರಿಸಿಕೊಂಡಿರುವುದು ಪಂಚಮ ಅಥವಾ ಚಾಂಡಾಲ ಜಾತಿ. ಹೊಸದಾಗಿ ಭಾರತದಲ್ಲಿ ಇಂದು ನೂರಾರು ಜಾತಿಗಳಿವೆ. ಲೆಕ್ಕವಿಲ್ಲದಷ್ಟು ದೇವರುಗಳಿದ್ದಾರೆ. "ಪ್ರತಿಯೊಂದು ಜಾತಿಗಳು ತನ್ನದೇ ಆದ ತೋಂಡಿ ಸಂವಿಧಾನವನ್ನು ಹೊಂದಿವೆ. ಒಂದು ಜಾತಿಯ ಸಂವಿಧಾನವು ಇನ್ನೊಂದು ಜಾತಿಯ ಸಂವಿಧಾನಕ್ಕಿಂತ ಪ್ರಬಲ! ಹೆಣ್ಣು-ಗಂಡುಗಳ ಕೊಡುಕೊಳ್ಳುವಿಕೆಯೇ ಇದಕ್ಕೆ ಜೀವಾಧಾರ.

ಇದರಲ್ಲಿಯೇ ಪರಸ್ಪರ ಆಹಾರ-ಪಾನೀಯಗಳಿಗೆ ಸಂಬಂಧಿಸಿದಂತೆ, ವೃತ್ತಿ-ಪ್ರವೃತ್ತಿಗೆ ಸಂಬಂಧಿಸಿದಂತೆ, ವೇಷ-ಭೂಷಣಕ್ಕೆ ಸಂಬಂಧಿಸಿದಂತೆ, ವಾಸಸ್ಥಾನ ಮತ್ತು ಭಾಷೆಗೆ ಸಂಬಂಧಿಸಿದಂತೆ, ಜನನ-ಮರಣಕ್ಕೆ ಸಂಬಂಧಿಸಿದಂತೆ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವ್ಯತ್ಯಯಗಳಾಗುತ್ತ ಹೋಗುತ್ತವೆ. ಇವುಗಳಲ್ಲಿಯೇ ನಿಷೇಧತೆಯೂ ಇದೆ. ಜಾತಿಯ ತಾಯಿಯೇ ಧರ್ಮವಾಗಿರುವುದರಿಂದ ಇಂಥವೇ ನಿಷೇಧಗಳು ಧರ್ಮ-ಧರ್ಮದೊಂದಿಗೂ ಇವೆ. ಒಂದು ಧರ್ಮದ ಮಹಿಳೆಯ ಸಮಸ್ಯೆಗಳು ಒಂದೊಂದು ಬಗೆಯಲ್ಲಿ ಇರುವಂತೆ ಒಂದೊಂದು ಜಾತಿಯ ಮಹಿಳೆಯರ ಸಮಸ್ಯೆಗಳು ಇನ್ನೊಂದು ಜಾತಿಯ ಮಹಿಳೆಯರ ಸಮಸ್ಯೆಗಳಿಗಿಂತ ಆಂತರಿಕವಾಗಿ ಭಿನ್ನವಾಗಿದೆ". (ಅರವಿಂದ ಮಾಲಗತ್ತಿ (ಲೇ), 'ವಿಜಯಾನ್ವೇಷಣ' ೫೦೩.) ಅದರಲ್ಲೂ ದಲಿತ ಮಹಿಳೆ ಜಾತಿಯ ಕಾರಣಕ್ಕೆ ಅನುಭವಿಸಿದ ನೋವುಗಳು, ನಡೆದ ದೌರ್ಜನ್ಯಗಳು ಅಪಾರವಾದವು. ಜಾತಿಯ ಕಾರಣಕ್ಕೆ ಅವಳ ಮೇಲೆ ಸಾಕಷ್ಟು ಲೈಂಗಿಕ ದೌರ್ಜನ್ಯಗಳು, ಅತ್ಯಾಚಾರಗಳು ನಡೆದಿವೆ.

ಗೀತಾ ನಾಗಭೂಷಣರ 'ಬದುಕು' ಕಾದಂಬರಿಯಲ್ಲಿ 'ಜೋಗಣಿ' ಬಿಡುವ ಸಂಪ್ರದಾಯ ಹಾಸುಹೊಕ್ಕಾಗಿದೆ. "ಜಮಾದಾರ ಮಲ್ಲಪ್ಪನ ದೊಡ್ಡಿ ಹೊಲ್ಯಾ ಭರಮ್ಯಾನ ಮಗಳು ನೀಲವ್ವನನ್ನೂ, ಅವಳು ಬ್ಯಾಡಪ್ಪೋ..ಅಂತ ಕಳ್ಳು ಕರಗುವಂತೆ ಅತ್ತು ಕರೆದು ನೆಲದ ಮೇಲೆ ಬಿದ್ದು ಹೊಳ್ಯಾಡುತ್ತಿದ್ದರೂ, ಕೈ ಜೋಡಿಸಿ ಬೇಡಿಕೊಂಡರೂ ಬಿಡದೆ 'ಹರಕೆ'ಯಂತೆ ಅವಳನ್ನು ಪಟ್ಟಕ್ಕೆ ಹಾಕಿ 'ಜೋಗಣಿ' ಮಾಡಿದರು" (ಗೀತಾ ನಾಗಭೂಷಣ: 'ಬದುಕು', ೪೬) ಹೀಗೆ 'ಜೋಗಣಿ' ಮಾಡಿದ ಮೇಲೆ ಈಕೆ ಜೀವನಪೂರ್ತಿ ಮಾಪುರ ತಾಯಿಗೆ ಮೀಸಲಾದ ಹೆಣ್ಣು. ಒಮ್ಮೆ 'ಜೋಗಣಿ' ಆದ ಮೇಲೆ ಅವಳು ಸಾಯುವವರೆಗೂ ಮದುವೆಯಾಗುವಂತಿಲ್ಲ. ಯಾರು ಅವಳನ್ನು ಪಟ್ಟಕ್ಕೆ ಹಾಕಿಕೊಂಡಂಥ ಗೌಡನೋ, ಕುಲಕರ್ಣಿಯೋ, ಹಣವಂತನೋ ಅವಳನ್ನು ಪಟ್ಟಕ್ಕೆ ಹಾಕಿಕೊಳ್ಳುವ ಎಲ್ಲಾ ಖರ್ಚನ್ನು ನೋಡಿಕೊಳ್ಳುತ್ತಾನೆ. ಇದರ ಜೊತೆಗೆ 'ಜೋಗಣಿ' ಆಗಲಿರುವವಳಿಗೆ ಹೊಸ ಸೀರೆ, ಕುಪ್ಪಸ, ತಾಳಿ, ಬಂಗಾರ ವಡವೆ, ಬಳೆ, ಕಾಲುಂಗುರ ಮೊದಲಾದವುಗಳನ್ನು ತರುತ್ತಾನೆ. 'ಜೋಗಣಿ' ಆಗಲಿರುವವಳಿಗೆ ಸ್ನಾನ ಮಾಡಿಸಿ ಅವಳ ಪಕ್ಕ ಕತ್ತಿಯನ್ನಿಟ್ಟು ಅದನ್ನೇ ಗಂಡನೆಂಬಂತೆ ಅಲಂಕರಿಸಿ ಅದರೊಂದಿಗೆ ಅವಳ ಮದುವೆ ವಿಧಿಗಳನ್ನು ಪೂರೈಸಿ ತಾಳಿ ಕಟ್ಟುತ್ತಾರೆ. ತಲೆಯ ಮೇಲೆ 'ಪರಡಿ' ಹೊರಸಿ ಕಂಕುಳಲ್ಲಿ ಚೌಡಿಕೆ ಕೊಡುತ್ತಾರೆ. ಈ ವಿಧಿಗಳೆಲ್ಲಾ ಆದಂದಿನಿಂದ ಅವಳೂ ಚುಂಚೂರು ಮಾಪುರ ತಾಯಿಯ 'ಜೋಗಣಿ'ಯಾಗುತ್ತಾಳೆ. ಅಂದು ರಾತ್ರಿ ಪಟ್ಟಕ್ಕೆ ಹಾಕಿಕೊಂಡಂಥ ಕುಲಕರ್ಣಿಯೋ, ಗೌಡನೋ ಅಥವಾ ಹಣವಂತನೋ ಅವಳ ಮೀಸಲು ಮುರಿಯುತ್ತಾನೆ. ಅಲ್ಲಿಂದಾಚೆಗೆ ಅವಳು

ಬಯಸಿ ಬಂದ ಗಂಡಸರಿಗೆಲ್ಲಾ ಆಸೆಗಳನ್ನು ತೀರಿಸುವವಳಾಗುತ್ತಾಳೆ. ಅವಳಿಗೆ ಹುಟ್ಟುವ ಮಕ್ಕಳಿಗೆ ತಂದೆಯ ಹೆಸರಿನ ನಂಟಿರುವುದಿಲ್ಲ. ಒಂದು ರೀತಿಯಲ್ಲಿ ಅವಳು 'ಜೋಗಣಿ' ಹೆಸರಿನಲ್ಲಿ ಸೂಳೆಯಾಗುತ್ತಾಳೆ.

ಇಂಥ ಹೀನಕೃತ್ಯಗಳಿಗೆ ಸಮಾಜದ ದಲಿತ ಹೆಣ್ಣುಗಳೇ ಆಗಬೇಕೆಂಬ ಅಲಿಖಿತ ನಿಯಮವಿರುವಂತಿದೆ. ಏಕೆಂದರೆ ಮೇಲ್ಜಾತಿಯ ಹೆಣ್ಣುಗಳನ್ನು ಇಂಥ ಅಮಾನುಷ ಪದ್ಧತಿಗಳಿಗೆ ಬಲಿಕೊಡುವುದು ಕಂಡುಬರುವುದಿಲ್ಲ. 'ದೇವದಾಸಿ' ಎಂದರೆ ದೇವರ ದಾಸಿ. ಈ ಪದ್ಧತಿ ಭಾರತದಾದ್ಯಂತ ಕಂಡು ಬರುತ್ತದೆ. ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ರಾಜ್ಯಗಳಲ್ಲಿ ಪ್ರಚಲಿತದಲ್ಲಿದೆ. ಹೊರದೇಶಗಳಲ್ಲಿ ಈ ಅನಿಷ್ಟ ಪದ್ಧತಿ ಇದ್ದಂಥ ಉಲ್ಲೇಖಗಳಿವೆ. ದೇವದಾಸಿಯರನ್ನು "ಖಂಡೋಬಾ, ಜ್ಯೋತಿಬಾ ಮುರುಳಿ, ಅಂಬಾಬಾಯಿ ಜೋಗವ್ವ, ತಳನಾಥ ಭಾವಿಣ, ಭೂತನಾಥ ನಾಯಿಕೆ, ಕಲಾವಂತಿ, ಧಾರೇಶ್ವರ, ಬಸವಿ, ಮಾಯವ್ವ, ದುರ್ಗವ್ವ, ಜೋಗತಿ, ದ್ಯಾಮವ್ವ, ಮಾತಂಗಿ, ಮಾರುತಿ ಶರಣೆ ಮೊದಲಾದ ಹೆಸರುಗಳಿಂದ ಕರೆಯಲಾಗುತ್ತದೆ. ಆದರೆ ಇತ್ತೀಚೆಗೆ ಸಾಮಾನ್ಯವಾಗಿ ಎಲ್ಲರನ್ನೂ 'ದೇವದಾಸಿ' ಎಂದೇ ಕರೆಯಲಾಗುತ್ತಿದೆ. ಹೊಲೆಯ, ಮಾದಿಗ, ತಳವಾರ, ಕಬ್ಬಲಿಗ, ದಾಸ, ಬೇಡ, ಕೋಳಿ, ನಾಯಕ, ಕುರುಬ (ಧನಗರ) ಕುಣಬಿ, ಭಂಡಾರಿ ಮೊದಲಾದ ಜಾತಿ ಜನಾಂಗಗಳಲ್ಲಿ ಈ ಪದ್ಧತಿಯನ್ನು ಪಾಲಿಸಿಕೊಂಡು ಬರಲಾಗುತ್ತದೆ." (ಉತ್ತಮ ಕಾಂಬಳೆ (ಮೂಲ) ಸಿದ್ರಾಮಕಾರಣಿಕ (ಕ) : 'ದೇವದಾಸಿ ಮತ್ತು ಬೆತ್ತಲೆ ಸೇವೆ' ೫೦, ೫೧) 'ಈ ರೀತಿ ದೇವದಾಸಿಯಾದವರನ್ನು ಸಮಾಜ ಕೀಳಾಗಿ ನೋಡುತ್ತಿದ್ದರೆ ಸ್ವತಃ ದೇವದಾಸಿಯನ್ನಾಗಿಸಿದ ಕುಟುಂಬದವರು ಇವರಿಗೆ ಹೆಚ್ಚಿನ ಪ್ರೀತಿ–ಗೌರವಗಳನ್ನು ಕೊಡುತ್ತಾರೆ. ಮನೆಮಕ್ಕಳೆಲ್ಲಾ ಇವರಿಗೆ ಹೆಚ್ಚಿನ ಆದ್ಯತೆ ಸಿಗುತ್ತದೆ. ಏಕೆಂದರೆ ಕುಟುಂಬದ ಎಲ್ಲಾ ಖರ್ಚುಗಳನ್ನು ಇವರೇ ನೋಡಿಕೊಳ್ಳುತ್ತಾರೆ. ಅಲ್ಲದೇ ತಂದೆ ಸತ್ತಾಗ ಇವರು ಗಂಡು ಮಗುವಿನಂತೆ ಅಂತ್ಯಸಂಸ್ಕಾರ ಮಾಡುವ ಹಕ್ಕನ್ನೂ ಪಡೆದಿರುತ್ತಾರೆ. ಇಂಥ ದೇವದಾಸಿಯರಲ್ಲಿ ೨ ವಿಧಗಳಿವೆ.

೧. ದೈವಕೇಂದ್ರಿತ ಲೈಂಗಿಕ ದಾಸಿಯರು

೨. ಸಮಾಜಕೇಂದ್ರಿತ ಲೈಂಗಿಕ ದಾಸಿಯರು

ದೈವಕೇಂದ್ರಿತ ಲೈಂಗಿಕ ದೇವದಾಸಿಯರಾಗಿ ಪಾತರದವರು, ಬಸವಿಯವರು, ಜೋಗತಿಯರು ಗುರುತಿಸಲ್ಪಟ್ಟರೆ ಸಮಾಜಕೇಂದ್ರಿತ ದೇವದಾಸಿಯರನ್ನಾಗಿ ಸೆಕ್ಸ್ ವರ್ಕರ್ಸ್ ಅನ್ನು ಗುರುತಿಸಲಾಗುತ್ತಿದೆ. ದೈವಕೇಂದ್ರಿತ ದೇವದಾಸಿಯರು ತಮ್ಮ ಮುಪ್ಪಿನ ಕಾಲದಲ್ಲಿ ಭಿಕ್ಷೆ

ಬೇಡಿ ಬದುಕುತ್ತಾರೆ. ಒಮ್ಮೊಮ್ಮೆ ದೈವಕೇಂದ್ರಿತ ದೇವದಾಸಿಯರು ತಮ್ಮ ಹರೆಯದಲ್ಲೂ ಭಿಕ್ಷೆ ಬೇಡಿ ತಿನ್ನಬೇಕಾದ ಪರಿಸ್ಥಿತಿ ಏರ್ಪಡುತ್ತದೆ. ಕರ್ನಾಟಕದಲ್ಲಿ ಚಿತ್ರದುರ್ಗ, ಬಳ್ಳಾರಿ, ಶಿವಮೊಗ್ಗ ಮೊದಲಾದ ಜಿಲ್ಲೆಗಳ ಪ್ರತಿಯೊಂದು ಹಳ್ಳಿಗಳಲ್ಲಿ ದೇವದಾಸಿಯರನ್ನು ಬಿಟ್ಟಿರುವುದು ಕಂಡು ಬರುತ್ತದೆ.

ಬಳ್ಳಾರಿ ಜಿಲ್ಲೆಯ ಮುದ್ದಾಟನೂರು ಮತ್ತು ಕಲಕುಂಬಿ ಎಂಬ ಎರಡು ಸ್ಥಳಗಳಲ್ಲಿ ಹೋಳಿಯ ಸಂದರ್ಭದಲ್ಲಿ ಹನುಮನ ಮಂದಿರದ ಎದುರಿಗೆ ಬಣ್ಣ ತುಂಬಿದ ದೊಡ್ಡದಾದ 'ಹೌದ್'ನ್ನು ಇಡುತ್ತಾರೆ. ಬಣ್ಣದ ಆಟವಾಡಲೆಂದೇ ಈ 'ಹೌದ್'ನ್ನು ತುಂಬಿಸಿಡುತ್ತಾರೆ. ಮಧ್ಯಾಹ್ನದ ಹೊತ್ತಿಗೆ ಊರಿನ ಪಾಟೀಲ, ಗೌಡ, ಕುಲಕರ್ಣಿ, ರೆಡ್ಡಿ, ದೇಸಾಯಿ ಮೊದಲಾದ ಗಣ್ಯರೆನಿಸಿಕೊಂಡವರು ಸೇರುತ್ತಾರೆ. ಇವರ ಜೊತೆಗೆ ಮನೆಯ ಹರೆಯದ ಹುಡುಗರೂ ಸೇರುತ್ತಾರೆ. ಈ ಯುವಕರು ಕುಣಿಯುತ್ತ ಹೌದಿನ ಹತ್ತಿರ ಬರುತ್ತಾರೆ. ಮತ್ತೊಂದು ದಿಕ್ಕಿನಿಂದ ತುಂಬುಪ್ರಾಯದ ದೇವದಾಸಿಯರ ಮೆರವಣಿಗೆಯೂ ಬರುತ್ತದೆ.

ಹೌದಿನ ಮುಂದೆ ದೇವದಾಸಿಯರು ಮತ್ತು ಯುವಕರು ಎದುರು ಬದುರಾಗಿ ನಿಲ್ಲುತ್ತಾರೆ. ದೇವದಾಸಿಯರಿಗೆ ತುಂಬಾ ತೆಳುವಾದ ಸೀರೆ ಮತ್ತು ಕುಪ್ಪಸಗಳನ್ನು ಕೊಡುತ್ತಾರೆ. ಅವರು ಊರಿನ ಜನರ ಸಮ್ಮುಖದಲ್ಲೇ ಆ ಸೀರೆ ಮತ್ತು ರವಿಕೆಗಳನ್ನು ತೊಟ್ಟಕೊಳ್ಳಬೇಕು ಅವು ತುಂಬಾ ತೆಳುವಾಗಿರುತ್ತವೆ. ಇಂತಹ ಬಟ್ಟೆಗಳನ್ನು ತೊಟ್ಟ ದೇವದಾಸಿಯರಿಗೆ ಬಣ್ಣದ ನೀರಿನಿಂದ ನೆನೆಸಲಾಗುತ್ತಿದೆ. ಅಷ್ಟು ಮಾತ್ರವಲ್ಲದೆ ಯುವಕರು ದೇವದಾಸಿಯರಿಗೆ ಹಲವು ರೀತಿಯ ಕುಚೇಷ್ಟೆಗಳನ್ನು ಮಾಡುತ್ತಾರೆ. ಯಾವುದೇ ದೇವದಾಸಿ ಇಂಥ ಪದ್ಧತಿಯನ್ನು ವಿರೋಧಿಸುವಂತಿಲ್ಲ. ಸಾಮಾನ್ಯವಾಗಿ ಇಂಥ ಅವಮಾನಕರ ಅಸಹ್ಯಕರ ಪದ್ಧತಿಗಳಿಗೆ ದಲಿತ ಹೆಣ್ಣುಮಕ್ಕಳನ್ನೇ ಬಲಿಯಾಗಿಸುತ್ತಾರೆ. ಆ ದಲಿತ ಹೆಣ್ಣು ಮಕ್ಕಳನ್ನು ಅವಮಾನಗೊಳಿಸುವ ಜಾಗದಲ್ಲಿ, ಸಮಾಜದ ಮೇಲ್ವರ್ಗದವರೆನಿಸಿಕೊಂಡ ಗೌಡ, ಕುಲಕರ್ಣಿ, ದೇಸಾಯಿ, ಪಾಟೀಲ, ರೆಡ್ಡಿ ಮೊದಲಾದವರ ಮನೆಯ ಹೆಂಗಸರನ್ನು ನಿಲ್ಲಿಸಲು ಒಪ್ಪುತ್ತಾರೆಯೆ? ಒಪ್ಪುವುದಿರಲಿ ಕಲ್ಪಿಸಿಕೊಳ್ಳಲು ಹೇಸಿಗೆ, ಅವಮಾನಕರ ಎನಿಸುತ್ತದೆ. ಹಾಗಿದ್ದಾಗ ದಲಿತ ಮಹಿಳೆಯರೇನು ಬಿಟ್ಟಿ ಬಿದ್ದಿರುವರೇ? ಮೇಲ್ವರ್ಗದವರ ತಾಳಕ್ಕೆ ಕುಣಿಯಲೆಂದೇ ದಲಿತ ಮಹಿಳೆಯರಿದ್ದಾರೆಯೇ? ಅವರು ಕುಣಿಸಿದಂತೆ ಕುಣಿಯುವ ಬೊಂಬೆಗಳೇ? ಇಂಥ ಅಮಾನುಷ ಪದ್ಧತಿಗಳನ್ನು ದಲಿತ ಮಹಿಳೆಯರೇ ವಿರೋಧಿಸಬೇಕಿದೆ. ಇವರು ಕುಣಿಯಲು ಸಿದ್ಧರಿರುವರೆಗೂ ಕುಣಿಸಲು ಉತ್ಸುಕರಾಗಿರುತ್ತಾರೆ. ದೇವರ ದಾಸಿಯರನ್ನು ಈ ರೀತಿಯ ಹೀನಕೃತ್ಯಕ್ಕೆ ಉಪಯೋಗಿಸುತ್ತಿದ್ದರೆ 'ದೇವರು' ಸುಮ್ಮನಿರುತ್ತಾರೆಯೇ? 'ದೇವರಿಗೆ' ಏನೂ ಅನಿಸುವುದಿಲ್ಲವೇ?

ಸಮಾಜದಲ್ಲಿನ ದಲಿತರು ತಮ್ಮ ಹೆಣ್ಣುಮಕ್ಕಳನ್ನು ದೇವದಾಸಿಯರನ್ನಾಗಿಸಲು ಹಲವಾರು ಕಾರಣಗಳಿವೆ. ಅವುಗಳಲ್ಲಿ ಎರಡು ಪ್ರಮುಖವಾದವುಗಳೆಂದರೆ,

೧. ಧಾರ್ಮಿಕ ಕಾರಣಗಳು

೨. ಆರ್ಥಿಕ ಕಾರಣಗಳು

೧. ಧಾರ್ಮಿಕ ಕಾರಣಗಳು :

ಒಮ್ಮೆ ಈ ದೇವದಾಸಿ/ಜೋಗಣಿ ಪದ್ಧತಿ ಆರಂಭವಾದರೆ ಅದು ಮುಂದುವರೆದು-ಕೊಂಡೇ ಹೋಗುತ್ತದೆ. ತಾಯಿಯಿಂದ ಮಗಳು, ಮಗಳಿಂದ ಅವಳ ಮಗಳಿಗೆ, ಹೀಗೆ ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ ಬರುತ್ತದೆ. ಒಮ್ಮೆ ಈ ಪದ್ಧತಿ ರೂಢಿಯಾದ ಮೇಲೆ ಮಧ್ಯದಲ್ಲಿ ನಿಲ್ಲಿಸಿದರೆ, ದೇವಿ ಸಿಟ್ಟಾಗುತ್ತಾಳೆ, ಗಂಡು ಮಕ್ಕಳು ಬದುಕುವುದಿಲ್ಲ ಕುಟುಂಬಕ್ಕೆ ಒಳ್ಳೆಯದಾಗುವುದಿಲ್ಲ ಎಂಬ ನಂಬಿಕೆಯಿದೆ.

೨. ಆರ್ಥಿಕ ಕಾರಣಗಳು :

ಉತ್ತರ ಕರ್ನಾಟಕದ ಕೆಲವು ಬರಗಾಲ ಪೀಡಿತ ಪ್ರದೇಶಗಳಲ್ಲಿ ತುತ್ತು ಅನ್ನಕ್ಕೂ ಕಷ್ಟವಿರುವಾಗ ದಲಿತ ಕುಟುಂಬದವರು ತಮ್ಮ ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿ ಬಿಡುತ್ತಾರೆ. ದೇವದಾಸಿಯಾದ ಹೆಣ್ಣುಮಗಳು ತಮ್ಮ ಕುಟುಂಬಕ್ಕೆ ಆಸರೆಯಾಗುತ್ತಾಳೆ. ಇಡೀ ಬಡಕುಟುಂಬಕ್ಕೆ ಆಧಾರಸ್ತಂಭವೇ ಆಗುತ್ತಾಳೆ. ದಲಿತರ ಬಡತನ, ಅಸಹಾಯಕತೆಯೇ ಅವರ ಹೆಣ್ಣುಮಕ್ಕಳನ್ನು ದೇವದಾಸಿ / ಜೋಗಣಿಯರನ್ನಾಗಿ ಬಿಡುವಂತೆ ಮಾಡಿದೆ. "ಕಮಲಾಪುರದ ಒಬ್ಬ ದೇವದಾಸಿ ಮನೆಗೆ ಭೇಟಿಕೊಟ್ಟಿದ್ದಾಗ, ಹುಲಿಗೆಮ್ಮ ಎಂಬ ಅರವತ್ತು ವರ್ಷದ ದಲಿತ ದೇವದಾಸಿ ಮಹಿಳೆ ಹೇಳಿದ ಅಂಶಗಳು ಆಶ್ಚರ್ಯವನ್ನುಂಟು ಮಾಡಿದವು. ಅವರ ಮನೆಯಲ್ಲಿ ಆಕೆಯೇ ದೊಡ್ಡವಳಾದ್ದರಿಂದ ತಮ್ಮಂದಿರನ್ನು ನೋಡಿಕೊಂಡು ತಾಯಿಗೆ ನೆರವಾಗಲಿ ಎಂಬ ಉದ್ದೇಶದಿಂದ ದೇವದಾಸಿಯನ್ನಾಗಿ ಬಿಡಲಾಯಿತಂತೆ. ಯಾವ ತಮ್ಮಂದಿರಿಗಾಗಿ ಅವಳು ದೇವದಾಸಿಯಾದಳೋ, ಅದೇ ತಮ್ಮಂದಿರು ಆ ದೇವದಾಸಿ ಅಕ್ಕನ ಇಬ್ಬರು ಅವಳಿ ಗಂಡು ಮಕ್ಕಳನ್ನು ಮಲಗಿದ್ದಾಗ ಒಂದೇ ಸಲ ತಲೆ ಮೇಲೆ ಕಲ್ಲು ಹಾಕಿ ಕೊಲೆ ಮಾಡಿದ್ದಾರೆ." (ಹುಲಿಗೆಮ್ಮ: 'ದೇವದಾಸಿ ಮಹಿಳೆ', ಕಮಲಾಪುರ) ದಲಿತರಲ್ಲಿರುವ ಬಡತನವೇ ಅವರು ದೇವದಾಸಿಯರಾಗಲು ಪ್ರಮುಖ ಕಾರಣ.

೧. ಕೆಲವರು ತಮಗೆ ಮಕ್ಕಳಾಗದಿದ್ದಾಗಲೂ ದೇವರಿಗೆ ಹರಕೆ ಹೊತ್ತುಕೊಳ್ಳುತ್ತಾರೆ. ತಮಗೆ ಹುಟ್ಟಿದ ಮಕ್ಕಳನ್ನು ದೇವದಾಸಿಯರನ್ನಾಗಿ ಮಾಡುತ್ತಾರೆ.

೨. ಕೆಲವರು ತಮ್ಮ ಮಕ್ಕಳು ಅಂಗವಿಕಲರಾಗಿದ್ದಾಗಲೂ ದೇವದಾಸಿಯರನ್ನಾಗಿ ಬಿಡುತ್ತಾರೆ.

೩. ಮದುವೆಯಾಗಿ ಗಂಡ ಹೊರಹಾಕಿದ್ದಾಗಲೂ ದೇವದಾಸಿಯರನ್ನಾಗಿ ಬಿಡುತ್ತಾರೆ. ಹೀಗೆ ಮಾಡುವ ಮೂಲಕ ತಂದೆ-ತಾಯಿಗಳು ತಮ್ಮ ಹೊರೆಯನ್ನು ಕಳೆದುಕೊಳ್ಳುತ್ತಾರೆ.

೪. ಹುಡುಗ ಅಥವಾ ಹುಡುಗಿಗೆ ತಲೆಕೂದಲಲ್ಲಿ 'ಜಟೆ' ಕಂಡುಬಂದಾಗಲೂ ಈ ಪದ್ಧತಿಗೆ ಬಿಡುತ್ತಾರೆ.

ಹೀಗೆ ದೇವದಾಸಿ ಪದ್ಧತಿಯು ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಕಾರಣಗಳಿಂದ ಹುಟ್ಟಿ ನಡೆಯುತ್ತಲಿದೆ. ಈಗಲೂ ಪ್ರತಿವರ್ಷ ಸಾವಿರಾರು ದಲಿತ ಹೆಣ್ಣುಮಕ್ಕಳು ಈ ಅನಿಷ್ಟ ಪದ್ಧತಿಗೆ ಬಲಿಯಾಗುತ್ತಲಿದ್ದಾರೆ. ಕಮಲಾಪುರದ 'ಹುಲಿಗೆಮ್ಮ' ಎಂಬ ದೇವದಾಸಿ ಮಹಿಳೆಯು "ತಾನು ದೇವದಾಸಿಯಾದರೂ ಇಂದಿನ ಹೆಣ್ಣುಮಕ್ಕಳು ದೇವದಾಸಿಯರಾಗುವುದನ್ನು ವಿರೋಧಿಸುತ್ತಾರೆ. ಆಕೆ ಹೇಳುವುದೇನೆಂದರೆ ಒಬ್ಬರಿಗೆ ಮೀಸಲಾಗಿ ಕೊನೆಯವರೆಗೂ ನಡೆದುಕೊಂಡರೂ ನಮ್ಮನ್ನು 'ಸೂಳೆ'ಯರೆಂದೇ ಕರೆಯುತ್ತಾರೆ. ಈ ಪದ್ಧತಿ ಕೆಟ್ಟದ್ದು, ಹೀಗೆ ಮಾಡಬಾರದು. ನಮಗೆ ಬುದ್ಧಿಯಿಲ್ಲದ ವಯಸ್ಸಿನಲ್ಲಿ ಹೀಗೆ ಮಾಡಿದ್ದಾರೆಂದು" (ಹುಲಿಗೆಮ್ಮ: 'ದೇವದಾಸಿ ಮಹಿಳೆ', ಕಮಲಾಪುರ) ತಮ್ಮ ಮನದಾಳದ ನೋವನ್ನು ಹೊರಹಾಕುತ್ತಾರೆ. 'ನೊಂದ ನೋವ ನೋಯದವರೆತ್ತ ಬಲ್ಲರು' ಎಂಬಂತೆ ಆಕೆಯ ನೋವು ಆಕೆಗೆ ಗೊತ್ತಿದೆ. ಆದ್ದರಿಂದಲೇ ಆಕೆ ಇಂದಿನ ಹೆಣ್ಣುಮಕ್ಕಳು ಹಾಗೆ ದೇವದಾಸಿಯರಾಗಬಾರದೆಂದು ವಿರೋಧಿಸುತ್ತಾರೆ. ಇತ್ತೀಚೆಗೆ ಹಲವು ಪ್ರಕರಣಗಳಲ್ಲಿ ದೇವದಾಸಿಯರಾಗುವುದೇ ವೇಶ್ಯಾವೃತ್ತಿಗೆ ಸೇರಲೆಂಬಂತೆ ಆಗುತ್ತಿದೆ.

ಮೇಲ್ಜಾತಿಯವರು ದೇವಿಗೆ ತಮ್ಮ ಮಕ್ಕಳ ಬದಲು ಕುರಿ, ಕೋಳಿ, ಹಸು, ಎತ್ತು ಮುಂತಾದ ಪ್ರಾಣಿಗಳನ್ನು ಮೀಸಲು ಬಿಡುತ್ತಿರುವಾಗ ದಲಿತರು ತಮ್ಮ ಅಜ್ಞಾನದಿಂದ ಮಕ್ಕಳನ್ನು ಬಿಡುತ್ತಿದ್ದಾರೆ. ಅಥವಾ ಬಿಡುವಂತೆ ಮಾಡಲಾಗಿದೆ. ಇದನ್ನು ದಲಿತರು ಸರಿಯಾಗಿ ಆಲೋಚಿಸಬೇಕಿದೆ. ಮೇಲ್ಜಾತಿಯವರೆನಿಸಿಕೊಂಡವರಿಗೆ ಹೋಲಿಸಿದಾಗ ದಲಿತರಲ್ಲೇ ಹೆಚ್ಚು ಮೂಢನಂಬಿಕೆಗಳಿರುವುದು ಸಹ ದೇವದಾಸಿಯಾಗಲು ಕಾರಣಗಳಾಗುತ್ತಿವೆ. ಮೂಡನಂಬಿಕೆಗಳಿಗೆ ದಲಿತರ ಅನಕ್ಷರತೆಯೇ ಕಾರಣ.

"..

ಗಂಡಾನ ಹೆಸರಿಲ್ಲ ಊರೆಲ್ಲ ಮಿಂಡಾರು

ಮದುವಿಲ್ದೆ ಮದುಮಗಳು ಗಂಡಿಲ್ದೆ ಹಡೆದೋಳು

ನಾಯಿಗೂ ಕಡೆಯಾಗಿ ಕೀಳಾಯ್ತು ನನ್ನ ಬಾಳು

ಯಲ್ಲವ್ವನ ಹಿಂದೆ ಹೋಗಿ ಎಲ್ಲಾನೂ ಕಳಕೊಂಡೆ

ಉದೋ ಉಧೋ ಅನ್ನುತ್ತಾ ಉದುರಿದಾ

ಹೂವಾದೆ..........”

(ಹಾಲತಿ ಸೋಮಶೇಖರ್: ‘ಮಹಿಳಾ ಚಳವಳಿ’, ೧೬೧)

ಇವು ಕೋಟಗಾನಹಳ್ಳಿ ರಾಮಯ್ಯನವರ ಕವನದ ಸಾಲುಗಳು. ದೇವದಾಸಿಯರ ಬದುಕಿನ ದುರಂತವನ್ನು ತುಂಬಾ ಮಾರ್ಮಿಕವಾಗಿ ಬಿಚ್ಚಿಡುತ್ತಿವೆ.

ಸಾಮಾನ್ಯವಾಗಿ ಎಲ್ಲಾ ಹೆಣ್ಣು ಮಕ್ಕಳಿಗಿರುವಂತೆ ‘ದೇವದಾಸಿ’ ಅಥವಾ ‘ಜೋಗಣಿ’ಯರಿಗೆ ‘ಒಬ್ಬ’ ಗಂಡ ಅನ್ನುವವನು ಇರುವುದಿಲ್ಲ. ಒಬ್ಬ ಗಂಡನ ಹೆಸರೂ ಹೇಳಲಾಗದ ಇವಳು ಮದುವೆ ಇಲ್ಲದೆ ಮದುಮಗಳಾಗಿ, ಗಂಡನಿಲ್ಲದೆಯೂ ಮಕ್ಕಳಿಗೆ ಜನ್ಮ ಕೊಡುತ್ತಾಳೆ. ಯಲ್ಲಮ್ಮ, ಹುಲಿಗೆಮ್ಮ ಮುಂತಾದ ಹೆಣ್ಣು ದೇವತೆಯರ ಹೆಸರೇಳಿ ಸಮಾಜದ ಕೆಳಜಾತಿಯ ಹೆಣ್ಣು ಮಕ್ಕಳನ್ನು ಅನಿಷ್ಟ ಆಚರಣೆಗೆ ಬಲಿಪಶು ಮಾಡುತ್ತಾರೆ. ಇಂಥವರ ಬದುಕು ಕಡೆಗಾಲದಲ್ಲಿ ನಾಯಿಗಿಂತಲೂ ಕೀಳಾಗುತ್ತದೆ. ಇಂಥ ಅನಿಷ್ಟ ಪದ್ಧತಿಗಳು ಹೊರದೇಶಗಳಲ್ಲಿ ಕಂಡು ಬರುವುದಿಲ್ಲ. ಏಕೆಂದರೆ ವಿದೇಶಗಳಲ್ಲಿ ‘ಜಾತಿ ಪದ್ಧತಿ’ ಆಚರಣೆಯಲ್ಲಿಲ್ಲ. ಅಲ್ಲಿರುವುದು ‘ವರ್ಣಪದ್ಧತಿ’, ಮತ್ತು ‘ವರ್ಗಪದ್ಧತಿ’ ಅಲ್ಲಿ ಸಾಕಷ್ಟು ದೇವತೆಗಳ ಆರಾಧನೆಯಿಲ್ಲ. ಮುಖ್ಯವಾಗಿ ಎಲ್ಲರೂ ವಿದ್ಯಾವಂತರಾಗಿರುತ್ತಾರೆ. ಎಲ್ಲಿ ಜಾತಿ, ದೇವರು, ಧರ್ಮ, ಮುಂತಾದವುಗಳ ಆಚರಣೆಯಿರುವುದಿಲ್ಲವೋ ಅಲ್ಲಿ ಸಹಜವಾಗಿಯೇ ಇಂಥ ಅನಿಷ್ಟ ಆಚರಣೆಗಳೂ ಇರುವುದಿಲ್ಲ. ಹಾಗೆಂದ ಮಾತ್ರಕ್ಕೆ ಹೊರದೇಶಗಳಲ್ಲಿ ವಾಸಿಸುವ ಎಲ್ಲಾ ಮಹಿಳೆಯರೂ ನೆಮ್ಮದಿಯಿಂದ ಬದುಕುತ್ತಿದ್ದಾರೆ ಎಂದೇನೂ ಇಲ್ಲ. ಅಲ್ಲಿನ ಮಹಿಳಾ ಶೋಷಣೆಯ ನೆಲೆಗಳೇ ಬೇರೆ. ಹೊರದೇಶಗಳಲ್ಲಿ ಮಹಿಳೆಯ ದೇಹದ ಕಾರಣದಿಂದ ಅಲ್ಲದೆ (ದೈಹಿಕವಾಗಿ ಅಶಕ್ತಳು) ಎಂಬ ಕಾರಣದಿಂದಾಗಿ ಅವಳನ್ನು ಎರಡನೆ ದರ್ಜೆಯವಳಾಗಿ ಶೋಷಿಸುವುದು ಅಧಿಕವಾಗಿದೆ.

ದೇವದಾಸಿ ಪದ್ಧತಿಯ ಇತಿಹಾಸ ಇಂದು ನೆನ್ನೆಯದಲ್ಲ. ಅದು ಪ್ರಾಚೀನವಾದುದು ಎಂಬುದಕ್ಕೆ ಆಧಾರಗಳಿವೆ. “ಧಾರ್ಮಿಕತೆಯಲ್ಲಿ ಲೈಂಗಿಕತೆ ಅಡಗಿದೆ’ ಎಂಬುದನ್ನು ದೇವದಾಸಿ ಪದ್ಧತಿ ಸ್ಪಷ್ಟಪಡಿಸುತ್ತದೆ. ಈ ಪದ್ಧತಿ ಅತ್ಯಂತ ಪ್ರಾಚೀನ ಎಂದು ತಿಳಿಯುವಂತಿಲ್ಲ. ಈ ವೃತ್ತಿಯನ್ನು ಕುರಿತ ದಾಖಲೆಗಳು ೧೦ನೆಯ ಶತಮಾನದಿಂದ ಸ್ಪಷ್ಟವಾಗಿ ದೊರೆಯುತ್ತದೆ. ಕ್ರಿ.ಶ. ೧೦೦೪ರ ಚೋಳರಾಜನ ಬೃಹದೀಶ್ವರ ದೇವಸ್ಥಾನದ ತಂಜಾವೂರಿನ ಶಾಸನದಲ್ಲಿ

ದೇವಸ್ಥಾನದ ನಾನೂರು ದೇವದಾಸಿಯರಿಗೆ ದೇವಾಲಯದ ಸುತ್ತ ನಾಲ್ಕು ಬೀದಿಗಳಲ್ಲಿ ಉಚಿತ ವಸತಿ, ತೆರಿಗೆ ವಿನಾಯ್ತಿವುಳ್ಳ ಜಮೀನನ್ನು ಬಳುವಳಿಯಾಗಿ ನೀಡಿದ ದಾಖಲೆ ಇದೆ. ಇಂದಿಗೂ ದಕ್ಷಿಣ ಆಫ್ರಿಕಾದ ಕೆಲವು ಬುಡಕಟ್ಟುಗಳಲ್ಲಿ, ದಕ್ಷಿಣ ಭಾರತದಲ್ಲಿ ಈ ಪದ್ಧತಿ ವಿರಳವಾಗಿ ಕಂಡುಬರುತ್ತದೆ. ಪುರಿಯ ಜಗನ್ನಾಥ ಮಂದಿರದಲ್ಲಿ ಇದು ವಿಶೇಷವಾಗಿದೆ ಎಂದು ಫ್ರೆಂಚ್ ಯಾತ್ರಿ ಬರ್ವಿಯರ್ ದಾಖಲಿಸುತ್ತಾನೆ. ಮಲೈ ಮಹದೇಶ್ವರನಿಗೆ 'ಗುಡ್ಡಿ' ಎಂಬ ಹೆಸರಿನ (ದೇವರಗುಡ್ಡಿ) ದೇವದಾಸಿಯರಿದ್ದಾರೆ. ಆಫ್ರಿಕಾದ ಸ್ಲೇವ್ ಕರಾವಳಿಯ 'ಯೂ' ಭಾಷೆಯ ಜನರಲ್ಲಿ ಹತ್ತರಿಂದ ಹನ್ನೆರಡು ವರ್ಷದ ಹುಡುಗಿಯರಿಗೆ ತರಬೇತಿ ನೀಡಿ ದೇವಾಲಯಗಳಲ್ಲಿರಿಸುತ್ತಿದ್ದರು. ಇವರು ಪೂಜಾರಿ ಮತ್ತು ಗುರುಗಳೊಂದಿಗೆ ಸಂಬಂಧವಿಟ್ಟುಕೊಳ್ಳುತ್ತಿದ್ದರೆಂಬುದು ತಿಳಿದು ಬರುತ್ತದೆ. ಸಿರಿಯಾದ ದೇವಾಲಯಗಳಲ್ಲಿ ವೇಶ್ಯಾವೃತ್ತಿ ಒಂದು ಸಂಪ್ರದಾಯವಾಗಿತ್ತು. ಈ ವೃತ್ತಿಯಲ್ಲಿ ಮೇಟ್ರನ್‌ಗಳಿರುತ್ತಿದ್ದರು. ಬ್ಯಾಬಿಲೋನ್ ಮತ್ತು ಸಿರಿಯಾಗಳ ದೇವಾಲಯಗಳಲ್ಲಿ ವೇಶ್ಯೆಯರು ಗಿರಾಕಿಗಳು ಕೊಟ್ಟ ಉಡುಗೊರೆಯನ್ನು ಸ್ವೀಕರಿಸುತ್ತಿದ್ದರು. ಪ್ರಾಚೀನ ಬ್ಯಾಬಿಲೋನಿಯಾ, ಸೈಪ್ರಸ್, ಫಿನಿಷಿಯಾ, ಗ್ರೀಸ್, ಮೆಸಪಟೋಮಿಯಾ, ಈಜಿಪ್ಟ್, ಸಿರಿಯಾ, ಅರೇಬಿಯಾ ಮುಂತಾದ ಮಧ್ಯ ಪ್ರಾಚ್ಯಗಳಲ್ಲಿ, ಆಗ್ನೇಯ ಏಷ್ಯಾದಲ್ಲಿ ಇದು ಪ್ರಚುರವಾಗಿತ್ತು. ಭಾರತದಲ್ಲಿಯೂ ಈ ಪದ್ಧತಿ ಸಾಮಾನ್ಯವಾಗಿತ್ತು. ಸಿಂಧೂ ಬಯಲಿನ ನಾಗರಿಕತೆಯ ಮಾತೃದೇವತಾ ಗುಡಿಯಲ್ಲಿ ಸ್ತ್ರೀ–ಪುರುಷ ಗುಲಾಮರಿದ್ದರೆಂದೂ ಇದು ಅಂದಿನ ಸಮಾಜದಲ್ಲಿ ಪ್ರತಿಷ್ಠೆಯ ಮಾತಾಗಿತ್ತೆಂದೂ ತಿಳಿದು ಬರುತ್ತದೆ. ಮೊಹೆಂಜೊದಾರೋವಿನಲ್ಲಿ ದೊರೆತ ಸ್ತ್ರೀ ಪ್ರತಿಮೆಯಲ್ಲಿ ನರ್ತಕಿಯ ಲಕ್ಷಣಗಳಿವೆ. ಈ ಪ್ರತಿಮೆ ನಗ್ನವಾಗಿದ್ದು, ಒಂದು ತೋಳಿನ ತುದಿಯವರೆಗೂ ಬಳೆಗಳಿವೆ. ಕುತ್ತಿಗೆಯಲ್ಲಿ ಮಣಿಸರವಿದೆ. ತಲೆಗೂದಲು ಸಡಿಲವಾಗಿ ಇಳಿಬಿದ್ದಿವೆ. ಕಣ್ಣುಮುಚ್ಚಿ ನರ್ತಿಸುತ್ತಿರುವ ಆಕೆಯಲ್ಲಿ ಭಕ್ತಿಭಾವ ಹೊಮ್ಮಿದೆ. ಈಕೆ ದೇವದಾಸಿಯೇ ಇರಬೇಕೆಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ." (ಡಾ. ಶ್ರೀಪಾದ ಭಟ್ (ಲೇ) : 'ವಿಜಯಾನ್ವೇಷಣ', ೫೩೨–೫೩೩)

ಇಂಥ ಹೇಯ ಪದ್ಧತಿಗೆ ಪ್ರಾಚೀನ ಇತಿಹಾಸ ಇದೆ ಎಂದ ಮಾತ್ರಕ್ಕೆ ಇದನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಅರ್ಥವಲ್ಲ. ಅಕ್ಷರಜ್ಞಾನವಿಲ್ಲದ ಅನಾಗರಿಕ ಕಾಲದಲ್ಲಿ ಹುಟ್ಟಿಕೊಂಡ ಈ ಅನಿಷ್ಟ ಪದ್ಧತಿ ಇಂದಿಗೂ ಬೇಕೆ? ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ವಿಜ್ಞಾನ–ತಂತ್ರಜ್ಞಾನ, ಶಿಕ್ಷಣ, ವೈಚಾರಿಕತೆ, ಸಮಾನತೆ, ಸೋದರತ್ವ ಎಂದೆಲ್ಲಾ ಮಾತನಾಡುವ ಆಧುನಿಕ ಸಮಾಜದಲ್ಲಿ ಇಂದಿಗೂ ಕೂಡ ಈ ಪದ್ಧತಿ ಮುಂದುವರೆದುಕೊಂಡು

ಹೋಗುತ್ತಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂಥದ್ದಾಗಿದೆ. ಸರ್ಕಾರ, ಸಂಘ–ಸಂಸ್ಥೆಗಳು ಏನೆಲ್ಲಾ ಪ್ರಯತ್ನಪಟ್ಟರೂ ಈ ಪದ್ಧತಿಯನ್ನು ತೆಗೆಯಲು ಸಾಧ್ಯವಾಗದಿದ್ದಕ್ಕೆ ಕಾರಣ ಜನರಲ್ಲಿನ ಅಜ್ಞಾನ. ಈ ಪದ್ಧತಿಯನ್ನು ಒಮ್ಮಿಂದೊಮ್ಮೆಲೆ ನಿಲ್ಲಿಸಿಬಿಟ್ಟರೆ ಮನೆಯ ಮಕ್ಕಳಿಗೆ ಕೆಡುಕಾಗುತ್ತದೆ. ಅದರಲ್ಲೂ ಗಂಡು ಮಕ್ಕಳು ರಕ್ತಕಾರಿಕೊಂಡು ಸಾಯುತ್ತಾರೆಂಬ ಮೂಢನಂಬಿಕೆ ಇದನ್ನು ಮುಂದುವರೆಸಿಕೊಂಡು ಹೋಗುವಂತೆ ಮಾಡಿರುವ ಪ್ರಮುಖ ಕಾರಣವಾಗಿದೆ. ದಲಿತರು ಈ ರೀತಿ ಭಯಪಡುವಂತೆ ಪೂಜಾರಿಗಳು ಮತ್ತು ಮೇಲ್ವರ್ಗದರು ಅವರಲ್ಲಿ ಮೌಢ್ಯವನ್ನು ತುಂಬಿದ್ದಾರೆ. ಇದರಿಂದ ಹೊರಬರಲು ದಲಿತರು ಶಿಕ್ಷಣ ಪಡೆಯುವ ಅಗತ್ಯವಿದೆ. ಇಷ್ಟೆಲ್ಲಾ ಪ್ರಯತ್ನಗಳ ನಡುವೆ ಈ ಪದ್ಧತಿ ಜೀವಂತವಾಗಿ ನಡೆದುಕೊಂಡು ಬರುತ್ತಿರುವುದಕ್ಕೆ ಉದಾಹರಣೆ ಗೀತಾ ನಾಗಭೂಷಣರ 'ಬದುಕು' ಕಾದಂಬರಿಯಾಗಿದೆ. ಇಲ್ಲಿ 'ದೇವದಾಸಿ ಪದ್ಧತಿ'ಯನ್ನು ಕುರಿತ ಸಾಮಾಜಿಕ ವಾಸ್ತವಕ್ಕೆ ಕಲಾತ್ಮಕ ರೂಪಕೊಟ್ಟಿದ್ದಾರೆ.

ಜಂಬಗಿ ಹಳ್ಳಿಯ ಮಾದರ ಕಳಸಪ್ಪನ ಮಗಳು ತುಳಜಾಳನ್ನು ಚುಂಚೂರು ತಾಯಿಗೆ ಜೋಗಣಿ ಬಿಡುತ್ತಾರೆ. ಆದರೆ ದಂಥೆ ಆಕೆಗೆ ಇಷ್ಟವಿರುವುದಿಲ್ಲ. ಈ ಸಂದರ್ಭದಲ್ಲಿ ಮುದಿ ಜೋಗಣಿ ನಿಂಬೆವ್ವಾಯಿಯ ಮಾತುಗಳು ಇಡೀ 'ದೇವದಾಸಿ' ಅಥವಾ 'ಜೋಗಣಿ'ಯರನ್ನು ಮಾಡುವ ವ್ಯವಸ್ಥೆಯನ್ನೇ ಆಕೆ ಪ್ರಶ್ನೆ ಮಾಡುತ್ತಾಳೆ. ತುಳಜಾನ ತಂದೆತಾಯಿ ಆಕೆಯನ್ನು ಜೋಗಣಿ ಬಿಡುವಾಗ ನಿಂಬೆವ್ವ ಹೊಲದಲ್ಲಿಯ ಬೇವಿನಮರದ ಕೆಳಗೆ ಯಾರಿಲ್ಲದ ಜಾಗದಲ್ಲಿ ಕೂತು ತುಳಜಾಗೆ ಈ ರೀತಿ ಹೇಳುತ್ತಿದ್ದಳು. "ನೀ ನಿಮ್ಮಪ್ಪನ ಮಾತಿಗಿ ಮಣಿದು ಜೋಗಣಿ ಆಗಬ್ಯಾಡಗ ಪೋರಿ..ಇಸಾ ತಗೊಂಡು ಸಾಯಾದು ಬೇಕು. ಆದರ ಈ ಜೋಗಣಿ ಆಗಾದು ಬ್ಯಾಡವ್ವೋ..' ಅಂತ ಕಣ್ಣೀರು ಮಿಡಿದಿದ್ದಳು. 'ಯಾಕೆ ಆಯೀ..ನೀನೂ ಜೋಗಣಿ ಆಗಿ ದೇವಿ ಸೇವಾಕ್ಕ ನಿಂತಕ್ಕಿ..ನಿನ್ ಬಾಯಿಲಿಂದ ಹಿಂತಾ ಮಾತೇನೇ ಆಯೀ..ಆ ದೇವತಿ ಅಂದ್ರ ಭೆಂಕಿಯಂತಕಿ ಅಂತ. ಬೇಡ್ಕೊಂಡ ಹರಕಿ ತೀರಸಲಿಲ್ಲಂದ್ರ ಅಕಿ ರಕ್ತಾ ಕಾರ್ಸಿಕೊಲ್ಲತಾಳಂತ. ಮನಿ ಮಂದಿ ಮೈಯಾಗೆಲ್ಲಾ ದೊಡ್ಡ ಬ್ಯಾನಿ ಬರ್ಸಿ, ಗಂಡಸರ ಗಂಡಸ್ತನಾನೇ ಕಳೀತಾಳಂತ. ಮನ್ಯಾಗ ರಗತದ ಹೋಳಿನೇ ಹರಸ್ತಾಳಂತ ಕತಿ ಮಾಡಿ ಹೇಳ್ತಾರಲ್ಲವ್ವ..ಆಕಿಗಿ ಜೋಗಣಿ ಅಂತ ಬೈದಿದ್ದ ಆ ಉಳ್ಳಾಗಡ್ಡಿ ಸಾವ್ಕಾರನ ಕುಂಡೀಗಿ ಬೆಂಕಿ ಹಚ್ಚಿ ಅವನ ಗಂಡಸ್ತನಕ್ಕೆ ಬೂದಿ ಬಳ್ದು ಅಂವಗ ಸೀರಿ ಉಡಿಸಿದ್ದಳಂತ. ಅಂವಾ ಖೊಜ್ಜಾ ಅಗಿ ತೆಲಿಮ್ಯಾಲ ಪರಡಿ ಹೊತ್ತು ಜೋಗಾ ಬೇಡ್ಕೋತ ಮನಿ ಮನಿ ತಿರಗ್ತಿದ್ದನಂತಲ್ಲೇ ಆಯೀ.." (ಗೀತಾ ನಾಗಭೂಷಣ: 'ಬದುಕು', ೨೦೬) ಎಂದು ತುಳಜಾ ಪ್ರಶ್ನಿಸಿದಾಗ ಸ್ವತಃ ಜೋಗಣಿಯಾಗಿ ನೋವುಗಳನ್ನು ಅನುಭವಿಸಿದ ನಿಂಬೆವ್ವ ಜೋಗಣಿ ದಂಥೆಯ ಹುಳುಕು, ಹುನ್ನಾರಗಳನ್ನೇ ತುಳಜಾಳ ಎದುರು ಬಿಚ್ಚಿಡುತ್ತಾಳೆ.

ಗೀತಾ ನಾಗಭೂಷಣ ಅವರು 'ಬದುಕು' ಕಾದಂಬರಿಯಲ್ಲಿ 'ಜೋಗಣಿ' ವ್ಯವಸ್ಥೆಯನ್ನು ಪ್ರಸ್ತಾಪ ಮಾಡಿ ಬಿಟ್ಟಿಲ್ಲ. ಬದಲಿಗೆ ಇಡೀ ಜೋಗಣಿ ವ್ಯವಸ್ಥೆಯ ಬೇರುಗಳನ್ನೇ ಕಾದಂಬರಿಯಲ್ಲಿನ ಪಾತ್ರಗಳ ಮೂಲಕ ಅಲುಗಾಡಿಸಿದ್ದಾರೆ. ಈ ರೀತಿ ಅನಿಷ್ಟ ಪದ್ಧತಿಯನ್ನು ಪ್ರಶ್ನಿಸುವ ಪ್ರಗತಿಪರರಾಗಿ ಇಲ್ಲಿನ ನಿಂಬೆವ್ವ, ತುಳಜಾ, ನೀಲವ್ವ ಮುಂತಾದವರು ಕಂಡು ಬರುತ್ತಾರೆ. ವ್ಯವಸ್ಥೆಗೆ ಬಲಿಯಾದವರ ಕೈಯಲ್ಲೇ ವ್ಯವಸ್ಥೆಯ ಕರಾಳಮುಖವನ್ನು ಪ್ರಶ್ನಿಸುವಂತೆ ಮಾಡಿರುವುದು ವಿಶೇಷವಾಗಿದೆ.

ತುಳಜಾ 'ಜೋಗಣಿ' ಆಗಲಿಕ್ಕೆ ನಿರಾಕರಿಸಿದವರಿಗೆ ಅಥವಾ ಆಕೆಗೆ ಹಗುರವಾಗಿ ಮಾತಾಡಿದವರಿಗೆ ಶಿಕ್ಷೆ ಕೊಟ್ಟಿರುವುದನ್ನು ಕುರಿತು ನಿಂಬೆವ್ವನಲ್ಲಿ ಪ್ರಶ್ನಿಸಿದಾಗ ಆಕೆ ಹೇಳುವ ಮಾತುಗಳು ನಿಜಕ್ಕೂ ಬೆರಗು ಮೂಡಿಸುತ್ತವೆ. 'ಜೋಗಣಿ' ಆಗಲಿಕ್ಕೆ ನಿರಾಕರಿಸಿದವರಿಗೆ ದೇವಿ ಶಿಕ್ಷೆ ಕೊಡುವುದನ್ನೇ ನಿಂಬೆವ್ವ ನಿರಾಕರಿಸುತ್ತಾಳೆ. ಏಕೆಂದರೆ 'ದೇವಿ' ಕೂಡ ಒಂದು ಹೆಣ್ಣೇ. ಒಂದು ಹೆಣ್ಣಾದ ದೇವಿಯು ಮತ್ತೊಬ್ಬ ಹೆಣ್ಣುಮಗಳಿಗೆ ಕಷ್ಟಕೊಡಲಾರಳು. ನನ್ನ ಹೆಸರಿನ ಮೇಲೆ ಹಾದರ, ಸೂಳೇಗಾರಿಕೆ ಮಾಡ್ರಿ ಅಂತ ಯಾವ ಹೆಣ್ಣು ದೇವತೆಯೂ ಹೇಳುವುದಿಲ್ಲ. ಬದಲಿಗೆ ಎಲ್ಲಾ ದೇವತೆಗಳೂ ಮದುವೆ ಮಾಡಿಕೊಂಡು ಒಬ್ಬನ ಗಂಡನ ಹೆಂಡತಿಯಾಗಿ ಗರತಿಯರಾಗಿ ಬಾಳುವೆ ಮಾಡ್ರಿ ಅಂತಾನೆ ಹೇಳೋದು. ಒಂದು ವೇಳೆ ದೇವತೆಗಳು 'ಜೋಗಣಿ'ಯರಾಗಲು ಹೇಳಿದರೂ 'ಕೆಳಜಾತಿ'ಯ ಹೆಣ್ಣುಮಕ್ಕಳನ್ನೇ ಜೋಗಣಿಯರಾಗಲಿ ಅಂತ ಹೇಳೋದಿಲ್ಲವೆಂದು ನಿಂಬೆವ್ವಾಯಿ ತುಳಜಾಳಿಗೆ ಹೇಳುತ್ತಾಳೆ. 'ಮೇಲಿನ ಜಾತಿ'ಗೆ ಸೇರಿದ, ಶ್ರೀಮಂತ ಮನೆತನದ ಹೆಣ್ಣುಮಕ್ಕಳು ಯಾರಾದರೂ ಇಂಥಾ ಕೆಲಸ ಮಾಡಿರೋದನ್ನು ನೀನು ನೋಡಿದೆಯಾ ಎಲ್ಲಾದರೂ ಅಂತಾನೆ ನಿಂಬೆವ್ವಾಯಿ ಪ್ರಶ್ನಿಸುತ್ತಾಳೆ. ಈಗ ಮಾತ್ರ ಅಲ್ಲ ಹಿಂದೆ ಕೂಡ ಮೇಲ್ಜಾತಿಯ ಹೆಣ್ಣುಮಕ್ಕಳು ಯಾರಾದರೂ ಈ ಅನಿಷ್ಟ ಪದ್ಧತಿಯಿಂದ ಮೈಮಾರಿಕೊಂಡು ಬದುಕಿದ್ದನ್ನು ನೀನು ಎಲ್ಲಾದರೂ ಕೇಳಿದಿಯಾ ಎನ್ನುವ ಮಾತುಗಳು ಸತ್ಯವನ್ನು ಅನಾವರಣ ಮಾಡಿಸುತ್ತವೆ. ಒಂದೇ ಒಂದು ಮೇಲ್ಜಾತಿಯ ಹೆಣ್ಣುಮಗಳೂ 'ಜೋಗಣಿ' ಆದ ಉದಾಹರಣೆಯಿಲ್ಲ ಎನ್ನುವ ಮಾತುಗಳು ಕೇವಲ ತುಳಜಾಳನ್ನು ಪ್ರಶ್ನಿಸುವಂತೆ ಕಾಣುವ ಬದಲು ಇಡೀ ಸಮಾಜವನ್ನೇ ಪ್ರಶ್ನೆ ಮಾಡುವಂತೆ ಕಂಡುಬರುತ್ತವೆ.

ದೇವರು 'ಮೇಲಿನ ಜಾತಿ' ಹೆಣ್ಣುಮಕ್ಕಳಿಗೆ ಮದುವೆ ಮಾಡಿಕೊಂಡು ಗರತಿಯರಾಗಿ ಬಾಳಿರಿ, ಕೆಳಜಾತಿಯ ಹೆಣ್ಣುಮಕ್ಕಳಿಗೆ 'ಜೋಗಣಿ'ಯರಾಗಿ ಸೂಳೇಗಾರಿಕೆ ಮಾಡ್ರಿ' ಅಂತ ಹೇಳ್ತಾರಾ? ಎಂದು ತುಳಜಾಳನ್ನು ಪ್ರಶ್ನಿಸುವುದು ಆಶ್ಚರ್ಯವುಂಟು ಮಾಡುತ್ತದೆ. ಅಲ್ಲದೇ ದೇವರ ಅಸ್ತಿತ್ವವನ್ನೇ ಆಕೆ ಕೆದಕುವಂತೆ ಕಂಡು ಬರುತ್ತಾಳೆ. ದೇವರು ಬರಿಯ ಕಟ್ಟಿಗೆಯ

ಗೊಂಬೆಯಷ್ಟೇ. ದೇವರಿಗೇನಾದರೂ ಮಾತನಾಡಲು ಸಾಧ್ಯವಿದ್ದಿದ್ದರೆ ಕೆಟ್ಟ ಗಂಡಸರ ಕುಂಡಿಗೆ ಒದ್ದು ಇವೆಲ್ಲಾ ನಾನಾಡ್ತಿರೋ ಮಾತುಗಳಲ್ಲ, ನನ್ನ ಹೆಸರನ್ನು ಹೇಳಿಕೊಂಡು ನೀವೇ ಸೃಷ್ಟಿಸಿಕೊಂಡ ಸುಳ್ಳುಗಳು ಅಂತ ಕೇಳ್ತಿದ್ದಳು. ನನ್ನ ಹೆಸರನ್ನು ಯಾಕೆ ಹಾಳುಮಾಡುತ್ತಿದ್ದೀರಿ ಅಂತ ಸರಿಯಾಗಿ ಉಗೀತಿದ್ಲು ಆದರೆ ದೇವರಿಗೆ ಮಾತುಗಳು ಬರಂಗಿಲ್ಲ. ಆಕೆ ಮೂಕಿ. ಆಕೆ ಯಾವತ್ತೂ ಇವನ್ನೆಲ್ಲಾ ಒಪ್ಪೋದಿಲ್ಲ. ಇವನ್ನೆಲ್ಲಾ ದೇವರ ಹೆಸರನ್ನು ಅಡ್ಡ ಇಟ್ಟುಕೊಂಡು ಕುಲಕರ್ಣಿಗಳು, ಗೌಡರು, ಪಟೇಲರು ಮಾಡಿಕೊಂಡಿರುವ ಸ್ವಾರ್ಥದ ಕೆಲಸಗಳು ಎಂದು ಹೇಳುತ್ತಾಳೆ. ಅಲ್ಲದೇ ತಾನು ಇದೇ ದಂಧೆ ಮಾಡುತ್ತಲೇ ಮುದುಕಿಯಾದವಳು, ಇದರ ಎಲ್ಲಾ ಹುಳುಕುಗಳು ನನಗೆ ಗೊತ್ತಿರೋದರಿಂದ ನೀನು 'ಜೋಗಣಿ' ಆಗುವುದು ಬೇಡ' ಎಂದು ಬುದ್ಧಿ ಹೇಳುತ್ತಾಳೆ.

ನಿಂಬೆವ್ವನ ಮಾತುಗಳಿಂದ ಎಷ್ಟೇ ಪ್ರೇರಿತಳಾಗಿ ಈ ದಂಧೆ ಬೇಡವೆಂದರೂ ತುಳಜಾಳ ತಂದೆ-ತಾಯಿ ಇದಕ್ಕೆ ಒಪ್ಪುವುದಿಲ್ಲ. "ಯಪ್ಪಾ.. ನಾ ಜೋಗಣಿ ಆಗಂಗಿಲ್ಲಪ್ಪ. ಯಾರ ಜೋಡಿಯರೆ ನನಗ ಮದ್ವಿ ಮಾಡಿ ಕುಡು. ನಾ ಒಬ್ಬ ಗಂಡನ ಹೆಣ್ತ್ಯಾಗಿ ಗರತ್ಯಾಗಿ ಸಂಸಾರ ಮಾಡ್ತೀನಿ. ಆದರ ಆ ದೇವರ ಹೆಸರಿನ ಮ್ಯಾಲ ಊರಸೂಳಿ ಮಾತ್ರ ಎಂದೂ ಆಗಂಗಿಲ್ಲೋ ಯಪ್ಪಾ.." (ಗೀತಾ ನಾಗಭೂಷಣ: 'ಬದುಕು', ೨೦೭) ಮಗಳ ಮಾತುಗಳಿಂದ ಪರಪ್ಪನಿಗೆ ಏನೂ ತೋಚದಂತಾದರೂ, ಅವರಿಗೆ ಇಷ್ಟವಿಲ್ಲದಿದ್ದರೂ ದೇವಿಯ ಮೇಲಿನ ಭಯ ಮತ್ತು ಕುಲಸ್ತರ ರೀತಿ-ರಿವಾಜುಗಳ ಬಂಧನದಿಂದ ಒತ್ತಾಯದಿಂದಲೇ ಅವಳನ್ನು ಜೋಗಣಿ ಮಾಡಿಯೇ ಬಿಡುತ್ತಾರೆ. ಪರಿಸ್ಥಿತಿಯ ಕೈಗೊಂಬೆಯಾದ ತುಳಜಾ ಇದನ್ನು ಮೀರಿ ಬೇರೆ ಏನನ್ನೂ ಮಾಡಲು ಸಾಧ್ಯವಿರಲಿಲ್ಲ. ಕಡೆಗೆ ಅವಳ ಅಸಹಾಯಕತೆ ಮಾತ್ರ ಉಳಿಯಿತು. ತುಳಜಾ ತನಗೆ ಇಷ್ಟವಿಲ್ಲದಿದ್ದರೂ ಆರೆಂಟು ತಿಂಗಳು ಇದೇ ದಂಧೆಯನ್ನು ಮಾಡಬೇಕಾಗುತ್ತದೆ. ಒಮ್ಮೆ ತುಳಜಾ ತಲೆ ಮೇಲೆ ಪರಡಿ ಹೊತ್ತು ದೇವರ ಮಹಿಮೆಯ ಹಾಡನ್ನು ಹಾಡುತ್ತಾ ಸಂತೆಯಲ್ಲಿ ಕುಣಿಯುತ್ತಾ ಭಿಕ್ಷೆ ಬೇಡುತ್ತಿದ್ದಾಗ ಬಂಬಾಯಿಯ ಹುಸೇನಪ್ಪ ಇವಳ ಚೆಲುವಿಕೆಗೆ ಮಾರು ಹೋಗಿ ಅವಳನ್ನು ಬದಲಾಯಿಸಿ ಮದುವೆ ಮಾಡಿಕೊಂಡು ತಾನಿರುವಲ್ಲಿಗೆ ಕರೆದು ಕೊಂಡು ಹೋಗುತ್ತಾನೆ. ಆಕೆಗೆ ಒಂದು ಮಗುವಾದ ಮೇಲೆ ಬಂಬಾಯಿಯಿಂದ ತನ್ನ ತಂದೆ ತಾಯಿಗಳನ್ನು ನೋಡಿಕೊಂಡು ಹೋಗಲಿಕ್ಕೆ ಗಂಡ ಮತ್ತು ಮಗುವಿನೊಂದಿಗೆ ಊರಿಗೆ ಬರುತ್ತಾಳೆ.

ಈಕೆ ಗರತಿಯಾಗಿ ಜಂಬಗಿಗೆ ಬಂದ ಸುದ್ದಿ ಎಲ್ಲಾ ಕಡೆ ಹಬ್ಬಿ ಹೊಲಗೇರಿ ಮಾದರಕೇರಿಯ ಜನವೆಲ್ಲಾ ದಂಗಾಗುತ್ತಾರೆ. ಚುಂಚೂರು ಮಾಪುರ ತಾಯಿಯ ಗುಡಿ

ಪೂಜಾರಿಗೂ ಈ ವಿಚಾರ ತಿಳಿದು ಎಲ್ಲರಿಗೂ ಸುದ್ದಿ ಮುಟ್ಟಿಸಿ ಪಂಚಾಯತಿಗೂ ಸೇರಿಸುತ್ತಾನೆ. ಈತ ಹೊಲೆಯನಾಗಿರುವುದು ವಿಶೇಷ. ಸಾಮಾನ್ಯವಾಗಿ ಗೌಡ, ಕುಲಕರ್ಣಿಗಳು ತಮಗೆ ಬೇಕಾದಂತೆ ನಡೆದುಕೊಳ್ಳಲು ದಲಿತರಲ್ಲೇ ಒಬ್ಬ ಪೂಜಾರಿಯನ್ನು ನೇಮಿಸಿಕೊಂಡು ಅವನನ್ನು ತಾವು ಹೇಳಿದಂತೆ ಕೇಳುವ 'ಚೇಲಾ' ಮಾಡಿಕೊಂಡಿರುತ್ತಾರೆ. ಆದ್ದರಿಂದ ತುಳಜಾ ಊರಿಗೆ ಬಂದ ವಿಚಾರವನ್ನು ಪೂಜಾರಪ್ಪನೇ ಊರಿನ ಗೌಡ ಚಂಬಸಪ್ಪನಿಗೆ ಮುಟ್ಟಿಸುತ್ತಾನೆ. ಚಂಬಸಪ್ಪ ಪೂಜಾರಿಗೆ ಎತ್ತಿಕಟ್ಟಿ ಕೋಪಬರಿಸಿ ಪಂಚಾಯತಿಗೆ ಸೇರಿಸುವಂತೆ ಮಾಡುತ್ತಾನೆ. ಪಂಚಾಯತಿಯಲ್ಲಿ ನಡೆಯುವ ಮಾತುಕತೆಯಿಂದ ವ್ಯವಸ್ಥೆಯ ಹುಳುಕುಗಳು ಹೊರಬರುತ್ತವೆ. ತುಳಜಾ ತಾನು ಒಬ್ಬ ಗಂಡನನ್ನು ಮದುವೆ ಆಗಿ, ಮಗುವನ್ನು ಹಡೆದದ್ದು ಸತ್ಯ ಮತ್ತು ತನ್ನ ತಂದೆ–ತಾಯಿಯನ್ನು ನೋಡಿಕೊಂಡು ಹೋಗಲಿಕ್ಕೆ ಬಂದಿರುವುದರಲ್ಲಿ ತಪ್ಪೇನಿದೆ ಎಂದು ಪೂಜಾರಪ್ಪನಿಗೆ ಕೇಳುತ್ತಾಳೆ. ಆಗ ಪೂಜಾರಪ್ಪ ನೀನು ಧರ್ಮಕ್ಕೆ ವಿರುದ್ಧವಾಗಿ ನಡೆದಿದ್ದೀಯೆ ನಿನ್ನ ಹಾಗೆ ಹೊಲಗೇರಿಯ ಯಾವ ಹೆಣ್ಣುಮಕ್ಕಳು ಧರ್ಮ ಮೀರಿ ನಡೆದಿಲ್ಲ ಎನ್ನುತ್ತಾನೆ.

ಈ ಮಾತಿಗೆ ಪ್ರತಿಯಾಗಿ ಪೂಜಾರಪ್ಪ 'ಜೋಗಣಿ'ಯಂಥಾ ಪವಿತ್ರ ಕೆಲಸ ಬಿಟ್ಟು ಆಗ್ತಿಯೇನೇ ತುಳಜಿ? ಜೋಗಣಿ ಆಟ ಬಿಟ್ಟು ಗರತಿ ಆಟ ಆಡ್ತ್ಯಾ ಸೂಳಿ? ಎಂದಾಗ ತುಳಜಾಳ ಸ್ವಾಭಿಮಾನ ಕೆರಳಿ ಆಕೆ "ನೋಡು ಪೂಜಾರಪ್ಪ ಮುತ್ತ್ಯಾ..ನಿಂದು ಮತ್ತ ನೀ ಮಾಡಾ ಜೋಗಣೀರ ಧರ್ಮಾಕರ್ಮಾ ಯಾವಾದೂ ನನಗ ತಿಳೆಂಗಿಲ್ಲೆಪ್ಪ..ಬ್ಯಾಡ ಬ್ಯಾಡಂತ ಕೈ ಜೋಡ್ಸಿ ಕಾಲಿಗಿ ಬಿದ್ದಿದ್ದ ನಾನು. ನಿನ್ನ ಮುಂದ ನೆಲಕ್ಕ ಬಿದ್ದು ಬ್ಯಾಡೋ ಮುತ್ತ್ಯಾ ಅಂತ ಹೊಳ್ಳಾಡದರನೂ ನನಗ ಜಬರದಸ್ತಿಲಿಂದ ಎಳ್ಕೊಂಡೊಯ್ದು ಜೋಗಣಿ ಮಾಡಿ ಹಲ್ಕಟ್ ದಂಧೆಗೆ ಹಾಕ್ದಂವಾ ನೀನೇ. ಗುಡ್ಯಾಗಿನ ಆ ದೇವತಿ ಏನು ಹೇಳ್ತಾದೋ ಬಿಡ್ತಾದೋ, ಆದರ ನೀ ಮಾತರ ಅಕಿ ಹೇಳಕಿ ಮಾಡ್ತಿ ನೋಡು. ನಿನ್ನ ಮೈಯಾಗ ಆ ದೇವಿ ಬರ್ತಾಳೋ ಇಲ್ಲೋ ಅಕಿ ಏನು ಹೇಳ್ತಾಳೋ ನೀ ಏನು ಹೇಳ್ತೋ ಒಂದು ನಮಗೆ ಗೊತ್ತಾಗಂಗಿಲ್ಲ. ಗುಡಿ ಕಾರಬಾರೆಲ್ಲಾ ನಿನ್ನೊಬ್ಬನ ಕೈಯಾಗೇ ಅದಾ ಅಲ್ಲ. ಕೋಳಿ ಕುರೀಗಿ ತಂದು ದೇವರ ಮುಂದ ಬಲಿ ಕೊಟ್ಟಂಗ ನಮ್ಮಂತಾ ಹಸಿಬಿಸಿ ಹರ್‍ಯಾದ ಪೋರಿಗೋಳ ಶೀಲಕ್ಕನೂ ಬಲಿಕುಡ್ತಿ. ಆ ಕುರಿಕೋಳಿ ಗೋಳೇನೋ ನೀವು ಹಾಕೊ ಕೊಡಲಿಯೇಟಿಗಿ ಒಂದೇ ಸರ್ತಿ ಕುತಗಿ ಕತ್ತರಸ್ಕೊಂಡು ಸತ್ತು ಬೀಳ್ತಾವ ! ಆದರ ನಮ್ಮ ಬಾಳ್ಯಾ ಹಾಂಗಲ್ಲ. ನಮಗ ಈ ಹಲ್ಕಟ್ ಧಂಧಾಕ್ಕೆ ಹಚ್ಚಿ ದಿನಾ ಈಟೀಟು ನೆಳ್ಳೀ ನೆಳ್ಳೀ ಸಾಯಂಗ ಮಾಡಿ ಚಿತ್ತರಹಿಂಸಿ ಕುಡ್ತೀರಿ. ಒಮ್ಮೇ ನಮ್ದೂ ಕುತಗಿ ಕತ್ತರಿಸಿಬಿಟ್ಟರ ಒಂದ ರೀತಿಲಿಂದ ಛಲೋ ಆಗ್ತದ..ಮುತ್ತ್ಯಾ..ಖರೆ ಹೇಳು ನೀನು..ಆ ಮಾಪುರತಾಯಿ ನಿನ್ನ ಮೈಯಾಗ ಬಂದು ನಮ್ಮ ಕೇರ್‍ಯಾಗಿನ ಹರೇದ; ಚೆಲುವಿನ

ಪೋರಿಗೋಳಿಗಿ ಸೂಳೇರು ಆಗಲಿ ಅಂತ ಹೇಳ್ತಾಳೇನು? ನೀ ಖರೇ ಅಕೀನ ಭಕ್ತ ಇದ್ದೆಂದ್ರ ಆ ದೇವಿಮ್ಯಾಲ ಆಣಿ ಮಾಡಿ ಹೇಳು ನೀನೂ.." (ಗೀತಾ ನಾಗಭೂಷಣ: 'ಬದುಕು', ೨೨೦, ೨೨೧) ಅಂದಳು.

ಜೋಗಣಿ ಪದ್ಧತಿಗೆ ಬಲಿಯಾಗಿರುವ ತುಳಜಾಳ ಮೂಲಕವೇ ಇಡೀ ವ್ಯವಸ್ಥೆಯನ್ನೇ ಪ್ರಶ್ನೆ ಮಾಡಿಸುತ್ತಾರೆ ಗೀತಾ ನಾಗಭೂಷಣರು. ಇಲ್ಲಿ ಬರುವ ಪೂಜಾರಿಗಳು ದೇವರನ್ನು ಅಡ್ಡ ಇಟ್ಟುಕೊಂಡು 'ಮೇಲ್ವರ್ಗ'ದವರ ತಾಳಕ್ಕೆ ತಕ್ಕಂತೆ ದಲಿತ ಹೆಣ್ಣುಮಕ್ಕಳನ್ನು ಕುಣಿಸುತ್ತಾರೆ. ಇದೊಂದು ದೇವರ ಮುಖವಾಡದಲ್ಲಿ ನಡೆಯುವ ಸೂಳೇಗಾರಿಕೆಯಾಗಿದೆ. ದಲಿತ ಹೆಣ್ಣು ಮಕ್ಕಳ ಬಾಳು ಪ್ರಾಣಿಗಳಿಗಿಂತ ಕಡೆಯಾಗಿದೆ. ಕೆಟ್ಟ ವ್ಯವಸ್ಥೆಗೆ ಬಲಿಯಾದವರಿಂದಲೇ ವ್ಯವಸ್ಥೆಯನ್ನು ಪ್ರಶ್ನೆ ಮಾಡಿಸುವ ತಂತ್ರಗಾರಿಕೆ ವಿಶೇಷವಾದದ್ದು.

ಈ ಕ್ರೂರ ಕೆಲಸಕ್ಕೆ ನೂಕಿ ದಿನವೂ ಸ್ವಲ್ಪ ಸ್ವಲ್ಪವೇ ನರಳಿ ಸಾಯುವ ಹಾಗೆ ಮಾಡುವ ಬದಲು ಒಂದೇ ದಿನ ಕುತ್ತಿಗೆ ಕತ್ತರಿಸಿ ಸಾಯಿಸಿಬಿಟ್ಟರೆ ನೆಮ್ಮದಿಯಾಗಿ ಬದುಕಬಹುದು ಎನ್ನುವ ಮಾತುಗಳಲ್ಲಿ ಈ ವ್ಯವಸ್ಥೆ 'ಕೆಳಜಾತಿ' ಹೆಣ್ಣುಮಕ್ಕಳಲ್ಲಿ ಹುಟ್ಟಿಸಿರುವ ನೋವು, ಅಸಹನೆ, ಸಿಟ್ಟು, ಆಕ್ರೋಶವನ್ನು ಗುರುತಿಸಬಹುದು. ಇಂಥ ಹೀನ ಕೆಲಸಗಳನ್ನು ಮಾಡಿಸುವ ಪೂಜಾರಪ್ಪನು ಕೂಡಾ 'ಕೆಳಜಾತಿ'ಯವನೇ ಆಗಿರುವುದು ವಿಶೇಷವಾಗಿದೆ. 'ಮೇಲ್ವರ್ಗದವರು' ಹಣದ ಆಮಿಷವನ್ನು ಒಡ್ಡಿ ದಲಿತ ಪೂಜಾರಿಗಳನ್ನು ಛೇಲಾಗಳನ್ನಾಗಿ ಮಾಡಿಕೊಂಡಿರುವುದು ದುರಂತ. ದೇವರು ಮೈಮೇಲೆ ಬಂದ ಹಾಗೆ ನಾಟಕ ಮಾಡಿಸಿ ತಮ್ಮ ಮನಸ್ಸಿನ ಬಯಕೆಗಳನ್ನು ದೇವರ ಬಯಕೆಗಳು ಎಂಬಂಥೆ ಪೂಜಾರಪ್ಪನ ಮುಖಾಂತರ ಹೇಳಿಸಿ ತಮ್ಮ ತೆವಲನ್ನು ತೀರಿಸಿಕೊಳ್ಳುವುದು ಸಾಮಾನ್ಯವೆನಿಸಿದೆ. ಇಂಥ ಹೀನ ವ್ಯವಸ್ಥೆಯನ್ನು ಪ್ರಶ್ನೆ ಮಾಡಿದವರನ್ನು ಪೂಜಾರಪ್ಪಗಳು ದೇವರು ಮೈ ಮೇಲೆ ಬಂದು ಹೇಳಿದಂತೆ ನಟಿಸಿ ಊರಿಂದ ಬಹಿಷ್ಕಾರ ಹಾಕುವುದು, ಮನೆಗಳಿಗೆ ಬೆಂಕಿ ಹಾಕಿ ಸುಡುವುದು, ಇಲ್ಲವೇ ದಲಿತ ಹೆಣ್ಣುಮಕ್ಕಳು ಕಟ್ಟಲಾಗದಷ್ಟು ದಂಡ ಹಾಕುವುದು ಮಾಡುತ್ತಾರೆ. ಇಂಥ ಒತ್ತಡವನ್ನು ಒಡ್ಡುವುದರ ಮುಖಾಂತರ ಹೆಣ್ಣು ಮಕ್ಕಳು ಅಸಹಾಯಕರಾಗಿ ತಾವಾಗೇ ಇಂಥ ಹೀನಪದ್ಧತಿಗೆ ಒಪ್ಪಿಕೊಳ್ಳುವಂಥ ಸಂದಿಗ್ಧ ಪರಿಸ್ಥಿತಿ ನಿರ್ಮಾಣ ಮಾಡುತ್ತಾರೆ.

ತುಳಜಾ, ತನ್ನ ಒಪ್ಪಿಗೆಗೆ ವಿರುದ್ಧವಾಗಿ ಜೋಗಣಿ ಮಾಡಿದ್ದು ಪೂಜಾರಪ್ಪನದೇ ತಪ್ಪು ಎಂದು, ದೇವತೆ ಮೈ ಮೇಲೆ ಬಂದು ಹೇಳಿದಂಗೆ ನೀವು ನಟಿಸಿ ಕುರಿ ಕೋಳೀನ ದೇವರಿಗೆ ಹರಕೆ ಬಿಟ್ಟಂಗೆ ಯೌವ್ವನದಲ್ಲಿರುವ ಹೆಣ್ಣು ಮಕ್ಕಳನ್ನು ಬಲಿಕೊಡ್ತೀರಿ ಎಂದು ಆ ಕೋಳಿ, ಕುರಿಯಾದರೆ ಒಂದೇ ಸಲಕ್ಕೆ ಪ್ರಾಣ ಬಿಡ್ತವೆ ಆದರೆ ದಲಿತ ಹೆಣ್ಣುಮಕ್ಕಳು ಜೀವನ ಪೂರ್ತಿ

ನರಳಿ ನರಳಿ ಸಾಯೋ ಹಾಗೆ ಮಾಡ್ತೀರಿ, ನಿಜವಾಗಲೂ ಆ ದೇವಿ ಇಂತ ಕೆಲಸ ಮಾಡಿಸಲಿಕ್ಕೆ ನಿಮಗೆ ಹೇಳ್ತಾಳಾ? ಪ್ರಮಾಣ ಮಾಡು ಅಂದಾಗ ಪೂಜಾರಪ್ಪನಿಂದ ಹಿಡಿದು ಪಂಚರೆಲ್ಲಾ ಚಡಪಡಿಸುತ್ತಾರೆ, ಪೂಜಾರಪ್ಪನ ಐವತ್ತಾರು ವರ್ಷಗಳ ಸರ್ವೀಸಲ್ಲಿ ಯಾರೂ ಅವನನ್ನು ಹೀಗೆ ಪ್ರಶ್ನೆ ಮಾಡಿರುವುದಿಲ್ಲ. ಯಾರೂ ಹೀಗೆ ಮದುವೆಯಾಗಿ ಸವಾಲೊಡ್ಡಿರಲಿಲ್ಲ. ಇದನ್ನು ಸಹಿಸಲಾಗದೆ ಪೂಜಾರಿ ಆರ್ಭಟಿಸುತ್ತಾನೆ. ಈ ರೀತಿ ಆರ್ಭಟಿಸದಿದ್ದರೆ ಅವನಿಗೆ ಅವನ ದಂಧೆಗೆ ಉಳಿಗಾಲವಿರುವುದಿಲ್ಲ.

ತುಳಜಾ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಿದ್ದು ಅಲ್ಲಿ ನೆರೆದವರಿಗೆಲ್ಲ ನುಂಗಲಾರದ ತುತ್ತಾಯಿತು. ಪೂಜಾರಪ್ಪನಿಗಂತೂ ನೆಲವೇ ಕುಸಿದು ಬಿದ್ದಂಗಾಗುತ್ತದೆ. ಅವನು ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಏನಾದರೂ ಮಾಡಲೇಬೇಕಿತ್ತು. ಆದ್ದರಿಂದ ದೇವರನ್ನು ಅಡ್ಡ ಇಟ್ಟುಕೊಂಡು ಬೆದರಿಸಲಿಕ್ಕೆ ಆರಂಭಿಸುತ್ತಾನೆ. "ಏನಲೆ ಛಿನಾಲೀ..ನನಗೇ ಸವಾಲ್ ಹಾಕ್ತಿಯೇನೇ ಜೋಗಣಿ? ನೀ ಏನಿದ್ದಿ? ನಿನ್ನ ಅವಕಾತೇನದಾ? ನಿನ್ನ ಹೈಸೆತ್ತೇನು? ಜುಜುಬಿ ಒಂದು ಸೂಳೀ ಹಿಂತಾ ಮಾತಾಡಾ ಹಿಮಾಕತ್ ಮಾಡ್ತ್ಯಾ ಭೋಸಡಿ? ನನಗೆ..ನನಗ ಆ ಮಾಪುರೆವ್ವನ ಆಣಿ ಮಾಡಂತಿಯೇನ್ಲೇ ರಂಡೀ.. ನಾ ಯಾರಂತ ತಿಳ್ಕೊಂಡಿದ್ದಿ? ಇರು, ಇರುವಿಗಿ ಹೊಸಕದಂಗ ಹೊಸಕಿ ಹಾಕ್ತೀನಿ ನಿನಗ..ಗಂಡಂತ, ಕೂಸಂತ, ಎಲೇ ನೀನ್ ಗಂಡನ ಗಂಡಸ್ತನಕ್ಕೆ ಬೂದಿಹಚ್ಚಿ ಅವನ ಕುಂಡೀಗಿ ಸೀರಿ ಉಡಿಸ್ತೀನಿ. ನಿನ್ ಕೂಸಿಗಿ ಬಾಳಿ ಹಣ್ಣ ಮಾಡಿ ಒಂದೇಟಿಗೇ ಗುಳುಂ ಅಂತ ನುಂಗಿನ ಬಿಡ್ತೀನೀ..ನಿನಗ ಬರೇ ಭತ್ತಲೆ ಮಾಡಿ ರಸ್ತಾದಾಗ ಮೆರುಣಗಿ ಮಾಡಸ್ತೀನೇ ಹಾದರಗಿತ್ತೀ.." (ಗೀತಾ ನಾಗಭೂಷಣ: 'ಬದುಕು', ೨೨೨) ಸತ್ಯದಿಂದ ತನ್ನ ಬೇಳೆ ಬೇಯಿಸಿಕೊಳ್ಳಲಿಕ್ಕೆ ಆಗದ ಪೂಜಾರಪ್ಪ ದೇವರನ್ನು ಅಡ್ಡ ಇಟ್ಟುಕೊಂಡು ಬೆದರಿಕೆ ಹಾಕ್ತಾನೆ. 'ಇವನ ಮಾತುಗಳಿಗೆ ಹೆದರಿದ ಸಭೆಯವರು ಅವನಿಗೆ ಸಮಾಧಾನಪಡಿಸಲು ಯತ್ನಿಸುತ್ತಾರೆ. ದೇವರ ಬಗ್ಗೆ ಭಯ ಇಟ್ಟುಕೊಂಡಂಥ ಜನರು ತುಳಜಾಳ ತಂದೆ–ತಾಯಿಗೆ ಬಯ್ಯಲು ಆರಂಭಿಸುತ್ತಾರೆ. ಮನೆಗೆ ಕರೆದುಕೊಂಡಿದ್ದೇ ಅಪರಾಧ ಎಂಬಂತೆ ತುಳಜಾಳ ತಂದೆ–ತಾಯಿಗೆ ಬೆದರಿಕೆ ಹಾಕ್ತಾರೆ.

ಅದೇ ಸಭೆಯಲ್ಲಿ ಕುಳಿತಿದ್ದ ಕೆಲ ಮಂದಿಯಂತೂ ಆಕಳದಂಥ ಮನುಷ್ಯ ಪರಪ್ಪನಿಗೆ ಮಗಳ ದೆಸೆಯಿಂದ ಎಂಥಾಕಷ್ಟ ಬಂತಲ್ಲ ಎಂದು ಕನಿಕರ ತೋರಿಸುತ್ತಾರೆ. ಜನರ ಕರುಣೆ ಪರಪ್ಪನಿಗೆ ಸಿಕ್ಕಿದ್ದೇ ತಡ ಪೂಜಾರಪ್ಪ ಮೈಮೇಲೆ ಬಂದವನ ಹಾಗೆ ನಟಿಸಿ ಪರಪ್ಪನಿಗೆ ನಿನ್ನ ಮನೆಗೆ ಮನುಷ್ಯರಾರೂ ಬೆಂಕಿ ಹಚ್ಚಿಲ್ಲ. ಆ ಮಾಪುರ ತಾಯಿಗೇ ಸಿಟ್ಟು ಬಂದು ಆಕೆಯೇ ಹಚ್ಚಿದ್ದಾಳೆ ಎನ್ನುತ್ತಾಳೆ. ಆಗ ತುಳಜಾ ಆ ರೀತಿ ದೇವಿ ಬಂದು ಬೆಂಕಿ ಹಚ್ಚಿದ್ದೇ ಸತ್ಯವಾಗಿದ್ದರೆ

ತಪ್ಪು ಮಾಡಿದ ನನಗೇ ಬೆಂಕಿ ಹಚ್ಚುತ್ತಿದ್ದಳೇ ಹೊರತು ತಪ್ಪು ಮಾಡದ ನನ್ನ ತಂದೆ–ತಾಯಿಗಲ್ಲ ಎಂದು ವಾದಿಸುತ್ತಾಳೆ. ಜೋಗಣಿಯರಾಗಿ ಬದುಕನ್ನು ನರಕ ಮಾಡಿಕೊಂಡವರ ನೋವುಗಳನ್ನು ಹೇಳುತ್ತಾಳೆ. ಜೋಗಣಿ ಮಲಕವ್ವನಿಗೆ ಮೈಯೆಲ್ಲಾ ಹುಣ್ಣುಬಿದ್ದಿರುವುದು, ಗೋರವ್ವನಿಗೆ ಲಕ್ವಾ ಹೊಡೆದಿದ್ದು? ಬೂದೆವ್ವಗೆ ಊರಿನ ಗಂಡಸರೆಲ್ಲಾ ಹಾಸಿಗೆಯಾಗ ಬಿಟ್ಹೋದ ನೋವೆಲ್ಲಾ ಹತ್ತಿ ಯಾವ ವೈದ್ಯರಿಂದಲೂ ವಾಸಿಯಾಗದ್ದು ಮುಂತಾದ ಉದಾಹರಣೆಗಳನ್ನು ಕೊಟ್ಟು ಬೈಯ್ದದ್ದು ಇಡೀ ದೇವದಾಸಿ ವ್ಯವಸ್ಥೆಯ ಹುಳುಕುಗಳಿಗೆ ಹಿಡಿದ ಕನ್ನಡಿಯಂತಿದೆ.

ಊರಿನ ಎಲ್ಲಾ ಗಂಡಸರು ಇಂಥ ಹೆಂಗಸರಿಂದ ತೀಟೆ ತೀರಿಸಿಕೊಂಡ ನಂತರ ವಯಸ್ಸಾಗಿ ದೇಹದ ತುಂಬಾ ಖಾಯಿಲೆಗಳನ್ನು ಹಚ್ಚಿಸಿಕೊಂಡು ನರಳುವಾಗ ಯಾವ ಗಂಡಸೂ ಬಂದು ದೇವದಾಸಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅವಳ ರೋಗವನ್ನು ವಾಸಿ ಮಾಡುವುದಿಲ್ಲ. ಅಂತಹ ಅಸಹಾಯಕ ಸ್ಥಿತಿಯಲ್ಲಿ ದುರುಪಯೋಗಪಡಿಸಿಕೊಂಡ ಯಾರೂ ಕೂಡ ಆಕೆಯ ಹೊಟ್ಟೆ–ಬಟ್ಟೆಗೆ ಕೊಡುವುದಿಲ್ಲ. ಅಂಥ ದೇವದಾಸಿಯರಿಗೆ ನೀನು ಆಸರೆಯಾಗಿ ಅವರ ಬದುಕುಗಳನ್ನು ನೆಟ್ಟಗೆ ಮಾಡ್ತೀಯಾ ಎಂದು ತುಳಜಾ ಪ್ರಶ್ನಿಸುತ್ತಾಳೆ. ಮಾಪುರ ತಾಯಿಗೇನಾದರೂ ಮಾತು ಬಂದಿದ್ದರೆ ಮೊದಲು ನಿನಗೆ ಬೆಂಕಿ ಹಚ್ಚುತ್ತಿದ್ದಳು ಎಂದು ರೇಗುತ್ತಾಳೆ. ಇವಳ ಮಾತಿಂದ ಆ ಸಭೆಯಲ್ಲಿ ಹಾಜರಿದ್ದ ಜೋಗಣಿಯರು ಅಳಲು ಶುರು ಮಾಡುತ್ತಾರೆ. ತುಳಜಾಳ ಮಾತುಗಳಿಂದ ಕುಪಿತರಾದ ಪಂಚರ ಗುಂಪಿನಿಂದ ಮುದುಕಪ್ಪ ಎದ್ದು ನಿಂತು ಎಲ್ಲಾ ತಪ್ಪು ತುಳಜಾಳದೇ.

ಆಕೆ ಊರಿಗೆ ಬಂದಿದ್ದರಿಂದಲೇ ಇಷ್ಟೆಲ್ಲಾ ಆಗಿದೆ. ಆದ್ದರಿಂದ ಆಕೆ ತಾನು ಮಾಡಿದ ತಪ್ಪಿಗೆ 'ಪಾನಸೆರುಪ್ಯೆ' ದಂಡಕಟ್ಟಿ ತಪ್ಪಾಯ್ತಂತ ಪೂಜಾರಪ್ಪನ ಪಾದಕ್ಕೆ ಬೀಳಬೇಕು. ಮತ್ತೇ ತುಳಜಾ ತನ್ನ ಕೊರಳಲ್ಲಿರುವ ತಾಳಿಯನ್ನು ಕಿತ್ತು ಮಾಪುರ ತಾಯಿಯ ಬಾವಿಯಲ್ಲಿ ಬಿಸಾಕಿ ಮೊದಲಿನ ಹಾಗೆ ಜೋಗಣಿಯಾಗೇ ಬದುಕಬೇಕು. ಅಷ್ಟೇ ಅಲ್ಲದೆ ತಪ್ಪು ಮಾಡಿದ ಮಗಳನ್ನು ಮನೆಯಲ್ಲಿಟ್ಟುಕೊಂಡಿದ್ದರಿಂದ ಪರಪ್ಪ ಕೂಡ ನೂರೊಂದು ರೂಪಾಯಿ ದಂಡ ಕಟ್ಟಿ ಕ್ಷಮೆಕೇಳಬೇಕು. ಇದಕ್ಕೆ ಒಪ್ಪದಿದ್ದರೆ ಈಗಿನಿಂದಲೇ ಅವನಿಗೆ ಅವನ ಹೆಂಡ್ತಿಗೆ ಕೇರಿಯಿಂದ, ಜಾತಿಯಿಂದ, ಹೊರಗಿಟ್ಟು ಅನ್ನ, ನೀರು, ಬೆಂಕಿ ಏನೂ ಕೊಡುವುದಿಲ್ಲವೆನ್ನುತ್ತಾನೆ' ಈ ಸಂದರ್ಭದಲ್ಲಿ ಎಲ್ಲಾ ಮಾತುಗಳನ್ನು ಕೇಳಿಸಿಕೊಂಡ ತುಳಜಾ ಅಪ್ಪನ ಕೈಹಿಡಿದು ನಿಂತು ಈ ರೀತಿ ಹೇಳುವುದು ಅವಳ ಧೈರ್ಯಕ್ಕೆ ಸಾಕ್ಷಿಯಾಗಿದೆ. "ದೈವದವರೇ..ನೀವೂ ಒಂದೀಟು ನನ್ನ ಫೈಸಲಾನೂ ಕೇಳಿ ಹೋಗ್ರೀ..ನೀವು ಕೊಟ್ಟ ತೀರ್ಮಾನ ನಮಗ ಒಪ್ಪಗಿಯಿಲ್ಲ. ಏಕತರಫಾ

ನ್ಯಾಯ ನಿಮ್ದು. ನಾವೇನೂ ತಪ್ಪು ದಂಡಾ ಕುಡಂಗಿಲ್ಲ. ಹಾಂಗ ಕುಡ್ಲಕ್ಕ ನಾವೇನೂ ತಪ್ಪು ಕೆಲಸಾ ಮಾಡಿಲ್ಲ! ನೀವು ನಮ್ಮಪ್ಪಗೇನು ಕುಲದಲಿಂದ, ಕೇರಿಲಿಂದ ಹೊರಗಿಡ್ತೀರಿ? ನಾನೇ ನಮ್ಮಪ್ಪಾ ಅವ್ವಗ ಈ ಊರುಕೇರಿಲಿಂದ ದೂರ ಮಾಡಿ ನನ್ ಜೋಡಿ ಕರ್‍ಕೊಂಡು ಹೋಗ್ತೀನಿ..ನಿಮಗಾ ನಿಮ್ಮ ನ್ಯಾಯಕ್ಕಾ ದೊಡ್ಡ ನಮಸಗಾರ್‍ರೀಯಪ್ಪಾ.." (ಗೀತಾ ನಾಗಭೂಷಣ: 'ಬದುಕು', ೨೨೫) ಎಂದು ನನ್ನ ತಂದೆ-ತಾಯಿಯನ್ನು, ಗಂಡನನ್ನು ಕರೆದುಕೊಂಡು ಹೊರಟು ಹೋಗುತ್ತಾಳೆ. ಎಲ್ಲಾ ದೇವದಾಸಿಯರೂ ತುಳಜಾಳಂತೆ ಧೈರ್ಯವಾಗಿ ನಡೆದುಕೊಂಡಿದ್ದೇ ಆದರೆ ಕೆಲವೇ ವರ್ಷಗಳಲ್ಲಿ ಈ ದೇವದಾಸಿ ಅಥವಾ ಜೋಗಣಿ ಪದ್ಧತಿಯನ್ನು ಸಮಾಜದಿಂದ ಅಳಿಸಿ ಹೋಗುವುದರಲ್ಲಿ ಸಂಶಯವಿಲ್ಲ.

ನ್ಯಾಯವ್ಯವಸ್ಥೆಯು ಎಂದಿಗೂ ಬಡವರ ಪರವಾಗಿಲ್ಲದೆ ಮೇಲ್ಜಾತಿಯವರ, ಹಣವಂತರ, ಪುರುಷರ ಪರವಾಗಿರುವುದು ಕಂಡು ಬರುತ್ತದೆ. ನ್ಯಾಯವನ್ನು ತೀರ್ಮಾನ ಮಾಡುವವರು ಪುರುಷರೇ ಆಗಿರುವುದರಿಂದ ಇಂಥ ನ್ಯಾಯಸ್ಥಾನಗಳಲ್ಲಿ ಎಂದಿಗೂ ಮಹಿಳೆಗೆ ಜಯವಿಲ್ಲ. ಪುರುಷರ ನ್ಯಾಯ ವ್ಯವಸ್ಥೆಯಿಂದ ಅನ್ಯಾಯಕ್ಕೆ ಒಳಗಾಗುವ ಸಾಕಷ್ಟು ಉದಾಹರಣೆಗಳನ್ನು ಬಿ.ಟಿ.ಲಲಿತಾ ನಾಯಕರ 'ಗತಿ' ದೇವನೂರರ 'ಒಡಲಾಳ', ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಮುಂತಾದ ಕಾದಂಬರಿಗಳಲ್ಲಿ ಗಮನಿಸಬಹುದು.

'ಗತಿ' ಕಾದಂಬರಿಯ ತುಂಬಾ ಇಂಥ ಅನ್ಯಾಯವೇ ತುಂಬಿಕೊಂಡಿದೆ. ಸೋನಿಯ ಗಂಡ ಮಾನ್ಯಾ ಅವಳಿಗೆ ತಲೆಗೆ ಬಡಿದು ರಕ್ತ ಚಿಮ್ಮಿದಾಗ ಲಚ್ಚಿ ದವಾಖಾನೆಯಲ್ಲಿ ಸೋನಿಯ ಆರೈಕೆ ಮಾಡಿ ತಾನೇ ದುಡ್ಡುಕೊಟ್ಟು ವಾಸಿ ಮಾಡಿಸಿ ಮನೆಗೆ ಕರೆದುಕೊಂಡು ಬಂದಾಗ ತಪ್ಪು ಮಾಡದ ಲಚ್ಚಿಯ ವಿರುದ್ಧವೇ ಸೋನಿಯ ಮಾವ ಹರಸಿಂಗಪ್ಪ ಪಂಚರಿಗೆ ದೂರು ಸಲ್ಲಿಸುತ್ತಾನೆ. ಅಂತಹ ಸಂದರ್ಭದಲ್ಲಿ ಹೆಂಗಸಾದ ಸೋನಿಗೆ ನ್ಯಾಯ ಸಿಗುವ ಬದಲು ಹರಸಿಂಗನಿಗೇ ನ್ಯಾಯಸಿಗುತ್ತದೆ. "ಅಂವ ತನ್ನ ಸೊಸಿಗ..'ಎಂದು ಲಚ್ಚಿ ಮಾತನಾಡುವ ಮುನ್ನವೇ ಅವಳ ಮಾತನ್ನು ತಡೆದ ಪಂಚರು 'ನೋಡು ಲಚ್ಚವ್ವಾ ಸೋನಿ ಹರಸಿಂಗ್‍ನ ಸೊಸಿ. ಬೇಕಾಗಿತಂದ್ರ ಅಂವ ತನ್ನ ಸೊಸಿನ ಉಳಿಸ್ಕೊಂತಿದ್ದ. ಬ್ಯಾಡಾಗಿತ್ತಂದ್ರ ಸಾಯಿಸಿಬಿಡತಿದ್ದ. ಇದನ್ನು ಕೇಳ್ಳಕ್ಕ ನನಗೂ ನಿನಗೂ ಹಕ್ಕೇನದ? ಆದ್ರ ನೀ ನಡುಬರಕ್ಕ ಕಾರು ಭಾರ ನಡೆಸಲಿಕ್ಕ ಹೋಗಿದ್ದಿ. ಯಜಮಾನ ಮನ್ಸನ ಮ್ಯಾಲ ಕೈ ಮಾಡಿದ್ದಿ. ಇದು ನಿನ್ನ ತಪ್ಪು ಹೌದಲ್ಲೊ?" (ಲಲಿತಾ ನಾಯಕ್ ಬಿ.ಟಿ.: 'ಗತಿ', ೩೦) ಎಂದು ಗಂಡಸರು, ಗಂಡಸಿನ ಪರವಾಗಿಯೇ ನ್ಯಾಯ ತೀರ್ಮಾನ ಕೊಡುತ್ತಾರೆ. ಅಲ್ಲದೇ ಹೆಂಗಸಾದ ಲಚ್ಚಿ ಪಂಚಾಯತರನ್ನು ಎಲ್ಲರ

ಸಮ್ಮುಖದಲ್ಲಿ ಪ್ರಶ್ನಿಸಿದ್ದರಿಂದ ಅವಳಿಗೆ ನೂರೊಂದು ರೂಪಾಯಿ ದಂಡ ಕಟ್ಟಬೇಕೆಂದು ಹೇಳುತ್ತಾರೆ. ಈ ನೂರೊಂದು ರೂಪಾಯಿಯ ಜೊತೆಗೆ ತಪ್ಪಿನ ಕಾಣಿಕೆಯಾಗಿ ಇಪ್ಪತ್ತೈದು ರೂಪಾಯಿ ಕಟ್ಟಬೇಕೆನ್ನುತ್ತಾರೆ. ಅಲ್ಲದೆ ತಪ್ಪಾಯಿತೆಂದು ಪಂಚಾಯತರ ಕಾಲಿಗೆ ಬೀಳಬೇಕೆಂದು ಕುಡಿದು ಮತ್ತಿನಲ್ಲಿದ್ದ ಪಂಚರು ತೀರ್ಮಾನ ಕೊಡುತ್ತಾರೆ.

ಪಂಚರ ತೀರ್ಮಾನಕ್ಕೆ ಲಚ್ಚಿ ಶಾಂತ ರೀತಿಯಿಂದ ನೋಡ್ರಿ ನಿಮ್ಮ ಕಾಲಿಗೆ ಬೀಳುವಂಥ ತಪ್ಪೇನೂ ಮಾಡಿಲ್ಲ. ಅಲ್ಲದೇ ತಪ್ಪೇ ಮಾಡದ ನಾನು ದಂಡ ಕಟ್ಟುವುದಿಲ್ಲವೆಂದಾಗ ಅವಳನ್ನು ಕಲ್ಲುಕಂಬಕ್ಕೆ ಕಟ್ಟಿಹಾಕಿ ಪ್ರಾಣಿಗಳಿಗೆ ಹೊಡೆಯುವಂತೆ ಹೊಡೆಯಲು ಮುಂದಾಗುತ್ತಾರೆ. ಆದರೆ ಅಷ್ಟರಲ್ಲಿ ಚಂದೂ ಆಗಮಿಸಿ ಲಚ್ಮಿಯನ್ನು ಪಂಚರಿಂದ ಬಿಡಿಸುತ್ತಾನೆ. ಇಲ್ಲೂ ಕೂಡ ಹೊಲೆಯ ಕಾಶಪ್ಪ ಪೂಜಾರಿ ಮೈಮೇಲೆ ಬಂದಹಾಗೆ ನಟಿಸುತ್ತಾನೆ. ತನ್ನ ಮಾತಿಗೆ ಅವಮಾನ ಮಾಡಿ ಹೋದ ಲಚ್ಮಿಯ ಗಂಡ ಮತ್ತು ಮಗನನ್ನು ತಾನೇ ಕಸಿದುಕೊಂಡಿದ್ದು ಎಂದು ಹೇಳುತ್ತಾನೆ. ಪೂಜಾರಿಗಳು ತಮ್ಮ ಮಾತುಗಳು ಧಿಕ್ಕರಿಸಲ್ಪಟ್ಟಾಗ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಇಂಥ ಬೆದರಿಕೆಯ ಮಾತುಗಳನ್ನಾಡುವುದನ್ನು 'ಬದುಕು' ಕಾದಂಬರಿಯಲ್ಲೂ ಕಾಣುತ್ತೇವೆ.

ಹೆಂಡ್ತಿಯನ್ನು ಬಿಟ್ಟು ಮಾನ್ಯಾ ಮತ್ತೆ ಆಕೆ ತನಗೆ ಬೇಕೆಂದು ಪಂಚರನ್ನು ಸೇರಿಸಿದಾಗ ಪಂಚರು ಮಾನ್ಯಾನ ಪರವಾಗಿಯೇ ಮಾತನಾಡುತ್ತಾರೆ. "ನೀ ಹೆಣ್ಣುಮಗಳು ಅದೀ ತಂಗಿ. ಆತ ಗಂಡಸು ಮಗ ಅದಾನ. ನೀ ಆತನ್ನ ಲಗ್ನ ಮಾಡ್ಕೊಂಬಂದಿಲ್ಲ. ಅಂವ ತೆರೆಕೊಟ್ಟು ನಿನ್ನ ಮಾಡ್ಕೊಂಡ್ ಬಂದಾನ'. ಕೂಡಲೇ ಸೋನಿ ಅಂದಳು. 'ಅವ ನಮ್ಮಪ್ಪಗ ಒಂದು ದುಡ್ಡಿನ ತೆರ ಕೊಟ್ಟಿಲ್ಲ. ನಮ್ಮಪ್ಪಾನೇ ತನಗ ತೆರ ಕೊಡಲಿಲ್ಲ. ಅನ್ನೋ ಹಠಕ್ಕ ನನ್ನ ಬಾಳು ಹಾಳು ಮಾಡ್ಯಾನ.." (ಲಲಿತಾ ನಾಯಕ್ ಬಿ.ಟಿ.: 'ಗತಿ', ೯೦) ಎಂದು ಸೋನಿ ಅವನಿಗೆ ನಾನು ಬೇಕಾಗಿದ್ರೂ ನನಗೆ ಅವನು ಬೇಕಿಲ್ಲ ಎಂದು ತನ್ನ ಮುತ್ತೈದೆಯ ಚಿಹ್ನೆಯಾಗಿದ್ದ ತೋಳಲ್ಲಿ ಕಟ್ಟಿದ್ದ ಐದಾರು ಬಿಳಿಯ ಬಳೆಗಳನ್ನು, ಮುಂಗೂದಲಲ್ಲಿ ಹೆಣೆದಿದ್ದ ನಕಲಿ ಬೆಳ್ಳಿಯ ಆಭರಣಗಳನ್ನು ಬಿಚ್ಚಿ ಮಾನ್ಯಾನ ಕಾಲಿನ ಮೇಲೆ ಬಿಸಾಡುತ್ತಾಳೆ. ಇವತ್ತಿಂದ ನಾನು ಅವನ ಹೆಂಡತಿಯಲ್ಲ ಅವನು ನನ್ನ ಗಂಡನಲ್ಲ ಎಂದು ಹೇಳುತ್ತಾಳೆ. ಈ ಮೂಲಕ ಸೋನಿ ತಲೆ-ತಲಾಂತರದಿಂದ ಬಂದ ವ್ಯವಸ್ಥೆಯನ್ನೇ ಪ್ರಶ್ನಿಸುತ್ತಾಳೆ. ಅವಳು ಎಷ್ಟೇ ಪ್ರಯತ್ನಿಸಿದರೂ ಮನುವಿನ ಮಾತಿನಂತೆ ಹೆಣ್ಣಾದವಳು 'ತನ್ನ ಬಾಲ್ಯದಲ್ಲಿ ತಂದೆ-ತಾಯಿಗಳ ಆಶ್ರಯದಲ್ಲಿ, ಯೌವ್ವನದಲ್ಲಿ ಗಂಡನ ಆಶ್ರಯದಲ್ಲಿ, ಮುಪ್ಪಿನಲ್ಲಿ ಮಗನ ಆಶ್ರಯದಲ್ಲಿರಬೇಕೆಂಬ ನಿಯಮವನ್ನು ಎಲ್ಲರೂ ತಮ್ಮ ತಲೆಗಳೊಳಗೆ ಅಪ್ರಜ್ಞಾಪೂರ್ವಕವಾಗಿ ತುಂಬಿಸಿಕೊಂಡು ಬಿಟ್ಟಿದ್ದಾರೆ ಎನ್ನುವುದಕ್ಕೆ ಪಂಚರ ಮಾತುಗಳೇ ಸಾಕ್ಷಿಯಾಗಿವೆ.

"ಸಾದ್ದಿಲ್ಲ ತಂಗಿ. ನೀ ಎಷ್ಟು ಹಜಾರು ಸರ್ತಿ ಹೇಳಿದ್ರೂ ನಿನ ಮಾತು ನಡಿಯೂದಿಲ್ಲ. ಆತ ಒಂದೇ ಒಂದ್ ಸರ್ತಿ 'ಈಕಿ ನನ್ನ ಹೆಂಡ್ತಿಯಲ್ಲ' ಅಂದು ಬಿಟ್ಟಿದ್ರ ಖಲಾಸ್ ಆಗುತ್ತಿತ್ತು. ಆದ್ರ ಅಂವ ಅಂದಿಲ್ಲ! ಮಾಸ್ತರ ಹೇಳೂಹಂಗ ಹೆಣ್ಣು ಮಕ್ಕಳು ಗಂಡು ಮಕ್ಳು ಮನುಸ್ಯಾರೇ ಇದ್ರು ಸೈತ ಹೆಣ್ಣುಮಗಳು ಎಡ, ಗಂಡುಮಗ ಎಂಥಾನೇ ಇರಲಿ ಬಲ. ಇದರ ಸಲುವಾಗಿ ಹೆಣ್ಣು ಮಗಳು ತನ್ನ ಗಂಡನ ಹಿಡಿತದಾಗೇ ಇದ್ದು, ಆತನ ಸೇವಾ ಮಾಡಿಕೊಂಡ್ ಇರಬೇಕಾಗ್ತದ! ಇಷ್ಟಾದ್ರ ಸಂಸಾರ ನೆಟ್ಟಗ ನಡಿಲಿಕ್ಕ ಸಾಧ್ಯ ಅದ." (ಲಲಿತಾ ನಾಯಕ್ ಬಿ.ಟಿ.: 'ಗತಿ', ೯೧) ಎಂದು ಹೇಳುತ್ತಾರೆ. ಅಲ್ಲದೇ ಸೋನಿಯ ಇಷ್ಟದ ಪ್ರಕಾರ ನ್ಯಾಯ ಕೊಟ್ರೆ ಮುಂದೆ ಎಲ್ಲಾ ಹೆಣ್ಣು ಮಕ್ಕಳೂ ಸಹ ಇದೆ ನ್ಯಾಯ ಕೇಳ್ತಾರೆ. ಊರು ಬಸಿವಿಯರಾಗಿ ಊರಿನ ಮಾನ ಮರ್ಯಾದೆ ಹರಾಜು ಹಾಕ್ತಾರೆ. ಆದ್ದರಿಂದ ಸೋನಿ ಹಿರಿಯರು ಮಾಡಿರುವ ರೀತಿ–ರಿವಾಜಿನಂತೆ ತನ್ನ ಗಂಡನ ಮನೆಯಲ್ಲೆ ಬಾಳ್ವೆ ಮಾಡಿಕೊಂಡಿರಬೇಕು ಎಂಬ ತೀರ್ಪು ಕೊಡುತ್ತಾರೆ.

ಈ ತೀರ್ಪು ಸಹ ಗಂಡನಿಂದ ಎಷ್ಟೇ ನೋವಾದರೂ, ಆತ ಕುಡಿದು ಬಂದು ಹೊಡೆದಾದರೂ ಗಂಡೇ ಶ್ರೇಷ್ಠ. ಅದನ್ನು ಪ್ರಶ್ನಿಸದೇ ಹೆಂಡತಿಯಾದವಳು ಸಹಿಸಿಕೊಂಡು ಬಾಳಬೇಕು ಎಂಬ ಪುರುಷಪರವಾದ ತೀರ್ಪನ್ನೇ ಕೊಡುತ್ತಾರೆ. ನ್ಯಾಯವೆನ್ನುವುದೂ ಎಂದಿಗೂ ಮಹಿಳೆಯ ಪಾಲಿಗೆ ಮರೀಚಿಕೆಯಾಗಿರುವುದಕ್ಕೆ ಇದು ಸಾಕ್ಷಿಯಾಗಿದೆ. ಆದರೂ ಸೋನಿ, ಲಚ್ಮಿ, ಚಂದು ಪರಂಪರಾಗತ ನ್ಯಾಯ ವ್ಯವಸ್ಥೆಯನ್ನು ಪ್ರಶ್ನಿಸುವ ಪ್ರಗತಿಪರರಾಗಿ ಕಂಡುಬರುತ್ತಾರೆ. ಎಂದಿಗೂ ನ್ಯಾಯವೆಂಬುದು ಗಂಡಿನ ಪರವಾಗೇ ಇರುತ್ತದೆ ಎಂಬುದಕ್ಕೆ ಇವೆಲ್ಲಾ ನಿದರ್ಶನಗಳಾಗಿವೆ.

ದೇವನೂರ ಮಹಾದೇವರ 'ಒಡಲಾಳ'ದಲ್ಲೂ ನ್ಯಾಯ ವ್ಯವಸ್ಥೆಯ ಅನ್ಯಾಯವನ್ನು ಕಾಣಬಹುದು. ಕಡಲೇಕಾಯಿ ಕಳ್ಳನನ್ನು ಹಿಡಿಯಲು ಬಂದ ಇನ್ಸ್‌ಪೆಕ್ಟರು ರೇವಣ್ಣನವರಿಂದ ಸಾಕವ್ವ ತನ್ನ ಮತ್ತೊಂದು ಹುಂಜವನ್ನು ಕಳೆದುಕೊಳ್ಳುತ್ತಾಳೆ. ನ್ಯಾಯವನ್ನು ದೊರಕಿಸಿಕೊಡಬೇಕಾದ ಪೊಲೀಸ್ ವ್ಯವಸ್ಥೆಯೇ ಅನ್ಯಾಯ ಮಾಡಿದ್ದು ಬೇಲಿಯೇ ಎದ್ದು ಹೊಲ ಮೇಯ್ದಂತೆ ಆಗಿದೆ. ಅಲ್ಲದೆ ದಲಿತರಿಗೆ ನ್ಯಾಯವೆಂಬುದು ಎಂದಿಗೂ ಸಿಗುವುದಿಲ್ಲ ಎನ್ನುವುದಕ್ಕೆ ಸಾಕ್ಷಿಯಾಗಿದೆ.

'ದೇವದಾಸಿ ಅಥವಾ 'ಜೋಗಣಿ'ಯರನ್ನಾಗಿಸಲು ಊರಿನ ಗೌಡರು, ಕುಲಕರ್ಣಿಗಳು ದಲಿತ ಜನಾಂಗದ ಪೂಜಾರಿಗಳನ್ನೇ ದಾಳವಾಗಿ ಉಪಯೋಗಿಸಿ ಕೊಳ್ಳುವುದು ಕಂಡು ಬರುತ್ತದೆ. 'ಗತಿ' ಕಾದಂಬರಿಯಲ್ಲಿ ದಲಿತನಾದ ಕಾಶಪ್ಪ ಪೂಜಾರಿಯಾಗಿರುತ್ತಾನೆ.

ಸೋನಿಯನ್ನು ಊರಿನ ಛೇರ್ಮನ್ ಮೋತಿ ಪವಾರ್ ನಿಗೆ ಸೋನಿಯನ್ನು ಒಪ್ಪಿಸಿಕೊಡಲು ಪ್ರಯತ್ನಿಸುತ್ತಾನೆ. 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲೂ ಪೂಜಾರಪ್ಪ ಲಚ್ಚಿಯ 'ಕೋಳಿ ಕಳೆದ' ಸಂದರ್ಭವನ್ನು ಮುಂದಿಟ್ಟುಕೊಂಡು ತಾನೇ ಅವಳನ್ನು ದುರುಪಯೋಗಪಡಿಸಿಕೊಳ್ಳಲು ಮುಂದಾಗುತ್ತಾನೆ. ಹೊಲೆಯ ಪೂಜಾರಿಗಳನ್ನೇ ತಮ್ಮ ದಂಧೆಗೆ ಬಳಸಿಕೊಳ್ಳುತ್ತಿರುವುದರಲ್ಲಿ ಮೇಲ್ಜಾತಿಯವರೆನಿಸಿಕೊಂಡವರ ಕುತಂತ್ರ ಅಡಗಿದೆ. ಒಟ್ಟಾರೆಯಾಗಿ ಎಲ್ಲರೂ ಸೇರಿಕೊಂಡು ದೇವರು, ಧರ್ಮ, ಆಚರಣೆಗಳನ್ನು ಅಡ್ಡವಾಗಿಟ್ಟುಕೊಂಡು ದಲಿತ ಮಹಿಳೆಯರನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ.

"ಪುರುಷ ಪ್ರಧಾನ ಸಮಾಜದಲ್ಲಿ ದಲಿತ ಮಹಿಳೆ ಸಾಂಪ್ರದಾಯಿಕವಾಗಿ ಪಾಪದ ಕೂಪಕ್ಕೆ ಬಲಿಯಾಗಿದ್ದಾಳೆ. ಆಳುವ ಸಮುದಾಯವು ಸಂಪ್ರದಾಯದ ಹೆಸರಲ್ಲಿ, ಧರ್ಮದ ಹೆಸರಲ್ಲಿ ದಲಿತ ಮಹಿಳೆಯನ್ನು ಅನ್ಯದೃಷ್ಟಿಯಲ್ಲಿ ಬಳಸಿಕೊಳ್ಳಲಾಗಿದೆ. ಸಂಪ್ರದಾಯದ ಚೌಕಟ್ಟಿನಲ್ಲಿ ದಲಿತ ಮಹಿಳೆಗೆ ಹಲವು ನಿರ್ಬಂಧಗಳನ್ನು ಹೇರಲಾಗಿದೆ. ಈ ರೀತಿಯ ಕ್ರೂರ ಸಂಪ್ರದಾಯಗಳು ತಪ್ಪೆಂದು ಅರಿವಾಗದ ರೀತಿಯಲ್ಲಿ ದಲಿತ ಮಹಿಳೆಯನ್ನು ಇಡಲಾಗಿದೆ. ಇದು ನನ್ನ ಆದ್ಯ ಕರ್ತವ್ಯವೆಂತಲೂ ನಾನು ಹುಟ್ಟಿದ್ದೇ ಇವುಗಳನ್ನು ನಿರ್ವಹಿಸಲೆಂತಲೂ ಮಾನಸಿಕವಾಗಿ ಹಾಗೂ ಬೌದ್ಧಿಕವಾಗಿ ದಲಿತ ಮಹಿಳೆಯನ್ನು ಒಳಗು ಮಾಡಲಾಗಿದೆ. ಇದಕ್ಕೆ ಸಹಕಾರಿಯಾಗಿ ಪುರುಷ ಪ್ರಧಾನ ವ್ಯವಸ್ಥೆಯಿದೆ. ದೇವರು ಧರ್ಮ ಸಂಪ್ರದಾಯಗಳಡಿಯಲ್ಲಿ ಗೆಜ್ಜೆಪೂಜೆ, ದೇವದಾಸಿ, ಯಲ್ಲಮ್ಮ, ಜೋಗಮ್ಮ, ಪಾತರದವರು ಮುಂತಾದ ಅನಿಷ್ಟ ಪದ್ಧತಿಗಳಿಗಾಗಿ ದಲಿತ ಮಹಿಳೆಯನ್ನು ಬಲಿಕೊಡಲಾಗುತ್ತಿದೆ. ಭಾರತದ ಸಂವಿಧಾನಾತ್ಮಕ ಕಾನೂನಿನ ಚೌಕಟ್ಟಿನಡಿಯಲ್ಲಿ ಈ ಪದ್ಧತಿಯನ್ನು ನಿಷೇಧಿಸಲಾಗಿದೆಯಾದರೂ ಪಟ್ಟಭದ್ರ ಹಿತಾಸಕ್ತಿಯು ಅದನ್ನು ಮುಂದುವರೆಸಿಕೊಂಡು ಸಾಮಾಜಿಕ ನಿಯಂತ್ರಣವನ್ನು ಸಾಧಿಸಿವೆ. ಈ ಸಂವಿಧಾನಾತ್ಮಕ ಕಾನೂನನ್ನು ಜಾರಿಗೊಳಿಸುವ ಜಾಗದಲ್ಲಿ ಪಟ್ಟಭದ್ರ ಹಿತಾಸಕ್ತಿಯನ್ನು ಕಾಪಾಡುವವರೇ ಇರುವುದರಿಂದ ಇಂಥ ಪದ್ಧತಿಗಳು ಮತ್ತಷ್ಟು ಗಟ್ಟಿಗೊಳ್ಳುತ್ತವೆ." (ಡಾ. ಹೆಚ್.ಟಿ. ವೆಂಕಟೇಶಮೂರ್ತಿ (ಲೇ), 'ವಿಜಯಾನ್ವೇಷಣೆ' ೫೨೬) ದೇವದಾಸಿ ಪದ್ಧತಿಯನ್ನು ಕುರಿತು ಗೆಳತಿಯೊಬ್ಬಳು ಆಡಿದ ಮಾತುಗಳು ನಿಜಕ್ಕೂ ಚಿಂತೆಗೀಡುಮಾಡಿದವು. ಒಬ್ಬ ದೇವದಾಸಿಯ ಮನೆಗೆ ಹೈಕೋರ್ಟಿನ ಜಡ್ಜ್, ಹೊಸಪೇಟೆಯ ಡಾಕ್ಟರ್ ಹಾಗೂ ಒಬ್ಬ ಶಿಕ್ಷಕ ಬರುತ್ತಾರೆ ಮತ್ತು ಇವರಿಗೆ ಒಬ್ಬೊಬ್ಬರಿಗೂ ದೇವದಾಸಿಯಿಂದ ಮಕ್ಕಳಿವೆ. ಎಂಬ ವಿಚಾರ ಭಯವನ್ನುಂಟು ಮಾಡಿತು. ಒಬ್ಬ ವ್ಯಕ್ತಿ ಸಮಾಜವನ್ನು, ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳನ್ನು ತಿದ್ದಿ ಬುದ್ಧಿ ಹೇಳುವ ಶಿಕ್ಷಕನಾದರೆ ಮತ್ತೊಬ್ಬ ಸಮಾಜದಲ್ಲಿನ ಅನ್ಯಾಯಗಳನ್ನು

ನ್ಯಾಯದ ತೀರ್ಪಿನ ಮೂಲಕ ಸರಿಪಡಿಸುವ ಜಡ್ಜ್, ಮಗದೊಬ್ಬ ಸಮಾಜದ ಆರೋಗ್ಯವನ್ನು ಕಾಪಾಡಬೇಕಾದ ವೈದ್ಯ, ಬೇಲಿಯೇ ಎದ್ದು ಹೊಲ ಮೇಯ್ದರೆ ಹೊಲವನ್ನು ರಕ್ಷಿಸುವವರ್ಯಾರು? ಈ ಮೂವರೂ ಸಮಾಜವನ್ನು ಸರಿದಾರಿಗೆ ಕೊಂಡೊಯ್ಯುವವರು. ಇವರೇ ಹೀಗೆ ನಡೆದುಕೊಂಡರೆ ಸಾಮಾನ್ಯ ಜನರ ಪಾಡೇನು? ಕಾನೂನನ್ನು ರೂಪಿಸಿ ಪೋಷಿಸಬೇಕಾದವರೇ ಕಾನೂನನ್ನು ಮುರಿಯುತ್ತಿದ್ದಾರೆ.

ಸಮಾಜದ ಸುರಕ್ಷತೆಯನ್ನು ಕಾಪಾಡಿ ಸಾಮಾನ್ಯ ಜನಕ್ಕೆ ಬುದ್ಧಿ ಹೇಳಬೇಕಾದ ವೈದ್ಯರೇ ಇಂಥ ದಂಧೆಯಲ್ಲಿ ಮುಳುಗಿದರೆ ಉಳಿದವರ ಪಾಡೇನು? ಬೆಳೆಯುವ ಪೈರುಗಳನ್ನು ಎಳೆವೆಯಿಂದಲೇ ನ್ಯಾಯ, ನೀತಿ–ನಿಯಮಗಳ ನೀರು, ಗೊಬ್ಬರ ಹಾಕಿ ಬೆಳೆಸುವ ಸಮಾಜಕ್ಕೆ ಆದರ್ಶವಾಗಿರುವ, ಪೂಜ್ಯನೀಯ ಸ್ಥಾನದಲ್ಲಿರುವ ಶಿಕ್ಷಕನೇ ಇಂಥ ದಂಧೆಯಲ್ಲಿ ಮುಳುಗಿದರೆ ಸಮಾಜದ ಗತಿಯೇನು? ಇಂಥವರಿಗೆ ಯಾರಿಂದ, ಹೇಗೆ, ಎಂತಹ ಶಿಕ್ಷಣ ಕೊಡಿಸಲು ಸಾಧ್ಯವಿದೆ? ಇಂಥವರು ತುಂಬಿರುವ ಸಮಾಜದಲ್ಲಿನ ದೇವದಾಸಿ ಪದ್ಧತಿ ನಿರ್ಮೂಲನೆಗೆ ಸರ್ಕಾರ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ. ಹಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತಲೇ ಇದೆ. ಆದರೂ ಸಮೀಕ್ಷೆಯಿಂದ ಲಭ್ಯವಿರುವ "ಅಂಕಿಅಂಶಗಳ ಪ್ರಕಾರ ೧೯೮೪ರಲ್ಲಿ ೨೨.೮೭೩ ರಷ್ಟಿದ್ದ ದೇವದಾಸಿಯರು ೨೦೦೭ರ ಹೊತ್ತಿಗೆ ೪೬,೬೬೦ ರಷ್ಟಿದ್ದರು". (ಉತ್ತಮ ಕಾಂಬಳೆ (ಮೂಲ) ಸಿದ್ರಾಮಕಾರಣಿಕ (ಕ) : 'ದೇವದಾಸಿ ಮತ್ತು ಬೆತ್ತಲೆ ಸೇವೆ' ೧೨) ಈ ಏರಿಕೆ ದೇವದಾಸಿ ಪದ್ಧತಿ ಅಳಿಯುವ ಬದಲು ಬೆಳೆಯುತ್ತಿರುವುದಕ್ಕೆ ಸಾಕ್ಷಿಯಾಗಿದೆ

ದೇವದಾಸಿ ಪದ್ಧತಿ ವಿರುದ್ಧ ಸ್ವತಂತ್ರ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ನಂತರದಲ್ಲಿ ಹಲವಾರು ಕಾನೂನುಗಳನ್ನು ಜಾರಿಗೆ ತರಲಾಗಿದೆ ಅವುಗಳೆಂದರೆ:

೧. "ದೇವದಾಸಿಯರು ದೇವಾಲಯಗಳಲ್ಲಿ ಕಡ್ಡಾಯವಾಗಿ ನೃತ್ಯ ಮಾಡುವುದನ್ನು ರದ್ದುಪಡಿಸಿದ ಮೈಸೂರು ಸರ್ಕಾರದ ಕಾಯಿದೆ – ೧೮೯೩.

೨. ದೇವದಾಸಿ ನೃತ್ಯ ಪ್ರತಿಬಂಧ ಕಾಯಿದೆ ಮೈಸೂರು ಸರ್ಕಾರ – ೧೯೧೦.

೩. ದೇವದಾಸಿ ಪದ್ಧತಿಯ ನಿರ್ಮೂಲನಾ ಕಾಯಿದೆ ಮೈಸೂರು ಸರ್ಕಾರ – ೧೯೧೦.

೪. ದೇವದಾಸಿ ಪದ್ಧತಿ ಉಚ್ಚಾಟನೆ ಕಾಯ್ದೆ ಮೈಸೂರು ಸರ್ಕಾರ – ೧೯೨೨.

೫. ಮುಂಬಯಿ ದೇವದಾಸಿ ಸಂರಕ್ಷಣೆ ಮತ್ತು ದೇವದಾಸಿ ಪದ್ಧತಿ ನಿರ್ಮೂಲನಾ ಕಾಯಿದೆ – ೧೯೩೪.

೬. ದೇವದಾಸಿ ಪದ್ದತಿ ಪ್ರತಿಬಂಧ ಮತ್ತು ಪದ್ಧತಿಯಲ್ಲಿ ಭಾಗಿಯಾದವರಿಗೆ ಶಿಕ್ಷೆ ಮತ್ತು ದಂಡ ಕರ್ನಾಟಕ ಸರ್ಕಾರ – ೧೯೮೩." 'ಉತ್ತಮ ಕಾಂಬಳೆ (ಮೂಲ) ಸಿದ್ರಾಮಕಾರಣಿಕ (ಕ) : 'ದೇವದಾಸಿ ಮತ್ತು ಬೆತ್ತಲೆ ಸೇವೆ' ೭೩)

ಕಳೆದ ಸುಮಾರು ೭೦ ವರ್ಷಗಳಿಂದ ಆರು ಕಾಯಿದೆಗಳನ್ನು ಜಾರಿ ಮಾಡಿದ್ದರೂ ಏಳು ಜನರನ್ನೂ ಬಂಧಿಸಲಾಗದದು ನಾಚಿಕೆಗೇಡಿನ ವಿಚಾರ. ಇಂದಿಗೂ ದೇವದಾಸಿ ಪದ್ಧತಿ ನಿಂತಿಲ್ಲ. ಮೊದಲು ದೇವದಾಸಿಯರನ್ನು ದೇವಾಲಯಗಳಲ್ಲಿ ಮಾಡುತ್ತಿದ್ದವರು ಈಗ ಕದ್ದು ಮುಚ್ಚಿ ಪೂಜಾರಿಗಳ ಮನೆಗಳಲ್ಲಿ ನಡೆಸುತ್ತಾರೆ. ಜಾತ್ರೆಗಳ ಸಂದರ್ಭದಲ್ಲಿ ಬೀದಿಗಳ ಬದಿಯಲ್ಲಿ ಕೂಡ ದೇವದಾಸಿಯರನ್ನಾಗಿ ಮಾಡಲಾಗುತ್ತದೆ. ಆದರೆ ಜನಜಂಗುಳಿಯಲ್ಲಿ ಇದನ್ನು ಕಂಡುಹಿಡಿಯಲಾಗುವುದಿಲ್ಲ. ಇಂತಹ ಕಾನೂನುಗಳನ್ನು ಜಾರಿ ಮಾಡುವವರ ಮನಸ್ಥಿತಿ ಸಾಮಾನ್ಯ ಮನುಷ್ಯರಿಗಿಂತ ವಿಶೇಷವಾದದ್ದೇನೂ ಆಗಿರುವುದಿಲ್ಲ. ಅವರ ಮನಸ್ಸು ಕೂಡ ಮೂಢನಂಬಿಕೆಗಳ ಹೊಂಡವಾಗಿರುತ್ತದೆ. ಹೀಗೆ ಸರ್ಕಾರಿ ಅಧಿಕಾರಿಗಳ ವಿಫಲತೆಯ ನಡುವೆಯೂ ಈ ಅನಿಷ್ಟ ಪದ್ಧತಿಯನ್ನು ತೊಡೆದು ಹಾಕಲು ಸಾಕಷ್ಟು ಜನ ಸ್ವಯಂಪ್ರೇರಿತರಾಗಿ ಮುಂದೆ ಬಂದಿದ್ದಾರೆ. ಅಂಥವರಲ್ಲಿ ಕರ್ನಾಟಕದ ಪೊಲೀಸ್ ಅಧೀಕ್ಷ ರಮೇಶ್ ಒಬ್ಬರಾಗಿದ್ದಾರೆ. "ರಮೇಶ್ ಅವರು ೨೨ನೆಯ ಜನವರಿ ೧೯೮೮ರಂದು ಮಹಾಲಿಂಗಪುರದಲ್ಲಿ ಏಕಕಾಲಕ್ಕೆ ಒಂದೇ ಮಂಟಪದಲ್ಲಿ ೫೭ ದೇವದಾಸಿಯರ ಮದುವೆ ಮಾಡಿಸಿದರು! ಮದುವೆ ಮಾಡಿಕೊಂಡ ಎಲ್ಲ ದೇವದಾಸಿಯರು ಕೇವಲ ತರುಣಿಯರು ಮಾತ್ರ ಆಗಿರಲಿಲ್ಲ. ಕೆಲವರಿಗೆ ಮಕ್ಕಳಾಗಿದ್ದವು. ಕೆಲವರಿಗೆ ವಯಸ್ಸು ೫೦ ದಾಟಿತ್ತು !" (ಉತ್ತಮ ಕಾಂಬಳೆ (ಮೂಲ) ಸಿದ್ರಾಮಕಾರಣಿಕ (ಕ) : 'ದೇವದಾಸಿ ಮತ್ತು ಬೆತ್ತಲೆ ಸೇವೆ' ೭೭, ೭೮) ಹೀಗೆ ವಿವಿಧ ವಯಸ್ಸಿನ ಅಂತರವಿದ್ದ ದೇವದಾಸಿಯರಿಗೆ ಮದುವೆ ಮಾಡಿಸಿದ ರಮೇಶ ಅವರು ದೇವದಾಸಿ ಪದ್ಧತಿ ನಿರ್ಮೂಲನೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಅಲ್ಲದೇ ದೇವದಾಸಿಯರೊಂದಿಗೆ ಸಂಬಂಧವಿಟ್ಟುಕೊಂಡಿದ್ದ ಗಂಡಸರನ್ನು ಹುಡುಕಿಸಿ ಅವರ ಮನವೊಲಿಸಿ ಮದುವೆ ಮಾಡಿಸಿದರು. ಎಲ್ಲಾ ದೇವದಾಸಿಯರಿಗೂ ಸರ್ಕಾರದಿಂದ ಸಹಾಯ ಸೌಲಭ್ಯಗಳನ್ನು ನೀಡಿದರು. ಎಲ್ಲಾ ದೇವದಾಸಿಯರಿಂದ 'ಇನ್ನು ಮುಂದೆ ತಾವು ತಮ್ಮ ಮಕ್ಕಳನ್ನು ದೇವಿಗೆ ಬಿಡುವುದಿಲ್ಲ' ಜೋಗ ಬೇಡುವುದಿಲ್ಲ' ಎಂಬ ಸಾಮೂಹಿಕ ಪ್ರತಿಜ್ಞೆಯನ್ನು ಮಾಡಿಸುತ್ತಾರೆ.

"ರಮೇಶ ಅವರಂತೆಯೇ ಪೊಲೀಸ್ ಅಧೀಕ್ಷರಾಗಿದ್ದ ಸುಭಾಷ್ ಭರಣಿಯವರು ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ೧೯೮೬, ಏಪ್ರಿಲ್ ೨೮ರಿಂದ ಮೇ ೧೧ರ ಕಾಲಾವಧಿಯಲ್ಲಿ ಏಕಕಾಲಕ್ಕೆ ೧೦೧ ದೇವದಾಸಿಯರ ಮದುವೆ ಮಾಡಿಸುವುದರ ಮೂಲಕ ಅಗ್ರಪಂಕ್ತಿಯಲ್ಲಿ

ನಿಲ್ಲುತ್ತಾರೆ." (ಉತ್ತಮ ಕಾಂಬಳೆ (ಮೂಲ) ಸಿದ್ರಾಮಕಾರಣಿಕ (ಕ) : 'ದೇವದಾಸಿ ಮತ್ತು ಬೆತ್ತಲೆ ಸೇವೆ' ೭೮) ಹೀಗೆ ದೇವದಾಸಿ ಪದ್ಧತಿ ನಿರ್ಮೂಲನೆಗಾಗಿ ಸಾಕಷ್ಟು ಜನ ಪ್ರಯತ್ನ ಪಟ್ಟರೂ ಇಂದಿಗೂ ಅದು ಜೀವಂತವಾಗಿ ಮುಂದುವರೆಯುತ್ತಿರುವುದು ದುರಂತವೇ ಸರಿ.

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಮನು ಹೇಳಿದಂತೆ ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ, ಅವಳು ಕಾಮುಕಿ, ಉಪಭೋಗಿಸಲೆಂದೇ ಇರುವವಳು ಎಂದು ನಂಬಿರುವ ಆಧುನಿಕ ಮನುಗಳು ದೇವದಾಸಿ ಪದ್ಧತಿಯ ವಿರುದ್ಧ ಹೋರಾಡುವುದು ಕನಸಿನ ಮಾತೇ ಸರಿ. ಇನ್ನು ಕೆಲವರು ಸಂವಿಧಾನವೆಂಬುದು ದಲಿತರಿಗಾಗಿಯೇ ಬರೆದದ್ದು. ಅದು ದಲಿತರ ಪರವಾಗಿದೆ ಎಂಬ ನೆಪವೊಡ್ಡಿ ಅದನ್ನೇ ತಿದ್ದುಪಡಿ ಮಾಡಲು ಅಥವಾ ಬದಲಾಯಿಸಲು ಹೊರಟಿದ್ದಾರೆ. ಇಂಥವರಿಂದ ದಲಿತ ಹೆಣ್ಣುಮಕ್ಕಳ ಮಾನರಕ್ಷಣೆ ಸಾಧ್ಯವೇ?

ಸೆಲೆಬ್ರೆಟಿಗಳು ಎಂದು ಕರೆಯಿಸಿಕೊಳ್ಳುವವರ ಹೆಣ್ಣುಮಕ್ಕಳಿಗೆ ಅನ್ಯಾಯವಾದಾಗ ಮಾಧ್ಯಮಗಳ ಮುಂದೆ ನಾ ಮುಂದು ತಾ ಮುಂದು ಎಂದು ದೌಡಾಯಿಸಿ ಬಂದು ಮಾತನಾಡುವ ಮಹಿಳಾ ಸಂಘಟನೆಗಳ ಸದಸ್ಯರಿಗೆ ಅನಕ್ಷರಸ್ಥ ದಲಿತ ಹೆಣ್ಣುಗಳ ನಿತ್ಯ ನರಕದ ಗೋಳಾಟ ಕೇಳಿಸುವುದಿಲ್ಲವೆ? ಅಂತಹ ಮಹಿಳಾ ಸಂಘಟನಾಕಾರರಿಗೆ ದಲಿತ ಹೆಣ್ಣುಮಗಳೂ ಒಬ್ಬ ಮನುಷ್ಯಳೇ.., ಅವಳ ಮೇಲಾಗುತ್ತಿರುವುದು ಶೋಷಣೆಯೇ, ಅಂಥವರಿಗೆ ನ್ಯಾಯ ಒದಗಿಸಿಕೊಡುವುದು ನಮ್ಮ ಕಾಳಜಿಯೇ ಎಂದು ಯಾಕೆ ಭಾವಿಸುವುದಿಲ್ಲ? ಹಾಗೆಯೇ ಮಹಿಳೆಯರ ನೋವುಗಳನ್ನು ಕಥೆ, ಕವನ, ಕಾದಂಬರಿ ರೂಪದಲ್ಲಿ ಬರೆಯುತ್ತಿರುವ ಸಾಹಿತಿಗಳೂ ಕೂಡ ವಾಸ್ತವ ಸಮಾಜದಲ್ಲಿ ನರಳುತ್ತಿರುವ ದಲಿತ ಮಹಿಳೆಯ ದೇವದಾಸಿ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸುವುದಿಲ್ಲವೇಕೆ?

"ದೇವದಾಸಿ ಪದ್ಧತಿ ನಿರ್ಮೂಲನೆಗಾಗಿ ಹಲವು ಸಂಘಟನೆಗಳು ಪ್ರಯತ್ನ ಮಾಡುತ್ತಿದ್ದರೂ ಕೂಡ ಅವುಗಳಲ್ಲಿರುವ ನ್ಯೂನತೆಗಳನ್ನು ನಿರ್ಲಕ್ಷ್ಯ ಮಾಡುವಂತಿಲ್ಲ. ಪ್ರತಿಯೊಂದು ಚಳವಳಿಯಲ್ಲೂ ಕೆಲವು ಕೊರತೆಗಳು ಇದ್ದೇ ಇರುತ್ತವೆ. ನಾಯಕತ್ವದ ತಪ್ಪಿನಿಂದಾಗಿ ಕೆಲಕೊರತೆಗಳು ಕಂಡುಬಂದರೆ ಪರಿಸ್ಥಿತಿಯಿಂದಾಗಿ ಕೆಲ ಕೊರತೆಗಳು ಕಂಡು ಬರುತ್ತವೆ. ತಪ್ಪಿದ ಗುರಿಯಿಂದಾಗಿಯೂ ಕೆಲ ಕೊರತೆಗಳು ಕಂಡು ಬರುತ್ತವೆ. ದೇವದಾಸಿ ಚಳವಳಿ ಕೂಡ ಇದಕ್ಕೆ ಅಪವಾದವಾಗಿಲ್ಲ. ದೇವದಾಸಿ ಪುನರ್ವಸತಿಗಾಗಿ ಸರ್ಕಾರವು ಆರ್ಥಿಕ ಸಹಾಯವನ್ನು ಮಾಡುವ ಯೋಜನೆಯನ್ನು ಪ್ರಕಟಿಸಿದಾಗ ಈ ಆರ್ಥಿಕ ಸಹಾಯವನ್ನು ದೊರಕಿಸಿಕೊಡಲು ದೇವದಾಸಿ ಮತ್ತು ಸರ್ಕಾರದ ನಡುವೆ ಒಂದು ದಲ್ಲಾಳಿ ವರ್ಗವೇ ಸೃಷ್ಟಿಯಾಯಿತು. ಈ ದಲ್ಲಾಳಿಗಳಿಗೂ ಮತ್ತು ಚಳವಳಿಗಳಿಗೂ ಏನೇನೂ ಸಂಬಂಧವಿರಲಿಲ್ಲ!

ಯೋಜನೆಯ ಲಾಭ ಪಡೆಯುವುದಕ್ಕಾಗಿ ಬೇಕಾದ ಕಾಗದ ಪತ್ರಗಳನ್ನು ತಯಾರಿಸಿ ಸಾಹೇಬರಿಗೆ ಸಲಾಮು ಮಾಡಿ ಯೋಜನೆಯನ್ನು ಮಂಜೂರು ಮಾಡಿಸಿಕೊಳ್ಳುತ್ತಿದ್ದರು. ಕೈಗೆ ಬಂದ ಹಣದಲ್ಲಿ ಹೆಚ್ಚಿನ ಪಾಲನ್ನು ತಾವಿಟ್ಟುಕೊಂಡು ಇನ್ನುಳಿದುದ್ದನ್ನು ದೇವದಾಸಿಯರಿಗೆ ನೀಡುತ್ತಿದ್ದರು!" (ಉತ್ತಮ ಕಾಂಬಳೆ (ಮೂಲ) ಸಿದ್ರಾಮಕಾರಣಿಕ (ಕ) : 'ದೇವದಾಸಿ ಮತ್ತು ಬೆತ್ತಲೆ ಸೇವೆ' ೮೧) 'ಕೆಲವರಂತೂ ಕಾಲ್ಪನಿಕ ದೇವದಾಸಿ ಪುನರ್‌ವಸತಿ ಕೇಂದ್ರಗಳನ್ನು ಸ್ಥಾಪಿಸಿ ಬ್ಯಾಂಕ್ ಮತ್ತು ಸರ್ಕಾರಗಳಿಂದ ಲಕ್ಷಾಂತರ ರೂಪಾಯಿ ಹಣವನ್ನು ಗುಳುಂ ಮಾಡುತ್ತಾರೆ. ದೇವದಾಸಿಯರನ್ನು ಮದುವೆಯಾದವರಿಗೆ ಸರ್ಕಾರದಿಂದ ಹಣಕೊಡುತ್ತಾರೆಂದು ತಿಳಿದು ಸಾಕಷ್ಟು ಜನ ದಲ್ಲಾಳಿಗಳು ನಕಲಿ ಕಾಗದಪತ್ರ ಸೃಷ್ಟಿಸಿ ಹಣವನ್ನು ಲಪಟಾಯಿಸುತ್ತಾರೆ. ದೇವದಾಸಿ ಪುನರ್‌ವಸತಿ ಯೋಜನೆಗೂ ಸಾಕಷ್ಟು ಅಡ್ಡಿ ಆತಂಕಗಳಿವೆ. ಒಬ್ಬ ದೇವದಾಸಿಯ ಪುನರ್ ವಸತಿ ವ್ಯವಸ್ಥೆಯಾಗುವುದರೊಳಗೆ ಹತ್ತು ಮಂದಿ ದೇವದಾಸಿಯರು ಹೊಸದಾಗಿ ಹುಟ್ಟಿಕೊಂಡಿರುತ್ತಾರೆ. ಇದೂ ಕೂಡ ಸರ್ಕಾರಕ್ಕೆ ಕಷ್ಟದ ಕೆಲಸವಾಯಿತು'. ದೇವದಾಸಿ ಪದ್ಧತಿಯನ್ನು ಕಾಯ್ದೆ ಕಾನೂನುಗಳಿಂದ ನಿರ್ಮೂಲನೆ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ ಸಿನಿಮಾ, ನಾಟಕ, ಕಲೆ ಮುಂತಾದವುಗಳ ಮೂಲಕವಾದರೂ ಪ್ರಯತ್ನಿಸುವ ಅಗತ್ಯವಿದೆ. ದೇವದಾಸಿ ಪದ್ಧತಿಯ ವಿಷಯವನ್ನು ಇಟ್ಟುಕೊಂಡು ಎಂ.ಎಸ್. ಸತ್ಯು ಅವರು 'ಇಜ್ಜೋಡು' ಸಿನಿಮಾವನ್ನು ಮಾಡಿದ್ದಾರೆ. ಅಲ್ಲದೇ ಇಪ್ಪತ್ತು ವರ್ಷಗಳಿಗಿಂತ ಹಿಂದೆಯೇ ಇಂತಹ ಸಮಸ್ಯೆಯನ್ನು ಇಟ್ಟುಕೊಂಡು ಪಿ.ಎಚ್. ವಿಶ್ವನಾಥ್ ಅವರು 'ಅರಗಿಣಿ' ಎಂಬ ಸಿನಿಮಾ'ವನ್ನು ಮಾಡಿದ್ದಾರೆ. ಆದರೆ ಇಂತಹ ಸಿನಿಮಾಗಳನ್ನು ದೇವದಾಸಿಯರು ನೋಡಿಯೂ ಇರುವುದಿಲ್ಲ. 'ದೇವದಾಸಿ' ಪದ್ಧತಿಯನ್ನು ನಿರ್ಮೂಲನೆ ಮಾಡಲು ಕೈಗೊಳ್ಳಬಹುದಾದ ಕ್ರಮಗಳು ಈ ಕೆಳಗಿನಂತಿವೆ.

೧. "ದೇವದಾಸಿ ಮುಕ್ತ ಗ್ರಾಮಕ್ಕೆ ಸರ್ಕಾರವು ಬಹುಮಾನಗಳನ್ನು ನೀಡಬೇಕು.

೨. ಗ್ರಾಮದಲ್ಲಿ ದೇವದಾಸಿ ಬಿಡುವ ಕಾರ್ಯವನ್ನು ತಡೆಗಟ್ಟಲು ಗ್ರಾಮದ ಪೊಲೀಸ್ ಪಾಟೀಲ ಮತ್ತು ಸರಪಂಚರಿಗೆ ಕೆಲವು ಅಧಿಕಾರಗಳನ್ನು ಸರ್ಕಾರ ನೀಡಬೇಕು.

೩. ದೇವದಾಸಿಯರೊಂದಿಗೆ ಪ್ರಸ್ತ ಮಾಡಿಕೊಂಡವರ ಸಂಪತ್ತಿನಲ್ಲಿ ದೇವದಾಸಿಗೂ ಪಾಲು ಸಿಗಬೇಕು. ಮತ್ತು ಆಕೆಯ ನಂತರ ಆಕೆಯ ಮಕ್ಕಳಿಗೂ ಅದು ದಕ್ಕಬೇಕು.

೪. ದೇವದಾಸಿಗೆ ಯಾರಿಂದ ಮಕ್ಕಳಾಗುತ್ತವೆಯೋ ಅಂಥವರ ಹೆಸರುಗಳನ್ನು ದೇವದಾಸಿಯ ಮಕ್ಕಳ ತಂದೆಯ ಹೆಸರನ್ನಾಗಿ ಗುರುತಿಸುವ ಕಡ್ಡಾಯವಾದ ಕಾಯ್ದೆ ಜಾರಿಯಾಗಬೇಕು.

೫. ದೇವದಾಸಿಯೊಂದಿಗೆ ಮದುವೆಯಾಗುವವರಿಗೆ ಆರ್ಥಿಕ ಅನುದಾನದೊಂದಿಗೆ ನೌಕರಿಯಲ್ಲಿ ಪ್ರಾಧಾನ್ಯತೆ ನೀಡಬೇಕು. ಇಲ್ಲವೆ ಸ್ವಯಂ ಉದ್ಯೋಗ ಮಾಡಲು ಆರ್ಥಿಕ ನೆರವು ನೀಡಬೇಕು.

೬. ಯಾವ ದೇವಾಲಯದಲ್ಲಿ ದೇವದಾಸಿ ಬಿಡುವ ಪದ್ಧತಿ ಇದೆಯೋ ಅಂತಹ ಎಲ್ಲ ದೇವಾಲಯಗಳನ್ನು ಸರ್ಕಾರ ತನ್ನ ಅಧೀನಕ್ಕೆ ತೆಗೆದುಕೊಳ್ಳಬೇಕು.

೭. ಪ್ರತಿಯೊಂದು ಸರ್ಕಾರಿ ಆಸ್ಪತ್ರೆಯಲ್ಲಿ ಹುಡುಗ–ಹುಡುಗಿಯರ ಜಟೆ ಕತ್ತರಿಸುವ ಉಚಿತ ಸೇವೆ ಇರಬೇಕು.

೮. ದೇವದಾಸಿ ಪದ್ಧತಿ ಬಗ್ಗೆ ವಿವರವಾದ ಜಾಹೀರಾತುಗಳನ್ನು ತಯಾರಿಸಿ ಅವುಗಳನ್ನು ಹಳ್ಳಿ ಹಳ್ಳಿಗಳಲ್ಲಿ ಹಂಚಬೇಕು.

೯. ಪ್ರತಿಯೊಂದು ಪರಿವರ್ತನಾವಾದಿ ಸಂಘಟನೆಗಳು ದೇವದಾಸಿ ಪದ್ಧತಿ ನಿರ್ಮೂಲನೆ ಕಾರ್ಯದಲ್ಲಿ ಸಹಭಾಗಿಯಾಗಬೇಕು.

೧೦. ದೇವದಾಸಿ ಪದ್ಧತಿ ವಿರುದ್ಧ ನಿರಂತರವಾಗಿ ಚಳವಳಿ ಮಾಡುವ ಸಂಘಟನೆಗಳಿಗೆ ಸರ್ಕಾರವು ಆರ್ಥಿಕ ಸಹಾಯವನ್ನು ನೀಡಬೇಕು ಮತ್ತು ಅವಶ್ಯಕವಾದ ಸಾಧನ–ಸಾಮಗ್ರಿಗಳನ್ನು ಒದಗಿಸುವ ಮೂಲಕ ಅವುಗಳಲ್ಲಿ ಬಲ ತುಂಬಬೇಕು." (ಉತ್ತಮ ಕಾಂಬಳೆ (ಮೂಲ) ಸಿದ್ರಾಮಕಾರಣಿಕ (ಕ) : 'ದೇವದಾಸಿ ಮತ್ತು ಬೆತ್ತಲೆ ಸೇವೆ' ೮೪, ೮೫)

ಇಂತಹ ಅನೇಕ ಮಾರ್ಗಗಳಿಂದ ದೇವದಾಸಿ ಪದ್ದತಿ ನಿರ್ಮೂಲನೆ ಮಾಡಲು ಪ್ರಯತ್ನಿಸಬಹುದು. ಕಾಲ ಬದಲಾದಂತೆ ಹೊಸ ಕ್ರಮಗಳನ್ನು ಇದರೊಂದಿಗೆ ಸೇರಿಸಿಕೊಳ್ಳಬಹುದು. ಸಮಾಜದಲ್ಲಿ ನಿಕೃಷ್ಟವಾದ ದೇವದಾಸಿ ಪದ್ಧತಿಗೆ ಬಲಿಯಾಗಿ ನರಳುತ್ತಿರುವವರು ಸಾಮಾನ್ಯವಾಗಿ ದಲಿತ ಹೆಣ್ಣುಮಕ್ಕಳು. ದೇವದಾಸಿ ಪದ್ಧತಿಯನ್ನು ವಿರೋಧಿಸುವ ಸೋಗು ಹಾಕಿಕೊಂಡು ಮತಗಳನ್ನು ಪಡೆದು ಅಧಿಕಾರದ ಚುಕ್ಕಾಣಿ ಹಿಡಿದ ಮೇಲೆ ಯಾರೂ ಇದರ ಬಗ್ಗೆ ಚಕಾರವೆತ್ತುವುದಿಲ್ಲ. ದಲಿತ ಸಮುದಾಯದಿಂದಲೇ ಆಯ್ಕೆಯಾಗಿ ಹೋದಂಥ ಸಾಕಷ್ಟು ಜನ ಮಂತ್ರಿಗಳು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಲ್ಲಿದ್ದಾರೆ. ಆದರೆ ಇವರ್‍ಯಾರೂ ಇಂತಹ ಅನಿಷ್ಟ ಪದ್ಧತಿಯ ವಿರುದ್ಧ ಸದನದಲ್ಲಿ ದನಿ ಎತ್ತಿದ್ದು ಕಂಡು ಬರುವುದಿಲ್ಲ. ದಲಿತ ಸಮುದಾಯದಿಂದಲೇ ಆಯ್ಕೆಯಾಗಿ ಹೋದ ಮಹಿಳೆಯರೂ ಕೂಡ ಅಧಿಕಾರದಲ್ಲಿದ್ದಾರೆ. ಅವರೂ ಸಹ ಇಂಥ ಅಮಾನುಷ ಪದ್ಧತಿಯ

ವಿರುದ್ಧ ದನಿ ಎತ್ತುವುದಿಲ್ಲ. ಇದೊಂದು ದೇವರು, ಧರ್ಮಕ್ಕೆ ಸಂಬಂಧಪಟ್ಟ ಆಚರಣೆಯಾದ್ದರಿಂದ ಈ ಪದ್ಧತಿಯ ವಿರುದ್ಧ ಮಾತನಾಡಿದ್ದೇ ಆದರೆ ಮುಂದೆ ಮತಗಳನ್ನು ಕಳೆದುಕೊಳ್ಳಬಹುದೆಂಬ ಭಯವೂ ಇದಕ್ಕೆ ಕಾರಣವಾಗಿರಬಹುದೇನೋ ಗೊತ್ತಿಲ್ಲ. ದಲಿತ ಸಮುದಾಯದವರೇ ಆದ ಸಾಕಷ್ಟು ಹೆಣ್ಣುಮಕ್ಕಳು ಉನ್ನತ ಹುದ್ದೆಗಳಲ್ಲಿದ್ದಾರೆ. ಇದೇ ಸಮುದಾಯದ ಐ.ಎ.ಎಸ್., ಎಂ.ಬಿ.ಬಿ.ಎಸ್., ಇಂಜಿನಿಯರ್‌ಗಳು, ಅಧ್ಯಾಪಕರು ಮುಂತಾದ ವಿವಿಧ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಇವರಿಗೆ ಸಾಕಷ್ಟು ಆರ್ಥಿಕ ಬಲವೂ, ಬುದ್ಧಿಬಲವೂ, ಅಧಿಕಾರಬಲವೂ ಇದೆ. ಆದರೆ ಇಂತಹ ಅನಿಷ್ಟ ಪದ್ದತಿಯ ವಿರುದ್ಧ ದನಿ ಎತ್ತುವ ಬಲ ಯಾಕಿಲ್ಲ? ಸ್ವತಃ ತಮ್ಮದೇ ಸಮುದಾಯದ ಹೆಣ್ಣುಮಕ್ಕಳು ಇಂತಹ ಕೆಟ್ಟ ಪದ್ಧತಿಗಳಿಗೆ ಬಲಿಯಾಗುವುದರ ಮೂಲಕ ತಮ್ಮ ಸುಂದರವಾದ ಜೀವನಗಳನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಇಂತಹ ಅಕ್ಕ-ತಂಗಿಯರ ಜೀವನವನ್ನು ಸರಿಪಡಿಸುವುದು ನಮ್ಮ ಜವಾಬ್ದಾರಿ ಎಂದು ಮುಂದೆ ಬರಬೇಕಾಗಿದೆ.

ದೇವರು, ಧರ್ಮ, ಜಾತಿ ಈ ಮೂರು ವಿಚಾರಗಳು ಬಂದಾಗ ಮನುಷ್ಯ ತನ್ನ ವಿವೇಚನೆಯನ್ನು ಕಳೆದುಕೊಳ್ಳುತ್ತಾನೆ. ಬಾಬರಿ ಮಸೀದಿ ಮತ್ತು ರಾಮಜನ್ಮಭೂಮಿ ಗಲಾಟೆ ಪ್ರಕರಣ ನಡೆದದ್ದು ಕೂಡ ಇದೇ ದೇವರು, ಧರ್ಮ, ಜಾತಿಗಾಗಿಯೇ ಅಲ್ಲವೆ? ಮಸೀದಿಯಲ್ಲಿ ಹಂದಿಮಾಂಸ ಹಾಕಿದರೆಂದೋ, ಈಶ್ವರನ ಗುಡಿಯಲ್ಲಿ ಮಾಂಸ ಹಾಕಿದರೆಂದೋ ಹಿಂದೂ ಮುಸ್ಲಿಂ ಗಲಾಟೆಗಳು ಮಾಡಿಕೊಳ್ಳುವುದನ್ನು ನಾವೆಲ್ಲಾ ಗಮನಿಸಿಯೇ ಇರುತ್ತೇವೆ. ಮನುಷ್ಯ ತನ್ನ ಬದುಕಿನ ನಡುವೆ ಏನೆಲ್ಲಾ ಕಂದಾಚಾರ, ಮೌಢ್ಯ, ಭಯ ಭಕ್ತಿಗಳನ್ನು ನಿರ್ಮಿಸಿಕೊಂಡಿದ್ದಾನೆ. ತಾನು ಸತ್ತಾಗ ತಾನೇ ಸೃಷ್ಟಿಸಿಕೊಂಡ ದೇವರು, ಜಾತಿ, ಧರ್ಮ, ಗುಡಿ, ಚರ್ಚು, ಮಸೀದಿ ಇವು ಯಾವುವೂ ಬರುವುದಿಲ್ಲವೆಂದು ಗೊತ್ತಿದ್ದೂ ಅವಕ್ಕಾಗಿ ಬಡಿದಾಡುತ್ತಾನೆ. ಇಂತಹ ದೇವರು, ಧರ್ಮ, ಜಾತಿಯ ಕಾರಣಕ್ಕಾಗಿ ಹುಟ್ಟಿಕೊಂಡಿದ್ದೇ ದೇವದಾಸಿ ಪದ್ದತಿಯೂ ಕೂಡ. ಪರಂಪರಾಗತವಾಗಿ ನಡೆದುಕೊಂಡು ಬಂದಂತಹ ದೇವದಾಸಿ ಪದ್ಧತಿಯನ್ನು ಯಾರದೋ ಒತ್ತಡ ಒತ್ತಾಯಕ್ಕಾಗಿ ನಿಲ್ಲಿಸಿಬಿಟ್ಟರೆ ಎಲ್ಲಿ ದೇವರು ಮುನಿಸಿಕೊಳ್ಳುತ್ತಾನೋ ಅಥವಾ ಅನಾಹುತ ಮಾಡುತ್ತಾನೋ ಎಂಬಂತಹ ಪೂರ್ವಾಗ್ರಹಗಳು ಅವಿದ್ಯಾವಂತರಾದ ಕೆಳಜಾತಿಯವರಲ್ಲಿವೆ. ಆ ಭಯದ ಕಾರಣಕ್ಕಾಗಿಯೇ ಸರ್ಕಾರ, ಸಂಘ-ಸಂಸ್ಥೆಗಳು ಹಿಂದೆ ಎಷ್ಟೆಲ್ಲಾ ಪ್ರಯತ್ನಪಟ್ಟಿದ್ದರೂ ಇಂದಿಗೂ ಕೂಡ ನಿರ್ಮೂಲನೆ ಮಾಡಲು ಸಾಧ್ಯವಾಗಿಲ್ಲ. ಬೆತ್ತಲೆ ಸೇವೆ ನಡೆಯದಂತೆ ತಡೆಯಲು ನಿಯೋಜನೆಗೊಂಡಿರುವ 'ಪೊಲೀಸರೇ ಬೆಲ್ಟು ಬಿಚ್ಚಿ, ಶೂ ಕಳಚಿ, ಲಾಠಿ ಪಕ್ಕಕ್ಕಿಟ್ಟು ಭಕ್ತಿಯಿಂದ ಕೈಮುಗಿದು ನಿಲ್ಲುತ್ತಾರೆಂದರೆ

ಇಂಥವರಿಂದ ವ್ಯವಸ್ಥೆಯನ್ನು ಸರಿಪಡಿಸಲು ಹೇಗೆ ಸಾಧ್ಯ? ಮೊದಲು ಇಂತಹ ಅಧಿಕಾರಿಗಳ ಮನಃಪರಿವರ್ತನೆ ಆಗಬೇಕಾದ ಅವಶ್ಯಕತೆಯಿದೆ. ಭಕ್ತಿಯ ಮೂಲವಿರುವುದು ಭಯದಲ್ಲಿ. ದೇವದಾಸಿ ಪದ್ಧತಿ ನಡೆಯಲು ಕಾರಣವಾಗಿರುವುದು ಕೂಡಾ ಭಯದಿಂದಲೇ. ಇಂತಹ ಸಂದರ್ಭಗಳಲ್ಲಿ ಮುಗ್ಧಜನರ ಭಯವನ್ನು ಯಾವುದೇ ಪೋಲೀಸು, ಲಾಠಿ, ಸಂಘಟನೆ, ಪುನರ್ವಸತಿ, ಶಿಕ್ಷಣ, ಹೋರಾಟ ತಿಂಗಳಿಗೆ ೪೦೦ ರೂ. ಮಾಸಾಶನ ಕೊಡುವುದರಿಂದಾಗಲೀ, ಪುನರ್ವಸತಿಗೆಂದು ಸಾಲ, ಮನೆ, ಉದ್ಯೋಗ, ಸರ್ಕಾರದ ಕಾನೂನು ಹೋಗಲಾಡಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಮೊದಲು ಮುಗ್ಧ ಜನರ ಮನಸ್ಸನ್ನು ಒಲಿಸುವುದರ ಮೂಲಕ ದೇವದಾಸಿ ಪದ್ಧತಿಯನ್ನು ಹಂತ–ಹಂತವಾಗಿ ಹೋಗಲಾಡಿಸುವ ಅಗತ್ಯವಿದೆ.

೫.೨ ದೌರ್ಜನ್ಯಗಳ ನೆಲೆ : ಕುಟುಂಬ ಮತ್ತು ದುಡಿಯುವ ಸ್ಥಳಗಳಲ್ಲಿ

ದಲಿತ ಮಹಿಳೆ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಬಿ.ಟಿ. ಲಲಿತಾ ನಾಯಕರ 'ಗತಿ' ಮತ್ತು ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಗಳ ಆಧಾರದಲ್ಲಿ ಕುಟುಂಬದ ಒಳಗೆ ಮತ್ತು ಕುಟುಂಬಗಳ ಹೊರಗೆ ಎಂದು ವಿಭಾಗಿಸಿಕೊಂಡು ಅಧ್ಯಯನ ನಡೆಸಲಾಗುತ್ತಿದೆ.

'ದೌರ್ಜನ್ಯ'ವೆಂಬುದು ಪ್ರಧಾನ ಸಂಸ್ಕೃತಿಯೊಂದು ಅಧೀನ ಸಂಸ್ಕೃತಿಯ ಮೇಲೆ ನಡೆಸುವ ದಬ್ಬಾಳಿಕೆಯಾಗಿದೆ. ಇಂತಹ ದೌರ್ಜನ್ಯವನ್ನು ೪ ರೀತಿಗಳಲ್ಲಿ ವಿಭಾಗಿಸಬಹುದು.

೧. ಮಾನಸಿಕ

೨. ಬೌದ್ಧಿಕ

೩. ಭಾವನಾತ್ಮಕ

೪. ದೈಹಿಕ

ಮೇಲಿನ ಕಾರಣಗಳಿಗಾಗಿ ಸಮಾಜದಲ್ಲಿ ದೌರ್ಜನ್ಯಗಳು ನಡೆಯುತ್ತವೆ. ಹಿಂದೆ ದೈಹಿಕ ದೌರ್ಜನ್ಯಗಳು ಅಧಿಕವಾಗಿದ್ದವು. ಆದರೆ ಇಂದು ಮಾನಸಿಕ, ಬೌದ್ಧಿಕ, ಭಾವನಾತ್ಮಕ ದೌರ್ಜನ್ಯಗಳು ಹೆಚ್ಚಾಗಿ ಕಂಡುಬರುತ್ತವೆ. ದೈಹಿಕ ದೌರ್ಜನ್ಯಕ್ಕಿಂತ ಹೆಚ್ಚು ಘಾಸಿಗೊಳಿಸುವುದು ಮಾನಸಿಕ ದೌರ್ಜನ್ಯವಾಗಿದೆ. ಇಂತಹ ದೌರ್ಜನ್ಯಗಳನ್ನು ಎರಡು ಕಡೆಗಳಲ್ಲಿ ಕಾಣಬಹುದು.

೧. ಕುಟುಂಬದೊಳಗೆ

೨. ಕುಟುಂಬದ ಹೊರಗೆ

ಯಾರು, ಯಾರ ಮೇಲೆ ದೌರ್ಜನ್ಯ ನಡೆಸುತ್ತಾರೆ? ಎಂಬುದಕ್ಕೆ ಉತ್ತರ ಹುಡುಕ ಹೊರಟರೆ ಸಾಕಷ್ಟು ಸಿಗುತ್ತವೆ. ಒಟ್ಟಾರೆಯಾಗಿ ಸಮಾಜದಲ್ಲಿ ಪ್ರಧಾನವಾದದ್ದು ಅಧೀನವಾದದ್ದನ್ನು ದೌರ್ಜನ್ಯಕ್ಕೆ ಒಳಪಡಿಸುತ್ತದೆ. ಅಂಥವುಗಳೆಂದರೆ:

೧. ಗಂಡ ಎನಿಸಿಕೊಂಡವನು ಹೆಂಡತಿಯ ಮೇಲೆ ನಡೆಸುವ ದೌರ್ಜನ್ಯ.

೨. ತಂದೆ ಮಗಳ ಮೇಲೆ ನಡೆಸುವ ದೌರ್ಜನ್ಯ.

೩. ಅಣ್ಣ–ತಮ್ಮಂದಿರಿಂದ ತಂಗಿ ಅಥವಾ ಅಕ್ಕನ ಮೇಲೆ ನಡೆಯುವ ದೌರ್ಜನ್ಯ.

೪. ಒಡೆಯ ಆಳಿನ ಮೇಲೆ ನಡೆಸುವ ದೌರ್ಜನ್ಯ.

೫. ಮೇಲ್ವರ್ಗದವರಿಂದ ಕೆಳವರ್ಗದವರ ಮೇಲೆ ನಡೆಯುವ ದೌರ್ಜನ್ಯ.

೬. ಧರ್ಮ–ಧರ್ಮಗಳ ನಡುವೆ ನಡೆಯುವ ದೌರ್ಜನ್ಯ.

೭. ಸವರ್ಣೀಯರಿಂದ ದಲಿತರ ಮೇಲೆ ಅದರಲ್ಲೂ ಮುಖ್ಯವಾಗಿ ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯ.

ಪ್ರಸ್ತುತ ಭಾಗದಲ್ಲಿ ದುಡಿಯುವ ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ಕುಟುಂಬ ಮತ್ತು ಕೌಟುಂಬಿಕೇತರ ಸ್ಥಳಗಳಲ್ಲಿ ದೌರ್ಜನ್ಯಗಳು ನಡೆಯಲು ಕಾರಣಗಳನ್ನು ಮತ್ತು ಪರಿಹಾರಗಳನ್ನು ಕುರಿತ ಅಧ್ಯಯನ ಇದಾಗಿದೆ. ದಲಿತ ಮಹಿಳೆಯು ಹೊರಗೆ ದುಡಿಯುತ್ತಾಳೆ. ಬೆಳಿಗ್ಗೆ ಮನೆ ಕೆಲಸವನ್ನು ಮುಗಿಸಿ ಹೊರಟರೆ ಸಂಜೆಯವರೆಗೂ ಹೊರಗೆ ಹೊಲಗದ್ದೆಗಳಲ್ಲಿ ದುಡಿಯುತ್ತಾಳೆ. ಕೆಲಸದಿಂದ ವಾಪಸ್ಸಾದ ನಂತರವೂ ಅವಳಿಗೆ ಮನೆಯ ಕೆಲಸಗಳ ಜೊತೆಗೆ ಕುಡುಕ ಗಂಡನಿಂದಲೋ, ತಂದೆಯಿಂದಲೋ ದೈಹಿಕ ಅಥವಾ ಮಾನಸಿಕ ದೌರ್ಜನ್ಯವಾಗುತ್ತದೆ. ಸಾಮಾನ್ಯವಾಗಿ ದಲಿತ ಮಹಿಳೆ ಹೆಚ್ಚು ಸಮಯ ಕಳೆಯುತ್ತಿರುವ ಎರಡು ಜಾಗಗಳೆಂದರೆ ಮನೆ (ಕುಟುಂಬ ಮತ್ತು ದುಡಿಯುವ ಸ್ಥಳ ಅಥವಾ ಹೊರಗೆ. ಈ ಎರಡು ಜಾಗಗಳಲ್ಲೇ ಆಕೆ ನಿರಂತರವಾಗಿ ಶೋಷಣೆ ಅಥವಾ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾಳೆ. ದಲಿತ ಮಹಿಳೆ ಕುಟುಂಬದ ಹೊರಗೆ ಹೆಚ್ಚಾಗಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ದೈಹಿಕ ದೌರ್ಜನ್ಯಗಳು ನಡೆಯುವುದಿಲ್ಲವೆಂದಲ್ಲ. ಲೈಂಗಿಕತೆಗೆ ಒಪ್ಪದಿದ್ದಾಗ ದೈಹಿಕ ದೌರ್ಜನ್ಯಗಳು ನಡೆಯುತ್ತವೆ. ಆದ್ದರಿಂದ ಇವೆರಡಕ್ಕೂ ತೀರಾ ಹತ್ತಿರದ ಸಂಬಂಧವಿದೆ. ದಲಿತ ಮಹಿಳೆಯ ಮೇಲೆ ಹಲವು ಕಾರಣಗಳಿಂದ ದೌರ್ಜನ್ಯಗಳು ನಡೆಯುತ್ತಿವೆ. ಅವುಗಳೆಂದರೆ:

೧. ಜಾತಿ

೨. ಲಿಂಗ

೩. ವರ್ಣ

ಈ ಮೂರು ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯಕ್ಕೆ ಮುಖ್ಯಕಾರಣಗಳಾಗಿವೆ. ಇವನ್ನು ಹೊರತುಪಡಿಸಿ ಸಾಕಷ್ಟು ಬೇರೆ ಕಾರಣಗಳಿಂದಲೂ ಆಕೆ ದೈಹಿಕ ದೌರ್ಜನ್ಯಕ್ಕೊಳಗಾಗುತ್ತಿದ್ದಾಳೆ. ಅವುಗಳೆಂದರೆ:

೪. ಮೂಢನಂಬಿಕೆಗಳು

೫. ಅಜ್ಞಾನ

೬. ಅನಕ್ಷರತೆ

೭. ಅಸಂಘಟಿತ ಕ್ಷೇತ್ರ

೮. ಕಡಿಮೆ ಕೂಲಿ

೯. ರಾಜಕೀಯ ಕಾರಣಗಳು

೧೦. ದಲಿತ ಚಳವಳಿಗಳ ನಿರ್ಲಕ್ಷ್ಯ

ಈ ಎಲ್ಲಾ ಕಾರಣಗಳಿಂದ ದಲಿತ ಮಹಿಳೆ ದೈಹಿಕ ಮತ್ತು ಮಾನಸಿಕ ದೌರ್ಜನ್ಯಗಳಿಗೆ ಬಲಿಯಾಗಿದ್ದಾಳೆ. ಅವಳು 'ಮಹಿಳೆ' ಎಂಬ ಕಾರಣಕ್ಕೆ, ಅವಳು 'ದಲಿತ' ಎಂಬ ಜಾತಿಯ ಕಾರಣಕ್ಕೆ, ಮತ್ತು ಅವಳ ಬಣ್ಣದ ಕಾರಣಕ್ಕೆ ಸಾಕಷ್ಟು ಲೈಂಗಿಕ ದೌರ್ಜನ್ಯಗಳಿಗೆ ಒಳಗಾಗುತ್ತಿರುವುದನ್ನು ಸಾಹಿತ್ಯಕೃತಿಗಳಿಂದ ಮತ್ತು ಸಾಮಾಜಿಕ ಹಿನ್ನೆಲೆಯಿಂದ ಗುರುತಿಸಬಹುದು. ಗೀತಾ ನಾಗಭೂಷಣರ 'ಬದುಕು' ಕಾದಂಬರಿಯಲ್ಲಿ ಕುಟುಂಬದೊರಗಿನ ದೌರ್ಜನ್ಯವನ್ನು ಕಾಣಬಹುದು. ಅವರದೇ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯಲ್ಲಿ ಲಚ್ಚಿ ಹೊರಗಿನ ದೌರ್ಜನ್ಯಕ್ಕೆ ಬಲಿಯಾಗುತ್ತಾಳೆ. ಬಿ.ಟಿ.ಲಲಿತಾ ನಾಯಕರ 'ಗತಿ' ಕಾದಂಬರಿಯುದ್ದಕ್ಕೂ ಕೌಟುಂಬಿಕ ಮತ್ತು ಕೌಟುಂಬಿಕೇತರ ದೌರ್ಜನ್ಯಗಳು ಹಾಸುಹೊಕ್ಕಾಗಿವೆ. ಶಿವರಾಮ ಕಾರಂತರ ಚೋಮನ ದುಡಿ ಕಾದಂಬರಿಯ ಬೆಳ್ಳಿ ಕೌಟುಂಬಿಕೇತರ ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ಕಾದಂಬರಿಗಳಲ್ಲಿನ ದಲಿತ ಮಹಿಳೆ ಮೇಲೆ ನಡೆಯುತ್ತಿರುವ ದೌರ್ಜನ್ಯಕ್ಕೆ ವಾಸ್ತವ ಸಮಾಜದಲ್ಲಿ ಬದುಕುತ್ತಿರುವ ಜೀವಂತ ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಪ್ರಭಾವ ಬೀರಿರುವುದರಿಂದ ಸಮಾಜದಲ್ಲಿ ನಡೆಯುತ್ತಿರುವ ದಲಿತ ಮಹಿಳೆಯ ದೌರ್ಜನ್ಯಗಳ ಕಡೆಗೂ ಕಣ್ಣು ಹಾಯಿಸಲಾಗಿದೆ.

ಈ ಬಗೆಯ ದೌರ್ಜನ್ಯ ಕಲಿತ, ಉದ್ಯೋಗಸ್ಥ ದಲಿತ ಮಹಿಳೆಗೂ ಹೊರತಾಗಿಲ್ಲ. ಇಂಥ ಕಡೆಗಳಲ್ಲಿ ಮಾನಸಿಕ, ಬೌದ್ಧಿಕ ದೌರ್ಜನ್ಯಗಳು ಹೆಚ್ಚು ನಡೆಯುತ್ತಿವೆ. ಉದಾಹರಣೆಗೆ ದು. ಸರಸ್ವತಿಯವರ ಮೇಲೆ ನಡೆದಿದ್ದು ಇಂತಹ ಮಾನಸಿಕ ದೌರ್ಜನ್ಯವೇ. ಔದ್ಯೋಗಿಕ ಕ್ಷೇತ್ರದಲ್ಲಿ ದೈಹಿಕವಾಗಿ, ಲೈಂಗಿಕವಾಗಿ ದಲಿತ ಮಹಿಳೆಯ ಸಾಧನೆಯನ್ನು ಬಗ್ಗುಬಡಿಯಲು ಸಾಧ್ಯವಾಗದಿದ್ದಾಗ ಮಾನಸಿಕ ದೌರ್ಜನ್ಯವೆಸಗುವ ಅಸ್ತ್ರಗಳನ್ನು ಸಿದ್ಧಮಾಡಿಟ್ಟುಕೊಂಡಿದ್ದಾರೆ. ಅವಳ ಅಧಃಪತನಕ್ಕಾಗಿ ಸುಂದರವಾದ ಬಲೆಯನ್ನೇ ನೇಯ್ದು ಅದರಲ್ಲಿ ಸಿಕ್ಕಿಹಾಕಿಸುತ್ತಾರೆ. ಇಂಥ 'ಖೆಡ್ಡಾ'ಗಳಿಗೆ ಸಾಕಷ್ಟು ದಲಿತ ಹೆಣ್ಣುಮಕ್ಕಳು ಬಲಿಯಾಗಿದ್ದಾರೆ. ಅವಿದ್ಯಾವಂತಳಾದ ದಲಿತ ಮಹಿಳೆ ಹೊರಗೆ ಹೊಲಗದ್ದೆಗಳಲ್ಲಿ, ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುವಾಗಲೂ ಶೋಷಣೆ ತಪ್ಪಿದ್ದಲ್ಲ. ಅಷ್ಟೋ ಇಷ್ಟೋ ಕಷ್ಟ ಪಟ್ಟು ಕಲಿತು ಉದ್ಯೋಗ ಮಾಡುವಾಗಲೂ ಆಕೆಯ ಮೇಲಿನ ದೌರ್ಜನ್ಯ ತಪ್ಪಿದ್ದಲ್ಲ. ಒಟ್ಟಾರೆ ಹೇಗಿದ್ದರೂ ದಲಿತ ಮಹಿಳೆಯ ಮೇಲಿನ ದೌರ್ಜನ್ಯಗಳು ಸಂಪೂರ್ಣವಾಗಿ ನಿಲ್ಲುವುದಿಲ್ಲ. ಅವಳ ಸ್ಥಿತಿ 'ಬೆಂಕಿಯಿಂದ ಬಾಣಲೆಗೆ' ಎಂಬಂತಾಗಿದೆ. ಇದರ ನಡುವೆಯೂ ಇಂದು ದಲಿತ ಹೆಣ್ಣುಮಕ್ಕಳು ಶಿಕ್ಷಣವನ್ನು ಕಲಿತು ಹಲವು ಕ್ಷೇತ್ರಗಳಲ್ಲಿ ಉದ್ಯೋಗ ಮಾಡುತ್ತಿರುವುದು, ಗುರುತಿಸಿಕೊಂಡಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

"ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯವೆಂದರೆ ಲಿಂಗಾಧಾರಿತ ದೌರ್ಜನ್ಯಕ್ಕೆ ಸಂಬಂಧಿಸಿದ ಯಾವುದೇ ಕೃತ್ಯದ ಪರಿಣಾಮವಾಗಿದೆ. ಒತ್ತಾಯಪೂರ್ವಕವಾಗಿ ಅವಳ ಇಚ್ಛಾನುಸಾರವೆನ್ನುವಂತೆ ಅವಳ ಸ್ವಾತಂತ್ರ್ಯವನ್ನು ಅಪಹರಿಸಲು, ಅವಳ ಖಾಸಗಿ–ಸಾರ್ವಜನಿಕ ಬದುಕಿನ ಮೇಲೆ ನಿಯಂತ್ರಣ ಸಾಧಿಸುವುದು, ಅವಳ ಅಭಿವೃದ್ಧಿಯ ಮೂಲ, ಮೂಲಭೂತ ಚಟುವಟಿಕೆ, ಚಲನಶೀಲತೆಯ ಮೇಲೆ ಶಾಶ್ವತ ನಿರ್ಬಂಧಗೊಳಿಸುವುದು. ಹೀಗೆ ಹಿಂಸಾತ್ಮಕ ಕೃತ್ಯಗಳ ಮೂಲಕ ಭಯವನ್ನು ಸೃಷ್ಟಿಸಿ, ನಿಯಂತ್ರಣಕ್ಕೆಳೆದುಕೊಳ್ಳುವ ಪರಿಣಾಮಕಾರಿ ತಂತ್ರಗಾರಿಕೆಯೇ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ. ಈ ಬಗೆಯ ದೌರ್ಜನ್ಯಗಳು ವಾಸ್ತವವಾಗಿ ಮಹಿಳೆಯ ಸಾಧನೆಯಲ್ಲಿ ಅಭಿವೃದ್ಧಿಯಲ್ಲಿ ತೊಡಕುಂಟು ಮಾಡಲು ಬಳಸುವ ಅಸ್ತ್ರವಾಗಿದೆ." (ಡಾ. ಶ್ರೀದೇವಿ ವಿ. ಆಲೂರ: 'ಮಹಿಳಾ ಅಧ್ಯಯನ', ೧೩೧) ಮೇಲಿನ ಅಂಶಗಳು ಹೆಚ್ಚಾಗಿ ಇಂದು ಶಿಕ್ಷಣ ಕಲಿತು ಹೊರಗೆ ದುಡಿಯುತ್ತಿರುವ ದಲಿತ ಮಹಿಳೆಯರನ್ನು ತುಳಿಯಲು ರೂಪಿಸಿಕೊಂಡಿರುವ ತಂತ್ರಗಳಾಗಿವೆ.

'ಗತಿ' ಕಾದಂಬರಿಯಲ್ಲಿ ಕುಟುಂಬದೊಳಗಿನ ಮತ್ತು ಹೊರಗಿನ ದೌರ್ಜನ್ಯಗಳು ಕಂಡು ಬರುತ್ತವೆ. ಸೋನಿ ಕಟ್ಟಿಗೆ ಮಾರಿ ಬಂದ ಹಣದಿಂದ ಕೋಳಿ ಮರಿಯನ್ನು ತಂದು ಸಾಕಿ

ಬೆಳೆಸಿರುತ್ತಾಳೆ. ಈ ಕೋಳಿಯನ್ನು ಸೋನಿಯ ಗಂಡ ಮಾನ್ಯಾ ಕದ್ದುಕೊಂಡು ಹೋಗಿ ಮಾರಿ ಕುಡಿದು ಬಂದಿರುತ್ತಾನೆ. ಇದನ್ನು ಪ್ರಶ್ನಿಸಿದ ಸೋನಿಗೆ ಮಾನ್ಯಾ ಎದುರಿಗಿದ್ದ ಹಿತ್ತಾಳೆ ಚೊಂಬಿನಿಂದ ತಲೆಗೆ ಹೊಡೆಯುತ್ತಾನೆ. ಸೋನಿ "ಅಯ್ಯೋ ಸತ್ತೇ..ನಾನೇನು ಅಂತಾದ್ದು ಮಾತಾಡಿದೆ ಎಂದು ಕೇಳಿದ್ದಕ್ಕೆ ಮಾನ್ಯಾ 'ಎಲಾ ರಂಡೆ! ಹೊಳ್ಳಿ ನನ್ನ ಬೈತಿಯೇನ್ಲೇ! ಎನ್ನುತ್ತ ಜಿಗಿದು ಬಂದು ಮತ್ತೆ ಬೆನ್ನಿಗೆ ಬಾರಿಸತೊಡಗಿದ." (ಲಲಿತಾ ನಾಯಕ್ ಬಿ.ಟಿ.: 'ಗತಿ', ೧೧) ಆ ಸಂದರ್ಭದಲ್ಲಿ ನೆರೆದವರು ಹೊಡೆತ ತಿಂದ ಸೋನಿಗೇ ಹೆಚ್ಚು ಬುದ್ಧಿವಾದ ಹೇಳುತ್ತಾರೆ. ಎರಡು ಮಕ್ಕಳ ತಾಯಾದವಳು ಗಂಡನಿಗೆ ತಗ್ಗಿ-ಬಗ್ಗಿ ನಡೆಯಬೇಕು, ಹೆಣ್ಣುಮಕ್ಕಳ ಬಾಳೆಲ್ಲ ಇಷ್ಟೆ ಎಂದು ಸಮಾಧಾನಪಡಿಸುವುದು ಸಮಾಜದಲ್ಲಿ ಗಂಡಿನ ದೌರ್ಜನ್ಯವೆನ್ನುವುದು ಸಹಜವಾದುದು. ಅದು ಅವನ ಹಕ್ಕಾಗಿದೆ, ಹೆಣ್ಣಾದವಳು ಗಂಡು ಎಷ್ಟೇ ತಪ್ಪು ಮಾಡಿದರೂ ಪ್ರಶ್ನಿಸಬಾರದು ಎಂಬುದನ್ನು ಧ್ವನಿಸುತ್ತಿದೆ.

ಸೋನಿಗೆ ಇಂಥ ಸಾಕಷ್ಟು ಕೌಟುಂಬಿಕ ದೌರ್ಜನ್ಯಗಳು ಮೇಲಿಂದ ಮೇಲೆ ನಡೆಯುತ್ತಲೇ ಇರುತ್ತವೆ. ಮಾನ್ಯಾನ ಮದುವೆ ಸಂದರ್ಭದಲ್ಲಿ ಸೋನಿಯ ತವರಿನವರು 'ಸೈಕಲ್' ಕೊಡಲಿಲ್ಲ ಎಂಬ ಕಾರಣಕ್ಕೆ ಸೋನಿಯೊಂದಿಗೆ ಜಗಳ ಆರಂಭಿಸುತ್ತಾನೆ. ಚುಚ್ಚು ಮಾತುಗಳಿಂದ, ಮಾನಸಿಕ ದೌರ್ಜನ್ಯದಿಂದ ನೊಂದ ಸೋನಿ ಬಾವಿಗೆ ಹಾರಲು ಓಡುತ್ತಾಳೆ. ಆ ಸಂದರ್ಭದಲ್ಲಿ ಗಂಡ ಮತ್ತು ಮಾವನ ಕ್ರೌರ್ಯ ಅಸಹ್ಯ ಹುಟ್ಟಿಸುತ್ತದೆ. "ಗಂಡ-ಮಾವ ಸೇದುವ ಹಗ್ಗವೊಂದನ್ನು ಹಿಡಿದು ಹಿಂಬಾಲಿಸಿ ಬಂದರು. ಅವಳನ್ನು ಹಿಡಿದು ಸೊಂಟಕ್ಕೆ ಹಗ್ಗ ಬಿಗಿದು 'ಅಷ್ಟು ಧೈರ್ಯ ಇತ್ತಂದ್ರ ಟೊಂಕದ ಕುಣಿಕೆ ಬಿಚ್ಚಾಕಿ ಭಾವ್ಯಾಗ ಜಿಗಿದು ಸತ್ಬಿಡು! ಊರಾಗ ಹೆಣ್ಣು ಜಗ್ಗಿ ಅದಾವ! ಒಂದ್ ಬಿಟ್ಟು ಎರಡು ಸೈಕಲ್ ಕೊಟ್ಟು ಲಗ್ನ ಮಾಡ್ಕೊಡೊ ಮಂದಿ ರಗಡ್ ಅದಾರ!" (ಲಲಿತಾ ನಾಯಕ್ ಬಿ.ಟಿ.: 'ಗತಿ', ೧೭) ಎಂದು ಅಟ್ಟಹಾಸ ಮಾಡುತ್ತ ಅವಳನ್ನು ಬಾವಿಯಲ್ಲಿ ತೂಗುಬಿಡುತ್ತಾರೆ.

ಸೋನಿ ಮಾನಸಿಕ ದೌರ್ಜನ್ಯವನ್ನು ಸಹಿಸಿಕೊಳ್ಳಲಾಗದೆ ಸಾಯುತ್ತೇನೆಂದು ಬಾವಿಗೆ ಹಾರುವಾಗಲೂ ಅವಳ ಗಂಡ ಮತ್ತು ಮಾವನಿಗೆ ಕರುಣೆ ಬರದೆ ಇದ್ದದ್ದು ಅವರಿಬ್ಬರ ಅಮಾನುಷ ಮನಸ್ಸುಗಳಿಗಿಡಿದ ಕನ್ನಡಿಯಾಗಿದೆ. ದುಡಿಯುವ ಹೆಣ್ಣುಮಕ್ಕಳಿಗೆ ಎಲ್ಲಿಯೂ ನೆಮ್ಮದಿಯಾಗಲೀ, ಸುರಕ್ಷತೆಯಾಗಲೀ ಸಿಗುತ್ತಿಲ್ಲ ಎಂಬುದಕ್ಕೆ ಇದು ಉದಾಹರಣೆಯಾಗಿದೆ. ಇದಕ್ಕೆ ಕಾರಣ ದಲಿತ ಗಂಡುಗಳು ದುಡಿಯದೆ ಕುಡುಕರಾಗಿರುವುದು.

ಮನೆಯಲ್ಲಿನ ನವಣೆಯನ್ನು ತಾನೇ ತನ್ನ ಮುದಿಗೆಣೆಕಾರ್ತಿಗೆ ಹಂಚಿದ್ದ ಮಾವ ಹರಸಿಂಗ್ ಮತ್ತೆ ಸೋನಿಯನ್ನು ಕುರಿತು ನವಣೆ ಏನಾದವು ಎಂದು ಗಲಾಟೆ ಎಬ್ಬಿಸುತ್ತಾನೆ.

ಇರುವ ಸತ್ಯವನ್ನು ನೆನಪಿಸಿದ ಸೋನಿಗೆ ಮಾನ್ಯಾ ಕೆರಳಿದ ಹುಲಿಯಂತೆ ಅವಳ ಮೇಲೆರಗಿ ಹೊಡೆಯುತ್ತಾನೆ. "ನೋಡ್ದಾ, ಈ ಹಲಕಟ್ ಲೌಡಿ ಎಂಥ ದೌಲತ್ತಿನ ಮಾತಾಡ್ತಾಳಂಬೋದನ್ನ! ತಲಿ ಬಡಿಯೋಹಂಗ ಬಡ್ತಾ ಬಿದ್ರುಸತ ಧಿಮಾಕಿನ ಮಾತಾಡೋದನ್ನ ಬಿಡುವಲ್ಲಳು! ನಾ ಜೇಲಿಗ್ ಹ್ವಾದೆನೆಂದರೂ ಚಿಂತಿಲ್ಲ. ಈ ಲೌಡಿನ್ನ ಸಾಯಿಸೇ ಬಿಡ್ತೇನಿ..! ಅವನು ಮುನ್ನುಗ್ಗಿ ಬಂದು ಸೋನಿಯ ಎದೆಗೆ ಕಾಲಿನಿಂದ ಜಾಡಿಸಿ ಒದ್ದ. ಅನಾಮತ್ತಾಗಿ ಹಿಂದಕ್ಕೆ ಬಿದ್ದ ಅವಳ ತಲೆಗೆ ಬೀಸುವ ಕಲ್ಲಿನ ಗೂಟ ರಭಸವಾಗಿ ಬಡಿಯಿತು. ಸ್ವಲ್ಪಹೊತ್ತಿನ ಹಿಂದೆ ತಾನೆ ಅರಿವೆ ಅಚ್ಚಡಿ ಹಾಕಿ ಕಟ್ಟಿದ್ದ ಪಟ್ಟಿ ಕಿತ್ತು ಬಂದು ರಕ್ತ ಜಿಲಜಿಲನೆ ಹರಿಯಲಾರಂಭಿಸಿತು." (ಲಲಿತಾ ನಾಯಕ್ ಬಿ.ಟಿ.: 'ಗತಿ', ೧೯) ಪೆಟ್ಟಿನ ಮೇಲೆ ಪೆಟ್ಟು ತಿಂದ ಸೋನಿ ಪ್ರಜ್ಞೆ ಕಳೆದುಕೊಂಡು ಬೀಳುತ್ತಾಳೆ. 'ಗತಿ' ಕಾದಂಬರಿಯಲ್ಲಿ ಸೋನಿ ತನ್ನ ಕುಟುಂಬದೊಳಗೆ ಗಂಡ ಮತ್ತು ಮಾವನಿಂದ ಸಾಕಷ್ಟು ದೈಹಿಕ, ಮಾನಸಿಕ ದೌರ್ಜನ್ಯಗಳಿಗೆ ಒಳಗಾಗುವುದಲ್ಲದೆ ಕುಟುಂಬದ ಹೊರಗೂ ಎರಡೂ ರೀತಿಯ ದೌರ್ಜನ್ಯಗಳಿಗೆ ಒಳಗಾಗುತ್ತಾಳೆ. ಇದು 'ಸೋನಿ' ಒಬ್ಬಳ ಸ್ಥಿತಿಯಲ್ಲ. ಬಹುತೇಕ ಎಲ್ಲಾ ದಲಿತ ಮಹಿಳೆಯರ ಸ್ಥಿತಿ ಇದೇ ಆಗಿದೆ. ಗಂಡ ಮತ್ತು ಮಾವನ ದೌರ್ಜನ್ಯಗಳನ್ನು ಸಹಿಸಲಾಗದ ಸೋನಿ ಚಂದು ಮತ್ತು ಲಚ್ಮಿಯರ ಸಲಹೆ-ಸಹಾಯದಿಂದ ಗುಡಿಸಲನ್ನು ನಿರ್ಮಿಸಿಕೊಂಡು ಪ್ರತ್ಯೇಕವಾಗಿ ವಾಸಿಸುವಾಗಲೂ ದೌರ್ಜನ್ಯಗಳು ಅವಳನ್ನು ಬಿಡುವುದಿಲ್ಲ. ಕೌಟುಂಬಿಕೇತರ ದೌರ್ಜನ್ಯಗಳು ಆರಂಭವಾಗುತ್ತವೆ.

ದಲಿತ ಹೆಣ್ಣುಗಳು ಎಷ್ಟೇ ಸ್ವಾಭಿಮಾನ, ಶೀಲದಿಂದ ಬದುಕುತ್ತಿರದ್ದರೂ ಸಮಾಜದಲ್ಲಿನ ದುಷ್ಟರು ಅದನ್ನು ಕಬಳಿಸಲು ಹೊಂಚು ಹಾಕಿ ಕಾಯುತ್ತಲೇ ಇರುತ್ತಾರೆ. ಹೀಗೆ ದಲಿತ ಮಹಿಳೆಯರನ್ನು ದುರುಪಯೋಗಪಡಿಸಿಕೊಳ್ಳಲು ತಾವು ಹೇಳಿದಂತೆ ಕೇಳುವ ದಲಿತ ಪೂಜಾರಿಗಳನ್ನೇ ಏಜೆಂಟರುಗಳಾಗಿ ಇಟ್ಟುಕೊಂಡಿರುತ್ತಾರೆ. ಅಂಥ ಏಜೆಂಟ್ ಆದ ಕಾಶಪ್ಪ ಪೂಜಾರಿ ತನ್ನ ಹೀನ ಕೆಲಸವನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿರುತ್ತಾನೆ. ಇದಕ್ಕೆ ಸೋನಿಯನ್ನು ದುರುಪಯೋಗಪಡಿಸಿಕೊಳ್ಳಲು ಹದ್ದಿನಂತೆ ಹೊಂಚು ಹಾಕುತ್ತಲೇ ಇರುತ್ತಾನೆ.

ಕಾಶಪ್ಪ, ಸೋನಿಗೆ ಊರಿನ ಛೇರ್ಮನ್ ದೊಣ್ಣೆಯವರು ಮೆಚ್ಚಿಕೊಂಡಿರುವ ವಿಚಾರವನ್ನು ಹೇಳಿದಾಗ ಅದಕ್ಕೆ ಆಕೆ ಒಪ್ಪುವುದಿಲ್ಲ. ಎಷ್ಟೇ ದುಡ್ಡು ಆದರೂ ಕೊಡಲು ಸಿದ್ಧನಿರುವನೆಂದಾಗ ಸೋನಿ ಅವನಿಗೆ ಕ್ಯಾಕರಿಸಿ ಉಗಿದು ಹೋಗುತ್ತಾಳೆ. ಇದೇ ಅಪಮಾನದಿಂದ ಕಾಯುತ್ತಿದ್ದ ಕಾಶಪ್ಪ ಅಂದು ಸಂಜೆ ಸೋನಿ ಕೆಲಸ ಮುಗಿಸಿಕೊಂಡು ಗುಡಿಯ ಮುಂದೆ ನಡೆದುಕೊಂಡು ಹೋಗುತ್ತಿರುವಾಗ ಪ್ರಸಾದ ಕೊಡುವ ನೆಪದಿಂದ ಅವಳನ್ನು ಒಳಗೆ ಕರೆದು ಚಿಲಕ ಹಾಕುತ್ತಾನೆ. ಆಗ ಛೇರ್ಮನ್ ದೊಣ್ಣೆ ಸೋನಿಯನ್ನು ಕುರಿತು "ಓಡಿ ಇದ್ನ ಬಾ!' ಎನ್ನುತ್ತಾ ಅವಳ ಕೈಗೆ

ನೋಟುಗಳನ್ನು ಇಡಲು ಬಂದಾಗ, ಸೋನಿ ಅದನ್ನು ಮುಟ್ಟದೆ ದೂರ ಸರಿದು ನಿಂತಳು. 'ಬಾಗ್ಲಾ ತಗೀತೀಯೋ ಏನ್ ಜೋರಾಗಿ ಹೊಯ್ಕೊಳ್ಳಲೋ ಕಾಶಣ್ಣಾ!?' ಎಂದು ಕೂಗಿ ಕೇಳಿದಳು. ಕೂಡಲೆ ಕಾಶಪ್ಪ ಬಾಗಿಲು ತೆಗೆದು, ಅದಕ್ಕೆ ಅಡ್ಡಲಾಗಿ ನಿಂತ. 'ಯ್ಯದಕ್ಕ ಗಂಟ್ಲಾ ಹರಕೊಳ್ಳಾಕ ಹತ್ತಿದಿ ಬೇ? ಸಾಹೇಬ್ರು ನೋಟು ಹಿಡಿದು ನಿಂತಿರೋದು ಕಾನ್ಸುವಲ್ಲದೇನು ನಿನ್ಗ?" (ಲಲಿತಾ ನಾಯಕ್ ಬಿ.ಟಿ.: 'ಗತಿ', ೫೦) ಎಂದು ಹೇಳಿ ದಬಾಯಿಸಿದ. ಇಂಥ ಸಾಕಷ್ಟು ದೈಹಿಕ ಮತ್ತು ಮಾನಸಿಕ ದೌರ್ಜನ್ಯಗಳು ಸೋನಿಯ ಮೇಲೆ ನಡೆಯುತ್ತಲೇ ಇರುತ್ತವೆ. ಗಂಡನೊಡನಿದ್ದಾಗ ಕೌಟುಂಬಿಕ ದೌರ್ಜನ್ಯ, ಹೊರಗೆ ಬಂದಾಗಲೂ ದೌರ್ಜನ್ಯ ನಡೆಯುತ್ತಲೇ ಇರುತ್ತದೆ.

ಇದೇ ಕಾದಂಬರಿಯಲ್ಲಿ 'ಲಚ್ಮಿ'ಯ ಮೇಲೆ ಒಬ್ಬ ಮಠದಯ್ಯ ಲೈಂಗಿಕ ದೌರ್ಜನ್ಯ ನಡೆಸುತ್ತಾನೆ. ಅವಳು ಏನೂ ಮಾಡಲಾಗದಂಥ ಅಸಹಾಯಕ ಸ್ಥಿತಿಯನ್ನು ಲಚ್ಮಿಗೆ ನಿರ್ಮಾಣ ಮಾಡಿರುತ್ತಾನೆ. "ಅಂವ ತನ್ನ ಕೈಲಿಂದ ನನ್ನ ಕಣ್ಣೀರು ಒರೆಸ್ದ. ಮೈಕೈ ಮುಟ್ಟಿ ಸಮಾಧಾನ ಮಾಡಾಕ ಬಂದ. ನಾ ಅಂಜಿ ದೂರ ಸರ್ದಾಗ 'ಅಂಜಿಕೋ ಬ್ಯಾಡ. ನಮ್ಮಿಬ್ಬರಿಂದ ಶಿವಾ ತನ್ನ ಪೂಜಾ ಆಗಬೇಕಂತ ಬಯಸ್ತಾನ ! ನಾನು–ನೀನು ಪ್ರೀತಿಲಿಂದ ಕೂಡಿದರೆ ಅದೇ–ಶಿವಪೂಜಾ! ನೀ ದಸರಾ ನೋಡಲಿಕ್ಕಂತ ಬಂದಿದ್ದು. ಹಿಂದಾಗಡಿ ಇಲ್ಲಿ ನನ್ನ ವಾಸಕ್ಕ ಬಂದು ಸೇರಿದ್ದು ಇವೆಲ್ಲಾ ಶೀವಲೀಲೆಗಳೇ. ಅವನಾಟದ ಮುಂದ ನಮ್ಮಂಥ ಮನ್ಸರ ಆಟ ಏನೇನೂ ನಡಿಯಂಗಿಲ್ಲ ನೋಡು!" (ಲಲಿತಾ ನಾಯಕ್ ಬಿ.ಟಿ.: 'ಗತಿ', ೬೬) ಎಂದು ಸಮಾಧಾನ ಮಾಡುತ್ತಾನೆ. ದೇವರ ಹೆಸರನ್ನು ಅಡ್ಡ ಇಟ್ಟುಕೊಂಡು ಲೈಂಗಿಕ ಶೋಷಣೆ ನಡೆಸುವುದು ಪ್ರಸ್ತುತ ಸಂದರ್ಭದ ಮಠ–ಮಾನ್ಯಗಳು, ಮಠಾಧೀಶರ ನಡವಳಿಕೆಗೆ ಹಿಡಿದ ಕನ್ನಡಿಯಾಗಿದೆ. ಈ ಪ್ರಕರಣವು ಸಮಾಜದಲ್ಲಿರುವ ಮಠಗಳು ಮತ್ತು ಮಠಾಧೀಶರ ಕೊಳಕುತನವನ್ನು, ನೀಚತನವನ್ನು ಬಯಲಿಗೆಳೆಯುತ್ತದೆ. ಈ ಕಾರಣದಿಂದಲೇ ಇಂದು ಮಠಗಳು ಜನರ ನಂಬಿಕೆಯನ್ನು ಕಳೆದುಕೊಂಡಿವೆ.

ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯೂ ದಲಿತ ಮಹಿಳೆಯ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಕ್ಕೆ ಉದಾಹರಣೆಯಾಗಿದೆ. 'ಲಚ್ಚಿ' ಕುಂಬಳಕಾಯಿ ಕದ್ದ ಆಪಾದನೆಯಿಂದಾಗಿ ಕುಲಕರ್ಣಿ ಅವಳನ್ನು ಲೈಂಗಿಕವಾಗಿ ಉಪಯೋಗಿಸಿಕೊಳ್ಳಲು ನೋಡುತ್ತಾನೆ. ಇದಕ್ಕೆ ಒಪ್ಪದ ಲಚ್ಚಿಯನ್ನು ಕಂಬಕ್ಕೆ ಕಟ್ಟಿ ಹೊಡೆಸಿ ದೈಹಿಕ ಹಿಂಸೆಯನ್ನು ಕೊಡಿಸುತ್ತಾನೆ. ಆಗಲೂ ಕುಲಕರ್ಣಿಯ ಹಾದರಕ್ಕೆ ಒಪ್ಪದಿದ್ದಾಗ ಪೊಲೀಸರನ್ನು ಕರೆಸಿ ಜೈಲಿಗೆ ಕಳಿಸುತ್ತಾನೆ. ಆ ಜೈಲಿನಲ್ಲಿ ಪೊಲೀಸರು ಲಚ್ಚಿಗೆ ಹೊಡೆದು

ದೈಹಿಕ ದೌರ್ಜನ್ಯ ಮಾಡುವುದಲ್ಲದೆ ಅವಳನ್ನು ಲೈಂಗಿಕ ದೌರ್ಜನ್ಯಕ್ಕೂ ಗುರಿಪಡಿಸುತ್ತಾರೆ. ನಂತರ ಜೈಲಿನಿಂದ ಬಿಡುಗಡೆಯಾಗಿ ಸ್ತ್ರೀನಿಕೇತನಕ್ಕೆ ಹೋಗುತ್ತಾಳೆ. ಅಲ್ಲಿ ಸ್ತ್ರೀನಿಕೇತನದ ಅಧಿಕಾರಿಣಿ ಕೂಡ ಅವಳನ್ನು ಬೇರೆ ಆಫೀಸರ್‌ರಿಗೆ ಹಣಕ್ಕೆ ಮಾರುತ್ತಾಳೆ. ಬಲತ್ಕಾರಿಸಲು ಬಂದ ಅಧಿಕಾರಿಗೆ ಲಚ್ಚಿ ಪ್ರತಿರೋಧವನ್ನು ಒಡ್ಡಿದಾಗ ಕೆರಳಿದ ಆಫೀಸರ್ ಅವಳನ್ನು "ಮಾದರಚೋದ ಲೌಡಿ..ನನಗ..ನನಗೇ ಹೊಡಿತ್ಯಾ..ನಿನ್ ಹೆಣಾ ಹಾಕ್ತೀನಿ ಭೂಸುಡೀ ಎನ್ನುತ್ತ ಅವಳ ಸೀರೆಗೆ ಕೈಯಿಕ್ಕಿ ರಭಸದಿಂದ ಎಳೆದ. ಅವನ ಬೂಟುಗಾಲಿನ ಹೊಡೆತ ಸೊಂಟಕ್ಕೆ ಬಿದ್ದಾಗ ಅವಳು ನೆಲಕಚ್ಚಿದಳು. ದನಿ ತೆಗೆದು ಅತ್ತಳು. ಅವಳ ಅಳು ಅರಣ್ಯ ರೋದನವಾಯಿತು. ಅರ್ಧ ಗಂಟೆಯಲ್ಲಿ ಅವಳು ಅವನ ಕಾಮಪಿಪಾಸೆಗೆ ಬಲಿಯಾಗಿ ಸೋತು ಬಿದ್ದಳು. ಮತ್ತೆ ಹತ್ತು ನಿಮಿಷಗಳಲ್ಲಿ ಮತ್ತೊಬ್ಬ ಬಂದ, ಅನುಭವಿಸಿದ, ಬಿಟ್ಟು ಹೋದ. ಯಾರೂ ಅವಳ ಅಳುವಿಗೆ ಬಿಕ್ಕಳಿಕೆಗಳಿಗೆ, ಕಣ್ಣೀರಿಗೆ ಬೆಲೆ ಕೊಡಲಿಲ್ಲ. ಅವಳ ಮನಸ್ಸಿನೊಂದಿಗೆ ಅವರಿಗೆ ಏನು ಸಂಬಂಧ?" (ಗೀತಾ ನಾಗಭೂಷಣ : 'ಹಸಿಮಾಂಸ ಮತ್ತು ಹದ್ದುಗಳು' ೬೪)

ಹೀಗೆ ಒಂದಕ್ಕೊಂದು ಸೇರಿ ಕಡೆಗೆ ಕಟ್ಟಿಕೊಂಡ ಗಂಡನಿಂದಲೂ ದೈಹಿಕ ದೌರ್ಜನ್ಯಕ್ಕೆ ಒಳಗಾದ ಲಚ್ಚಿ ಹುಚ್ಚಿಯಾಗಿ ಸಾಯುತ್ತಾಳೆ. ದಲಿತ ಮಹಿಳೆಗೆ ಕುಟುಂಬದೊಳಗೆ ಮತ್ತು ಹೊರಗೆ ಎರಡೂ ಕಡೆಗಳಲ್ಲಿ ದೈಹಿಕ ಲೈಂಗಿಕ, ಮಾನಸಿಕ ದೌರ್ಜನ್ಯಕ್ಕೆ ಒಳಗಾಗುತ್ತಾಳೆ. ದಲಿತ ಮಹಿಳೆ ಹುಟ್ಟಿರುವುದೇ ಇಂಥ ದೌರ್ಜನ್ಯಗಳನ್ನು ಅನುಭವಿಸಲೆಂಬಂತಾಗಿದೆ. ಒಟ್ಟಾರೆಯಾಗಿ ದಲಿತ ಮಹಿಳೆಯು ಎಲ್ಲೂ ನೆಮ್ಮದಿಯಿಲ್ಲದಂತಾಗಿದೆ. ಇದಕ್ಕೆಲ್ಲಾ ದಲಿತ ಮಹಿಳೆಯರ ಅಜ್ಞಾನ ಮತ್ತು ಅನಕ್ಷರತೆಯೇ ಕಾರಣವಾಗಿದೆ. ವಿದ್ಯೆ ಕಲಿತ ಮಾತ್ರಕ್ಕೆ ದಲಿತ ಮಹಿಳೆಯ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಸಿಕ್ಕಿಬಿಡುತ್ತದೆ ಎಂದೇನೂ ಅಲ್ಲ. ಆದರೆ ಇದ್ದುದರಲ್ಲಿ ಸ್ವಲ್ಪ ಮಟ್ಟಿಗಾದರೂ ಉಸಿರಾಡುವಂತಾಗಬಹುದು.

ಕುಟುಂಬದಿಂದ ಹೊರಗೆ ಅಂದರೆ ಸಮಾಜದಲ್ಲೂ ದಲಿತ ಮಹಿಳೆ ಹಲವು ರೀತಿಯ ದೌರ್ಜನ್ಯಗಳಿಗೆ ಒಳಗಾಗುತ್ತಿದ್ದಾಳೆ. ಅವುಗಳಲ್ಲಿ ಬಹುಪಾಲು ಬೆಳಕಿಗೆ ಬರದೇ ಕತ್ತಲಲ್ಲೇ ಮುಚ್ಚಿಹೋಗುತ್ತವೆ. ಒಂದೊತ್ತಿನ ಊಟಕ್ಕೂ ಪರದಾಡುವ ಸ್ಥಿತಿಯಿರುವ ದಲಿತರು ಮೇಲ್ವರ್ಗದವರ, ಭೂಮಾಲೀಕರ ಹೊಲಗದ್ದೆಗಳಲ್ಲಿ ದುಡಿದು ತಿನ್ನಬೇಕಾದ ಪರಿಸ್ಥಿತಿಯಿದೆ. ಈ ರೀತಿ ಹೊರಗಡೆ ಹೋದಾಗ ಆಕೆಯ ಮೇಲೆ ಅತ್ಯಾಚಾರಗಳು, ದೌರ್ಜನ್ಯಗಳು ಹೆಚ್ಚಾಗಿ ನಡೆಯುತ್ತವೆ. "ತನ್ನ ಜೊತೆಯವರೊಂದಿಗೆ ಕೂಲಿಗೆ ಹೋಗಿದ್ದ ಹತ್ತು ವರ್ಷದ ಬಾಲಕಿಯೊಬ್ಬಳು ಸಂಜೆ ಕೂಲಿ ಮುಗಿಸಿಕೊಂಡು ವಾಪಸ್ಸಾಗುತ್ತಿದ್ದಾಗ ತನ್ನ ಗುಂಪಿನವರಿಂದ ಬೇರ್ಪಟ್ಟು ರಾತ್ರಿ ಅಡುಗೆ ತಯಾರಿಸಲು ಕಟ್ಟಿಗೆಗಳನ್ನು ಸಂಗ್ರಹಿಸಲು ಮುಂದಾಗುತ್ತಾಳೆ. ಪಕ್ಕದ

ಹೊಲದಿಂದ ಇದನ್ನು ಗಮನಿಸಿದ ಬಾರಿಕರ ಯುವಕನೊಬ್ಬ ಯಾರೂ ಇಲ್ಲದ್ದನ್ನು ಖಚಿತಪಡಿಸಿಕೊಂಡು ಅವಳ ಮೇಲೆ ಅತ್ಯಾಚಾರಗೈದನು. ಬಾಲಕಿಯಿಂದ ಸುದ್ದಿ ತಿಳಿದ ಪೋಷಕರು ದಲಿತ ಮುಖಂಡರ ಸಹಾಯದಿಂದ ಆರೋಪಿಯನ್ನು ಬಂಧಿಸಿ ಶಿಕ್ಷೆಗೊಳಪಡಿಸಿದರು. ಇದರಿಂದ ಊರಿನಲ್ಲಿ ಜಾತಿ ಸಂಘರ್ಷ ನಡೆದು ದಲಿತರ ಮನೆಗಳನ್ನು ಸುಟ್ಟು ತಮ್ಮ ಅಟ್ಟಹಾಸ ಮೆರೆದರು. ಪೊಲೀಸ್ ವ್ಯವಸ್ಥೆಯಿಂದ ದಲಿತರಿಗೆ ನ್ಯಾಯ ಸಿಗಲಿಲ್ಲ"? (ಚಿನ್ನಸ್ವಾಮಿ ಸೋಸಲೆ: 'ದಲಿತರ ಬದುಕು ಮೆಲುಕು', ೧೧೬)

ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯಲ್ಲೂ ಚೋಮನ ಮಗಳು ಬೆಳ್ಳಿಯು ತನ್ನ ತಂದೆ ಮಾಡಿದ್ದ ಸಾಲವನ್ನು ತೀರಿಸಲು ಕಾಫೀ ತೋಟಕ್ಕೆ ಕೆಲಸಕ್ಕೆ ಹೋಗುತ್ತಾಳೆ. ಅಲ್ಲಿ ಕಾಫೀ ತೋಟದ ಮಾಲೀಕರಾದ ಮನ್ವೇಲ ಮಿಂಗೇಲ ದೊರೆಗಳ ಕಾಮತೃಷೆಗೆ ಬಲಿಯಾಗುತ್ತಾಳೆ. ಇದು ಕೇವಲ ಬೆಳ್ಳಿಯೊಬ್ಬಳ ಸಮಸ್ಯೆಯಲ್ಲ. ಇಂದಿಗೂ ಮೇಲ್ವರ್ಗದವರ ಹೊಲಗದ್ದೆಗಳಲ್ಲಿ ದುಡಿಯುತ್ತಿರುವ ಅಸಹಾಯಕ ಮುಗ್ಧ ಹೆಣ್ಣುಮಕ್ಕಳ ಸ್ಥಿತಿ ಹಾಗೆಯೇ ಇದೆ. ಹೊಟ್ಟೆಪಾಡಿಗಾಗಿ ಮೇಲ್ವರ್ಗದವರ ಹೊಲಗದ್ದೆಗಳಿಗೆ ದುಡಿಯಲು ಹೋಗದೆ ನಿರ್ವಾಹವಿಲ್ಲ. ಆ ರೀತಿ ದುಡಿಯಲು ಹೋದಾಗ ಸುಂದರ ದಲಿತ ಹೆಣ್ಣುಮಕ್ಕಳನ್ನು ತೋಟಗಳ ಮಾಲೀಕರು ದುರುಪಯೋಗಪಡಿಸಿಕೊಳ್ಳುತ್ತಾರೆ. ದುರುಪಯೋಗಕ್ಕೆ ಒಳಗಾದ ಹೆಣ್ಣುಮಕ್ಕಳು ಮತ್ತೆಲ್ಲಿಯೂ ಬಾಯಿಬಿಡಬಾರದೆಂದು ಅವರನ್ನು ಕೊಂದು ಬಿಡುವ ಸಾಕಷ್ಟು ಉದಾಹರಣೆಗಳಿವೆ. ಅವು ಇಂದಿಗೂ ನಡೆಯುತ್ತಲೂ ಇದೆ.

ಇಂಥ ಹೀನ ಕೃತ್ಯದ ವಿರುದ್ಧ ತಿರುಗಿಬಿದ್ದರೆ, ಅಥವಾ ಹೊರಗೆ ಹೇಳಿದರೆ ಇದ್ದ ಕೆಲಸವನ್ನೂ ಕಳೆದುಕೊಂಡು ಮನೆಮಂದಿಯೆಲ್ಲಾ ಉಪವಾಸವಿರಬೇಕಾಗುತ್ತದೆ ಎಂದು ಹೆದರಿ ದಲಿತ ಹೆಣ್ಣುಮಕ್ಕಳು ಬಾಯಿಬಿಡದೆ ಬದುಕುತ್ತಾರೆ. ಒಂದು ವೇಳೆ ಬಾಯಿಬಿಟ್ಟರೂ ಇವರ ಸಹಾಯಕ್ಕೆ ನಿಲ್ಲುವವರು ಯಾರೂ ಇರುವುದಿಲ್ಲ. ಅಲ್ಲದೆ ತಮಗಾದ ಅನ್ಯಾಯದ ವಿರುದ್ಧ ಹೋರಾಡಲು ಬೇಕಾದ ಧೈರ್ಯ, ತಿಳಿವಳಿಕೆ, ಹಣಕಾಸು, ಶಿಕ್ಷಣ ಇವು ಯಾವುವೂ ಅವರ ಬಳಿ ಇರುವುದಿಲ್ಲ. ಮೇಲಾಗಿ ಹೋರಾಟ ಮಾಡಲು ಮನೆಯಲ್ಲಿನ ಗಂಡಸರ ಸಹಕಾರವೂ ಸಿಗುವುದಿಲ್ಲ. ಏಕೆಂದರೆ ಚಟಗಳಿಗೆ ದಾಸರಾದ ದಲಿತ ಗಂಡಸರು ಮೂರೊತ್ತು ಕುಡಿದುಕೊಂಡು ಯಾವುದಕ್ಕೂ ಪ್ರಯೋಜನವಿಲ್ಲದಂತೆ ಬಿದ್ದಿರುತ್ತಾರೆ. ಗಂಡಸರು ಯಾವುದೇ ಚಟಗಳಿಗೆ ಬಲಿಯಾಗದೆ ದುಡಿದು ಮನೆಯನ್ನು ಸರಿದೂಗಿಸುವಂತೆ ಇದ್ದಿದ್ದರೆ ದಲಿತ ಹೆಣ್ಣುಮಕ್ಕಳು ಗಂಡಸರಂತೆ 'ಮೇಲ್ವರ್ಗ'ದವರ ಹೊಲಗದ್ದೆಗಳಲ್ಲಿ ದುಡಿಯುವ ಅನಿವಾರ್ಯತೆಯಾಗಲಿ ಮೇಲ್ವರ್ಗದವರ ದೈಹಿಕ ಕಾಮನೆಗೆ ಗುರಿಯಾಗುವ

ಅವಶ್ಯಕತೆಯಾಗಲಿ ಬರುತ್ತಿರಲಿಲ್ಲ. ಆದ್ದರಿಂದ ದಲಿತ ಹೆಣ್ಣುಮಕ್ಕಳ ಮಾನ ಹಾಗೂ ಪ್ರಾಣಗಳ ರಕ್ಷಣೆಯಲ್ಲಿ ದಲಿತ ಪುರುಷನೂ ಪಾತ್ರವಹಿಸಬೇಕಾದ ಅಗತ್ಯವಿದೆ.

೧೯೭೦ರ ಸಂದರ್ಭದಲ್ಲಿ ದಲಿತ ಮಹಿಳೆಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯ, ಅತ್ಯಾಚಾರ, ಕೊಲೆ ಮುಂತಾದ ಅಮಾನುಷ ಕೃತ್ಯಗಳ ವಿರುದ್ಧ ಜಾಗೃತಿ ಮೂಡಿಸಲು ಹೋರಾಟದ ಹಾಡುಗಳನ್ನು ಕಟ್ಟಲಾಯಿತು. ಅಂತಹ ಒಂದು ಹೋರಾಟದ ಹಾಡು ಈ ಸಂದರ್ಭಕ್ಕೆ ಪ್ರಸ್ತುತವೆನಿಸಿದೆ.

"ಕೋಟಿ ಕೋಟಿ ಬಾಧೆಗಳಲ್ಲಿ

ಲಕ್ಷಾಂತರ ನೋವುಗಳಲ್ಲಿ

ನೀನುಟ್ಟಿ ಬೆಳೆದೆಯವ್ವ ನನ ತಂಗಿ ಅನಸೂಯ

ಗಾಯವ ಮರೆತು ಬದುಕಲಾರೆವು ನನ ತಂಗಿ ಅನಸೂಯ"

(ಹೋರಾಟದ ಹಾಡುಗಳು)

ದಲಿತ ಮಹಿಳೆಯ ಅಸಂಖ್ಯ ನೋವುಗಳನ್ನು ಹಾಡು ಬಯಲಿಗೆಳೆದಿದೆ. ದಲಿತ ಮಹಿಳೆಯರ ಬದುಕಿನ ಅನಾವರಣವನ್ನು ಈ ಹಾಡು ಮಾಡಿಕೊಡುತ್ತದೆ. ಹಿಂದೆ ದಲಿತ ಮಹಿಳೆಯ ಮೇಲೆ ನಡೆಯುತ್ತಿದ್ದ ಅತ್ಯಾಚಾರಗಳಿಗೆ ಈ ಹಾಡು ಉತ್ತರ ಒದಗಿಸುತ್ತದೆ.

ಇಂತಹ ಸಾಕಷ್ಟು ದೌರ್ಜನ್ಯಗಳು ದಲಿತ ಮಹಿಳೆಯ ಮೇಲೆ ನಡೆಯುತ್ತಲೇ ಇರುತ್ತವೆ. ಆದರೆ ಮಾನ ಮರ್ಯಾದೆಗೆ ಅಂಜಿ ಅಂಥವನ್ನು ಹೊರಗೆ ಹೇಳಿಕೊಳ್ಳುವುದಿಲ್ಲವಷ್ಟೆ.

ಕುವೆಂಪು ಅವರು ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ 'ಕೆಳಜಾತಿ'ಯವಳಾದ ಕುಳವಾಡಿ ಸಣ್ಣನ ಮಗಳು ಪುಟ್ಟಿಯನ್ನು ತಿಮ್ಮಪ್ಪ ಹೆಗ್ಗಡೆಯ ದೈಹಿಕ ಕಾಮನೆಗೆ ಗುರಿಯಾಗುವಂತೆ ಚಿತ್ರಿಸಿದ್ದಾರೆ. ಆ ರೀತಿ ಚಿತ್ರಿಸಲು ಕಾರಣ ಅವತ್ತಿನ ವಾಸ್ತವ ಸಮಾಜದಲ್ಲಿ ನಡೆಯುತ್ತಿದ್ದುದು. ಹೀಗೆ ವಾಸ್ತವ ಸಮಾಜದಲ್ಲಿ ನಡೆಯುತ್ತಿದ್ದ ಸಂಗತಿಗಳನ್ನು ಬೇರೆಯವರಿಂದ ಕೇಳಿಯೋ ಅಥವಾ ನೋಡಿಯೋ ಅದಕ್ಕೊಂದು ಕಲಾತ್ಮಕ ರೂಪ ಕೊಡುತ್ತಿದ್ದರು. ಅವುಗಳೇ ಕಾದಂಬರಿಗಳಾಗಿದೆ. ತಮ್ಮ ಕಾದಂಬರಿಯ ಪಾತ್ರಗಳ ಮುಖಾಂತರವೇ ಬದಲಾವಣೆ ತರುವುದಾಗಲೀ, ವ್ಯವಸ್ಥೆಗೆ ತಿರುಗಿ ಬೀಳುವಂತೆ ಚಿತ್ರಿಸುವುದಾಗಲೀ ಕಷ್ಟಕರವಾಗಿರಲಾರದು. ಆದರೆ ಆ ರೀತಿಯ ಬದಲಾವಣೆಯನ್ನು ಕಾದಂಬರಿಗಳ ಪಾತ್ರಗಳ ಮೂಲಕವೇ ಮಾಡಿಸಿದ್ದರೆ ಅದು ಪರಿಣಾಮಕಾರಿಯಾಗಿರದೆ ಹುಸಿ ಆದರ್ಶವಾದವಾಗಿ ಕಂಡುಬಿಡುವ ಸಾಧ್ಯತೆ

ಇತ್ತೇನೋ, ಆ ಕಾರಣಕ್ಕಾಗಿಯೇ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಮೂಲಕ ವಾಸ್ತವ ಸಮಾಜದ ಚಿತ್ರಣವನ್ನು ನಮಗೆ ಕಟ್ಟಿಕೊಟ್ಟಿದ್ದಾರೆ.

ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯು ಕೂಡಾ ಮೇಲಿನ ಅಭಿಪ್ರಾಯಕ್ಕೆ ಹೊರತಾಗಿಲ್ಲ. ಭೂಮಿಯಿಂದ ವಂಚಿತನಾದ ಚೋಮನಿಗೆ ಭೂಮಿ ಕೊಡಿಸುವಂತೆ ಚಿತ್ರಿಸುವುದಾಗಲಿ, ಬೆಳ್ಳಿಯನ್ನು ಕಾಫೀ ತೋಟದ ದೊರೆಗಳಾದ ಮನ್ವೇಲ–ಮಿಂಗೇಲರಿಗೆ ದೈಹಿಕವಾಗಿ ಅರ್ಪಿಸಿಕೊಳ್ಳದಂತೆ ಚಿತ್ರಿಸುವುದಾಗಲಿ ಕಷ್ಟಕರವಾಗಿರಲಾರದು. ಆದರೆ ಹಾಗೆ ಚಿತ್ರಿಸಿದ್ದರೆ ಅಂದಿನ ದಲಿತ ಹೆಣ್ಣುಮಕ್ಕಳ ಮೇಲೆ ಸಮಾಜದಲ್ಲಿ ನಡೆಯುತ್ತಿದ್ದ ದೌರ್ಜನ್ಯಗಳನ್ನು ಮರೆಮಾಚಿ ಚಿತ್ರಿಸಿದಂತೆ ಆಗುತ್ತಿತ್ತು. ಅದಕ್ಕಾಗಿಯೇ ಅಂದಿನ ಸಮಾಜದಲ್ಲಿ ದಲಿತ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿದ್ದ ಲೈಂಗಿಕ ದೌರ್ಜನ್ಯವನ್ನು ಇದ್ದಂತೆ ಚಿತ್ರಿಸಿ ಪರೋಕ್ಷವಾಗಿ ಸುಧಾರಣೆಯನ್ನು ಬಯಸುತ್ತಿದ್ದಾರೆ ಎನಿಸುತ್ತದೆ.

ದಕ್ಷಿಣ ಕರ್ನಾಟಕ ಭಾಗಕ್ಕೆ ಹೋಲಿಸಿದರೆ ಉತ್ತರ ಕರ್ನಾಟಕ ಭಾಗದಲ್ಲಿ ದಲಿತ ಹೆಣ್ಣುಮಕ್ಕಳ ಬದುಕಿನಲ್ಲಿ ಸಾಕಷ್ಟು ಅಮಾನವೀಯ ಆಚರಣೆಗಳು ನಡೆಯುತ್ತಿರುವುದು ಕಂಡುಬರುತ್ತದೆ. ಅದಕ್ಕೆ ಕಾರಣ ಅಲ್ಲಿನ ಹೆಣ್ಣುಮಕ್ಕಳ ಅನಕ್ಷರತೆ, ಅಜ್ಞಾನ, ಮೂಢನಂಬಿಕೆಗಳಿಗೆ ಗುರಿಯಾಗಿರುವುದು. ಈ ಎಲ್ಲಾ ಕಾರಣಗಳಿಂದಾಗಿಯೇ ಆ ಭಾಗಗಳಲ್ಲಿ ಇಂದಿಗೂ ದಲಿತ ಹೆಣ್ಣುಮಕ್ಕಳ ಮೇಲಿನ ಶೋಷಣೆ ನಿಂತಿಲ್ಲ. ಉದಾಹರಣೆಯಾಗಿ ನೋಡುವುದಾದರೆ:

೧. "೧೦.೧೦.೧೯೭೮ರಲ್ಲಿ ವಿಜಾಪುರ ಜಿಲ್ಲೆಯ ಬಾಗೇವಾಡಿ (ಈಗಿನ ವಿಜಯಪುರ) ತಾಲೂಕಿನ ಸಿಂದಗೇರಿ ಗ್ರಾಮದಲ್ಲಿ ಅಕ್ಟೋಬರ್ ೫ರಂದು ಮೂವರು ಸವರ್ಣೀಯರು ದಲಿತ ಮಹಿಳೆ ಮತ್ತು ಆಕೆಯ ಗರ್ಭಿಣಿ ಪುತ್ರಿಯ ಮೇಲೆ ಅತ್ಯಾಚಾರವೆಸಗಿದರು. ಈ ದೂರು ಸಹ ಸಾಕ್ಷಿಗಳಿಲ್ಲದೆ ಖುಲಾಸೆಯಾಯಿತು.

೨. ೧೯೯೩ರಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿಯಲ್ಲಿ ೩೦ ವರ್ಷದ ಬಸುರಿ ದಲಿತ ಜನಾಂಗದ ಮಹಿಳೆಯ ಮೇಲೆ ಮೂರು ಜನ ಸರಕಾರಿ ನೌಕರರಿಂದ ಅತ್ಯಂತ ಕ್ರೂರ ರೀತಿಯ ಅತ್ಯಾಚಾರ ನಡೆಯಿತು. ಇದು ನಾಗರಿಕ ಸಮಾಜದ ಮೇಲೆ ಒಂದು ದೊಡ್ಡ ಕಪ್ಪು ಚುಕ್ಕೆ. ಇನ್ನೂ ಕ್ರೂರವಾದದ್ದೆಂದರೆ ಅತ್ಯಚಾರದಿಂದ ಸತ್ತ ಆ ಮಹಿಳೆಯ ಶವವನ್ನು ಸಾಕ್ಷಿ ಸಿಗಬಾರದೆಂದು ಕೂಡಲೇ ಸುಟ್ಟುಹಾಕಿದ್ದು. ಸಾಕ್ಷಿಗಳಿಲ್ಲದೆ ಆರೋಪಿಗಳು ಖುಲಾಸೆಯಾದರು." (ಚಿನ್ನಸ್ವಾಮಿ ಸೋಸಲೆ: 'ದಲಿತರ ಬದುಕು ಮೆಲುಕು', ೧೨೨) ಇತಿಹಾಸದುದ್ದಕ್ಕೂ ಇಂಥ ಸಾವಿರಾರು

ಪ್ರಕರಣಗಳು ನಡೆದಿವೆ. ಇವತ್ತಿನ ಮಾಧ್ಯಮಗಳ ಮೂಲಕ ಪ್ರಸ್ತುತದಲ್ಲಿ ಬೆಳಕಿಗೆ ಬರುತ್ತಿದೆ. ಆದರೆ ಹಿಂದೆ ಇವು ಬೆಳಕಿಗೆ ಕೂಡ ಬರುತ್ತಿರಲಿಲ್ಲ. ದಲಿತ ಮಹಿಳೆ ಮೇಲೆ ನಡೆಯುವ ಅತ್ಯಾಚಾರ ಮತ್ತು ಸಾವುಗಳನ್ನು ಪ್ರತಿನಿಧಿಸುವ ಹೋರಾಟದ ಹಾಡು ನಮ್ಮಲ್ಲಿನ ಅಂತಃಕರಣವನ್ನು ಬಡಿದೆಬ್ಬಿಸುವಂತಿದೆ.

"ನಿನ್ನ ಸಾವು ಕಂಡು
ಮುಯ್ಯಿಗೆ ಮುಯ್ಯಿ ಎಂದು
ದಲಿತ ದಂಡೂ ಕೂಡಿ ಬೆಂಕಿ ಜ್ವಾಲೆಯಾಗಿ
ಎದ್ದು ಬರುತಿದೆ ತಂಗಿ
ನನ್ನ ಕೂಲಿಯ ತಂಗಿ" (ಹೋರಾಟದ ಹಾಡುಗಳು)

ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಯ ಬೆಳ್ಳಿಯಾಗಲಿ, ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪುಟ್ಟಿಯಾಗಲಿ, ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯ ಲಚ್ಚಿಯಾಗಲಿ ದುಡಿಯುವ ಜಾಗಗಳಲ್ಲಿ ಮೇಲ್ವರ್ಗದವರಿಂದ ದೈಹಿಕವಾಗಿ ಶೋಷಣೆಗೆ ಒಳಗಾದವರು. ಇವರ ರೀತಿಯಲ್ಲೇ ಸಮಾಜದಲ್ಲಿ ದಲಿತ ಹೆಣ್ಣುಮಕ್ಕಳು ಹೊಟ್ಟೆಪಾಡಿಗಾಗಿ ಮೇಲ್ವರ್ಗದವರ ಹೊಲಗದ್ದೆಗಳಲ್ಲಿ ಕೂಲಿ ಮಾಡಲು ಹೋಗುತ್ತಿದ್ದುದು ಸಹಜವಾಗಿತ್ತು. ಈ ರೀತಿ ಕೂಲಿ ಮಾಡಲು ಹೋದ ದಲಿತ ಹೆಣ್ಣುಮಕ್ಕಳ ಮೇಲೆ ಕಣ್ಣು ಹಾಕಿ ಮೇಲ್ವರ್ಗದವರು ಅವರನ್ನು ದುರುಪಯೋಗಪಡಿಸಿ-ಕೊಂಡಾಗ ಅವಮಾನವನ್ನು ತಾಳಲಾರದೆ ಎಷ್ಟೋ ಹೆಣ್ಣು ಮಕ್ಕಳು ಕರೆಗೋ, ಬಾವಿಗೋ ಹಾರಿ ಪ್ರಾಣ ಕಳೆದುಕೊಳ್ಳುತ್ತಿದ್ದ ಸಂದರ್ಭಗಳು ಇರುತ್ತಿದ್ದವು.

೧೯೭೦ರ ನಂತರ ಅಕ್ಷರ ಕಲಿತ ದಲಿತರಲ್ಲಿ ತಾವಿದ್ದ ಸ್ಥಿತಿಯ ಅರಿವಾಗಿ ತಾವುಂಡ ನೋವುಗಳನ್ನೇ ಲಿಖಿತ ರೂಪಕ್ಕೆ ತಂದರು. ಹೀಗೆ ಲಿಖಿತ ರೂಪಕ್ಕೆ ತಂದ ಕಥೆ, ಕಾದಂಬರಿ, ಕಾವ್ಯಗಳಲ್ಲಿ ಹೆಚ್ಚು ಜನಪ್ರಿಯವಾಗಿದ್ದು ಹಾಡಿನ ರೂಪಕ್ಕೆ ಅಳವಡಿಸಿದ ಪದ್ಯಗಳು. ಅವೇ ಹೋರಾಟದ ಹಾಡುಗಳಾದವು. ಇಂತಹ ಹೋರಾಟದ ಹಾಡುಗಳಲ್ಲಿ ದಲಿತ ಹೆಣ್ಣುಮಕ್ಕಳು ಮೇಲ್ವರ್ಗದವರಿಂದ ಅನುಭವಿಸುತ್ತಿದ್ದ ನೋವುಗಳನ್ನೇ ವ್ಯಕ್ತಪಡಿಸುತ್ತಿದ್ದವು. ಹೋರಾಟಗಾರರು ಅಂದು ಹೋರಾಟದ ಹಾಡುಗಳನ್ನು ಬೀದಿಗಳಲ್ಲಿ ಹಾಡುವುದರ ಮೂಲಕ ದಲಿತ ಕೂಲಿಕಾರ ಹೆಣ್ಣುಮಕ್ಕಳಲ್ಲಿ ಜಾಗೃತಿಯ ಕಿಡಿಯನ್ನು ಹೊತ್ತಿಸಿದರು. ಒಂದು ರೀತಿಯಲ್ಲಿ ಈ ಹೋರಾಟದ

ಹಾಡುಗಳು ದಲಿತ ಹೆಣ್ಣುಮಕ್ಕಳಿಗೆ ತಾವು ಬದುಕಿದ ರೀತಿಯನ್ನು, ಅಂತಹ ಹೀನಸ್ಥಿತಿಯಿಂದ ಹೊರಬರುವ ಅರಿವು, ಎಚ್ಚರವನ್ನು ಮೂಡಿಸಿದವು.

ಆದರೆ, ದಲಿತ ಸಾಹಿತ್ಯದ ಉಗಮದಂತಹ ಪ್ರಯತ್ನ ಸಾಕಷ್ಟು ಹಿಂದೆಯೇ ಆರಂಭವಾಗಿದ್ದರೆ ಸಾಕಷ್ಟು ದಲಿತ ಹೆಣ್ಣುಮಕ್ಕಳು ಜೀವಂತವಾಗಿರಲು ಸಾಧ್ಯವಾಗಬಹುದಿತ್ತು. ದಲಿತರು ಅಕ್ಷರ ಕಲಿಯಲು ಆರಂಭಿಸಿದ್ದೇ ಬಹಳ ತಡವಾಗಿಯಾದ್ದರಿಂದ ಇದು ಸಾಧ್ಯವಾಗಲಿಲ್ಲ. ಉದಾಹರಣೆಗೆ ಶಿವರಾಮ ಕಾರಂತರ 'ಚೋಮನ ದುಡಿ'ಯ ಬೆಳ್ಳಿ, ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪುಟ್ಟಿ, 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯ ಲಚ್ಚಿಯಂತಹ ಸಾಕಷ್ಟು ಜೀವಂತ ದಲಿತ ಹೆಣ್ಣುಮಕ್ಕಳ ಮಾನ ಪ್ರಾಣ ರಕ್ಷಣೆಯಾಗುತ್ತಿತ್ತು.

'ಬಡವನ ಸಿಟ್ಟು ದವಡೆಗೆ ಮೂಲ' ಎನ್ನುವಂತೆ ದಲಿತ ಮಹಿಳೆಯ ಎಲ್ಲಾ ಸಮಸ್ಯೆಗಳಿಗೆ ಅಜ್ಞಾನ, ಅನಕ್ಷರತೆ ಕಾರಣವಾಗಿದೆ. ಬಡತನ ಮತ್ತು ಮೂಢನಂಬಿಕೆಗಳೂ ಕೂಡ ಈ ಅನಿಷ್ಟ ಪದ್ಧತಿಗಳಿಗೆ ಕಾರಣಗಳಾಗಿವೆ. ಆದರೂ ಆಚರಣೆಗಳಿಂದ ಉಂಟಾಗುವ ಅನಾಹುತಗಳು, ತೊಂದರೆಗಳ ಬಗ್ಗೆ ಆಯಾ ಸಮುದಾಯದ ಹೆಣ್ಣುಮಕ್ಕಳಿಗೆ ಮತ್ತು ಮಹಿಳೆಯರಿಗೆ, ಕುಟುಂಬದ ಹಿರಿಯರಿಗೆ ಪ್ರೀತಿಯಿಂದ ತಿಳಿಸಿ ಹೇಳುವುದು. ಬಾಣಂತಿ ಮತ್ತು ಶಿಶುವಿನ ಆರೋಗ್ಯದ ಬಗ್ಗೆ ಸಂಬಂಧಪಟ್ಟ ಜನಾಂಗಗಳ ಜನರಿಗೆ ಅರಿವು ಮೂಡಿಸುವುದು. ಆಯಾ ಜನಾಂಗದ ಮುಖಂಡರು, ಧರ್ಮಗುರುಗಳಿಗೆ ತಾಯಿ ಮಗುವಿನ ಸುರಕ್ಷತೆಯ ಬಗ್ಗೆ ತಿಳಿವಳಿಕೆ ಮೂಡಿಸುವುದು ಮತ್ತು ಕೆಟ್ಟ ಆಚರಣೆಗಳ ಕ್ರೂರತೆಯ ಅರ್ಥಮೂಡಿಸುವುದು. ಹೆಣ್ಣು ಮಕ್ಕಳ ಸುರಕ್ಷತೆಯ ಬಗ್ಗೆ ಬೀದಿನಾಟಕಗಳನ್ನು ಮಾಡಿಸುವುದು. ಆಶಾ ಕಾರ್ಯಕರ್ತೆಯರ ಮುಖಾಂತರ ಅರಿವಿನ ಆಂದೋಲನ ಮೂಡಿಸುವುದು. ಅಗತ್ಯ ಬಿದ್ದಾಗ ಮಹಿಳಾ ಸಂಘಟನೆಗಳ ಸಹಾಯ ಪಡೆದು ಜಾಗೃತಿ ಮೂಡಿಸುವುದು.

ಈ ಎಲ್ಲಾ ಕ್ರಮಗಳನ್ನು ಅನುಸರಿಸುವ ಮೂಲಕ ಅಮಾನವೀಯ ಆಚರಣೆಗಳನ್ನು ಸಮಾಜದಿಂದ ಹೊಡೆದೋಡಿಸಬೇಕಾಗಿದೆ.

ಒಟ್ಟಾರೆ ಪ್ರಸ್ತುತ ಅಧ್ಯಾಯದಲ್ಲಿ ದೇವದಾಸಿ ಪದ್ಧತಿಯಿಂದ ದಲಿತ ಮಹಿಳೆ ಅನುಭವಿಸುತ್ತಿರುವ ಮೂಕ ವೇದನೆಗಳನ್ನು ಗೀತಾ ನಾಗಭೂಷಣರ 'ಬದುಕು' ಕಾದಂಬರಿಯ ಹಿನ್ನೆಲೆಯಲ್ಲಿ ತಿಳಿಸುವುದರೊಂದಿಗೆ ಅದಕ್ಕೆ ಪರಿಹಾರೋಪಾಯಗಳನ್ನು ಕುರಿತು ಅಧ್ಯಯನ ನಡೆಸಲಾಗಿದೆ. ಹಾಗೆಯೇ ದೌರ್ಜನ್ಯಗಳ ಕಾರಣದಿಂದ ದಲಿತ ಮಹಿಳೆ ಅನುಭವಿಸುತ್ತಿರುವ

ತೊಂದರೆಗಳನ್ನು ಕೌಟುಂಬಿಕ ಮತ್ತು ಕೌಟುಂಬಿಕೇತರ ನೆಲೆಯಲ್ಲಿ ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿ ಮತ್ತು ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಗಳ ಮೂಲಕ ಚರ್ಚಿಸಲಾಗಿದೆ.

ಅಧ್ಯಾಯ – ೬

ಸಮಾರೋಪ

೬.೧ ಅಧ್ಯಯನದ ಫಲಿತಗಳು
೬.೨ ಅಧ್ಯಯನದ ಸಾಧ್ಯತೆಗಳು

ಅಧ್ಯಾಯ – ೬

ಸಮಾರೋಪ

ಕನ್ನಡ ಕಾದಂಬರಿಗಳ ಆರಂಭ, ಪರಿಚಯದೊಂದಿಗೆ ಮೊದಲ ಅಧ್ಯಾಯ ಆರಂಭಗೊಂಡು ದಲಿತ ಸಾಹಿತ್ಯವನ್ನು ಕುರಿತು ಪ್ರಸ್ತಾಪಿಸಲಾಗುತ್ತಿದೆ. ದಲಿತ ಮಹಿಳೆ ಯಾರು? ಯಾಕೆ ಅವರನ್ನು ಗುರುತಿಸಬೇಕು ಅಥವಾ ಅಧ್ಯಯನ ಮಾಡುವ ಅಗತ್ಯವಿದೆ ಎಂಬುದರ ಚರ್ಚೆಯಿದೆ. ಸಾಮಾನ್ಯ ವರ್ಗದ ಮಹಿಳೆಯರು ನಡೆದು ಬಂದ ದಾರಿಯನ್ನು

- ಆದಿಮ ಸಂದರ್ಭ
- ವೇದಗಳ ಸಂದರ್ಭ
- ಪುರಾಣಗಳ ಸಂದರ್ಭ
- ಮಧ್ಯಕಾಲೀನ ಸಂದರ್ಭ
- ಆಧುನಿಕ ಸಂದರ್ಭ

ಮೇಲಿನಂತೆ ವಿಭಾಗಿಸಿಕೊಂಡು ಅವರ ನೋವುಗಳನ್ನು ಗುರುತಿಸುತ್ತಾ ಅವರಿಗಿಂತ ದಲಿತ ಮಹಿಳೆ ಹೇಗೆ ಭಿನ್ನ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿನ ದಲಿತ ಮಹಿಳೆಯನ್ನು ಕುರಿತ ಪ್ರಸ್ತಾಪವನ್ನು ಮಾಡಲಾಗಿದೆ.

ದಲಿತ ಮಹಿಳೆ ಮತ್ತು ದಲಿತರನ್ನು ಕುರಿತು ಇರುವರೆಗೂ ಸಾಕಷ್ಟು ಅಧ್ಯಯನಗಳು ನಡೆದಿವೆ. ಇವು ಸಂಶೋಧನೆ, ವಿಮರ್ಶೆ, ಲೇಖನ, ವಿಚಾರ ಸಂಕಿರಣಗಳ ಮೂಲಕ ದಲಿತ ಮಹಿಳೆಯ ಹರಹನ್ನು ವಿಸ್ತರಿಸಿವೆ. ಬಿಡಿ–ಬಿಡಿಯಾಗಿ ಚೋಮನ ದುಡಿ, ಗತಿ, ಸಂಸ್ಕಾರ, ಭಾರತೀಪುರ, ಮಲೆಗಳಲ್ಲಿ ಮದುಮಗಳು, ಹಸಿಮಾಂಸ ಮತ್ತು ಹದ್ದುಗಳು, ಅಸ್ಪೃಶ್ಯರು, ಒಡಲಾಳ, ಬದುಕು ಮುಂತಾದ ಕಾದಂಬರಿಗಳಲ್ಲಿನ ಮಹಿಳಾ ಪಾತ್ರಗಳನ್ನು ಕುರಿತ ಅಧ್ಯಯನಗಳೂ ನಡೆದಿರುವುದನ್ನು ಗಮನಿಸಲಾಗಿದೆ. ಆದರೆ ಕೆಲವೊಮ್ಮೆ ಇಂತಹ ಕಾದಂಬರಿಗಳಲ್ಲಿ ಚಿತ್ರಣಗೊಂಡಿರುವ ದಲಿತ ಮಹಿಳೆಯರನ್ನು ಪ್ರಸ್ತಾಪಿಸದೇ ಹೋಗಿರುವ ನಿದರ್ಶನಗಳಿವೆ. ಉದಾಹರಣೆಗೆ ಚೋಮನ ದುಡಿ ಕಾದಂಬರಿಯನ್ನು ಕುರಿತ ಅಧ್ಯಯನಗಳಲ್ಲಿ ಚೋಮನ ಭೂಮಿಯ ಒಡೆತನದ ಹಕ್ಕಿನ ಸುತ್ತಲೇ ಅಧ್ಯಯನಗಳು ಗಿರಕಿ ಹೊಡೆದಿರುವುದು ಕಂಡುಬಂದಿದೆ. ಇಂತಹ ಕೆಲವು ಅಧ್ಯಯನಗಳಲ್ಲಿ ಬೆಳ್ಳಿಯ ಪ್ರಸ್ತಾಪವೂ ಸಾಧ್ಯವಾಗದೆ ಹೋಗಿರುವ ನಿದರ್ಶನಗಳಿವೆ. ಈ ವಿನಾಯಿತಿಯು ಸಂಸ್ಕಾರದ ಬೆಳ್ಳಿ, ಮಲೆಗಳಲ್ಲಿ

ಮದುಮಗಳು ಕಾದಂಬರಿಯ ಕುಳವಾಡಿ ಸಣ್ಣನ ಮಗಳು ಪುಟ್ಟಿಗೂ ಸಿಕ್ಕಿರುವುದು ಅಧ್ಯಯನಗಳಿಂದ ಕಂಡು ಬಂದಿದೆ. ಅಪರೂಪಕ್ಕೆ ಕೆಲವರು ಬೆಳ್ಳಿಯನ್ನು ಸಂಯಮಿ-ಯಾಗಿಯೂ ಕಂಡಿರುವುದುಂಟು. ಆದರೆ ಬಹುಪಾಲು ಅಧ್ಯಯನಕಾರರಲ್ಲಿ ವಿವರಣಾತ್ಮಕ ವಿಧಾನವನ್ನು ಅನುಸರಿಸಿರುವುದು ಕಂಡುಬರುತ್ತದೆ.

ದಲಿತ ಚಳವಳಿ ಮತ್ತು ದಲಿತ ಮಹಿಳೆ, ದಲಿತ ಮಹಿಳಾ ಚಳವಳಿಯ ಅನಿವಾರ್ಯತೆ, ದಲಿತ ಮಹಿಳಾ ಚಳವಳಿಯ ಸಾಧ್ಯತೆಗಳು ಮತ್ತು ರಾಜಕೀಯ ಪ್ರಜ್ಞೆ, ದಲಿತ ಮಹಿಳೆಯ ನಿಸರ್ಗನಿಷ್ಠ ತತ್ವ, ಮಾತೃಮೂಲಗುಣ, ಫಲವಂತಿಕೆ ನೀತಿ, ವಿಶ್ವಾತ್ಮಕ ಪ್ರಜ್ಞೆ, ದಲಿತ ಮಹಿಳೆ ಶೋಷಣೆಗೊಳಗಾಗುತ್ತಿರುವ ಸಮಾಜ ಮುಂತಾದವುಗಳನ್ನು ಕುರಿತ ಸಮಾಜಶಾಸ್ತ್ರೀಯ ಅಧ್ಯಯನ ನಡೆದಿರುವುದು ಇತರ ಸಂಶೋಧಕರಿಂದ ತಿಳಿದು ಬಂದಿದೆ.

ದಲಿತ ಬಂಡಾಯ ಸಾಹಿತ್ಯದ ಪ್ರೇರಣೆಗಳಾದ ಲೋಹಿಯಾವಾದ, ಅಂಬೇಡ್ಕರ್‌ವಾದ, ರಾಜಕೀಯ ಪ್ರಭಾವ, ಮಹಿಳಾ ಚಳವಳಿಯ ಚಾರಿತ್ರಿಕ ಸಮೀಕ್ಷೆ, ದಲಿತ ಬಂಡಾಯ ಸಾಹಿತ್ಯದ ಮಹಿಳಾ ಪ್ರತಿನಿಧಿಕರಣದಲ್ಲಿ ಪಿತೃಪ್ರಧಾನ ಮೌಲ್ಯ, ಪ್ರತಿಭಟನೆಯ ಸ್ವರೂಪ, ಗಂಡು-ಹೆಣ್ಣುಗಳ ಚಿತ್ರಣ, ಸ್ತ್ರೀ ಪ್ರಜ್ಞೆ ಮುಂತಾದವುಗಳ ಅಧ್ಯಯನಗಳು ನಡೆದಿರುವುದು ತಿಳಿದುಬಂದಿದೆ. ಕೆಲವು ಅಧ್ಯಯನದಲ್ಲಿ ಸಾಕವ್ವ, ಸೋನಿ, ಲಚ್ಮಿ ಮುಂತಾದ ದಲಿತ ಸ್ತ್ರೀಯರು ಪ್ರಮುಖ ವಿಮರ್ಶಕರ ಗ್ರಹಿಕೆಯ ನೆಲೆಯಲ್ಲೇ ಚಿತ್ರಣಗೊಂಡಿದ್ದಾರೆ. ಕೆಲವು ಅಧ್ಯಯನಕಾರರಲ್ಲಿ ದಲಿತ ಕಾದಂಬರಿಗಳು ಮತ್ತು ದಲಿತ ಸ್ತ್ರಿ ಪಾತ್ರಗಳಾದ ಬೆಳ್ಳಿ, ಪುಟ್ಟಿ ಮುಂತಾದವರನ್ನು ನೋಡಿರುವ ದೃಷ್ಟಿಕೋನ ಪ್ರಸ್ತುತ ಸಂಶೋಧನೆಗಿಂತ ಭಿನ್ನವಾಗಿರುವುದು ಕಂಡು ಬಂದಿತು. ದಲಿತ ಮಹಿಳೆ ಮತ್ತು ರಾಜಕೀಯ ಪ್ರತಿನಿಧಿಕರಣವನ್ನು ಕುರಿತಂತೆ ಸಂಪೂರ್ಣ ಸಂಶೋಧನೆಯೇ ನಡೆದಿದೆ. ಬಳ್ಳಾರಿ ಜಿಲ್ಲೆಯ ದಲಿತರ ಶೈಕ್ಷಣಿಕ ಪರಿಸರವನ್ನು ಕುರಿತು ಸಂಶೋಧನೆ ನಡೆದಿರುವುದು ಕಂಡು ಬಂದಿದೆ. ಇನ್ನೂ ಕೆಲವು ಅಧ್ಯಯನಕಾರರಲ್ಲಿ ದಲಿತರ ಮತಾಂತರಕ್ಕೆ ಕಾರಣಗಳು, ಮಹಾಕಾವ್ಯಗಳು, ಗ್ರಾಮದೇವತೆಗಳು, ಬುಡಕಟ್ಟು ಸಮುದಾಯಗಳಲ್ಲಿ ಸಾಂಸ್ಕೃತಿಕ ವೀರರು, ಭಕ್ತಿ ಚಳವಳಿ, ವಚನ ಚಳವಳಿ, ಹರಿದಾಸ ಚಳವಳಿ, ದೇವಾಲಯ ಸಂಸ್ಕೃತಿ ಮತ್ತು ದಲಿತರು, ದಲಿತರನ್ನಾವರಿಸಿರುವ ಗುಲಾಮ ಪದ್ಧತಿ, ದಲಿತರ ಮಾರಾಟ, ಮಲೆನಾಡು ಪ್ರದೇಶ ಮತ್ತು ದಲಿತ ಮಹಿಳೆ, ಜೀತಗಾರಿಕೆ, ಬಿಟ್ಟಿ ತೆರಿಗೆ ಭೂಮಾಲಿಕರು ಮತ್ತು ಕೃಷಿ ಪದ್ಧತಿ ಹಾಗೂ ಕೂಲಿ ಪದ್ಧತಿ, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಸೈನ್ಯದ ಸೇವೆ, ತಳವಾರಿಕೆ, ಪಾಳೆಯಗಾರಿಕೆ ಮುಂತಾದ ಸಾಕಷ್ಟು ದಲಿತರನ್ನು ಕುರಿತ

ವಿಚಾರಗಳನ್ನು ಚರ್ಚೆಗೊಳಪಡಿಸಿದ್ದಾರೆ. ಆದರೆ ದಲಿತ ಮಹಿಳೆಯರ ಮಾರಾಟ ಪ್ರಸ್ತಾಪ ಮಾತ್ರ ದಲಿತ ಮಹಿಳೆಯನ್ನು ಕುರಿತ ವಿಚಾರವಾಗಿದೆ.

ದಲಿತ ಚಳವಳಿಯನ್ನು ಕುರಿತಂತೆ ಸಾಕಷ್ಟು ವಿವರವಾದ ಅಧ್ಯಯನಗಳು ನಡೆದಿವೆ. ಅನೇಕ ವಿಮರ್ಶಕರು ತಮ್ಮ ದೃಷ್ಟಿಯನ್ನು ಒಟ್ಟಾರೆ ದಲಿತರ ಕಡೆ ಗಮನ ಹರಿಸಿರುವುದು ಕಂಡು ಬಂದಿತು. ಹಾಗೆಯೇ ದಲಿತ ಮಹಿಳೆ ಗೌಣವಾಗಿರುವುದು ತಿಳಿದು ಬಂದಿತು. ದಲಿತ ಮಹಿಳೆಯನ್ನೇ ವಸ್ತುವಾಗಿಸಿಕೊಂಡ ಪರಿಪೂರ್ಣ ಸಾಹಿತ್ಯಿಕ ಸಂಶೋಧನೆಗಳು ಕಂಡು ಬಂದಿಲ್ಲ. ಒಟ್ಟಾರೆ ಸಂಶೋಧನೆಗಳಲ್ಲಿ ಅಲ್ಲಲ್ಲಿ ಕಂಡುಬಂದರೂ ನೋಡಿರುವ ದೃಷ್ಟಿಕೋನ ಭಿನ್ನವಾಗಿರುವುದನ್ನು ಗುರುತಿಸಲಾಗಿದೆ.

ದಲಿತರು ಚಿತ್ರಿಸಿರುವ ದಲಿತ ಮಹಿಳೆಯಾದ ಸಾಕವ್ವ ಮಾತೃಪ್ರಧಾನ ವ್ಯವಸ್ಥೆಯ ವಕ್ತಾರಳಂತೆ ಕಂಡು ಬರುತ್ತಾಳೆ. ಇಲ್ಲಿ ಪಾಲನೆಯೇ ಮುಖ್ಯವಾಗಿ ಕಾಣುವ ಅಂಶವಾಗಿದೆ. ಸಾಕವ್ವ ಹುಂಜವನ್ನು, ತನ್ನ ಸಂಸಾರವನ್ನು ಪಾಲಿಸುವವಳಾಗಿ ಕಂಡು ಬರುವುದನ್ನು ಕಂಡುಕೊಳ್ಳಲಾಗಿದೆ. ಸಾಕವ್ವನ ಮಾತುಗಳಿಂದ ಅವಳು ತನ್ನ ಇಡೀ ಸಂಸಾರಕ್ಕೆ ತಾನೇ ಊರುಗೋಲಾಗಿರುವುದು ತಿಳಿಯುತ್ತದೆ. 'ಹಸಿವು' ಕೂಡ ಒಡಲಾಳದ ಕೇಂದ್ರವಾಗಿರುವುದನ್ನು ಗಮನಿಸಲಾಗಿದೆ. ಒಟ್ಟಾರೆ, ದಲಿತರಾದ ದೇವನೂರ ಮಹಾದೇವರಲ್ಲಿ ಸಾಕವ್ವ ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ನೆಲೆಯಲ್ಲಿ ಕಂಡು ಬರುತ್ತಾಳೆ. ಅಲ್ಲಿ ಅಸಹಜ ಕಾಮದ ಹೊಂಡವಿಲ್ಲ. ಅದಕ್ಕೆ ಗುರಿಯಾಗುವ ತಳವರ್ಗದ ಹೆಣ್ಣುಗಳ ಪ್ರಸ್ತಾಪವೂ ಕಂಡು ಬರುವುದಿಲ್ಲ.

ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯ ಲಚ್ಚಿಯಲ್ಲಿ ಹಸಿವು ಮತ್ತು ಕಳ್ಳತನದ ಕಾರಣಕ್ಕಾಗಿ ದುರಂತವನ್ನಪ್ಪುವ ಹೆಣ್ಣಿನ ಚಿತ್ರಣವನ್ನು ಗುರುತಿಸಲಾಗಿದೆ.

ಹಸಿವಿನ ಕಾರಣಕ್ಕಾಗಿ ಕುಲಕರ್ಣಿಯ ತೋಟದಿಂದ ಕುಂಬಳಕಾಯಿ ಕದ್ದು, ಆ ಕಾರಣದಿಂದಲೇ ಜೈಲು ಸೇರಿ ಅಲ್ಲಿನ ಪೋಲೀಸರಿಂದ ಸಾಮೂಹಿಕ ಅತ್ಯಾಚಾರಕ್ಕೊಳಪಟ್ಟು ಅಲ್ಲಿಂದ ಸ್ತ್ರೀನಿಕೇತನಕ್ಕೆ ಹೋಗಿ, ಸ್ತ್ರೀನಿಕೇತನದ ಅಧಿಕಾರಿಣಿಯಿಂದಲೂ ಅಧಿಕಾರಿಗಳ ಮೂಲಕ ಬಲಾತ್ಕಾರಕ್ಕೆ ಒಳಪಟ್ಟು ಜೀವನವನ್ನೇ ನಾಶಪಡಿಸಿಕೊಳ್ಳುವ ಅಮಾನವೀಯತೆ ವಾಸ್ತವ ಸಮಾಜದ ದಲಿತ ಮಹಿಳೆಯ ಪ್ರತಿನಿಧಿಕರಣವಾಗಿದೆ. ಹೆಣ್ಣೇ ಹೆಣ್ಣಿಗೆ ಶತ್ರುವಾಗುವ, ರಕ್ಷಣೆ ಕೊಡದ ಸಂದರ್ಭ ಕಂಡು ಬರುತ್ತದೆ. ಲಚ್ಚಿ ತನ್ನ ಜೀವನವನ್ನು ಸರಿಪಡಿಸಿಕೊಳ್ಳಲು ಗಂಡನಾದ ಬಸೆಣ್ಣೆಯಲ್ಲಿ ಬೇಡುವುದೂ ಕೂಡ ಪ್ರಯೋಜನಕ್ಕೆ ಬರುವುದಿಲ್ಲ. ಗೀತಾರವರು

ದಲಿತ ಬರಹಗಾರ್ತಿಯಾಗಿ ತಮ್ಮ ಕಾದಂಬರಿಗಳಲ್ಲಿ ದಲಿತ ಹೆಣ್ಣುಮಕ್ಕಳು 'ಮೇಲ್ಜಾತಿ'ಯವರ ಕಾಮಕ್ಕೆ ಬಲಿಯಾಗುವುದನ್ನು ಸಶಕ್ತವಾಗಿ ಹಿಡಿದಿಟ್ಟಿರುವುದನ್ನು ಗುರುತಿಸಲಾಗಿದೆ. ಒಬ್ಬ ದಲಿತ ಬರಹಗಾರ್ತಿ ಹೀಗೆ ಬರೆಯುವುದರ ಮೂಲಕ ದಲಿತ ಹೆಣ್ಣುಮಕ್ಕಳನ್ನು ಕೀಳಾಗಿ ಚಿತ್ರಿಸಿದ್ದಾರೆ ಎನ್ನುವುದಕ್ಕಿಂತ ಸಮಾಜದಲ್ಲಿನ ವಾಸ್ತವ ಚಿತ್ರಣವನ್ನು ಕಣ್ಣೆದುರಿಗೆ ಇಡುತ್ತಾ ಪರೋಕ್ಷವಾಗಿ ಬದಲಾವಣೆಯನ್ನು ಬಯಸುತ್ತಿದ್ದಾರೆ ಎನಿಸುತ್ತದೆ.

ದಲಿತ ಕಾದಂಬರಿಕಾರರಲ್ಲಿ 'ಹುಡುಕಾಟ' ಪ್ರಧಾನವಾಗಿ ಕಂಡುಬರುವುದನ್ನು ಗುರುತಿಸಲಾಯಿತು. 'ಒಡಲಾಳ' ಕಾದಂಬರಿ ಆರಂಭವಾಗುವುದೇ 'ಹುಡುಕಾಟ'ದೊಂದಿಗೆ. ಸಾಕವ್ವ ತನ್ನ ಹುಂಜವನ್ನು ಕಳೆದುಕೊಂಡು ಹುಡುಕಾಡುತ್ತಿರುತ್ತಾಳೆ. ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿಯಲ್ಲೂ ಈ 'ಹುಡುಕಾಟ' ಮುಂದುವರೆಯುತ್ತದೆ. ಸೋನಿ ತನ್ನ ಕೋಳಿಗಾಗಿ ಹುಡುಕಾಟ ನಡೆಸುತ್ತಾಳೆ. ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯ 'ಲಚ್ಚಿ'ಯು ಕೋಳಿಯನ್ನು ಕಳೆದುಕೊಂಡು ಹುಡುಕಾಡುವುದು ಕಂಡು ಬರುತ್ತದೆ. ಈ ಎಲ್ಲಾ ಹುಡುಕಾಟಗಳೂ ಸೇರಿ ದಲಿತ ಹೆಣ್ಣುಮಕ್ಕಳ ಬದುಕಿನ ಹುಡುಕಾಟವನ್ನಾಗಿಯೂ ಗ್ರಹಿಸಲು ಸಾಧ್ಯವಿದೆ.

ಬಿ.ಟಿ. ಲಲಿತಾ ನಾಯಕರ 'ಗತಿ' ಕಾದಂಬರಿಯಲ್ಲಿ ಪ್ರಸ್ತಾಪವಾಗುವ ಇಬ್ಬರು ದಲಿತ ಮಹಿಳೆಯರು 'ಗುಡಿಸಲಿನಲ್ಲಿ ಅರಳುವ ಗುಲಾಬಿ'ಗಳಂತೆ ಕಂಡು ಬರುತ್ತಾರೆ. ಜೀವನದಲ್ಲಿ ಎಷ್ಟೇ ಕಷ್ಟ ಕೋಟಲೆಗಳು ಎದುರಾದರೂ ವಿಮುಖರಾಗದೆ ಜೀವನ್ಮುಖಿಯರಾಗಿ ಹೋರಾಡುತ್ತಾರೆ. 'ಮೇಲ್ಜಾತಿ'ಯವರ ಊರಿನ ಮುಖಂಡರ ಕೈಗೊಂಬೆಯಾಗಿ ಕೆಳಜಾತಿಯವನಾದರೂ ಮೇಲ್ವರ್ಗದ ಹಣವಂತರಿಗೆ ಚೇಲಾ ಆಗಿರುವ ಕಾಶಪ್ಪ ಪೂಜಾರಿ, ಮಠದಯ್ಯನ ಗೋಮುಖ ವ್ಯಾಘ್ರತನ ಮುಂತಾದವನ್ನು ಬಿ.ಟಿ. ಲಲಿತಾ ನಾಯಕರು ಸಶಕ್ತವಾಗಿ ಚಿತ್ರಿಸಿರುವುದು ಕಂಡುಬಂದಿದೆ. ಮೇಲಿನ ಎಲ್ಲಾ ಸಮಾಜ ಘಾತುಕ ಶಕ್ತಿಗಳೊಡನೆ ಹೋರಾಡುತ್ತಲೇ ಬದುಕನ್ನು ಕಟ್ಟಿಕೊಳ್ಳುವ ಸೋನಿ–ಲಚ್ಮಿಯರು ಪ್ರಸ್ತುತ ಸಮಾಜಕ್ಕೆ ಮಾದರಿಯಾಗಿ ಕಂಡು ಬರುತ್ತಾರೆ. ಇಲ್ಲಿ ಲಚ್ಮಿ ಒಬ್ಬ ಮಠದಯ್ಯನ ಕಾಮಕ್ಕೆ ಬಲಿಯಾದರೂ ತನ್ನೂರಿಗೆ ಮರಳಿ ಹೊಸದಾದ ಸ್ವಾಭಿಮಾನದ ಬದುಕನ್ನು ಕಟ್ಟಿಕೊಂಡು ಸ್ವತಂತ್ರವಾಗಿ ಬದುಕುವುದು ಕಂಡು ಬರುತ್ತದೆ. ರಾತ್ರಿ ಶಿಕ್ಷಣ, ಉಡುಪು ಬದಲಾವಣೆ (ಸೀರೆ) ಮೊದಲಾದ ಆಧುನಿಕತೆಯ ಗಾಳಿ ಚಂದೂನ ಮೂಲಕ ತಾಂಡಾಗೆ ಕಾಲಿಟ್ಟಿವೆ. ಇವು ದಲಿತರೇ ಬರೆದ ಬರವಣಿಗೆಯಲ್ಲಿ ಬದಲಾವಣೆಯ ಆಶಯವಾಗಿ ಕಂಡು ಬರುವುದು ಗಮನಾರ್ಹವಾಗಿದೆ.

‘ಒಡಲಾಳ’ದ ಸಾಕವ್ವನ ಹೆಸರು ಅವಳಿಗೆ ಅನ್ವರ್ಥವಾಗಿದೆ. ಏಕೆಂದರೆ ‘ಸಾಕು’ ಎಂಬುದು ‘ಪಾಲಿಸು’, ‘ಪೋಷಿಸು’, ‘ರಕ್ಷಿಸು’ ಎಂಬ ಅರ್ಥಗಳನ್ನು ಪ್ರತಿನಿಧಿಸುತ್ತದೆ. ಇದರಂತೆಯೇ ಸಾಕವ್ವ ತನ್ನ ಇಳಿಗಾಲದಲ್ಲೂ ಕುಟುಂಬದೊಂದಿಗೆ ನಿಯಂತ್ರಣ ಸಾಧಿಸುತ್ತಾಳೆ. ಆದರೆ ಈ ನಿಯಂತ್ರಣ ಮತ್ತು ಯಜಮಾನಿ ಪ್ರಜ್ಞೆ ಎಲ್ಲವೂ ಕುಟುಂಬದ ಒಳಿತಿಗಾಗಿಯೇ, ಒಮ್ಮೊಮ್ಮೆ ಅವಳಾಡುವ ರೇಜಿಗೆಯ ಮಾತುಗಳಿಂದ, ಯಮನೊಂದಿಗೆ ತಾನೇ ಹೋಗುವ ಮಾತುಗಳಿಂದ ಸಾಕವ್ವ ಸಾಕಿ, ಸಾಕಿ ಸಾಕಾದವಳು ಎಂಬ ಅರ್ಥಗಳನ್ನು ಹೊಮ್ಮಿಸುತ್ತವೆ.

ದಲಿತೇತರ ಕಾದಂಬರಿಕಾರರಲ್ಲಿ ಚಿತ್ರಣಗೊಂಡಿರುವ ದಲಿತ ಮಹಿಳೆಯರು ‘ಕಾಮ’ ಕೇಂದ್ರದ ಆಚೆಗೆ ಸೃಜನಾತ್ಮಕ ನೆಲೆಯಲ್ಲಿ ಕಂಡು ಬರುವುದು ವಿರಳ. ಇದಕ್ಕೆ ಅಪಮಾನವೆಂಬಂತೆ ಶಿವರಾಮ ಕಾರಂತರ ‘ಚೋಮನ ದುಡಿ’ ಕಾದಂಬರಿಯ ‘ಬೆಳ್ಳಿ’ ಪಾತ್ರ ಮೂಡಿಬಂದಿದೆ. ಕಾರಂತರು ಬೆಳ್ಳಿಯನ್ನು ಕಾಮಕ್ಕೆ ಗುರಿಯಾಗುವಂತೆ ಚಿತ್ರಿಸಿದರೂ ಅವಳು ತನ್ನ ಇಡೀ ಕುಟುಂಬಕ್ಕೆ ಆಧಾರಸ್ತಂಭವೆಂಬಂತೆಯೂ ಚಿತ್ರಿಸಿರುವುದು ತಿಳಿದುಬರುತ್ತದೆ. ಆದರೆ ಇಲ್ಲಿ ಗಮನಿಸುವ ವಿಷಯವೇನೆಂದರೆ, ಬೆಳ್ಳಿಯನ್ನು ಮನ್ವೇಲ ಮಿಂಗೇಲ ದೊರೆಗಳಿಗೆ ಪ್ರತಿರೋಧ ಒಡ್ಡದೆ ಅರ್ಪಿಸಿಕೊಳ್ಳುವಂತೆ, ಯೌವ್ವನದ ದುಡುಕನ್ನು ಅವಳು ಒಪ್ಪಿಕೊಂಡಳು ಎಂಬಂತೆ ಚಿತ್ರಿಸಿರುವುದು ಶೀಲದ ವಿಚಾರದಲ್ಲಿ ದಲಿತ ಹೆಣ್ಣುಮಕ್ಕಳಿಗೆ ಸಡಿಲತೆಯಿದೆ ಎಂಬುದನ್ನು ತೋರಿಸಿದಂತೆ ಕಂಡು ಬರುತ್ತದೆ. ದಲಿತ ಹೆಣ್ಣುಮಕ್ಕಳ ಬಣ್ಣದ ಬಗ್ಗೆಯೂ ದಲಿತೇತರ ಕಾದಂಬರಿಕಾರರಲ್ಲಿ ಪ್ರಸ್ತಾಪವಿರುವುದು ವೇದ್ಯವಾಗುತ್ತದೆ. ಆ ಬಣ್ಣದ ಕಾರಣದಿಂದಲೇ ದಲಿತ ಹೆಣ್ಣುಮಕ್ಕಳು ಮೇಲ್ವರ್ಗದವರ ಕಣ್ಣಿಗೆ ಬಿದ್ದು ಲೈಂಗಿಕವಾಗಿ ಶೋಷಣೆಗೊಳಗಾಗುತ್ತಿದ್ದರು ಎಂಬುದು ಅಂದಿನ ಸಮಾಜದ ವಾಸ್ತವವಾಗಿದೆ.

ಕುವೆಂಪುರವರು ತಮ್ಮ ‘ಮಲೆಗಳಲ್ಲಿ ಮದುಮಗಳು’ ಕಾದಂಬರಿಯ ದಲಿತ ಸ್ತ್ರೀ ಪಾತ್ರವಾದ ಪುಟ್ಟಿಯನ್ನು ಬೀದಿ ನಾಯಿಗೆ ಹೋಲಿಸಿರುವುದು ೭೦ರ ದಶಕದಿಂದ ಚರ್ಚೆಗೊಳಗಾದ ವಿಷಯವಾಗಿದೆ. ಪುಟ್ಟಿಯು ತಿಮ್ಮಪ್ಪ ಹೆಗ್ಗಡೆಗೆ ಅಸಮ್ಮತಿ ಸೂಚಿಸುವಂತೆ ಚಿತ್ರಿಸಿಲ್ಲ. ಪೀಂಚಲು ತನ್ನ ಗಂಡ ಐತ ಬಯಸಿದ್ದನ್ನು ಮುಕುಂದಯ್ಯ ಬಯಸಿದ್ದರೆ ಅದೇ ತನ್ನ ಬದುಕಿನ ಸಾರ್ಥಕ್ಯ, ಪುಣ್ಯವೆಂಬಂತೆ ಅರ್ಪಿಸಿಕೊಳ್ಳಲು ಸಿದ್ಧರಿರುವಂತೆ ಚಿತ್ರಿಸಿರುವುದೂ ಕೂಡಾ ದಲಿತ ಹೆಣ್ಣುಮಕ್ಕಳಲ್ಲಿ ಕಾಮದ ವಿಚಾರದಲ್ಲಿ ಗೋಡೆಗಳಿಲ್ಲ ಎಂಬಂತೆ ಇದೆ.

ದಲಿತೇತರರಾದ ಅನಂತ ಮೂರ್ತಿಯವರು ‘ಸಂಸ್ಕಾರ’ ಕಾದಂಬರಿಯಲ್ಲೂ ದಲಿತ ಮಹಿಳೆಯಾದ ಬೆಳ್ಳಿಯನ್ನು ‘ಮೇಲ್ಜಾತಿ’ಯವರಿಗೆ ಯಾವುದೇ ಎಗ್ಗು-ಸಿಗ್ಗಿಲ್ಲದೆ ಅರ್ಪಿಸಿಕೊಳ್ಳುವಂತೆಯೇ ಚಿತ್ರಿಸಿರುವುದು ಕಂಡು ಬರುತ್ತದೆ. ದಲಿತಳಾದ ಬೆಳ್ಳಿಯ ಮೈಬಣ್ಣದ

ವರ್ಣನೆಯೂ ಸೊಗಸಾಗಿ ನಡೆಯುತ್ತದೆ. ಇವರು ಬರೆದ ಭಾರತೀಪುರದ 'ಕಾವೇರಿ' ಇದಕ್ಕೆ ಹೊರತಾದವಳಲ್ಲ ಕಾವೇರಿಯೇ ಸ್ವತಃ ಮೈಪ್ರದರ್ಶನವನ್ನು ಮಾಡಿ ಜಗನ್ನಾಥನನ್ನು ಕೆರಳಿಸುವಂತೆ ಅನಂತಮೂರ್ತಿಯವರು ಚಿತ್ರಿಸಿದ್ದಾರೆ. ಆದರೆ ಜಗನ್ನಾಥನ ಹೊಲೆಯರನ್ನು ಉದ್ಧಾರ ಮಾಡುವ ಪ್ರಯತ್ನವು ಹೊಲತಿಯಾದ ಬೆಳ್ಳಿಯನ್ನು ಒಳಸಿಕೊಳ್ಳಲು ಅಡ್ಡಿಪಡಿಸುತ್ತದೆ. ಹೊಲೆಯರ ಉದ್ಧಾರಕ್ಕೆ ಮಂಜುನಾಥನ ಗರ್ಭಗುಡಿಯ ಪ್ರವೇಶದ ಅವಶ್ಯಕತೆಗಿಂತ 'ಕೆಳಜಾತಿ'ಯವರೊಂದಿಗೆ ಅಂತರ್‌ಜಾತಿ ವಿವಾಹದ ಕಲ್ಪನೆಯೂ ಜಗನ್ನಾಥನಲ್ಲಿ ಮೂಡುವುದಿಲ್ಲ. ಅನಂತಮೂರ್ತಿಯವರ ಪಾತ್ರ ಚಿತ್ರಣದ ಇಂತಹ ಮಿತಿಗೆ ಅಂದಿನ ಸಾಮಾಜಿಕ ಸ್ಥಿತಿ ಕಾರಣವೋ ಅಥವಾ ಆ ಮಟ್ಟಿನ ಬದಲಾವಣೆಗೆ ಅವರ ಮನಃಸ್ಥಿತಿ ತೆರೆದುಕೊಳ್ಳಲಿಲ್ಲವೋ ಎಂಬ ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ. ದಲಿತರು ಚಿತ್ರಿಸಿರುವ ಕಾದಂಬರಿಗಳಲ್ಲಿನ ದಲಿತ ಮಹಿಳೆ ಜೀವಕೇಂದ್ರಿತ ನೆಲೆಯಲ್ಲಿ ಕಂಡು ಬಂದರೆ ದಲಿತೇತರರು ಚಿತ್ರಿಸಿರುವ ಕಾದಂಬರಿಗಳಲ್ಲಿ ಕಾಮಕೇಂದ್ರಿತ ನೆಲೆಯಲ್ಲಿ ಕಂಡು ಬಂದಿರುವುದನ್ನು ಕಂಡುಕೊಳ್ಳಲಾಗಿದೆ. ಅಲ್ಲದೇ ದಲಿತರ ಬದುಕಿನ ಸಾಂಸ್ಕೃತಿಕ ವಿವರಗಳು ದಲಿತ ಕಾದಂಬರಿಕಾರರಲ್ಲಿ ಕಂಡುಬಂದಷ್ಟು ದಲಿತೇತರ ಕಾದಂಬರಿಕಾರರಲ್ಲಿ ಕಂಡು ಬರುವುದಿಲ್ಲ. ಇದಕ್ಕೆ ಕಾರಣ ಸ್ವಾನುಭವದ ಕೊರತೆಯೂ ಆಗಿರಬಹುದು.

ಅಸ್ಪೃಶ್ಯತೆಯೆಂಬುದು ದಲಿತರನ್ನು ದಲಿತ ಮಹಿಳೆಯನ್ನು ಕಾಡುತ್ತಿರುವ ಭೂತವಾಗಿದೆ. ಅಸ್ಪೃಶ್ಯತೆಯ ಕರಾಳ ಮುಖವನ್ನು ವೇದಗಳ ಕಾಲದಿಂದಲೂ ಗುರುತಿಸಬಹುದು. ಪ್ರಸ್ತುತ ಸಮಾಜದಲ್ಲಿ 'ಅಸ್ಪೃಶ್ಯತೆ' ಎಂಬುದು ನಗರಗಳಿಗಿಂತಲೂ ಹಳ್ಳಿಗಳಲ್ಲಿ ಹೆಚ್ಚಾಗಿದೆ. ಕೆರೆ, ಕಟ್ಟೆ, ಬಾವಿ, ಕುಡಿಯುವ ನೀರು, ದೇವಾಲಯ ಪ್ರವೇಶ, ಮೆರವಣಿಗೆ, ಸಭೆ, ಸಮಾರಂಭ ಮುಂತಾದ ಸ್ಥಳಗಳಲ್ಲಿ ದಲಿತರಿಗೆ ಇಂದಿಗೂ ಪ್ರವೇಶವನ್ನು ನಿರ್ಬಂಧಿಸಿರುವುದು ತಿಳಿದು ಬರುತ್ತದೆ. ದಲಿತ ಮಹಿಳೆ ಕೆರೆ, ಕಟ್ಟೆ, ಬಾವಿ, ಕುಡಿಯುವ ನೀರು, ಕೆಲಸ ಮಾಡುವ ಜಾಗಗಳಲ್ಲಿ ಅಸ್ಪೃಶ್ಯತೆಗೆ ಒಳಗಾಗುತ್ತಿದ್ದಾಳೆ. ಜಾತಿಯೊಳಗೆ ನಡೆಯುವ ಅಸ್ಪೃಶ್ಯತೆಯನ್ನು, 'ಮೇಲ್ಜಾತಿ'ಯವರು 'ಕೆಳಜಾತಿ'ಯವರ ಮೇಲೆ ನಡೆಸುವ ಅಸ್ಪೃಶ್ಯತೆಯನ್ನು, ಬಾಣಂತನ ಸಂದರ್ಭದ ಅಸ್ಪೃಶ್ಯತೆಯನ್ನು ಒಟ್ಟಾರೆ ಅಸ್ಪೃಶ್ಯತೆಯ ಕರಾಳ ಮುಖವನ್ನು ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯ ಪಾತ್ರಗಳ ಮೂಲಕ ಕಂಡುಕೊಳ್ಳಲಾಗಿದೆ. 'ಚೋಮನ ದುಡಿ' ಕಾದಂಬರಿಯಲ್ಲಿ ಗುರುವನ ಪ್ರೀತಿಯ ವಿಚಾರದಲ್ಲಿ, ಮದುವೆಯಾಗುವ ಸಂದರ್ಭದಲ್ಲಿ ದಲಿತರು ಮತ್ತು ದಲಿತ ಕ್ರಿಶ್ಚಿಯನ್ನರ ನಡುವಿನ ಅಸ್ಪೃಶ್ಯತೆಯನ್ನು ಗುರುತಿಸಲಾಗಿದೆ. ದಲಿತರಲ್ಲೇ ನಡೆಯುವ ಒಳ ಅಸ್ಪೃಶ್ಯತೆಯನ್ನು ವೈದೇಹಿಯವರ ಅಸ್ಪೃಶ್ಯರು ಕಾದಂಬರಿ ಪಾತ್ರಗಳ

ಮುಖಾಂತರ ಚರ್ಚಿಸಲಾಗಿದೆ. 'ಕೊರಚ' ಜನಾಂಗದ ಕುಮುದಿನಿ 'ಬ್ರಾಹ್ಮಣ'ನಾದ ಭಾಸ್ಕರನನ್ನು ಮದುವೆಯಾಗಿದ್ದರೂ 'ಕೊರಚ' ಜನಾಂಗದವರು, ಕುಮುದಿನಿಯ ಕುಟುಂಬದವರು ಅವಳನ್ನು ಮನೆಗೆ ಸೇರಿಸಿಕೊಳ್ಳದೆ ಸಂಬಂಧಗಳಿಂದಲೇ ದೂರ ಇಟ್ಟಿರುವುದು ಕಂಡು ಬರುತ್ತದೆ. 'ಅಸ್ಪೃಶ್ಯತೆ'ಯನ್ನು 'ಕೆಳಜಾತಿ' ಎನಿಸಿಕೊಂಡವರೂ ಆಚರಿಸುತ್ತಿರುವುದು ಬೆಳಕಿಗೆ ಬರುತ್ತದೆ. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯ ಜಗನ್ನಾಥ ಕಾವೇರಿಯನ್ನು ಮದುವೆಯಾಗುವ ನಿಟ್ಟಿನಲ್ಲಿ ಯೋಚಿಸದಿರುವುದು ಕೂಡ ಜಾತಿ ಅಸ್ಪೃಶ್ಯತೆಗೆ ಕಾರಣವಾಗಿದೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲೂ ಅಸ್ಪೃಶ್ಯತೆಯ ಎಳೆಗಳನ್ನು ಗುರುತಿಸಲಾಗಿದೆ. ಇದಕ್ಕೆ ಕಾರಣ ಅಂದಿನ ಸಂದರ್ಭದ ಸನಾತನ ಮನಸ್ಸುಗಳಾಗಿವೆ. ಈ ಭಾಗದಲ್ಲಿ ಅಸ್ಪೃಶ್ಯತೆ ನಿವಾರಣೋಪಾಯಗಳನ್ನು ಕಂಡುಕೊಳ್ಳಲಾಗಿದೆ.

ದುಡಿಮೆಯು ದಲಿತ ಮಹಿಳೆಗೆ ಅನಿವಾರ್ಯವಾಗಿರುವುದರ ಬಗ್ಗೆಯನ್ನು ಕಾದಂಬರಿಗಳಲ್ಲಿನ ಪಾತ್ರಗಳ ಮೂಲಕ ಗುರುತಿಸಲಾಗಿದೆ. ದುಡಿಮೆ ಎಂಬುದು ಆದಿಮ ಕಾಲದಿಂದಲೂ ಮಹಿಳೆಗೆ ಬಳುವಳಿಯಾಗಿ ಬಂದಿರುವುದು ಕಂಡು ಬರುತ್ತದೆ. ಚೋಮನದುಡಿಯ ಬೆಳ್ಳಿ, ಸಂಸ್ಕಾರದ ಬೆಳ್ಳಿ, ಭಾರತೀಪುರದ ಕಾವೇರಿ, ಒಡಲಾಳದ ಸಾಕವ್ವ, ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪುಟ್ಟಿ, ಹಸಿಮಾಂಸ ಮತ್ತು ಹದ್ದುಗಳು ಕಾದಂಬರಿಯ ಲಚ್ಚಿ, ಗತಿ ಕಾದಂಬರಿಯ ಸೋನಿ ಮತ್ತು ಲಚ್ಮಿ, ಅಸ್ಪೃಶ್ಯರು ಕಾದಂಬರಿಯ ಕೂಸ, ನರಪಟೆ ಮುಂತಾದ ದಲಿತ ಮಹಿಳಾ ಪಾತ್ರಗಳ ಮೂಲಕ ದುಡಿಮೆಯು ಅವರ ಪಾಲಿಗೆ ಬದುಕಿನ ಭಾಗವಾಗಿರುವ ಬಗ್ಗೆ ಚರ್ಚಿಸಲಾಗಿದೆ. ದಲಿತ ಗಂಡಸರು ಕುಡುಕರಾಗಿರುವುದರಿಂದ ಇಡೀ ಸಂಸಾರದ ಜವಾಬ್ಧಾರಿಯನ್ನು ಮಹಿಳೆಯರೇ ಹೊತ್ತಿರುತ್ತಾರೆ. ಇವರು ಕುಟುಂಬದ ಹೊರಗೆ ಮತ್ತು ಒಳಗೆ ದುಡಿಯದೆ ಗತ್ಯಂತರವಿಲ್ಲ. ಹೊಟ್ಟೆ ತುಂಬಿಸಿಕೊಳ್ಳಲಿಕ್ಕಾಗಿ ಕುಟುಂಬವನ್ನು ಪೋಷಿಸಲಿಕ್ಕಾಗಿ ಇವರು ದುಡಿಯುತ್ತಿರುವ ಸಂದರ್ಭಗಳನ್ನು ಕುರಿತು ಚರ್ಚಿಸಲಾಗಿದೆ.

ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪುಟ್ಟಿ, ಚೋಮನ ದುಡಿ ಕಾದಂಬರಿಯ ಬೆಳ್ಳಿ ಇವರಿಬ್ಬರು ಮನೆಯ ಒಳಗೆ ಮತ್ತು ಹೊರಗೆ ಧಣಿಗಳ ಹೊಲಗಳಲ್ಲಿ ದುಡಿಯುವುದರಿಂದ ತಾಯಿಯಿಲ್ಲದ ತಮ್ಮ ಕುಟುಂಬಗಳಿಗೆ ತಾಯಿಯಾಗಿ ಅಣ್ಣ-ತಮ್ಮಂದಿರು, ಅಪ್ಪಂದಿರನ್ನು ಸಾಕುತ್ತಿದ್ದಾರೆ. ಕುಟುಂಬದ ಜವಾಬ್ಧಾರಿಗಳನ್ನು ತಾವೇ ವಹಿಸಿಕೊಂಡಿರುವುದರಿಂದ ಇವರಿಬ್ಬರೂ ಕುಟುಂಬದ ಆಧಾರ ಸ್ತಂಭಗಳಾಗಿ ಕಂಡುಬರುತ್ತಾರೆ.

ದಲಿತ ಹೆಣ್ಣುಮಕ್ಕಳು ಹೀಗೆ ದುಡಿಯಲು ಹೊರ ಹೋಗುವ ಜಾಗಗಳಲ್ಲಿ ಲೈಂಗಿಕ ಶೋಷಣೆಗೆ ಒಳಪಡುತ್ತಿರುವುದನ್ನು ಕಂಡುಕೊಳ್ಳಲಾಗಿದೆ. ಹೀಗೆ ದಲಿತ ಹೆಣ್ಣುಮಕ್ಕಳು ಹೊರಗೆ ಹೋಗಿ ದುಡಿಯಲು ಕಾರಣ ತಮ್ಮ ತಂದೆಯಂದಿರ ಕುಡುಕುತನ, ಅಜ್ಞಾನ, ಅನಕ್ಷರತೆಗಳೇ ಕಾರಣವೆಂಬುದನ್ನು ಗುರುತಿಸಲಾಗಿದೆ. ಇವರು ಎಲ್ಲಾ ಸಮಸ್ಯೆಗಳಿಂದ ಹೊರಬರಲು ಅಕ್ಷರಸ್ಥರಾಗುವ ಅನಿವಾರ್ಯತೆಯಿದೆ. ದಲಿತರ ಹಸಿವಿನ ಭೀಕರತೆಯನ್ನು ಸತ್ತ ಪ್ರಾಣಿಗಳನ್ನು ತಿನ್ನುವುದರ ಮೂಲಕ ಚಿತ್ರಿಸಲಾಗಿದೆ. ದೇವನೂರರ 'ಒಡಲಾಳ', ಗೀತಾ ನಾಗಭೂಷಣ 'ಹಸಿಮಾಂಸ ಮತ್ತು ಹದ್ದುಗಳು', ಶಿವರಾಮ ಕಾರಂತರ 'ಚೋಮನ ದುಡಿ' ಕಾದಂಬರಿಗಳಲ್ಲಿ ಸತ್ತ ಎಮ್ಮೆ, ಕೋಣಗಳನ್ನು ಹಬ್ಬದ ಸಂಭ್ರಮದಿಂದ ತಿನ್ನುವುದು ದಲಿತರ ಹಸಿವಿನ ಧಾರುಣ ಸಂದರ್ಭವನ್ನು ಮುಂದಿಡುತ್ತದೆ.

ಪುರುಷ ಕಾದಂಬರಿಕಾರರು ಚಿತ್ರಿಸಿರುವ ಬೆಳ್ಳಿ, ಪುಟ್ಟಿ, ಕಾವೇರಿ, ಪೀಂಚಲು, ಬೆಳ್ಳಿ ಮುಂತಾದ ದಲಿತ ಮಹಿಳೆಯರು 'ಮೇಲ್ಜಾತಿ'ಯವರಿಗೆ ತಮ್ಮನ್ನು ಅರ್ಪಿಸಿಕೊಳ್ಳುವಂತೆ ಚಿತ್ರಿಸಿರುವುದು ಹಾಗೂ ಆ ರೀತಿ ಅರ್ಪಿಸಿಕೊಳ್ಳಲು ಯಾವ ವಿರೋಧ ಇಲ್ಲದೆ ಸಿದ್ಧರಿರುವಂತೆ ಚಿತ್ರಿಸಿರುವುದು ಕಂಡು ಬಂದರೆ ಮಹಿಳೆಯರು ಚಿತ್ರಿಸಿರುವ ಕಾದಂಬರಿಗಳಲ್ಲಿನ ಸ್ತ್ರೀ ಪಾತ್ರಗಳಾದ ಸೋನಿ, ಕೂಸ, ನರಪಟೆ ಮುಂತಾದವರು ಕ್ರಿಯಾತ್ಮಕ ಶಕ್ತಿಗಳಾಗಿ ಕಂಡುಬರುವುದನ್ನು ಗುರುತಿಸಲಾಗಿದೆ.

ಬಿ.ಟಿ. ಲಲಿತಾ ನಾಯಕರು ಚಿತ್ರಿಸಿರುವ ಸೋನಿಗೆ ಸಮಾಜದ ಪುರುಷ ವರ್ಗದಿಂದ ಲೈಂಗಿಕ ಕಿರುಕುಳ ಕಂಡುಬಂದರೂ ಅಂತಹ ಸಂದರ್ಭಗಳಿಗೆ ಬಲಿಯಾಗದೆ ಅದನ್ನು ಧೈರ್ಯದಿಂದ ಎದುರಿಸುವಂತೆ ಚಿತ್ರಣಗೊಂಡಿದ್ದಾಳೆ. ಇದೇ ಕಾದಂಬರಿಯ ಲಚ್ಮಿಗೆ ಮಠದಯ್ಯನ ನಡವಳಿಕೆ ಸರಿಕಾಣದೆ ಪ್ರತಿರೋಧವನ್ನು ತೋರಿದರೂ, ಅಪರಿಚಿತ ಜಾಗದಲ್ಲಿ ಅಸಹಾಯಕಳಾಗುತ್ತಾಳೆ. ಗೀತಾ ನಾಗಭೂಷಣರ ಲಚ್ಚಿ ಕಾಮುಕರಿಗೆ ಪ್ರತಿರೋಧ ಒಡ್ಡಿದರೂ ಪ್ರಯೋಜನವಾಗುವುದಿಲ್ಲ. ಮಹಿಳೆ ಚಿತ್ರಿಸಿರುವ 'ಗತಿ' ಕಾದಂಬರಿಯಲ್ಲಿ ಇಂದಿನ ಮಠಮಾನ್ಯಗಳು ನಡೆಸುತ್ತಿರುವ ಅನಾಚಾರವನ್ನು ಪಾತ್ರಗಳ ಮೂಲಕ ಬಯಲಿಗೆಳೆದಿರುವುದು ಕಂಡು ಬರುತ್ತದೆ. ಒಟ್ಟಾರೆ ಮಹಿಳೆಯರು ಚಿತ್ರಿಸಿರುವ ಸ್ತ್ರೀ ಪಾತ್ರಗಳು ಸ್ವ-ಇಚ್ಛೆಯಿಂದ ಲೈಂಗಿಕತೆಗೆ ಒಪ್ಪಿಕೊಳ್ಳುವುದು ಕಂಡು ಬರುವುದಿಲ್ಲ. ಇವು ಪುರುಷ ಕಾದಂಬರಿಕಾರ ಮತ್ತು ಕಾದಂಬರಿಕಾರ್ತಿಯರ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.

ದೇವದಾಸಿ ಅಥವಾ ಜೋಗಣಿ ಪದ್ಧತಿಯನ್ನು ಕುರಿತು ಗೀತಾ ನಾಗಭೂಷಣರ ಬದುಕು ಕಾದಂಬರಿಯಿಂದ ಆರಂಭಿಸಲಾಗಿದೆ. ಈ ಭಾಗದಲ್ಲಿ ದೇವದಾಸಿ ಪದ್ಧತಿಗೆ ಇರುವ

ಕಾರಣಗಳನ್ನು ಮತ್ತು ಪರಿಹಾರವನ್ನು ಕುರಿತು ಚರ್ಚಿಸಲಾಗಿದೆ. ಮೇಲ್ಜಾತಿಯವರು ದೇವರಿಗೆಂದು ಕುರಿ, ಕೋಳಿ, ಹಸು, ಎತ್ತು ಮುಂತಾದ ಪ್ರಾಣಿಗಳನ್ನು ಮೀಸಲು ಬಿಡುತ್ತಿರುವಾಗ ದಲಿತರು ತಮ್ಮ ಅಜ್ಞಾನ, ಅನಕ್ಷರತೆ, ದೇವರ ಮೇಲಿನ ಭಯ, ಮೂಢನಂಬಿಕೆಗಳು ಈ ಕಾರಣದಿಂದ ತಮ್ಮ ಹೆಣ್ಣುಮಕ್ಕಳನ್ನೇ ಬಲಿಕೊಡುತ್ತಿರುವ ಹುನ್ನಾರಗಳನ್ನು ಕುರಿತು ಚರ್ಚಿಸಲಾಗಿದೆ. ದಲಿತ ಮಹಿಳೆಯರನ್ನು ಮೇಲ್ವರ್ಗದವರಿಗೆ ಒಪ್ಪಿಸಲು ಮಧ್ಯವರ್ತಿಗಳಾಗಿ ಕೆಲಸ ಮಾಡುವ ದಲಿತ ಪೂಜಾರಪ್ಪಗಳನ್ನು, ಪುರುಷರ ಪರವಾಗಿರುವ ನ್ಯಾಯವ್ಯವಸ್ಥೆಯನ್ನು ಕುರಿತು ಚರ್ಚಿಸಲಾಗಿದೆ.

ದಲಿತ ಮಹಿಳೆಯನ್ನಾವರಿಸಿಕೊಂಡಿರುವ ನಾಲ್ಕು ರೀತಿಯ ದೌರ್ಜನ್ಯಗಳನ್ನು ಕುರಿತು ಗಮನಹರಿಸಲಾಗಿದೆ. ಇವುಗಳಲ್ಲಿ ದಲಿತ ಮಹಿಳೆ ಹೆಚ್ಚಾಗಿ ದೌರ್ಜನ್ಯಕ್ಕೊಳಗಾಗುತ್ತಿರುವುದು ದೈಹಿಕ ಕಾರಣಕ್ಕಾಗಿ. ಇಂತಹ ದೌರ್ಜನ್ಯಗಳು ಕುಟುಂಬದ ಒಳಗೆ ಮತ್ತು ಕುಟುಂಬದ ಹೊರಗೆ ನಡೆಯುತ್ತವೆ. ದಲಿತ ಮಹಿಳೆ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಮುಖ್ಯ ಕಾರಣಗಳವರೆಗೆ ವಿಸ್ತರಿಸಿಕೊಳ್ಳಲಾಗಿದೆ. ಜಾತಿ, ಲಿಂಗ, ವರ್ಣದ ಕಾರಣಗಳಿಗಾಗಿ ದಲಿತ ಮಹಿಳೆ ಶೋಷಣೆಗೆ ಒಳಗಾಗುತ್ತಿದ್ದಾಳೆ. ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಿಂದ ಹೊರಬರುವ ಮಾರ್ಗಗಳನ್ನು ಕುರಿತು ಪ್ರಸ್ತಾಪಿಸಲಾಗಿದೆ.

ದೇವರು ಜಾತಿ, ಸಂಸ್ಕೃತಿ ಮುಂತಾದ ನೆಪಗಳನ್ನು ಒಡ್ಡಿ ದಲಿತ ಮಹಿಳೆಯ ಮೇಲೆ ಹೇರಿರುವ ದೇವದಾಸಿ/ಜೋಗಣಿ ಪದ್ಧತಿಯನ್ನು ಕುರಿತು ಚರ್ಚಿಸಲಾಗಿದೆ. ಇಂತಹ ಅಮಾನುಷ ಪದ್ಧತಿಯನ್ನು 'ಕೆಳಜಾತಿ'ಯವರೇ ಹೆಚ್ಚಾಗಿ ಆಚರಿಸುತ್ತಿರುವುದಕ್ಕೆ ಅವರಲ್ಲಿರುವ ಅಜ್ಞಾನ, ಅನಕ್ಷರತೆ ಮೂಢನಂಬಿಕೆಗಳೇ ಕಾರಣ. ಇಂತಹ ದೇವದಾಸಿ/ಜೋಗಣಿ ಪದ್ಧತಿಗೆ ಮುಗ್ಧ ಅಮಾಯಕ ಹೆಣ್ಣುಮಕ್ಕಳು ಬಲಿಯಾಗುತ್ತಿರುವುದನ್ನು ಕುರಿತು ಅಧ್ಯಯನ ಮಾಡಲಾಗಿದೆ. ಇಂತಹ ಕ್ರೂರ ಆಚರಣೆಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತು ಚರ್ಚಿಸಲಾಗಿದೆ. ಒಟ್ಟಾರೆ ದಲಿತ ಮಹಿಳೆಯ ಎಲ್ಲಾ ರೀತಿಯ ಶೋಷಣೆಗಳಿಗೆ ಅವಳ ಅಜ್ಞಾನ, ಅನಕ್ಷರತೆ, ಮೂಢನಂಬಿಕೆ, ಬಡತನಗಳೇ ಕಾರಣ. ಇವುಗಳಿಂದ ಹೊರಬರದ ಹೊರತು ದಲಿತ ಮಹಿಳೆಯ ಏಳಿಗೆ ಸಾಧ್ಯವಿಲ್ಲ.

ಅಧ್ಯಯನದ ಫಲಿತಗಳು

- ದಲಿತ ಸಖಿ ಜೀವನ್ಮುಖಿಯಾಗಿರುವುದು ಕಂಡುಬಂದಿತು.
- ಕುವೆಂಪು ಅವರ ದಲಿತ ಮಹಿಳೆಯನ್ನು ಕುರಿತ ಗ್ರಹಿಕೆಯು ಸೀಮಿತ ಹಾಗೂ ಸಂಕುಚಿತ ಮನಕ್ಕೆ ಹಿಡಿದ ಕನ್ನಡಿಯಂತಿದೆ.
- ದಲಿತ ಕಾದಂಬರಿಕಾರರ ದಲಿತ ಮಹಿಳೆ ಜೀವಕೇಂದ್ರಿತ ನೆಲೆಯಿಂದ ದಲಿತೇತರ ಕಾದಂಬರಿಕಾರರಲ್ಲಿ ಕಾಮಕೇಂದ್ರಿತ ನೆಲೆಯತ್ತ ಚಲಿಸುವಿಕೆಯನ್ನು ಗುರುತಿಸಲಾಗಿದೆ.
- ಗೀತಾ ನಾಗಭೂಷಣರ ಕಥನ ಸಾಹಿತ್ಯದಲ್ಲಿ ಪ್ರೇಮ-ಕಾಮದ ಅನಾವರಣ ಮಾಡಿರುವುದು ವೇದ್ಯವಾಗಿದೆ.
- ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯು ವಾಸ್ತವದ ಪ್ರತಿನಿಧಿಕರಣವಾಗಿದೆ.
- ಅನಂತಮೂರ್ತಿಯವರ ಕಾದಂಬರಿಗಳು ಹೆಚ್ಚಾಗಿ ಕಾಮ ಕೇಂದ್ರಿತ ನೆಲೆಗೆ ಸೀಮಿತವಾಗಿರುವುದು ಕಂಡು ಬಂದಿತು.
- ಕುಟುಂಬದ ಆಧಾರಸ್ತಂಭವಾಗಿ ದಲಿತ ಮಹಿಳೆ ಕಂಡು ಬರುತ್ತಾಳೆ.
- ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' : ದಲಿತ ಹೆಣ್ಣಿನ ರೋಧನವನ್ನು ಅನಾವರಣ ಮಾಡುತ್ತವೆ.
- ದೇವನೂರರ ಸಾಕವ್ವ, ಸಾಕು : ಬೆಳೆಸಿ, ಪೋಷಿಸಿ, ಕಾಪಾಡಿ ಸಾಕಾದವಳಾಗಿ ಕಂಡು ಬರುತ್ತಾಳೆ.
- ಗೀತಾನಾಗಭೂಷಣ ಅವರ 'ಬದುಕು' ಕಾದಂಬರಿಯು 'ದೇವದಾಸಿ' / 'ಜೋಗಣಿ' ಎಂಬ ಹೀನಪದ್ಧತಿಯ ಬೇರುಗಳನ್ನೇ ಅಲುಗಿಸುವಂತೆ ಕಂಡುಬರುತ್ತದೆ.
- ಪ್ರಸ್ತುತ ಅಧ್ಯಯನದಲ್ಲಿ 'ಹುಡುಕಾಟ' ಎಂಬುದು ಪ್ರಧಾನವಾಗಿ ಕಂಡುಬರುತ್ತದೆ. ಒಡಲಾಳ ಕಾದಂಬರಿಯು ಆರಂಭವಾಗುವುದೇ ಹುಡುಕಾಟದೊಂದಿಗೆ. ಸಾಕವ್ವ ತನ್ನ ಹುಂಜವನ್ನು ಕಳೆದುಕೊಂಡು ಹುಡುಕಾಡುತ್ತಿರುತ್ತಾಳೆ. ಬಿ.ಟಿ. ಲಲಿತಾನಾಯಕರ 'ಗತಿ' ಕಾದಂಬರಿಯಲ್ಲೂ ಈ 'ಹುಡುಕಾಟ' ಮುಂದುವರೆಯುತ್ತದೆ. ಸೋನಿ ತನ್ನ ಕೋಳಿಗಾಗಿ ಹುಡುಕಾಟ ನಡೆಸುತ್ತಾಳೆ. ಗೀತಾ ನಾಗಭೂಷಣರ 'ಹಸಿಮಾಂಸ ಮತ್ತು ಹದ್ದುಗಳು' ಕಾದಂಬರಿಯ 'ಲಚ್ಚಿ'ಯು ಕೋಳಿಯನ್ನು ಕಳೆದುಕೊಂಡು ಹುಡುಕಾಡುವುದು ಕಂಡು

ಬರುತ್ತದೆ. ಈ ಎಲ್ಲಾ ಹುಡುಕಾಟಗಳೂ ಸೇರಿ ದಲಿತ ಹೆಣ್ಣುಮಕ್ಕಳ ಬದುಕಿನ ಹುಡುಕಾಟವನ್ನಾಗಿಯೂ ಗ್ರಹಿಸಲು ಸಾಧ್ಯವಿದೆ.

- ಪುರುಷ ಕಾದಂಬರಿಕಾರರು ಚಿತ್ರಿಸಿರುವ ದಲಿತ ಮಹಿಳೆಯರಾದ ಬೆಳ್ಳಿ, ಪುಟ್ಟಿ, ಕಾವೇರಿ, ಬೆಳ್ಳಿ ಮುಂತಾದವರು 'ಮೇಲ್ಜಾತಿ'ಯ ಪುರುಷರಿಗೆ ತಮ್ಮನ್ನು ಅರ್ಪಿಸಿಕೊಳ್ಳುವಂತೆ ಚಿತ್ರಿಸಿರುವುದು ಹಾಗೂ ಅರ್ಪಿಸಿಕೊಳ್ಳಲು ಯಾವ ವಿರೋಧವೂ ಇಲ್ಲದೆ ಸಿದ್ಧರಿರುವಂತೆ ಚಿತ್ರಿಸಿರುವುದು ಕಂಡುಬಂದರೆ. ಮಹಿಳೆಯರು ಚಿತ್ರಿಸಿರುವ ದಲಿತ ಮಹಿಳಾ ಪಾತ್ರಗಳಾದ ಸೋನಿ, ಕೂಸ, ನರಪಟೆ ಮುಂತಾದವರು ಕ್ರಿಯಾತ್ಮಕ ಶಕ್ತಿಗಳಾಗಿ ಕಂಡುಬರುತ್ತಾರೆ.

ಅಧ್ಯಯನದ ಸಾಧ್ಯತೆಗಳು

ಯಾವುದೇ ಸಂಶೋಧನೆಗೆ ಪೂರ್ಣತೆಯೆಂಬುದು ಇರುವುದಿಲ್ಲ. ಅಧ್ಯಯನದ ಕೊನೆಗೆ ಸಂಶೋಧನೆಗೆ ಸಂಬಂಧಪಟ್ಟಂತೆ ಸಾಕಷ್ಟು ಅಂಶಗಳು ಉಳಿಯುವ ಸಾಧ್ಯತೆಗಳಿವೆ. ಇವುಗಳ ಮುಖಾಂತರ ಒಂದೊಂದು ಸಂಶೋಧನಾ ಪ್ರಬಂಧವನ್ನೇ ಬರೆಯಲು ಸಾಧ್ಯವಿದೆ.

- 'ಮೇಲ್ಜಾತಿ' ಹೆಣ್ಣಿನ ದೃಷ್ಟಿಯಲ್ಲಿ ದಲಿತ ಮಹಿಳೆಯನ್ನು ಕುರಿತು ಸಾಕಷ್ಟು ಕಾದಂಬರಿಗಳ ಅಧ್ಯಯನದಿಂದ ಸಂಶೋಧನೆ ಮಾಡಬಹುದು.
- ದಲಿತ ಸ್ತ್ರೀವಾದದ ಹಿನ್ನೆಲೆಯಲ್ಲಿ ದಲಿತ ಮಹಿಳೆಯನ್ನು ಕುರಿತು ಅಧ್ಯಯನ ಮಾಡಬಹುದಾಗಿದೆ.
- ದಲಿತ ಮಹಿಳೆಯ ಮಾರಾಟವನ್ನು ಕುರಿತು ವಿವರವಾದ ಅಧ್ಯಯನ ಮಾಡುವ ಸಾಧ್ಯತೆಯಿದೆ.
- ದಲಿತ ಚಳವಳಿ ಮತ್ತು ದಲಿತ ಮಹಿಳಾ ಚಳವಳಿಯಲ್ಲಿ ದಲಿತ ಮಹಿಳೆಯ ಪ್ರತಿನಿಧಿಕರಣದ ನೆಲೆಯಲ್ಲಿ ಅಧ್ಯಯನ ಮಾಡಬಹುದಾಗಿದೆ.
- ಜನಪದ ಸಾಹಿತ್ಯದ ಹಿನ್ನೆಲೆಯಲ್ಲಿ ದಲಿತ ಮಹಿಳೆಯನ್ನು ಕುರಿತು ಅಧ್ಯಯನ ನಡೆಸಬಹುದು.
- ದಲಿತ ಮಹಿಳೆ ಮತ್ತು ದಲಿತ ಸಂಸ್ಕೃತಿಗಿರುವ ಸಂಬಂಧಗಳ ಹಿನ್ನೆಲೆಯಲ್ಲಿ ಸಂಶೋಧನೆ ಕೈಗೊಳ್ಳಬಹುದು.
- ನಗರ ಕೇಂದ್ರಿತ, ಸುಶಿಕ್ಷಿತ ದಲಿತ ಮಹಿಳೆ ಮತ್ತು ಗ್ರಾಮೀಣ ಪ್ರದೇಶದ ದಲಿತ ಮಹಿಳೆಯರನ್ನು ಕುರಿತು ತೌಲನಿಕ ಅಧ್ಯಯನ ನಡೆಸಬಹುದು.
- ನಗರ ಕೇಂದ್ರಿತ ದುಡಿಯುವ ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ಶೋಷಣೆಯ ವಿವಿಧ ಮುಖಗಳನ್ನು ಕುರಿತು ಅಧ್ಯಯನ ಮಾಡಬಹುದು.
- ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುವ ದಲಿತ ಮಹಿಳೆಯರ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಲು ಸಾಧ್ಯವಿದೆ.
- ದೇವದಾಸಿ ಪದ್ಧತಿಯನ್ನು ಕುರಿತು ಇನ್ನೂ ವಿವರಣಾತ್ಮಕವಾಗಿ ಸಂಶೋಧನೆಯನ್ನು ಮಾಡಬಹುದು.

- ಆಚರಣೆಗಳ ಕಾರಣದಿಂದ ದಲಿತ ಮಹಿಳೆಯ ಮೇಲೆ ನಡೆಯುತ್ತಿರುವ ಶೋಷಣೆಯ ವಿವಿಧ ಮುಖಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಶೋಧನೆ ಮಾಡಬಹುದು. ಈ ನಿಟ್ಟಿನಲ್ಲಿ ದಲಿತ ಮಹಿಳೆಯರನ್ನು ಕುರಿತು ಸಾಕಷ್ಟು ಅಧ್ಯಯನಗಳನ್ನು ನಡೆಸಲು ಸಾಧ್ಯವಿದೆ.

ಅನುಬಂಧ

ಅ. ಆಕರ ಗ್ರಂಥಗಳು
ಆ. ಪರಾಮರ್ಶನ ಗ್ರಂಥಗಳು
ಇ. ಲೇಖನ ಸೂಚಿ
ಈ. ಅರ್ಥಕೋಶಗಳು

ಆಕರ ಗ್ರಂಥಗಳು

೧. ಅನಂತಮೂರ್ತಿ ಯು.ಆರ್ : 'ಭಾರತಿಪುರ', 'ಅಕ್ಷರ ಪ್ರಕಾಶನ', ಹೆಗ್ಗೋಡು, ೧೯೭೩.

೨. ಅನಂತಮೂರ್ತಿ ಯು.ಆರ್ : ಸಂಸ್ಕಾರ', 'ಅಕ್ಷರ ಪ್ರಕಾಶನ', ಹೆಗ್ಗೋಡು, ೧೯೬೫.

೩. ಕುವೆಂಪು : ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೧೯೬೭.

೪. ಗೀತಾ ನಾಗಭೂಷಣ : 'ಹಸಿಮಾಂಸ ಮತ್ತು ಹದ್ದುಗಳು', 'ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೭೮.

೫. ಗೀತಾ ನಾಗಭೂಷಣ : 'ಬದುಕು', ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೧.

೬. ದೇವನೂರ ಮಹಾದೇವ : 'ದೇವನೂರ ಮಹಾದೇವ ಅವರ ಆಯ್ದ ಕಥೆಗಳು', ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೬.

೭. ಲಲಿತಾ ನಾಯಕ್ ಬಿ.ಟಿ : 'ಗತಿ', ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೧.

೮. ವೈದೇಹಿ : ಅಸ್ಪೃಶ್ಯರು, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೨.

೯. ಶಿವರಾಮ ಕಾರಂತ : 'ಚೋಮನ ದುಡಿ', ಸಪ್ನ ಬುಕ್ ಹೌಸ್, ಬೆಂಗಳೂರು, ೨೦೧೦.

ಪರಾಮರ್ಶನ ಗ್ರಂಥಗಳು

೧. ಅಕ್ಕಮಹಾದೇವಿ : 'ದಲಿತ ಮಹಿಳೆ', ಶ್ರೀಮತಿ ಯಶೋಧಾ ರಾಗೌ ಟ್ರಸ್ಟ್, ಜಯಲಕ್ಷ್ಮಿಪುರಂ, ಮೈಸೂರು, ೨೦೦೯.

೨. ಅರವಿಂದ ಮಾಲಗತ್ತಿ : 'ದಲಿತಮಾರ್ಗ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.

೩. ಅಶೋಕ ಟಿ.ಪಿ. : 'ಕುವೆಂಪು ಕಾದಂಬರಿ ಎರಡು ಅಧ್ಯಯನಗಳು', ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೦೪.

೪. ಅಂಬಿಕಾದೇವಿ ಎಸ್. : 'ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭-೦೮.

೫. ಆಂಜನಪ್ಪ ಕೆ. : 'ಸ್ವಾತಂತ್ರ್ಯೋತ್ತರ ಕನ್ನಡ ಕಾದಂಬರಿಗಳಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ', ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ, ೨೦೦೪.

೬. ಉತ್ತಮ ಕಾಂಬಳೆ (ಮೂ) ಸಿದ್ರಾಮಕಾರಣಿಕ (ಕ) : 'ದೇವದಾಸಿ ಮತ್ತು ಬೆತ್ತಲೆ ಸೇವೆ', ಲಡಾಯಿ ಪ್ರಕಾಶನ, ಗದಗ, ೨೦೧೩.

೭. ಕವಿತಾರಾಣಿ ಎಂ.ಎಂ. : 'ಡಾ. ಯು.ಆರ್. ಅನಂತಮೂರ್ತಿಯವರ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

೮. ಕಾಂಚನಮಾಲ ಕೆ.ಎಲ್. : 'ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಕೆಳವರ್ಗದ ಜೀವನ ಚಿತ್ರಣ', ಮೈಸೂರು ವಿಶ್ವವಿದ್ಯಾನಿಲಯ, ೨೦೦೭-೦೮.

೯. ಕೀರ್ತಿನಾಥ ಕುರ್ತಕೋಟಿ : 'ಯುಗಧರ್ಮ ಮತ್ತು ಸಾಹಿತ್ಯ ದರ್ಶನ', ಮನೋಹರ ಗ್ರಂಥಮಾಲಾ, ಧಾರವಾಡ, ೨೦೦೨.

೧೦. ಕೇಶವಮೂರ್ತಿ ಕೆ.ಆರ್. : 'ದಲಿತ-ಬಂಡಾಯ ಕಾದಂಬರಿಗಳಲ್ಲಿ ಶ್ರಮ ಸಂಸ್ಕೃತಿಯ ಎಚ್ಚರ ಹಾಗೂ ಪರ್ಯಾಯಗಳ ಹುಡುಕಾಟ' ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

೧೧. ಗಂಗಭೈರಯ್ಯ ಆರ್. : 'ಸ್ವಾತಂತ್ರ್ಯ ಪೂರ್ವ ಹೊಸಗನ್ನಡ ಕಥನ ಸಾಹಿತ್ಯದಲ್ಲಿ ದಲಿತ ಲೋಕ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೧೨. ಗಾಯತ್ರಿ ನಾವಡ : 'ಮಹಿಳಾ ಸಂಕಥನ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩.

೧೩. ಚಂದ್ರಶೇಖರ್ ಎ.ಎಚ್. : 'ಕನ್ನಡದಲ್ಲಿ ದಲಿತ ಬಂಡಾಯ ಕಾದಂಬರಿಗಳು' (ಪ್ರಕಟಿತ) ಮೈಸೂರು ವಿಶ್ವವಿದ್ಯಾನಿಲಯ, ೧೯೯೯.

೧೪. ಚಿನ್ನಸ್ವಾಮಿ ಸೋಸಲೆ : 'ದಲಿತರ ಬದುಕು ಮೆಲುಕು', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೨.

೧೫. ಜಯರಾಮ ಜೆ. : 'ಕುವೆಂಪು ಕಾದಂಬರಿಗಳಲ್ಲಿ ದಲಿತ ಜಗತ್ತು', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೬. ದೇವರಾಜ ಓ. : 'ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೭. ನೇತ್ರಾವತಿ ಕೆ.ವಿ. : 'ಮಹಿಳಾ ಸಂಕಥನ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೧೮. ಪುಟ್ಟಯ್ಯ ಬಿ.ಎಂ. : 'ಕನ್ನಡ ದಲಿತ ಸಾಹಿತ್ಯ ಮತ್ತು ಪ್ರತಿಸಂಸ್ಕೃತಿ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೧೯. ಪುಟ್ಟರಾಜು ಬಿ.ಜೆ. : 'ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಜಾತಿ ಮತ್ತು ಲಿಂಗದ ಪರಿಕಲ್ಪನೆ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೨೦. ಪ್ರತಿಮಾ ಟಿ. :'ಯು.ಆರ್.ಅನಂತಮೂರ್ತಿಯವರ ಕಾದಂಬರಿಗಳಲ್ಲಿ ಬಂಡಾಯದ ಹೆಜ್ಜೆ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೨೧. ಭೂಮಿಗೌಡ : 'ಕನ್ನಡ ಕಾದಂಬರಿಗಳಲ್ಲಿ ದಲಿತ ಜಗತ್ತು' (ಪ್ರಕಟಿತ)

೨೨. ಮಂಜಪ್ಪ ಕೆ. : 'ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೩. ಮಲ್ಲಿನಾಥ ಎಸ್. ತಳವಾರ : 'ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಪ್ರಪಂಚ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೪. ಮೊಗಳ್ಳಿ ಗಣೇಶ್ : 'ದಲಿತ ಕಥನ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೨೫. ರಂಗನಾಥಶರ್ಮ : 'ರಾಘವಾಂಕನ ಹರಿಶ್ಚಂದ್ರ ಕಾವ್ಯ', 'ಕನ್ನಡ ಸಾಹಿತ್ಯ ಪರಿಷತ್ತು', ಚಾಮರಾಜಪೇಟೆ, ಬೆಂಗಳೂರು, ೧೯೭೭.

೨೬. ರವಿ ನಾಯಕ ಎಂ. : 'ಬಿ.ಟಿ. ಲಲಿತಾ ನಾಯಕ್ : ಜೀವನ ಮತ್ತು ಸಾಹಿತ್ಯ', ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಶಿವಮೊಗ್ಗ, ೨೦೦೭.

೨೭. ರಘುರಾಂ ಎ. : 'ನವ್ಯೋತ್ತರ ಕಾದಂಬರಿಗಳು ಒಂದು ಅಧ್ಯಯನ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೨೮. ರಾಘವೇಂದ್ರರಾವ್ ಎಚ್.ಎಸ್. (ಸಂ), 'ಶತಮಾನದ ಸಾಹಿತ್ಯ ವಿಮರ್ಶೆ', ಲೇಖಕ : ಬಿ. ಕೃಷ್ಣಪ್ಪ, ಲೇಖನ : 'ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರಣ' ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.

೨೯. ರಾಮ್‌ಸುಂದರಪ್ಪ ಕಲಾಲ್ : 'ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ದಲಿತ ಮಹಿಳಾ ಪ್ರತಿನಿಧಿಕರಣ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.

೩೦. ರೇವಯ್ಯ ಒಡೆಯಾರ್ : 'ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಮಾನವೀಕರಣದ ನೆಲೆಗಳು', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೩೧. ವಸಂತ ಜಿ. : 'ಕುವೆಂಪು ಮತ್ತು ಕಾರಂತರ ಕಾದಂಬರಿಗಳಲ್ಲಿ ದಲಿತ ಪ್ರಜ್ಞೆ' ತೌಲನಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮-೦೯.

೩೨. ವಿಜಯಶ್ರೀ ಸಬರದ : 'ಸಾಹಿತ್ಯ ಸಂವಹನ', 'ಕನ್ನಡ ಸಾಹಿತ್ಯ ಪರಿಷತ್ತು', ಚಾಮರಾಜಪೇಟೆ, ಬೆಂಗಳೂರು, ೨೦೦೨.

೩೩. ವಿಜಯಶ್ರೀ ಸಬರದ (ಸಂ) : 'ವಿಮರ್ಶಾ ಲೇಖನಗಳು', (ಬೆಳ್ಳಿ ಬೆಳಕು ಮಾಲೆ) ಪ್ರಾತಿನಿಧಿಕ ಸಂಕಲನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

೩೪. ವಿರೂಪಾಕ್ಷಿ ಪೂಜಾರಹಳ್ಳಿ (ಸಂ) : 'ದಲಿತರು ಮತ್ತು ಚರಿತ್ರೆ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.

೩೫. ವೆಂಕಟೇಶಮೂರ್ತಿ ಎಚ್.ಟಿ. : 'ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ದಲಿತ ಚಳವಳಿ ಮತ್ತು ಸಾಹಿತ್ಯ', ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

೩೬. ಶೈಲಜ ಹಿರೇಮಠ : 'ಸ್ತ್ರೀಕಥನ', ಭುವನ ಪ್ರಕಾಶನ, ಹೊಸಪೇಟೆ, ೨೦೦೩.

೩೭. ಶೇಷಗಿರಿರಾವ್ ಎಲ್.ಎಸ್. : 'ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ', ವಸಂತ ಪ್ರಕಾಶನ, ಬೆಂಗಳೂರು, ೧೯೫೭.

೩೮. ಷರೀಫಾ ಕೆ. (ಸಂ) : 'ಮಹಿಳಾ ಮಾರ್ಗ', ಲೇಖಕಿ : ಡಾ. ಮೀನಾಕ್ಷಿ ಬಾಳಿ, ಲೇಖನ: 'ಗೀತಾ ನಾಗಭೂಷಣ ಅವರ ಕಾದಂಬರಿಗಳಲ್ಲಿ ಮಹಿಳಾ ಸಂವೇದನೆ', ಲಡಾಯಿ ಪ್ರಕಾಶನ, ಗದಗ, ೨೦೧೦.

೩೯. ಸಿದ್ಧಲಿಂಗಯ್ಯ : 'ಮೆರವಣಿಗೆ', ಅಂಕಿತ ಪುಸ್ತಕ, ಬೆಂಗಳೂರು, ೨೦೦೦

೪೦. ಸುಕನ್ಯಾ : 'ದಲಿತ ಬಂಡಾಯ ಸಾಹಿತ್ಯದಲ್ಲಿ ಮಹಿಳಾ ಪ್ರತಿನಿಧಿಕರಣ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭.

೪೧. ಹಾಲತಿ ಸೋಮಶೇಖರ್ : 'ಮಹಿಳಾ ಚಳವಳಿ', 'ದೇವರ ಹೆಸರಿನಲ್ಲಿ ಹೆಣ್ಣನ್ನು ನೋಯಿಸಿದ ದೇವದಾಸಿ ಸಂಪ್ರದಾಯ' ವಿಸ್ಮಯ ಪ್ರಕಾಶನ, ಮೈಸೂರು, ೨೦೦೭.

ಲೇಖನ ಸೂಚಿ

೧. ಅರ್ಜುನ ಗೊಳಸಂಗಿ (ಸಂ) : 'ಕನ್ನಡ–ಮರಾಠಿ ದಲಿತ ಸಾಹಿತ್ಯ ಮತ್ತು ಅರವಿಂದ ಮಾಲಗತ್ತಿ', 'ದಲಿತಜ್ಞ', ದಲಿತ ಸಾಹಿತ್ಯ ಪರಿಷತ್ತು, ಗದಗ, ೨೦೦೦.

೨. 'ಅರವಿಂದ ಮಾಲಗತ್ತಿ' (ಲೇ), 'ಸ್ತ್ರೀವಾದ–ದಲಿತವಾದದಿಂದ ದಲಿತ ಸ್ತ್ರೀವಾದದೆಡೆಗೆ', ಶಶಿಕಲಾ ಎಸ್.ಡಿ., 'ವಿಜಯಾನ್ವೇಷಣೆ', ವಿಜಯಾದಬ್ಬೆ ಗ್ರಂಥ ಸಮಿತಿ, ಮೈಸೂರು, ೨೦೦೪.

೩. ಕೃಷ್ಣಪ್ಪ ಬಿ., 'ಕುವೆಂಪು ಕಾದಂಬರಿಗಳಲ್ಲಿ ದಲಿತ ಜೀವನ ಚಿತ್ರಣ' ರಾಘವೇಂದ್ರ ರಾವ್ ಎಚ್.ಎಸ್. (ಸಂ), 'ಶತಮಾನದ ಸಾಹಿತ್ಯ ವಿಮರ್ಶೆ', ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧.

೪. ಪೋಲಂಕಿ ರಾಮಮೂರ್ತಿ (ಲೇ) : 'ಒಡಲಾಳ ಒಂದು ಸಮೀಕ್ಷೆ ಸಾಹಿತ್ಯ ವಿಮರ್ಶೆ', ಸರಜೂಕಾಟ್ಕರ್ (ಸಂ), 'ಕನ್ನಡ–ಮರಾಠಿ ದಲಿತ ಸಾಹಿತ್ಯ', ವಿಮೋಚನ ಪ್ರಕಾಶನ, ಅಥಣಿ, ೧೯೯೬.

೫. ಭಂಡಾರಿ ಆರ್.ವಿ. (ಲೇ) : 'ಚೋಮನ ದುಡಿಯ ವಸ್ತು ಮತ್ತು ವಿನ್ಯಾಸ', ಅರವಿಂದ ಮಾಲಗತ್ತಿ (ಸಂ), 'ದಲಿತಮಾರ್ಗ', ಕನ್ನಡಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.

೬. ಮೀನಾಕ್ಷಿ ಬಾಳಿ (ಲೇ), 'ಗೀತಾ ನಾಗಭೂಷಣ ಅವರ ಕಾದಂಬರಿಗಳಲ್ಲಿ ಮಹಿಳಾ ಸಂವೇದನೆ', ಷರೀಫಾ ಕೆ. (ಸಂ), 'ಮಹಿಳಾ ಮಾರ್ಗ', ಲಡಾಯಿ ಪ್ರಕಾಶನ, ಗದಗ, ೨೦೧೦.

೭. ವೆಂಕಟೇಶ ಮೂರ್ತಿ ಎಚ್.ಟಿ. (ಲೇ) : 'ದಲಿತ ಮಹಿಳೆ' (ಲೇ), ಶಶಿಕಲಾ ಎಸ್.ಡಿ. (ಸಂ) : 'ವಿಜಯಾನ್ವೇಷಣೆ' (ಸಂ), ಡಾ. ವಿಜಯಾದಬ್ಬೆ ಅಭಿನಂದನ ಗ್ರಂಥ ಸಮಿತಿ, ೨೦೦೪.

೮. ಸರಜೂ ಕಾಟ್ಕರ್ : 'ಕನ್ನಡ ಮರಾಠಿ ದಲಿತ ಸಾಹಿತ್ಯ', 'ಮರಾಠಿ ದಲಿತ ಸಾಹಿತ್ಯಕ್ಕೆ ಚಾರಿತ್ರಿಕ ಬೆಳವಣಿಗೆಗಳು', ವಿಮೋಚನಾ ಪ್ರಕಾಶನ, ಅಥಣಿ, ೧೯೯೬.

೯. ಸಿದ್ಧಾಶ್ರಮ ಸಿ.ಪಿ., (ಲೇ) : 'ಭಾರತೀಪುರದ ಒಳನೋಟ', ಅರವಿಂದ ಮಾಲಗತ್ತಿ, 'ದಲಿತಮಾರ್ಗ', ಕನ್ನಡಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೨.

೧೦. ಶ್ರೀಪಾದಭಟ್ (ಲೇ), 'ದೇವದಾಸಿ ಮತ್ತು ಬೆತ್ತಲೆ ಸೇವೆ', ಶಶಿಕಲಾ ಎಸ್.ಡಿ. (ಸಂ), 'ವಿಜಯಾನ್ವೇಷಣ', ವಿಜಯಾದಬ್ಬೆ ಗ್ರಂಥ ಸಮಿತಿ, ಮೈಸೂರು, ೨೦೦೪.

ಅರ್ಥಕೋಶಗಳು

೧. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು : ೪ನೆಯ ಸಂಪುಟ.

೨. ಪಂಡಿತ ಕವಲಿಯವರ ಕಸ್ತೂರಿ ಕೋಶ : ರಾಮಾಶ್ರಯ ಪಬ್ಲಿಕೇಶನ್ಸ್, ಧಾರವಾಡ- ೧೯೫೭.

೩. ಶಿವರಾಮ ಕಾರಂತ : ಸಿರಿಗನ್ನಡ ಅರ್ಥಕೋಶ, ಎಸ್.ಬಿ.ಎಸ್. ಪಬ್ಲಿಕೇಷನ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು. ೧೯೪೧.